7. ಮೆರವಣಿಗೆಗಳು ವಗೈರೆ ಹೋಗುತ್ತಿರುವಲ್ಲಿ ಪೋಲೀಸಿನವರು ಖಂಡಿತವಾಗಿ ಪ್ರವೇಶಿಸುವದು- ಅನಾವಶ್ಯಕವಾಗಿ ಇರುವ ಅಕಂದೊಳಗೆ ಅವರು ಪ್ರವೇಶಿಸದೆ ಯಿರುವಂತೆ ತಾಕೀತು ಮಾಡತಕ್ಕದ್ದು, ಮತ್ತು ಜನಗಳಲ್ಲಿ ಆಯಾ ಬಗೆಯವರ ಪ್ರತಿ ಜವಾಬದಾರರಾದವರು ಹಾಗೆ ಪ್ರವೇಶಿಸುವದಕ್ಕೆ ಯೆಷ್ಟು ಮಾತ್ರವೂ ಆಸ್ಪದ ಕೊಡದಂತೆ ತಮ್ಮ ವ್ಯಾಪಕತ್ವವನ್ನೂ ಅಧಿಕಾರವನ್ನೂ ಉಪಯೋಗಿಸುವರೆಂದು ಡಿಸ್ಟ್ರಿಕ್ಟ್ ಮೇಜೆಸ್ಟ್ರೇಟರು ನಂಬುತ್ತಾರೆ.

8. ಯಾವ ಮನುಷ್ಯನೂ ಬಾಧಕವಾದ ಅಥವಾ ಅಪಾಯಕರವಾದ ಆಯುಧವನ್ನಾಗಲೀ ದೊಣ್ಣೆಗಳನ್ನಾಗಲೀ ಹಿಡಿದು ಬೀದಿಗಳಲ್ಲಿ ತಿರಗಾಡಿದ್ದರೆ ಅದರೆ ಪೋಲಿಸಿನವರಿಂದ ದಸ್ತಗಿರೀ ಮಾಡಲ್ಪಡಲಿಕ್ಕೆ ಗುರಿಯಾದಾನು.

9. ಆಯಾ ಜಾತೀಯವರ ದೇವಸ್ಥಾನಗಳು ವಗೈರೆ ಮುಂದೆ ವಾದ್ಯಗಳನ್ನು ನಿಲ್ಲಿಸತಕ್ಕದ್ದೆಂದು ನಿಯಮಿಸುವ ನಿಬಂಧನೆಯನ್ನು ಖಂಡಿತವಾಗಿ ಜಾರೀಯಲ್ಲಿ ತರತಕ್ಕದ್ದು.

10. ಸರ್ 1861ನೇ ಇಸವಿ 5ನೇ ನವಂಬರ್ ಪೋಲಿಸ್ ಆಕ್ಟಿನ 17ನೇ ಸೆಕ್ಷನ್ ಅನುಸರಿಸಿ ಸ್ಪೆಷಲ್ ಪೋಲಿಸ್ ಆಫೀಸರರಾಗಿ ಪೋಲಿಸಿನವರು ಕೇಳುವ ಅಂಶಗಳನ್ನು ಕೂಡ್ಲೆ ಅಮಲ್ದಾರು ಸಬ್ ಮೇಜಸ್ಟ್ರೇಟರು ಸಹನೆರವೇರಿಸತಕ್ಕದ್ದು; ಮತ್ತು ಪೋಲೀಸಿನವರ ಕೆಲಸಗಳನ್ನು ನೆರವೇರಿಸುವದಕ್ಕೆ ತಾವೂ ಹಾಜರಿದ್ದು ನಿಯಮಿಸತಕ್ಕದ್ದು.

11. ಮೇಲೆ ಕಂಡ ಹುಕ್ಕುಂಗಳನ್ನು ಕೂಡ್ಲೆ ದಂಡೋರೆ ಮೂಲಕ ಪ್ರಕಟ ಪಡಿಸತಕ್ಕದ್ದು.

L. Ricketts,
Offg. Dy. Commr

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು.

ತಾರೀಖು 20ನೇ ಜನವರೀ 1876.

ಇದರಿಂದ ತಿಳಿಸುವದೇನಂದರ, ಹಳೇ ಜುಡಿಷಲ್ ರಿಕಾರ್ಡುಗಳನ್ನು ನಾಶಪಡಿಸುವ ಬಗ್ಯೆ ರೂಲಿಸ್ ಪ್ರಕಾರ 1869
1870ನೇ ಇಸವಿಗಳಲ್ಲಿ ದಾಖಲಾದ ದಾವೆಗಳೊಳಗೆ ಕಕ್ಷಿಗಾರ್‍ರಿಂದ ಧಾಖಲ್‌ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳು ಕಾ
ಗದ ಪತ್ರಗಳು 1876ನೇ ಮೇ 1ನೇ ಮರ್ಕುಂನಲ್ಲಿ ನಾಶಪಡಿಸಲ್ಪಡುವದು, ಆದ್ದರಿಂದ ವಾಪಸ್ ತೆಗದುಕೊಳ್ಳಲಿಕ್ಕೆ ಕಕ್ಷಿ
ಗಾರ್‍ರು ಖಾಯಿಷ್‌ಮಾಡುವ ಬೆಲೆಯುಳ್ಳ ಯಾವದಸ್ತಾವೇಜುಗಳನ್ನಾದರೂ ವಾಪಸ್ ಮಾಡುವ ಬಗ್ಯೆ ಮೇಲ್‌ಕಂಡ ಕಾಲದೊ
ಳಗೆ ಅರ್ಜಿ ಬರಕೊಳ್ಳತಕ್ಕದ್ದು.

"ಬಮೋಜಿಬ್ ಹುಕ್ಕುಂ."

W. JENNINGS,
Registrar.

KOLAR DISTRICT.

Descriptive roll of an escaped convict from the District Jail.

ಸರ್ 1875ನೇ ಇಸವಿ ಡಿಸೆಂಬರ್ 23ನೇ ಮರ್ಕುಂ ಬೆಳಗ್ಯೆ ಸುಮಾರು 11 ಘಂಟೆ ವೇಳ್ಯೆ ಕೋಲಾರ ಜೈಲ್ ತೋಟದಿಂದ
ಫರಾರಿಯಾದ ಕೈದಿ ಬಾಬಿಗನ ಚಹರೇ ಪಟ್ಟಿ.

ಹೆಸರು ಬಾಬಿಗ, ತಂದೆ ಹೆಸರು ಅಡಿಯನ್ನ, ಜಾತಿ ಮತ್ತು ಕಸಬು, ತೆಲಗುಬಣಜಿಗರವ ವ್ಯವಸಾಯ, ವಾಸಸ್ಥಳ ಹರಿಮೇ
ಜಸ್ಟೀ ಸೀಮೆ, ಬಳ್ಳಾರಿ ಡಿಸ್ಟ್ರಿಕ್ಟು, ಹಿಂದುಪುರ ತಾಲ್ಲೂಕು ಮ್ಯಾದೇವರಪಲ್ಲಿ, ಎತ್ತರ ಮತ್ತ್ಯಾವದಾದರು ಮುಖ್ಯವಾದ ಗುರುತು
ಯಿವುಗಳ ದೇಖಿಲ್ ಚಹರೆ, ಯಣೆಗೆಂಪು, ತೆಳ್ಳಗಿದ್ದಾನೆ, ಎತ್ತರ 5 ಅಡಿ, 5 ಅಂಗುಲ, ಗುಂಡುಮುಖ, ಸುಮಾರು ವಯಸ್ಸು 30
ವರುಷ, ಕಾಲುಗಳ ಮೇಲೆ ಖಜ್ಜಿಯ ಕಲೆಗಳು, ಸ್ವಲ್ಪ ಬಗ್ಗಿದ್ದಾನೆ, ತಳ್ಳಗೆ ಮೀಸೆ ಬಿಟ್ಟಿದ್ದಾನೆ, ಯಾವ ವಿಧವಾದ ಸಜಾ ಅದ
ನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ, ಕೋಲಾರ ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಕ್ರಿಮಿನಲ್
ನಂಬರ್ 33ನೇ ಮೊಕದ್ದಮೆಯಲ್ಲಿ ಚೋರಿಗಾಗಿ ಇಂಡಿಯನ್ ಪೆನಲ್‌ಕೋಡ್ 392ನೇ ಸೆಕ್ಷನ್ ಮೇರಿಗೆ, ಮೂರು ವರುಷಗಳ ಕ
ಠಿಣ ಸಜಾ, ತಾರೀಖು 26ನೇ ನವಂಬರ್ 1875, ತಪ್ಪಿಸಿಕೊಂಡ ತಾರೀಖು, 23ನೇ ಡಿಸೆಂಬರ್ 1875. ಷರಾ, ಈ ಕೈದಿಯು
ಸದರೀ ಜೈಲ್ ತೋಟದಲ್ಲಿ ಕೆಲಸ ಮಾಡುತ್ತಿರುವಾಗ್ಯೆ ಆವನ ಕುಡುತ ಮತ್ತು ಅವನ ಬಲಗಾಲಿನ ಕಬ್ಬಿಣದ ಬೇಡಿ ಇವುಗಳನ್ನು
ಬಿಟ್ಟು ಫರಾರಿಯಾಗಿದ್ದಾನೆ, ಫರಾರಿಯಾಗುವ ವೇಳೆ ಬಿಳೇ ಚಡ್ಡಿ, ಕುಲಾವಿ ಮತ್ತು ಕಂಬಳಿ ಹೊದಿದ್ದನು ಮತ್ತು ವಂದು ಕಾಲಿನಲ್ಲಿ
ಉಂಗ್ರ, ಸರಪಣೀ ಸಹಾ ಯಿತ್ತು.

B. KRISHNAIENGAR,
Dy. Commr. & Magistrate.

TUMKUR DISTRICT.

Notice regarding an application of Nanjundappa for a certificate under Act XXVII of 1860.

ತುಮುಕೂರು ಡಿ|| ಡಿ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವ ದೇನಂದರೆ,—ಸೀರಾ ತಾಲ್ಲೂಕು ಹಾಲೇನಹಳ್ಳೀ ಗ್ರಾಮದ ವಾಸಸ್ಥ
ನಾಗಿ ಇದ್ದ ಘೌತೀ ಯಾದ ಚಿಕ್ಕಕಪ್ಪಣ್ಣ ನೆಂಬುವನಿಗೆ ಇತರರಿಂದಾ ಬರಬೇಕಾಗಿರುವ 300 ರೂಪಾಯಿಗಳು, ವಸೂಲ
ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಫಿಕೇಟ್ ಅಪೇಕ್ಷಿಸಿ, ಇವನ ಮಗ ನಂಜುಂಡಪ್ಪ
ನೆಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಫಿಬ್ರವರೀ ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ
ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀತಾರೀಖು ದಿವಿ
12 ಘಂಟೆಗೆ ಹಾಜರಾಗ ಬೇಕಾಗಿರುತ್ತೆ.

ತಾರೀಖು 6ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ತುಮುಕೂರು.

C. J. PEARSE,
Dy. Commr.

MYSORE DISTRICT.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ.

ತಾರೀಖು—ನೇ ಮಾಹೆ ಡಿಸೆಂಬರ 1875ನೇ ಯಿಸವಿ.

1875ನೇ ಇಸವಿ ಆಗಸ್ಟು 29ನೇ ತಾರೀಖಿನಲ್ಲಿ ತಲಕಾಡು ತಾಲ್ಲೂಕಿಗೆ ಶೇರಿದ ಕೆಂಡನಕೊಪ್ಪಲು ಚಾಮನ ಹೆಂಡತಿ ಕಾಮ ಶಸಿಯಂಬವಳನ್ನ ಖೂನಮಾಡಿದ್ದಾಗಿ ಆಪಾದಿಸಲ್ಪಟ್ಟು ಯಿರುವ ಈ ಕೆಳಗೆ ವಿವರಿಸಲ್ಪಟ್ಟು ಯಿರುವ ಗಿರಿಯನೆಂಬುವನ ದಸ್ತಗಿರಿ ವ ಸಾಬೀತಿಗೆ ತಕ್ಕ ವರ್ತಮಾನ ಕೊಡುವವರಿಗೆ 100 ರೂಪಾಯಿಗಳು ಯಿನಾಂ ಕೊಡಲ್ಪಡುವದು.

ವಿವರಣೆ.

ಹೆಸರು ಗಿರಿಯಾ, ತಂದೆ ಹೆಸರು ಮುತ್ತಾ, ಜಾತಿ ಒಸ್ತ, ವಯಸ್ಸು ಸುಮಾರು 28 ವರುಷ, ಉನ್ನತ ಅಡಿ 5, ಅಂಗು ಲ 6, ಗುರ್ತುಗಳು, ಕಪ್ಪುವರ್ಣ, ಉದ್ದಮುಖ, 1 ಜೊತೆ ಹತ್ತ ಕಡಕು ಇಟ್ಟುಯಿದ್ದಾನೆ, ಮೀಸೆ ಬಿಟ್ಟುಯಿದ್ದಾನೆ.

MAHOMED ALLI,
For District Magistrate.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಪ್ಪಿಸಿಕೊಂಡು ಹೋದ ಕೈದೀ ದೊಡ್ಡ ಬುಡ್ಡ ಯಂಬವನ ಚಹರೆ ಪಟ್ಟಿ.

ಜೈಲ್ ರಿಜಸ್ಟರ್ ನಂಬರು 3890, ಹೆಸರು ಮತ್ತು ತಂದೇ ಹೆಸರು ದೊಡ್ಡಬುಡ್ಡ ಖಾಸಿಂಖಾನ, ವಾಸಸ್ಥಳ ಶಿವಮೊಗ್ಗಾ ತಾಲ್ಲೂಕು ಹಿರೂರು, ಜಾತಿ ಮತ್ತು ಕಸಬು ಮುಸಲ್ಮಾನ ಕೂಲಿ, ತಪ್ಪಿತ ಡಕಾಇತಿ, ತಾರೀಖು ಸಜಾವಾಯಿದೆ ಮತ್ತು ಮೊಕ ದ್ದಮಾ ನಂಬರ್, 25ನೇ ನವಂಬರ 1875 ಡಿಸ್ಟ್ರಿಕ್ಟ ಮೇಜಸ್ಟ್ರೇಟರ 1875ನೇ ಇಸವಿ ಫೈಲ್ ನಂಬರು 32ನೇ ಮೊಕದ್ದಮೆ ಯಲ್ಲಿ 5 ವರುಷಗಳು ಕಠಿಣ ಸಜಾ, ಯಾರಿಂದ ವಿಧಿಸಲ್ಪಟ್ಟದ್ದು ಸಿವಮೊಗ್ಗಾ ಡಿಸ್ಟ್ರಿಕ್ಟು ಮೇಜಸ್ಟ್ರೇಟರಿಂದ, ವಯಸ್ಸು 30 ಎತ್ತರ ಅಡಿ 5, ಅಂಗಲ 3½, ಷರಾ ಕಪಿಲೇವರ್ಣ, ಕಣ್ಣುಗಳು ಡಿಟೋ, ಕೆನ್ನೆ ಎಲಬುಗಳು ಉಬ್ಬಾಗಿದೆ, ಭುಜಗಳಮಧ್ಯೆ ವಂ ದು ಚಿಕ್ಕ ಮಚ್ಚೆ, ಬಲತೋಳಿನ ಮುಂಭಾಗದಲ್ಲಿ ವಂದು ಘಾಯದ ಕಲೆ, ಬಲ ಮುಂಗೈಮೇಲೆ ಮುಂದುಗಡೆ ಇನ್ನೊಂದು ಕಲೆ, ಯಡಕಂಕುಳಹಿಂದೆ ವಂದು ಮಚ್ಚೆ, ಬಲತೊಡೆಯ ಮುಂಭಾಗ ಯರಡು ಘಾಯದ ಕಲೆಗಳು, ಬಲ ಮೊಣಕಾಲು ಕೀಲಿನ ಹಿಂದೆ ವಂದು ವುದ್ದವಾದ ಘಾಯದ ಕಲೆ, ಯಡತೊಡೆಯ ವಳ ಪಾರ್ಶ್ವ ವಂದು ಘಾಯದ ಕಲೆ, ಯಡಗಾಲಿನ ಹೊರಪಾರ್ಶ್ವ ಯರಡು ಘಾಯದ ಕಲೆಗಳು ಇರುತ್ತೆ.

J. VIJAYARAGHAVALU NAIDU,
For Offg. Dy. Commr.

KADUR DISTRICT.

Notice of sale of a coffee jungle in the Koppa Taluk on the 15th February next, the holder having failed to conform to the terms of the patta under which the jungle was granted him.

ಕಡೂರು ಡಿಸ್ಟ್ರಿಕ್ಟ ಕಾಫೀ ಯಿಂಚಾರ್ಜ ಅಸಿಸ್ಟೆಂಟ ಕಮಿಷನರ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಮುರವಳ್ಳಿ ಮಾಗಣಿ ಕರಿಕೆಕೊಂಡ ಗ್ರಾ ಮದ ಕರಿಕೆಕೊಂಡದ ಕಾನ ಯಂಬುವದಕ್ಕೆ ತಾಲ್ಲೂಕು ನಂಬರು 96, ನಗರ ಡಿವೀಜನ ನಂಬರು 85, ಕಮಿಷನರ ಹಜೂ ರು ನಂಬರು 2596ನೇ ಪಟ್ಟೆಯನ್ನ ಪಡೆದ ಅಗಳಗುಂಡಿ ವೆಂಕಪ್ಪಯ್ಯನೆಂಬುವನು ರೂಲ್ಸ ಪ್ರಕಾರ ಗಿಡಗಳನ್ನ ಹಾಕದೆ ತ ಪ್ಪಿ ಇರುತ್ತಾನಾಗಿ ಪಟ್ಟೆಯ 3ನೇ ಕಲಂ ಮೇರಿಗೆ ಡಿಪ್ಯುಟಿ ಕಮಿಷನರ ಸಾಹೇಬರವರ ಮಾಹೆ ಮಜಕೂರು 14ನೇ ಮುಕ್ಕಾಂ 1313ನೇ ನಂಬರು ಡಾಕೆಟ ಅನುಸರಿಸಿ ಈ ಕೆಳಗೆ ಕಾಣಿಸಿ ಯಿರುವ ಬಾನಡರಿವುಳ್ಳ ಸ್ಥಳವನ್ನ ಸನ1876ನೇ ಇಸವಿ ಫಿಬ್ರುವ

ರೀ ತಿಂಗಳು 15ನೇ ತಾರೀಖು ದಿವಿ 11 ಘಂಟೆ ಲಾಗಾಯತು 4 ಘಂಟೆ ವರಿಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ನಮ್ಮ ಆಫೀಸ ರೂಬರೂ ಹರಾಜ್ ಹಾಕಲ್ ಪಡುತ್ತೆ, ಅಪೇಕ್ಷೆವುಳ್ಳವರು ಚಡದರಖಾಸ್ತಿನಿಂದ ಪಡೆಯಬಹುದು.

ಹಾಗೆ ಪಡೆದವರು ಹರಾಜು ಕೈದಾಗುತ್ತಲೇ ಶೇಕಡಾ 25 ರೂಪಾಯಿನಂತೆ ಠೇವಣಾತಿ ಇಟ್ಟು ಮಿಕ್ಕ ರೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗ್ಗಿ ಹಾಜರ್ನ್ಮಾಡಿ ಸದರೀ ಸ್ಥಳವನ್ನು ಸುಫರ್ದು ಮಾಡಿಕೊಳ್ಳಬೇಕು, ತಪ್ಪಿದರೆ ಪುನಹಾ ಹರಾಜು ಮಾಡಿಸಿ ಕಮ್ಮಿ ಬರುವ ಹಣಕ್ಕೆ ಮೊದಲು ದರಖಾಸ್ತುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿಯಿಂದ ಭರ್ತೀಮಾಡಿಕ್ಕೊಳ್ಳುವದಲ್ಲದೆ ಈ ಠೇವಣಾತಿಯನ್ನ ಸರಕಾರಕ್ಕೆ ಶೇರಿಸೋಣಾಗುತ್ತದೆ.

ಕರಿಕೆಕೊಂಡದ ಮೇಲುಗಡೆ ಜಂಗಲೀಯಲ್ಲಿ ವಾಟೆಬಿಜ್ಜಲ್‌ಕಾಡಿನಲ್ಲಿ ಈ ಕಾನಿನ ಚತುರ್ಗಡಿ.

1 ಪೂರ್ವಕ್ಕೆ ದುರ್ಗದ ಗುಡ್ಡದ ಬುಡದಲ್ಲಿರುವ ನೆಲ್ಲೀಮರದ ಯಡಕ್ಕೆ ದಿಮ್ಮೀ.

1 ಪಶ್ಚಿಮಕ್ಕೆ ದನತಿರುಗುವ ದಾರೀ ಮಾವಿನ ಮರದ ಹತ್ರ ದಿಮ್ಮೀ.

1 ದಕ್ಷಿಣಕ್ಕೆ ನೀರಸರಕಾಲು, ಮಡ್ಡೀಮರ, ಬಡಚರನ ಸೊಸಿಹತ್ರ ದಿಮ್ಮೀ, ಕವಲುಮರದ ಹತ್ರ ದಿಮ್ಮೀ ಸಹಾ.

1 ಉತ್ತರಕ್ಕೆ ನೀರಸರಕಾಲು, ಮಡ್ಡೀಮರ, ಹುಲವೇಮರದ ಹತ್ರದಿಮ್ಮೀ.

ಈ ಚತುರ್ಗಡಿ ಮಧ್ಯೆ ಅಳತೆ ಪ್ರಕಾರ ಆಗುವ ಸಲಿಗಜ 195840ಕ್ಕೆ ಯಕರೇ (40) ಗುಂಟೆ (18) ಗಜ (62.)

ಬತಾರೀಖು 29ನೇ ಡಿಶಂಬರು 1875ನೇ ಇಸವಿ, ಚಿಕ್ಕಮಗಳೂರು.

MAHOMED SALIHA,
Officer in charge of Coffee Department.

ಸೆ ೧೮೭೫ನೇ ಇಸವಿ ಡಿಸೆಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಕೋಲಾರ್ ಡಿಸ್ಟ್ರಿಕ್ಟು.

ಹವಾ ಮತ್ತು ಮಳೆ—ಹವಾದಲ್ಲಿ ಏನೂ ಭೇದವಿಲ್ಲಾ. ಈ ತಿಂಗಳಲ್ಲಿ 92¾ ಸೆಂಟ್ಸ ಸರಾಸರಿ ಮಳೆ ಬಿದ್ದಿರುತ್ತೆ, ಆ ಹಿಂದಿನ ತಿಂಗಳಲ್ಲಿ 28 ಸೆಂಟ್ಸ ಬಿದ್ದಿರುತ್ತೆ. ಎಲ್ಲಾ ಕೆರೆಗಳು ವಣಗಿವೆ.

ಜಮೀನ್—811—5—4 ರೂಪಾಯಿಗಳು ಕಂದಾಯವುಳ್ಳ ಜಮೀನ್ ಸಾಗುವಳೀ ಬಗ್ಯೆ ಹೊಸದಾಗಿ ತೆಗದುಕೊಳ್ಳಲ್ಪಟ್ಟಿತ್ತು, ಈ ತಿಂಗಳಲ್ಲಿ ಜಮೀನ್‌ಗಳಿಗೆ ರಾಜೀನಾಮೆ ಬರಲಿಲ್ಲವು.

ಬೆಳೆ—ಕೋಲಾರ, ಮುಳಬಾಗಲು ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಕಡ್ಲೆ, ಜೋಳ, ಮತ್ತು ಗೋರಿಬಿದನೂರು ತಾಲ್ಲೂಕಿನಲ್ಲಿ ಗೋಧಿ, ಬಿತ್ತಲ್ಪಟ್ಟವು. ಶ್ರೀನಿವಾಸಪುರ ಬೇತಮಂಗಲ, ಮುಳಬಾಗಲು, ಚಿಕ್ಕಬಳ್ಳಾಪುರ, ಮತ್ತು ಗೋರಿಬಿದನೂರು ತಾಲ್ಲೂಕುಗಳಲ್ಲಿ ರಾಗಿ ಮತ್ತು ನೆಲ್ಲು ಕಟಾವಾದವು.

ಕೆರೆ ಬೆದ್ದಲುಗಳಲ್ಲಿ ಬಿತ್ತಲ್ಪಟ್ಟ ಕಡ್ಲೇ ಮತ್ತು ಜೋಳ ಚನ್ನಾಗಿವೆ.

ಜನಾರೋಗ್ಯ—ಡಿಸ್ಟ್ರಿಕ್ಟಿನಲ್ಲಿ ಜ್ವರ ವ್ಯಾಪಿಸಿದೆ. ಈ ತಿಂಗಳೊಳಗೆ ಮಾಲೂರು, ಬೇತಮಂಗಲ ಮತ್ತು ಕೋಲಾರ ತಾಲ್ಲೂಕುಗಳಲ್ಲಿ 39 ಮಂದಿಗೆ ಖೈ ಜುಲಾಬ್ ತಗಲಿದ್ದಾಗಿ ರಿಪೋರ್ಟಾಗಿರುತ್ತೆ. ಕಳೆದ ತಿಂಗಳ ಮತ್ತು ಈ ತಿಂಗಳ ಸಾವಿನ ತಪಸೀಲ್ ಹ್ಯಾಗಂದರೆ:—

	1875ನೇ ನವಂಬರ್	ಡಿಶಂಬರ್		1875ನೇ ನವಂಬರ್	ಡಿಶಂಬರ್
ಖೈ ಜುಲಾಬಿನಿಂದ ..	1	39	ಅಕಸ್ಮಾತ್ ಮತ್ತು ಜಖಂನಿಂದ	11	7
ಜ್ವರದಿಂದ ..	342	302	ಇತರ ಕಾರಣಗಳಿಂದ ..	159	140
ಶಿಡುಬಿನಿಂದ ..	0	5			
ಹೊಟ್ಟೇ ನೋವಿನಿಂದ ..	23	32	ಖುಲ್	536	525

331 ಜನನವಾಯಿತು, 1875ನೇ ನವಂಬರ್ ತಿಂಗಳಲ್ಲಿ 446 ಆಯಿತು.

ಕಾಲ್ನಡೆಗಳ ಪೈಕೀ 1477 ಹೋದವು, 1875ನೇ ನವಂಬರ್ ತಿಂಗಳಲ್ಲಿ 1276 ಹೋದವು.

	1875ನೇ ನವಂಬರ್	ಡಿಶಂಬರ್		1875ನೇ ನವಂಬರ್	ಡಿಶಂಬರ್
ಆಕಳು ಮತ್ತು ಹೋರಿಗಳು ..	296	391	ಕುದುರೆಗಳು ..	6	14
ಯೆಮ್ಮೇಕೋಣಗಳು ..	97	137	ಕತ್ತೇಗಳು	11	32
ಕುರೀ ಮತ್ತು ಮೇಕೆಗಳು ..	866	903	ಖುಲ್	1276	1477

ಜಿನಸೀಗಳ ನಿರಖು ಚಡಾವಾಗುವ ಹಾಗೆ ಇಧೆ.

J. RAMAIYA,
For Dy. Commr.

ಹಾಸನ ಡಿಸ್ಟ್ರಿಕ್ಟ

ಹವಾ,—ರಾತ್ರಿ ಮತ್ತು ಪ್ರಾತಃಕಾಲ ಮಂಜು ಕವಿತುಕೊಂಡು, ಮಧ್ಯಾನ್ಹ ಪ್ರಕಾಶವಾಗಿ ಇತ್ತು, ಹಗಲಹೊತ್ತು ಪೂರ್ವ ದಿಕ್ಕಿನ ಘಾಳಿ ಬಲವಾಗಿತ್ತು.

ಮಳೆ,—ಈ ತಿಂಗಳಲ್ಲಿ 1 ಇಂಚ್, 44 ಸೆಂಟ್ಸ್, ಮಳೆ ಬಿದ್ದದ್ದಾಗಿ ಡಿಸ್ಟ್ರಿಕ್ಟು ಹೆಡ ಕ್ವಾರ್ಟರನಲ್ಲಿ ಅಳಿಯಲ್ಪಟ್ಟಿರುತ್ತೆ, ಇನ್ನು ಬೇಲೂರು, ಮಂಜರಾಬಾದ, ಅರಕಲಗೂಡು ಮತ್ತು ನರಸೀಪುರ ತಾಲ್ಲೂಕುಗಳಲ್ಲಿ ಕೊಂಚ ಮಳೆ ಬಿದ್ದಿರುತ್ತೆ. ಚನ್ನರಾಯಪಟ್ಣ, ಅತ್ತಿಕುಪ್ಪ. ನಾಗಮಂಗಲ ತಾಲ್ಲೂಕುಗಳಲ್ಲಿ ಮಳೆ ಬಿದ್ದಿರುವದಿಲ್ಲ.

ನೀರು,— 37 ದೊಡ್ಡ ಮತ್ತು 1715 ಚಿಕ್ಕ ಕೆರೆಗಳು ಬಣಗಿರುತ್ತೆ, 303 ದೊಡ್ಡ ಮತ್ತು 2805 ಚಿಕ್ಕ ಕೆರೆಗಳಿಗೆ ಆಯಾ ಕೆರೆಗಳಿಗೆ ತಕ್ಕಂತೆ 15 ದಿವಸ ಮೊದಲುಗೊಂಡು ಮೂರು ತಿಂಗಳ ನೀರು ಬಂದಿರುತ್ತೆ.

ಜಮೀನ,—530—0—10 ರೂಪಾಯಿಗಳು ಕಂದಾಯವುಳ್ಳ ಜಮೀನ ಸಾಗುವಳೀ ಬಗ್ಯೆ ತೆಗದುಕೊಳ್ಳಲ್ಪಟ್ಟಿತು.

ಬೆಳೆ,—ರಾಗಿ, ನೆಲ್ಲು, ತೊಗರಿ, ಹುರುಳಿ, ಯಳ್ಳು, ಹರಳು ಕಟಾವಾದವು, ಮತ್ತು ಕಾಪೀ, ಏಲಕ್ಕಿ ಕಾಯಿಗಳು ಕೀಳಲ್ಪಡುತ್ತಲಿವೆ, ಕಡ್ಲೆ, ಧಣಿಯ, ಮೆಂತ್ಯ, ಮತ್ತು ಗನ್ನಾ ಚನ್ನಾಗಿವೆ.

ಧಾರಣೆ,—ಜಿನಸೀಗಳ ಧಾರಣೆ ಚಡಾವಾಗುತ್ತಲಿದೆ.

ಆರೋಗ್ಯ,—ಮಂಜರಾಬಾದ, ಬೇಲೂರ, ಅರಕಲಗೂಡು, ಚನ್ನರಾಯಪಟ್ಣ ತಾಲ್ಲೂಕುಗಳಲ್ಲಿ ಚಳಿಜ್ವರ ವ್ಯಾಪಿಸಿತ್ತು. ಈ ತಿಂಗಳ ಮೊದಲುವಾರದಲ್ಲಿ ಖೈಜುಲಾಬ ಅಲಲ್ಲಿ ತಗಲಿತ್ತು, ಉಳಿದ ದಿವಸಗಳಲ್ಲಿ ಡಿಸ್ಟ್ರಿಕ್ಟು ಮೇಳೆ ಏಂದಾದರು ಸಂಭವಿಸಲಿಲ್ಲ.

ಮರಣ,—ಡಿಸ್ಟ್ರಿಕ್ಟು ಪೈಕೀ ಕೆಳಗೆ ಕಂಡಮೇರೆ 372 ಮಂದಿ ಮೃತಪಟ್ಟರು. ಆ ಹಿಂದಿನ ತಿಂಗಳಲ್ಲಿ 398 ಮಂದಿ ಮೃತಪಟ್ಟರು. ಹ್ಯಾಗಂದರೆ,—

ಖೈಜುಲಾಬಿನಿಂದ 6, ಹಾವು ಕಚ್ಚಿದ್ದರಿಂದ 1, ಜ್ವರದಿಂದ 260, ಆಕಸ್ಮಿಕ 2, ಹೊಟ್ಟೆನೋವಿನಿಂದ 20, ಇತರ ಕಾರಣಿಂದ 83, ಕುಲ 372.

ಜನನ,—ಡಿಸ್ಟ್ರಿಕ್ಟು ಪೈಕೀ 187 ಜನನವಾಯಿತು.

ಕಾಲ್ನಡೆ,—ಮಂಜರಾಬಾದ, ಹಾಸನ, ಅರಕಲಗೂಡು, ಅತ್ತಿಕುಪ್ಪ, ಬೇಲೂರ, ಹಾರನಹಳ್ಳಿ, ನರಸೀಪುರ, ತಾಲ್ಲೂಕುಗಳಲ್ಲಿ ಕಾಲು ಬಾಯಿಜ್ವರ ಇನ್ನು ವ್ಯಾಪಿಸಿದೆ. ಈ ತಿಂಗಳೊಳಗೆ ದನಗಳ ಸಾವು ಬಹಳ, ಹ್ಯಾಗಂದರೆ.—

ರೋಗದಿಂದ 3292, ಕಾಡು ಮೃಗಗಳಿಂದ 16, ಕುಲ 3308.

A. Srinivasaiengar,
For Offg. Dy. Commr.

Mysore Government Press, Bangalore—1876.

ಮೈಸೂರ ಗೆಜೆಟ.

ನಂ. 4 ಸರ್ಕಾರದಿಂದ ಛಾಯಿಷ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಜನವರೀ ತಾ॥ 29, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ–ಮೈಸೂರು ವ ಕೊಡಗು ಶೀಮೆಗಳ ಚೀಫೆ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	11—14
2ನೇ ಭಾಗ–ಜುಡಿಷಲ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟ ಅಕ್ಕೌಂಟೆಂಟ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ ವರಕ್ಸ ಆಫೀಸರ್‌ಗಳು, ಮಿಲಿಟೆರಿ ಅಸಿಸ್ಟೆಂಟರು, ಸರ್ವೇ ವ ಸೆಟಲ್ ಮೆಂಟ ಕಮ್ಮಿಷನರು, ರಿಜಿಸ್ಟ್ರೇಷನ್ ಇನಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟು ಕನಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟ ಕಮ್ಮಿಷನರುಗಳು, ಪೋಲೀಸ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸ್‌ಗಳು. ..	25—35
3ನೇ ಭಾಗ–ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	5—6
ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ.	

1ನೇ ಭಾಗ.

ಮೈಸೂರು ಚೀಪ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 338. ತಾರೀಖು 12ನೇ ಜನವರೀ 1876.

ಈ ಕೆಳಗೆ ಬರುವ ತಿದ್ದುಪಡಿಯಾದ ಬೈಲಾನಿಬಂಧನೆಯು ಆಫಿಷಿಯೇಟಿಂಗ್ ಚೀಫ್ ಕಮ್ಮಿಷನರವರಿಂದ ಮಂಜೂರಾತಿಪಲ್ಪಟ್ಟು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುತ್ತೆ.

2—45 ಕಂಟೋನ್ಮೆಂಟ ಸರಹದ್ದಿನೊಳಗೆ 10 ಮಂದಿಗಿಂತಲೂ ಹೆಚ್ಚಾಗಿ ನೌಕರೀ ಇಟ್ಟುಕೊಂಡಿರುವ, ಕಟ್ಟಡಗಳನ್ನು ಕಟ್ಟುವದರಲ್ಲಿ ಪ್ರವರ್ತಿಸಿರುವ ಕಂಟ್ರಾಕ್ಟುದಾರರು ವ ಇತರರು ಅಥವಾ ಯಾವದಾದರೂ ಸ್ಥಳದಸ್ವಂತಗಾರರು ಯಾ ಭೋಗೊಟ್ಟೀದಾರರು ತಾವುಗಳು ಯಿಟ್ಟುಕೊಂಡಿರುವ ಕಾರೇಗಾರರ್‍ಥ ವ ಕೂಲಿಯವರಾದ ಗಂಡಸರು ವ ಹೆಂಗಸರು ಯಿವರುಗಳ

ಉಪಯೋಗದ ಬಗ್ಯೆ ತಕ್ಕ ಯೆರಡು ಪಾಯಖಾನೆಗಳನ್ನು ಕಟ್ಟಿಸಿ ದುರಸ್ತು ಇಡತಕ್ಕದ್ದಲ್ಲದೆ ಅಂತಾ ಪಾಯಖಾನೆಗಳನ್ನು ದಿನವಹಿ ಬೆಳಿಗ್ಯೆ 7 ಘಂಟೆಗೆ ವಯಿಂಚಿತವಾಗಿ ಪಾಕಮಾಡಿಸಿ ಇಡತಕ್ಕದ್ದು. ಈ ಬೈಲಾನಿಬಂಧನೆಗೆ ಯೇನಾದರು ವುಲ್ಲಂಘನೆ ನಡದಲ್ಲಿ ಅದು ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಅಂತಾ ತಪ್ಪಿತ ಮಾಡಿದ ಆಸಾಮಿಯು 20 ರೂಪಾಯಿಗೆ ಜಾಸ್ತೀಯಿಲ್ಲದ ವಂದು ಜುರ್ಮಾನೆಗೆ ಗುರಿಯಾಗುವದಲ್ಲದೆ, ಅಂತಾ ತಪ್ಪಿತ ಪುನಃ ನಡಿಸಲ್ಪಡುವ ಪ್ರತಿ ದಿವಸಕ್ಕೂ 10 ರೂಪಾಯಿಗಳ ಜಾಸ್ತೀ ಜುರ್ಮಾನೆಗಳು ಸಹಾ ವಿಧಿಸಲ್ಪಡತಕ್ಕದ್ದು.

ಡಿಕ್ಲೇರೇಷನ್.

ನಂ. 339. ತಾರೀಖು 12ನೇ ಜನವರೀ 1876.

ಸನ್ 1870ನೇ ಇಸವಿಯ 10ನೇ ಆಕ್ಟು ಎಂಬ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ನಿಬಂಧನೆಗಳನುಸರಿಸಿ ಸಕಲಜನಗಳಿಗೂ ತಿಳಿಯುವ ಬಗ್ಗೇ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ, ಮೀನಾಕ್ಷಿಕೋಯಿಲ್ ಬೀದಿಯಲ್ಲಿರುವ ದಾದಾ ರಾಮಶೆಟ್ಟಿಯ ನಿವೇಶನದ ಪೈಕೀ ಒಂದು ಭಾಗವಾದ ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರ ಕೆಲಸದ ಬಗ್ಯೆ ಅಂದರೆ, ಬೆಂಗಳೂರು ಲಷ್ಕರ್‌ನಲ್ಲಿ ಸದರೀ ಮೀನಾಕ್ಷಿಕೋಯಿಲ್ ಬೀದಿಯನ್ನು ಅಗಲಪಡಿಸುವದಕ್ಕೋಸ್ಕರ ಬೇಕಾಗಿರುತ್ತೆ.

2. ಹಾಲೀ ಬೇಕಾಗಿರುವ ಜಮೀನು 104 ಸಲಗಜ ಮತ್ತು 2 ಸಲಅಡಿ ಯಿರುವದಲ್ಲದೆ, ಪೂರ್ವಕ್ಕೆ ಅನಂತಯ್ಯಶೆಟ್ಟಿ ನಿವೇಶನವೂ, ಪಶ್ಚಿಮಕ್ಕೆ 3ನೇ L. ನಂಬರ್ ಗಲ್ಲಿಯೂ, ಉತ್ತರಕ್ಕೆ ಮೀನಾಕ್ಷಿಕೋಯಿಲ್ ಬೀದಿಯೂ, ದಕ್ಷಿಣಕ್ಕೆ ದಾದಾ ರಾಮಶೆಟ್ಟಿ ನಿವೇಶನವೂ, ಯಿರುತ್ತೆ.

3. ಸದರೀ ಜಮೀನಿನ ನಕಷೆಯು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಸ್‌ನಲ್ಲಿ ನೋಡತಕ್ಕ ಬಗ್ಯೆ ಸಿದ್ಧವಾಗಿರುತ್ತೆ.

ನಂ. 347. ತಾರೀಖು 19ನೇ ಜನವರೀ 1876.

ನೀರಿಗೆ ದುರ್ಭಿಕ್ಷ ಉಂಟಾಗಿರುವದರಿಂದಲೂ, ಮತ್ತು ಬರುವ ತಿಂಗಳಲ್ಲಿ ವಿಸ್ತಾರವಾಗಿ ದನಗಳ ಮಂದೇ ಶೇರಿದಾಗ ಅದಕ್ಕೆ ಹುಲ್ಲು ವದಗಿಸುವದು ಕಷ್ಟವಾಗುವದಾದ್ದರಿಂದಲೂ, ಬೆಂಗಳೂರಲ್ಲಿ ವರುಷಂಪ್ರತಿ ನಡಿಯತಕ್ಕ ದನಗಳ ತಮಾಷೇಯೂ ಈ ವರುಷ ನಡಿಯುವದಿಲ್ಲವೆಂದು ಆಫೀಷಿಯೇಟಿಂಗ್ ಚೀಫ್ ಕಮೀಷನರವರು ಅಪ್ಪಣೇ ಕೊಡುತ್ತಾರೆ.

ನಂ. 350. ತಾರೀಖು 21ನೇ ಜನವರೀ 1876.

ಮೊಳಕಾಲ್ಮುರು ಪೇಷ್ಕಾರ್ ಶ್ರೀನಿವಾಸೈಯ್ಯಂಗಾರು 2ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುವದಲ್ಲದೆ, 1872ನೇ ಇಸವಿ 10ನೇ ನಂಬರ್ ಆಕ್ಟಿನ 22ನೇ ಸೆಕ್‌ಷನ್ನಲ್ಲಿ ವಿವರಿಸಲ್ಪಟ್ಟ ಅಧಿಕಾರಗಳೂ ಮತ್ತು ಐರ್ಜ ಆಕ್ಟಿನ 23 (a) ಸೆಕ್‌ಷನ್ ಅನುಸರಿಸಿ ಈ ಕೆಳಗೆ ನಮೂದಿಸುವ ಅಧಿಕಾರಗಳೂ ಸಹಾ ಕೊಡಲ್ಪಟ್ಟಿರುತ್ತಾರೆ.

1 ಲಾಷ್ ದರಿಯಾಫ್ತು ಮೊತತಕ್ಕ ಅಧಿಕಾರ, (ಸೆಕ್‌ಷನ್ 135.)

2 ವಿಚಾರಣೆ ಮಾಡಲಿಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಅಧಿಕಾರ, (ಸೆಕ್‌ಷನ್. 141.)

ನಂ. 351. ತಾರೀಖು 22ನೇ ಜನವರೀ 1876.

ಸನ್ 1675ನೇ ಇಸವಿ ಡಿಸೆಂಬರ್ 31ನೇ ಮರ್ಖುಂ 176ನೇ J. ನಂಬರ್ ಉಳ್ಳ ಮಂತ್ರಾಲೋಚಕ ಸಭೇಯೊಳಗಣ ಗವರ್ನರ್ ಜನರಲ್ ಸಾಹೆಬರವರಿಂದ ಕೊಡಲ್ಪಟ್ಟ ಇಸ್ತಿಹಾರ್ ದೆಶೇಯಿಂದ ಉಂಟಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಆಫಿಷಿಯೇಟಿಂಗ್ ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೇ ಕೊಡುವದೇನಂದರೆ,—ಬ್ರಿಟಿಷ್ ಜನರೊಳು ಮದುವೆಗಳ ವಿಷಯದಲ್ಲಿ 1875ನೇ ಯಿಸವಿ ಸೆಪ್ಟಂಬರ್ 18ನೇ ಮರ್ಖುಂ ಮೈಸೂರು ಗೆಜೆಟ 261ನೇ ಪುಟದಲ್ಲಿ ಪುನಃ ಘಾಮಿಷ್ ಮಾಡಲ್ಪಟ್ಟ 1875ನೇ ಯಿಸವಿ

ಆಗಸ್ಟ 31ನೇ ಮರ್ಸ್ಕಂ 1761ನೇ G. ನಂಬರ್ ಉಳ್ಳ ಮಂತ್ರಾಲೋಚಕ ಸಭೇಯೊಳಗಣ ಗವರ್ನರ್ ಜನರೆಲ್ ಯವರಿಂದ ಕೊಡಲ್ಪಟ್ಟ ಇಸ್ತಿಹಾರ್ ಮುಲಕ ವಿಧಿಸಲ್ಪಟ್ಟ ನಿಬಂಧನೆಗಳು, ವ ಫೀಜ್ ಜಂತ್ರಿಯು, ಮೈಸೂರು ನೇಟಿವ್ ಕ್ರಿಸ್ಟಿಯನ್ ಪ್ರಜೇಯಾಗಿಯೂ, ಮತ್ತು ಅವರಲ್ಲಿ ವೊಬ್ಬನೂ ಕ್ರಿಸ್ಟಿಯನ್ ಬ್ರಿಟಿಷ್ ಪ್ರಜೇ ಅಲ್ಲದೇಯೂ, ಯಿರುವ ಜನರೊಳು ಮದುವೆಗಳ ವಿಷಯದಲ್ಲಿ ಕೂಡಾ ಆಚರಿಸಲ್ಪಟ್ಟು ಅನುಸರಿಸಲ್ಪಡತಕ್ಕದ್ದು.

ನಂ. 352. ತಾರೀಖು 22ನೇ ಜನವರೀ 1876.

ಸನ್ 1872ನೇ ಇಸವಿ 15ನೇ ನಂಬರ್ ಇಂಡ್ಯನ್ ಕ್ರಿಸ್ಟಿಯನ್ ಮ್ಯಾರೇಜ್ ಆಕ್ಟಿನ 85ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅಫಿಷಿಯೇಟಿಂಗ್ ಚೀಫ್ ಕಮಿಷನ್ನರ್ ಸಾಹೆಬರವರು ಮೈಸೂರು ಶೀಮೆಯ ಡಿವೀಜನ್ಗಳ ಕಮಿಷನ್ನರ್‌ಗಳನ್ನು ಸದರೀ ಆಕ್ಟಿನ ಕಾರ್ಯಗಳಿಗೋಸ್ಕರ ಡಿಸ್ಟ್ರಿಕ್ಟ ಜಡ್ಜಗಳಾಗಿ ಯಿದರ ದೆಸೆಯಿಂದ ಮೊಕರರ್ರು ಮಾಡುತ್ತಾರೆ.

ನಂ. 353. ತಾರೀಖು 24ನೇ ಜನವರೀ 1876.

ಸನ್ 1875ನೇ ಇಸವಿ ಅಕ್ಟೋಬರ್ 12ನೇ ಮರ್ಸ್ಕಂ 48ನೇ ನಂಬರ್ ಇಸ್ತಿಹಾರ್‌ನಲ್ಲಿ ಶಿವಮೊಗ್ಗಾ ಅಪಾತಿಕೇರಿ ಮಿಸ್ಟರ್ ಮೆಕ್‌ಫಾರ್ಲೇಡ ಯವರಿಗೆ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾ, ಕಾಹಿಲೆ ರಜಾಕ್ಕೆ ಬದಲಾಯಿಸಲ್ಪಟ್ಟು 1876ನೇ ಇಸವಿ ಜನವರೀ 12ನೇ ಮರ್ಸ್ಕಂ ಲಾಗಾಯತು 3 ತಿಂಗಳ ವರಿಗೂ ವಿಸ್ತರಿಸಲ್ಪಟ್ಟಿದೆ.

ನಂ. 354. ತಾರೀಖು 24ನೇ ಜನವರೀ 1876.

ಆಲೂರು ಮುನಸಿಫ್ ಪೊನ್ನರಂಗಂಮೊದಲ್ಯಾರ್ರಿಗೆ ಸಿವಿಲ್ ಲೀವ್ ಕೋಡ F ಸಪ್ಲಿಮೆಂಟ 3ನೇ ಸೆಕ್ಷನ್ ಅನುಸರಿಸಿ, ಮೆಡಿಕಲ್ ಸರಟಿಫಿಕೇಟ್ ಮೇಲೆ 1875ನೇ ಇಸವಿ ನವಂಬರು 23ನೇ ಮರ್ಸ್ಕಂ ಲಾಗಾಯತು ಆರು ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 355. ತಾರೀಖು 26ನೇ ಜನವರೀ 1876.

ಮಾಲೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಅಲ್ಲಿ ನಕ್ಕಿಬುಲ್ಲಾರು 1854ನೆ ಯಿಸವಿ 18ನೇ ಆಕ್ಟು 33ನೇ ಸೆಕ್ಷನ್ ಅನುಸರಿಸಿಯೂ, 1871ನೇ ಇಸವಿ 25ನೇ ಆಕ್ಟು ಅನುಸರಿಸಿಯೂ, ತಮ್ಮ ಅಧಿಕಾರ ಸರಹದ್ದಿಗೆ ವಳಪಟ್ಟ ಮತ್ತು ಜುರ್ಮಾನೇಯಿಂದ ಮಾತ್ರ ದಂಡಿಸಲ್ಪಡತಕ್ಕ ತಕಸೀರ್‌ಗಳನ್ನು ವಿಚಾರಣೆ ಮಾಡಲಿಕ್ಕೆ ಸದರೀ 18ನೇ ಆಕ್ಟಿನ 33ನೇ ಸೆಕ್ಷನ್ ಪ್ರಕಾರ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 356. ತಾರೀಖು 26ನೇ ಜನವರೀ 1876.

ಮೆ॥ ಶ್ರೀನಿವಾಸರಾಯರು ಮೈಸೂರು ಡಿಸ್ಟ್ರಿಕ್ಟ ಟ್ರೆಜರೀ ಚಾರ್ಜನ್ನು 1876ನೇ ಯಿಸವಿ ಜನವರೀ 4ನೇ ಮರ್ಸ್ಕಂ ಮಧ್ಯಾನ್ಹತ್ತರ ಮೆ॥ ಷಣ್ಮುಗವೇಲು ಪಿಳ್ಳೇಯವರಿಗೆ ಕೊಟ್ಟರು.

ನಂ. 357. ತಾರೀಖು 27ನೇ ಜನವರೀ 1876.

ಸನ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟ 4ನೇ ಸೆಕ್ಷನ್ನಿನ ನಿಬಂಧನೆಗಳನುಸರಿಸಿ ಯಿದರಿಂದ ಪ್ರಸಿದ್ಧ ಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ ಮೊಳಕಾಲ್ಮೂರು ತಾಲ್ಲೂಕು ಬಡವಾನ ಹಳ್ಳೀಯಲ್ಲಿರುವ ಈ ಕೆಳಗೆ ವಿವರಿಸಲ್ಪಟ್ಟ ಚಕ್ಕುಬಂದಿಗೆ ಶೇರಿದ ಜಮೀನ್ ಸರಕಾರ ಕೆಲಸಕ್ಕಾಗಿ ಅಂದರೆ, ಅಮೃತಮಹಲ್ ಯಿಲಾಖಾ ಪ್ರಯೋಜನಕ್ಕಾಗಿಯೂ, ಮತ್ತು ಸಾಮಾನ್ಯವಾಗಿ ಜನಗಳ ಪ್ರಯೋಜನಕೋಸ್ಕರವೂ, ಹೊಟ್ಟಗೆರೆಂಬುವನಿಂದ ಕಟ್ಟಲ್ಪಟ್ಟ ಕೆರೆನೀರನ್ನು ಜಮಾಯಿಸುವದಕ್ಕೋಸ್ಕರ ಬೇಕಾಗಿರುತ್ತೆ.

ತಾಲ್ಲೂಕು ದೊಡ್ಡೇರಿ, ಹೋಬಳಿ ಪರಶುರಾಮಪುರ, ಗ್ರಾಮ ಬಡವಾನಹಳ್ಳಿ, ಪಟ್ಟಾದಾರನ ಹೆಸರು ಮಂಗೇರಹಳ್ಳೀ ತಿಮ್ಮನ ಮಗ ತಿಮ್ಮ, ಸರ್ವೇ ಬೀಜವರಿ ಖ. 5 ಗುಂ. 38, ಜೇರೀಜು ರೂ. 1 ಆ. 8, ಚಕ್ಕುಬಂದಿ ಪೂರ್ವಕ್ಕೆ ಬಿಳಿಗೆರೆ ಸರಹದ್ದಿನ ಎಲ್ಲೆ, ಪಶ್ಚಿಮಕ್ಕೆ ಕಾಪರಬಲ್ಲಿ ಅಮೃತ ಮಹಲ್ ಕಾವಲ್, ಉತ್ತರಕ್ಕೆ ಡಿಟೋ ಕಾವಲ್, ದಕ್ಷಿಣಕ್ಕೆ ಡಿಟೋ ಬಡವಾನಹಳ್ಳೀ ಅಮೃತ ಮಹಲ್ ಕಾವಲ್.

ನಂ. 358. ತಾರೀಖು 27ನೇ ಜನವರೀ 1876.

ಹುಲಿಯೂರುದುರ್ಗದ ಪೇಷ್ಕಾರ ಅಪ್ಪಯ್ಯಯಂಗಾರ್ರು 3ನೇ ಕ್ಲಾಸ ಮೇಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟು 1872 ನೇ ಯಿಸವಿ 10ನೇ ನಂಬರ ಆಕ್ಟಿನ 22ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಅಧಿಕಾರಗಳೂ ಐರ್ಜ ಆಕ್ಟಿನ 23 (a) ಸೆಕ್ಷನ ಅನುಸರಿಸಿ ಯಿದರಡಿ ನಮೂದಿಸಲ್ಪಡುವ ಅಧಿಕಾರಗಳೂ ಸಹಾ ಕೊಡಲ್ಪಟ್ಟಿರುತ್ತಾರೆ.

1. ಲಾಷ ದರಿಯಾಪ್ತು ಮಾಡತಕ್ಕ ಅಧಿಕಾರ (ಸೆ. 135)

2. ವಿಚಾರಣೆ ಮಾಡಲಿಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಅಧಿಕಾರ (ಸೆ. 141.)

"ಬಮೋಜಿಬ್ ಹುಕ್ಕುಂ,"

J. S. F. MACKENZIE,

For Offg. Secretary.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ॥ 29, ಸರ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗ್ಯೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 28ನೇ ಜನವರೀ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರ ಹೆಸರು	ಪ್ರತಿವಾದಿಗಳ ಹೆಸರು	ಹಿಯರಿಂಗ್ ತಾರೀಖು
ಸ್ಪಿ. ಅ. ೨	ರಾಮಸ್ವಾಮಿಶೆಟ್ಟಿ ..	ಗೋವಿಂದಪ್ಪಾ ವಗ್ಯೈರೇ ..	೧೫ನೇ ಫೆಬ್ರವರೀ.
ಸ್ಪಿ. ಅ. ೧	ಸುಬ್ಬಾಜೊಇಸ ಉರಫ್ ತಮ್ಮಾಜೊಇಸ	ತಿಪ್ಪಮ್ಮ ವಗ್ಯೈರೇ ..	ಡಿಟೋ
ಫ್ರೂಟ್ ಸ್ಪಿ. ಅಪ್ಪೀಲ್ ೧	ಹೊಸೂರು ಯಲ್ಲಪ್ಪಾ ವಗ್ಯೈರೇ ..	ದೊಡ್ಡ ದೇವಾಸಾನಿ ..	ಡಿಟೋ
ಕ್ರಿ. ಸ್ಪಿ. ಅ. ೧	ಮಂಜೈಯ ..	ಕಿಟ್ಟ ..	ಡಿಟೋ
ಕ್ರಿ. ಸ್ಪಿ. ಅ. ೨	ಶಾಂತಮಲ್ಲೈಯ ..	ಬಳೇಮೂಗಪ್ಪೈಯ ಉರಸ್ ಚನ್ನಬಸವೈಯ ವಗ್ಯೈರೇ ..	ಡಿಟೋ
ಸ್ಪಿ. ಅ. ೩	ಪಾದಷಾ ಮೊಹದೀನ್ ಷಾಖಾದ್ರಿ ..	ಬುರ್ಹಾನ್ ಷಾಖಾದ್ರಿ ವಗ್ಯೈರೇ ..	ಡಿಟೋ
ಫ್ರೂಟ್ ಸ್ಪಿ. ಅ. ೨	ಮೆ॥ ಓಕ್‌ಸ್ ಅಂಡ್ ಕಂಪೆನಿ ..	ಮೆ॥ ಬ್ರೋಕ್‌ವ್ಯಾರ್ ..	ಡಿಟೋ
ಫ್ರೂಟ್ ಅ. ೧	ನಂಜರಾಜೇ ಅರಸು ..	ದೇವರಾಜೇ ಅರಸು ..	ಡಿಟೋ
ಕ್ರಿ. ಸ್ಪಿ. ಅ. ೩	ಹಜಾಮರ ಹುಚ್ಚಾ ..	ಕಾಳೇಗೌಡ ..	ಡಿಟೋ
ಸ್ಪಿ. ಅ. ೫	ಸಿದ್ದಲಿಂಗಪ್ಪ ..	ಶಿದ್ದವೀರಶೆಟ್ಟಿ ವಗ್ಯೈರೇ ..	ಡಿಟೋ
ಸ್ಪಿ. ಅ. ೬	ವೀರಶೆಟ್ಟಿ ವಗ್ಯೈರೇ ..	ಲಿಂಗಾಚಾರಿ ..	ಡಿಟೋ
ಫ್ರೂಟ್ ಅ. ೨	ಪಾರ್ವತಿಬಾಯಿ ..	ಕೃಷ್ಣನಾರಾಯಣ ದಾಸ್ ..	ಡಿಟೋ
ಅಪ್ಪೀಲ್ ೧	ಲಕ್ಷ್ಮಣೈಯ ..	ಶ್ರೀಧರಲಕ್ಷ್ಮೀನರಸಿಹ್ಮಶಾಸ್ತ್ರಿ ವಗ್ಯೈರೆ	೧೭ನೇ ಡಿಟೋ
ಸ್ಪಿ. ಅ. ೪	ನಾಮಗಿರಿಯಮ್ಮ ..	ಶ್ರೀನಿವಾಸರಾಘವಾಚಾರಿ ವಗ್ಯೈರೇ ..	ಡಿಟೋ

H. T. PRINSEP,
Offg. Judl. Commissioner.

2 A

ಇನಾಂ ಇಲಾಖಾ.

ನಂ. 16. ತಾರೀಖು 19ನೇ ಜನವರೀ 1876.

ಹಾಸನ ಡಿಸ್ಟ್ರಿಕ್ಟ್ಸ ಹಾರನಹಳ್ಳೀ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಅ ಸಿಸ್ಟೆಂಟ ಸೂಪ್ರಿಂಟೆಂಡೆಂಟ ಮೆ॥ ಟ. ಕಿಟ್ಸೋಸಾಹೆಬರಿಂದ ಸದರೀ ಕಸಬಾದಲ್ಲಿ 1876ನೇ ಇಸವಿ ಮೇ 1ನೇ ಮರ್ಸ್ಕುಮಿನಲ್ಲಿ ಪ್ರಾರಂಭಿಸುವದು.

ಮೇಲ್‌ಕಂಡ ತಾಲ್ಲೂಕಿನಲ್ಲಿ ಇರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕುದಾರೀಗಳ ನ್ನು ಸ್ಥಾಪಿಸುವ ಬಗ್ಯೊ, ತಮ್ಮಬಳೀ ಇರುವ ಸನ್ನದುಗಳನ್ನು ವ ಇತರ ದಸ್ತಾವೇಜುಗಳನ್ನು ಹಾಜರ್ ಪಡಿಸುವ ಬಗ್ಯೊ ತಾವು ಖುದ್ದಾಗಲಿ ಮುತಾಲಿಕರ ಮೂಲಕವಾಗಲಿ ಹಾಜರಾಗಬೇಕೆಂದು ಇದರಿಂದ ತಾಕೀದ್ ಮಾಡೋಣಾಗುತ್ತೆ. ಹಾಗೆ ಹಾಜರ್ಮಾ ಡದೇ ಹೋದಲ್ಲಿ ಪ್ರಥಮತಃ ಅವರಗಳ ಇನಾಂ ಜಪ್ತು ಮಾಡಲ್ಪಟ್ಟು ತರುವಾಯ ಅಖ್ಯೆರಾಗಿ ಸರಕಾರಕ್ಕೆ ಸೇರಿಸಿಕ್ಕೊಳ್ಳಲ್ಪಡುವದು.

ನಂ. 17. ತಾರೀಖು 19ನೇ ಜನವರೀ 1876.

ಹಾಸನ ಡಿಸ್ಟ್ರಿಕ್ಟ್ಸ ಪೈಕೀ ಬೇಲೂರು ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಸೂಪ್ರಿಂಟೆಂಡೆಂಟರ ಅಸಿಸ್ಟೆಂಟರಾದ ಮೆ॥ ನರಸಿಹ್ಮಯಂಗಾರ್‍ರಿಂದ ಸದರೀ ಕಸಬೇಯಲ್ಲಿ ಸರ್ 1876ನೇ ಯಿಸವಿ ಏಪ್ರೈಲ್ 10ನೇ ಮರ್ಸ್ಕುಮಿನೊಳಗೆ ಪ್ರಾರಂಭಿಸಲ್ಪಡುವದು.

ಸದರೀ ತಾಲ್ಲೂಕಿನಲ್ಲಿರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸುವ ಬಗ್ಯೊ, ತಮ್ಮ ಬಳೀ ಯಿರುವ ಸನ್ನದುಗಳನ್ನು ವ ಇತರ ದಸ್ತಾವೇಜುಗಳನ್ನು ಹಾಜರ್ ಪಡಿಸುವ ಬಗ್ಯೊ, ತಾವು ಖುದ್ದಾಗಲಿ, ಮುತಾಲಿಕರ ಮೂಲಕವಾಗಲಿ ಹಾಜರಾಗಬೇಕೆಂದ್ದು ಇದರಿಂದ ತಾಕೀದ್ ಮಾಡೋಣಾಗುತ್ತೆ. ಹಾಗೆ ಹಾಜರ್ಮಾಡದೇ ಹೋದಲ್ಲಿ ಪ್ರಥಮತಃ ಅವರಗಳ ಇನಾಂ ಜಪ್ತು ಮಾಡಲ್ಪಟ್ಟು ತರುವಾಯ ಅಖ್ಯೆರಾಗಿ ಸರಕಾರಕ್ಕೆ ಸೇರಿಸಿಕ್ಕೊಳ್ಳಲ್ಪಡುವದು.

ನಂ. 18. ತಾರೀಖು 20ನೇ ಜನವರೀ 1876.

ಸರ್ 1875ನೇ ಇಸವಿ ಸೆಪ್ಟಂಬರ್ 8ನೇ ಮರ್ಸ್ಕುಂ 10ನೇ ನಂಬರ್ ಈ ಆಫಿಸಿನ ಇಸ್ತಿಹಾರ್‌ನಾಮೇ ಅನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ,—ಮಾಗಡೀ ತಾಲ್ಲೂಕು ಇತರ ಹೋಬಳೀಗಳ ಇನಾಮತಿ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ ಮೆ॥ ಸೈಯದ್ ನಸರುದ್ದೀನ್ ಸಾಹೆಬರಿಂದ ಮಾಗಡೀ ಕಸಬೇಯೊಳಗೆ ಸರ್ 1876ನೇ ಇಸವಿ ಮಾರ್ಚೀ ಗುರ್‍ರೇ ಉಗಾಯತು ನಡಿಸಲ್ಪಡುವದು.

ಸದರೀ ತಾಲ್ಲೂಕಿನಲ್ಲಿರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸಿಕ್ಕೊಡುವ ಬಗ್ಯೆ ಕ್ರಮವಾದ ಕಾಲಕ್ಕೆ ಮಾಗಡೀಯಲ್ಲಿ ಆಸಿಸ್ಟೆಂಟರ ಆಫೀಸಿಗೆ, ತಾವು ಖುದ್ದಾಗಲಿ, ಮುತಾಲೀಕರ ಮೂಲಕವಾಗಲಿ, ಹಾಜರಾಗಬೇಕೆಂದು ಕೋರೋಣಾಗುತ್ತೆ. ಹಾಗೆ ತಪ್ಪಿದರೆ ಅವರ ಇನಾಂಗಳು ಪ್ರಥಮತಃ ಜಪ್ತು ಮಾಡಲ್ಪಟ್ಟು ಸಂತರ ಅಖ್ಯೆರಾಗಿ ಸರಕಾರಕ್ಕೆ ದಾಖಲ್ ಮಾಡಿಕ್ಕೊಳ್ಳಲ್ಪಡುವದು.

ನಂ. 19. ತಾರೀಖು 24ನೇ ಜನವರೀ 1876.

ಇದರಿಂದ ಇನಾಂದಾರ್‍ರುಗಳಿಗೆ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ಇನಾಂಗಳ ಬಗ್ಯೆ, 62 ಪೂರಾ ಗ್ರಾಮಗಳ ಬಾಬತು ಆಡ್ ಇಂಟರಿಂ ಯಂಬ ಮಧ್ಯಕಾಲದ ಟೈಟಲ್ ಡೀಡಗಳೂ, 2ನೇ ನಂಬರ್ ನಮೂನೇ ಯಿಂದ ತೆಗಿಯಲ್ಪಟ್ಟ 160 ಯಕ್ಸಟ್ರಾಕ್ಟ್ಸಗಳೂ, ಸಹಾ ಬಟವಾಡೆ ಬಗ್ಯೆ ಸರ್ 1876ನೇ ಇಸವಿ ಜನವರೀ 8 ಮತ್ತು 24, ಈ ತಾರೀಖುಗಳಲ್ಲಿ ಬೆಂಗಳೂರು, ಕೋಲಾರ, ಕಡೂರು, ಈ ಡಿಸ್ಟ್ರಿಕ್ಟ್ಸಗಳ ಡಿಪ್ಯುಟ ಕಮ್ಮಿಷನರಗಳಿಗೆ ಕಳುಹಿಸಲ್ಪಟ್ಟವು.

ಹೊಸಕೋಟೆ, ನೆಲಮಂಗಲ, ಬೆಂಗಳೂರು, ದೇವನಹಳ್ಳಿ, ಶೀತಮಂಗಲ, ಕೋಲಾರ, ಮುಳಬಾಗಲ್, ಗುಮ್ಮನಾಯಕನಪಾಳ್ಯ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಗೋರಿಬಿದ್ನೂರು, ಕೊಪ್ಪ, ಲಕ್ಕುವಳ್ಳಿ, ತರೀಕೆರೆ, ಚಿಕ್ಕಮಗಳೂರು, ವಸ್ತಾರಾ.

40

2. ಅವರವರಿಗೆ ಮೇಲ್‌ಕಂಡ ತಾಲ್ಲೂಕುಗಳ ಅಮಲ್‌ದಾರ್ರಿಂದ ನೋಟಿಸ್ ತಲಪಿದ ಮೇಲೆ ಸದರೀ ಟೈಟಲ್ ಡೀಡ್‌ಗಳನ್ನು ತೆಗದುಕೊಳ್ಳುವ ಬಗ್ಯೆ ಆ ಮೇರೆ ಹಾಜರಾಗತಕ್ಕದ್ದು. ಮತ್ತು ಅಂತಾ ನೋಟಿಸ್‌ಗಳನ್ನು ಕೂಡ್ಲೇ ಕೊಡುವಂತೆ ಅಮಲ್‌ದಾರ್ರಗೆ ಹುಕ್ಕುಂ ಆಗಿರುತ್ತೆ.

R. A. Cole,
Supt. of Inam. Settlements.

ಫಿನಾನ್ಷಿಯಲ್ ಇಲಾಖಾ.

ತಾರೀಖು 12ನೇ ಜನವರೀ 1876.

ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ಟ್ರೆಜರೀಗಳ ಮೇಲೆ 500 ರೂಪಾಯಿಗಳಿಗೆ ಕಡಮೆಯಿಲ್ಲದ ಮೊಬಲಗಿಗೆ. ಸದರೀ ಡಿಸ್ಟ್ರಿಕ್ಟು ಖಜಾನೇಗಳಲ್ಲಾಗಲಿ, ತಾಲ್ಲೂಕು ಖಜಾನೇಗಳಲ್ಲಾಗಲಿ, ಮೊದಲು ಮದಗಿದ ಮೊಬಲಗಿನಿಂದ ಹಣ ಸಲ್ಲತಕ್ಕ ಸೇಕಡಾ 2 ಆಣೆ ವಟ್ಟಕ್ಕೆ ಸಪ್ಲ್ಯೈ ಬಿಲ್‌ಗಳೆಂಬ ಹುಂಡಿಗಳನ್ನು ಕೊಡಲಿಕ್ಕೆ ಈ ಕೆಳಗೆ ರುಜು ಮಾಡಿರುವವರು ತಯಾರಾಗಿರುತ್ತಾರೆ.

H. Hudson,
Dy. Acctt. Genl. in Mysore.

ಫಾರೆಸ್ಟ್ ಇಲಾಖಾ.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಚ್ಚು ಕಡಮೆ ಷುಮಾರ 24 ಟನ್‌ಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫೆಬ್ರವರೀ 15ನೇ ಮಕ್ಕಾಂನಲ್ಲಿ, ಶಿವಮೊಗ್ಗಾ ಕೋಠೀಯೊಳಗೆ $18\frac{1}{2}$ ಟನ್‌ಗಳು. ಬಗರು ಅದದ್.
1876ನೇ ಫೆಬ್ರವರೀ 24ನೇ ಮಕ್ಕಾಂನಲ್ಲಿ, ಕವಲೇದುರ್ಗ ಕೋಠೀಯಲ್ಲಿ $5\frac{1}{3}$ ಟನ್‌ಗಳು. ಚಕ್ಕೆ ವ ಬುಕಣಿ.
ಹರಾಜ್ ತಾರೀಖು ಲಾಗಾಯತು ಮೂರುದಿನಗಳೊಳಗಾಗಿ ದರಖಾಸ್ತು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ನಗರ್‌ಡಿವೀಜನ್‌ನಲ್ಲಿ ಉತ್ಪತ್ತಿಯಾದ ಬಾಬತು ಈ ಕೆಳಗೆ ಕಂಡ ಸಾಗುವಾನೀ ವ ಇತರ ಜಾತೀ ದಿಮ್ಮೀಗಳು ಯಿದರಡಿ ವಿವರಿಸಲ್ಪಟ್ಟ ತಾರೀಖು ವ ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ತಾರೀಖು ವ ಸ್ಥಳದ ಹೆಸರು.	ಸಾಗುವಾನೀ	ಬೀಟೀಮರ.	ಕಾಡುಮರ.	ತ್ಯಾಗದ ಕೂಚಗಳು.	ಕಾಡುಮರ	ಜುಮ್ಲಾ.
1ನೇ ಫೆಬ್ರವರೀ 1876; ಆಯನೂರು ಡಿಪೋ ಶಿವಮೊಗ್ಗಾ ತಾಲ್ಲೂಕು.	465	60	433	270	110	1,338

ಹರಾಜ್ ನಿಬಂಧನೆ—1873ನೇ ಜೂನ್ 12ನೇ ಮಕ್ಕಾಂ 20ನೇ ನಂಬರ್ ಬಾಬತು ಮೈಸೂರು ಗೆಜೆಟ್ ಇಸ್ತಿಹಾರ್‌ನಾಮೇ ಅನುಸರಿಸಿ ಶಿವಮೊಗ್ಗಾ ತಾಲ್ಲೂಕು ಟ್ರೆಜರೀಯಲ್ಲಿ ಮೊಬಲಗ್ ಪಾವತೀ ಮಾಡತಕ್ಕದ್ದಲ್ಲದೆ ದರಖಾಸ್ತು ಮೊಬಲಗ್ ಪೈಕೀ ಶೇಕಡಾ ಇಪ್ಪತ್ತೈದರ ಮೇರೆ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಿ ಪಡೆದುಕೊಂಡ ರಸೀದಿಯನ್ನು ಹರಾಜ್ ತಾರೀಖು ಲಾಗಾಯತು 5ನೇ ದಿನ ಪೂರೈಸಲಿಕ್ಕೆ ಮುಂಚಿತವಾಗಿಯೇ ಹರಾಜ್ ನಡಿಸುವ ಆಫೀಸರರಲ್ಲಿ ಹಾಜರ್ ಮಾಡತಕ್ಕದ್ದು. ಷರತ್ತಿಗೆ ತಪ್ಪಿದವರ ಬಾಬತು ನಾಟುಗಳನ್ನು ಪುನಃ ವಿಕ್ರಯಿಸುವ ಬಗ್ಯೆ ಹರಾಜ್ ತಾರೀಖು ಲಾಗಾಯತು 6ನೇ ದಿನ ಡಿಪೋದಲ್ಲಿಯೇ ಯರಡನೆ ಹರಾಜ್ ನಡಿಸಲ್ಪಡುವದು.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀಜರ್ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೇಮರ	ಜಂಗ್ಲೀಮರ	ತೇಗದ ಕೊಚಗಳು	ಜಂಗ್ಲೀ ಮರದ ಕೊಚಗಳು	ಜುಮ್ಲಾ.
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿಕಾರಿಪುರದ ಡಿಪೋ	15ನೇ ಮಾರ್ಚಿ 1876.	959	633	408	265	57	2,322
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿರಾಳ ಕೊಪ್ಪದ ಡಿಪೋ	25ನೇ ಮಾರ್ಚಿ 1876.	129	162	574	37	43	945
ಜುಮ್ಲಾ.		1,088	795	982	302	100	3,267

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂನ್ 12ನೇ ಮರ್ತು೦ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ಪ್ರಕಾರ.

ಶಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು, ಖರೀದಿ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಪ್ರಕಾರ ಜರ್ವ ಖಜಾನೇಯಲ್ಲಿ ಪಾವತೀಮಾಡಿ ಆಬಗ್ಗೆ ಪಡೆದ ರಸೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣಾ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯರಡನೇ ಹರಾಜ್ ನಡಿಸಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice regarding an application of Channabasappa for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡಿ|| ಕಮ್ಮಿಷನರ್ ಕೋರ್ಟಿನಿಂದ.

ಸರ್ 1876ನೇ ಯಿಸವಿ ಶಿವಿಲ್ ಮಿಸಲೇನಿಯಸ್ ನಂಬರ್ 4.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ದೊಡ್ಡಬಳ್ಳಾಪುರ ಕಸಬೇಯಲ್ಲಿರುವ ಚನ್ನಬಸಪ್ಪ ನೆಂಬುವನು ತನ್ನ ತಂದೆ ಪಾಪಣ್ಣನ ಲೇಣೆ 1000 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಗೆ ಸರ್ 1860ನೇ ಯಿಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಯಿಸವಿ ಫಿಬ್ರುವರೀ 14ನೇ ತಾರೀಖು ದಿವಾ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೇಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬ ತಾರೀಖು 12ನೇ ಮಾಹೆ ಜನವರೀ 1876ನೇ ಯಿಸವಿ, ಮೊಕ್ಕಾಂ ದೊಡ್ಡಬಳ್ಳಾಪುರ.

Notice regarding an application of Giriyamma for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ಮಿಸಿಲೇನಿಯಸ್ ನಂಬರ್ 6.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲದಲ್ಲಿ ಇರುವ ಗಿರಿಯಮ್ಮನು ತನ್ನ ಗಂಡ ಚಿಕ್ಕರಂಗನ ಲೇಣೆ 300 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಗೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರ

ಕಾರ ಸರ್ಟಿಫಿಕೇಟ್ ಕೊಡಿಸ ಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಫಿಬ್ರುವರೀ 18ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತ್ತದೆಯಾಗೀ ಆ ಮೊಬಲಗ್ ಮೇಲೆ ಹಕ್ಕು ಉಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 19ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ನೆಲವಂಗಲ.

Notice regarding an application of Nanjappa for a certificate under Act XXVII of 1860.

ಸ್ನ 1876ನೇ ಇಸವಿ ಶಿವಿಲ್ ಮಿಸಲೇನಿಯಸ್ ನಂಬರ್ 5.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಮನವಾರ್ತೆ ಪೇಟೆಯಲ್ಲಿರುವ ವ್ಯಾಕಲ ನಂಜಪ್ಪನೆಂಬುವನು ತನ್ನ ಅಂಣ ವಲ್ಲಪ್ಪನ ಲೇಣಿ 1000 ರೂಪಾಯಿ ಬರವಮಾಡಿಕೊಳ್ಳತಕ್ಕ ಬಗ್ಯೆ ಸ್ನ 1860ನೇ ಯಿಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಯಿಸವಿ ಫಿಬ್ರುವರೀ 16ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೇಯಾಗಿ ಆ ಮೊಬಲಗ್‌ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 15ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಬೆಳವಂಗಲ.

ಬೆಂಗಳೂರು ಡಿಸ್ಟ್ರಿಕ್ಟು ಮೇಜಸ್ಟ್ರೇಟರಿಂದ ಕೊಡಲ್ಪಟ್ಟ ನೋಟಿಸ್.

ತಾರೀಖು 18ನೇ ಜನವರೀ 1876.

1. ಮೊಹರಂ ಹಬ್ಬವು ಈ ತಿಂಗಳು 28ನೇ ತಾರೀಖಿನಲ್ಲಿ ಷುರುವಾಗುವದಾದ್ದರಿಂದ ಆ ಹಬ್ಬದ ಕಾಲದಲ್ಲಿ ತಾಬೂತು ಪಂಜಾ ವಗೈರೇ ಇಡಬೇಕೆಂದು ಅಥವಾ ಇನ್ನ್ಯಾವದಾದರೂ ಮೆರವಣಿಗೆ ಮಾಡಬೇಕೆಂದು ಖಾಯಿಷ್ ಮಾಡುವ ದರೋಬಸ್ತು ಜನಗಳೂ ಬೆಂಗಳೂರು ಪೇಟೇಯಲ್ಲಿ ಅಮಲ್‌ದಾರರಿಗೆ ಅಥವಾ ಇತರ ಸಬ್ ಮೇಜಸ್ಟ್ರೇಟರಿಗೆ, ಮತ್ತು ಕಂಟೋನ್ಮೆಂಟಿನಲ್ಲಿ ಸರ ಅಮೀನರಿಗೆ 5 ದಿನಗಳಿಗೆ ಮುಂಚಿತವಾಗಿ ಬರದುಕೊಂಡು ಸದರೀ ಬಗ್ಯೆ ಲೈಸೆನ್ಸ್ ಪಡೆಯತಕ್ಕದ್ದು.

2. ಸದರೀ ಲೈಸೆನ್ಸಿನಲ್ಲಿ ಪ್ರತಿ ಸಂಗತಿಯೊಳಗೂ ಯಾವ ಬೀದಿ ಮಾರ್ಗವಾಗಿ ಸದರೀ ಮೆರವಣಿಗೆ ಹೋಗತಕ್ಕದ್ದೋ ಅದನ್ನೂ, ಯಾವ ತಾರೀಖು ಯಾವ ಹೊತ್ತಿಗೆ ಹೊರಟು ಆಯಾ ಸ್ಥಳವನ್ನು ಶೇರತಕ್ಕದ್ದು, ಮತ್ತು ನಿಲ್ಲತಕ್ಕ ಸ್ಥಳ ಇವುಗಳನ್ನೂ, ಸಮೂದಿಸತಕ್ಕದ್ದು.

3. ಸದರೀ ಮೆರವಣಿಗೆ ನಡಿಸತಕ್ಕ ಮನುಷ್ಯನು ಲೈಸೆನ್ಸನ್ನು ತನ್ನಲ್ಲಿಟ್ಟುಕೊಂಡು ಹೋಗತಕ್ಕದ್ದಲ್ಲದೆ ಮೇಜಸ್ಟ್ರೇಟರಾಗಲಿ ಪೋಲೀಸ್ ಆಫಿಸರ್ರಾಗಲಿ ಕೇಳಿದಾಗ ಅದನ್ನು ಹಾಜರು ಪಡಿಸತಕ್ಕದ್ದು. ಸದರೀ ಹುಕುಮುಗಳನ್ನು ಅತಿಕ್ರಮಿಸಿದ ಯಾವ ಮನುಷ್ಯನಾಗಲಿ ಕೂಡ್ಲೆ ಪೋಲೀಸಿನವರಿಂದ ದಸ್ತಗಿರೀಮಾಡಲ್ಪಟ್ಟು ಚಾರ್ಜ್ ತರಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

4. ಬದಸ್ತೂರು ವೇಷ ಹಾಕತಕ್ಕ ಜನಗಳು ಮೇಜಸ್ಟ್ರೇಟರಿಂದ ಲೈಸೆನ್ಸ್ ಪಡಿಯುವ ಬಗ್ಯೆ ಬರದು ಕೊಳ್ಳತಕ್ಕದ್ದು.

5. ಪೇಟೆಗಾಗಿ ಕೊಡಲ್ಪಟ್ಟ ಲೈಸೆನ್ಸಗಳನ್ನು ಲಷ್ಕರಿನಲ್ಲಾಗಲಿ, ಲಷ್ಕರಿನಲ್ಲಿ ಕೊಡಲ್ಪಟ್ಟ ಲೈಸೆನ್ಸಗಳನ್ನು ಪೇಟೆಯಲ್ಲಾಗಲಿ, ಉಪಯೋಗಿಸಕೂಡದು.

6. ಬೆಂಗಳೂರು ಪೇಟೆ ವ ಕಂಟೋನ್ಮೆಂಟ ಮೇಜಸ್ಟ್ರೇಟಗಳು ಪ್ರತಿ ಮೆರವಣಿಗೆಯೂ ಯಾವ ಮಾರ್ಗವಾಗಿ ಹೋಗತಕ್ಕದ್ದೋ ಆ ಸಂಗತಿಯನ್ನು ಪೋಲೀಸಿನವರ ಸಂಗಡ ಆಲೋಚಿಸಿ ಗುರ್ತು ಹಚ್ಚತಕ್ಕದ್ದು, ಮತ್ತು ಸಾಧ್ಯವಾದ ಮಟ್ಟಿಗೆ ಮಾಮೂಲ್ ಅನುಸರಿಸತಕ್ಕದ್ದರಲ್ಲಿ ಮಾರಾಮಾರೀ ವಗೈರೇಗಳೇನೂ ನಡಿಯದಂತೆ ಗೊತ್ತಾದ ಹುಕುಮುಗಳನ್ನು ಕೊಡತಕ್ಕದ್ದು.

7. ಮೆರವಣಿಗೆಗಳು ವಗೈರೇ ಹೋಗುತ್ತಿರುವಲ್ಲಿ ಪೋಲೀಸಿನವರು ಖಂಡಿತವಾಗಿ ಪ್ರವೇಶಿಸುವದು ಅನಾವಶ್ಯಕವಾಗಿ ಇರುವ ಅಂಶದೊಳಗೆ ಅವರು ಪ್ರವೇಶಿಸದೆ ಯಿರುವಂತೆ ತಾಕೀತು ಮಾಡತಕ್ಕದ್ದು, ಮತ್ತು ಜನಗಳಲ್ಲಿ ಆಯಾ ಬಗೆಯವರ ಪೈಕೀ ಜವಾಬದಾರರಾದವರು ಹಾಗೆ ಪ್ರವೇಶಿಸುವದಕ್ಕೆ ಯೆಷ್ಟು ಮಾತ್ರವೂ ಆಸ್ಪದ ಕೊಡದಂತೆ ತಮ್ಮ ವ್ಯಾಪಕತ್ವವನ್ನೂ ಅಧಿಕಾರವನ್ನೂ ಉಪಯೋಗಿಸುವರೆಂದು ಡಿಸ್ಟ್ರಿಕ್ಟು ಮೇಜಸ್ಟ್ರೇಟರು ನಂಬುತ್ತಾರೆ.

8. ಯಾವ ಮನುಷ್ಯನೂ ಬಾಧಕವಾದ ಅಥವಾ ಅಪಾಯಕರವಾದ ಆಯುಧವನ್ನಾಗಲಿ ದೊಂಣೆಗಳನ್ನಾಗಲಿ ಹಿಡಿದು ಬೀದಿಗಳಲ್ಲಿ ತಿರಗಾಡಿದ್ದೇ ಆದರೆ ಪೋಲೀಸಿನವರಿಂದ ದಸ್ತಗಿರೀ ಮಾಡಲ್ಪಡಲಿಕ್ಕೆ ಗುರಿಯಾದಾನು.

9. ಆಯಾ ಜಾತೀಯವರ ದೇವಸ್ಥಾನಗಳು ವಗೈರೇ ಮುಂದೆ ವಾದ್ಯಗಳನ್ನು ನಿಲ್ಲಿಸತಕ್ಕದ್ದೆಂದು ನಿಯಮಿಸುವ ನಿಬಂಧನೆಯನ್ನು ಖಂಡಿತವಾಗಿ ಜಾರೀಯಲ್ಲಿ ತರಕ್ಕದ್ದು.

10. ಸ್ನ 1861ನೇ ಇಸವಿ 5ನೇ ನವಂಬರ್ ಪೋಲೀಸ್ ಆಕ್ಟಿನ 17ನೇ ಸೆಕ್ಷನ್ ಅನುಸರಿಸಿ ಸ್ಪೆಷಲ್ ಪೋಲೀಸ್ ಆಫಿಸರರಿಗಾಗಿ ಪೋಲೀಸಿನವರು ಕೇಳುವ ಅಂಶಗಳನ್ನು ಕೂಡ್ಲೆ ಅಮಲ್‌ದಾರ್ರು ಸಬ್ ಮೇಜಸ್ಟ್ರೇಟರು ಸಹಾನೆರವೇರಿಸತಕ್ಕದ್ದು; ಮತ್ತು ಪೋಲೀಸಿನವರ ಕೆಲಸಗಳನ್ನು ನೆರವೇರಿಸುವದಕ್ಕೆ ತಾವೂ ಹಾಜರಿದ್ದು ನಿಯಮಿಸತಕ್ಕದ್ದು.

11. ಮೇಲೆ ಕಂಡ ಹುಕುಂಗಳನ್ನು ಕೂಡ್ಲೆ ದಂಡೋರೆ ಮೂಲಕ ಪ್ರಕಟ ಪಡಿಸತಕ್ಕದ್ದು.

L. RICKETTS,
Offg. Dy. Commr.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು.

ತಾರೀಖು 20ನೇ ಜನವರೀ 1876.

ಇದರಿಂದ ತಿಳಿಸುವದೇನಂದರೆ, ಹಳೇ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಬಗ್ಯೆ ರೂಲ್ಸ್ ಪ್ರಕಾರ 1869, 1870ನೇ ಇಸವಿಗಳಲ್ಲಿ ದಾಖಲಾದ ದಾವೆಗಳೊಳಗೆ ಕಕ್ಷಿಗಾರರಿಂದ ದಾಖಲ್‌ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ ಕಾಗದ ಪತ್ರಗಳೂ 1876ನೇ ಮೇ 1ನೇ ಮಕ್ರುಂನಲ್ಲಿ ನಾಶಪಡಿಸಲ್ಪಡುವದು, ಆದ್ದರಿಂದ ವಾಪಸ್ ತೆಗದುಕೊಳ್ಳಲಿಕ್ಕೆ ಕಕ್ಷಿಗಾರು ಖಾಯಿಷ್‌ಮಾಡುವ ಬೆಲೆಯುಳ್ಳ ಯಾವದಸ್ತಾವೇಜುಗಳನ್ನಾದರೂ ವಾಪಸ್ ಮಾಡುವ ಬಗ್ಯೆ ಮೇಲ್‌ಕಂಡ ಕಾಲದೊಳಗೆ ಅರ್ಜೀ ಬರದುಕೊಳ್ಳತಕ್ಕದ್ದು.

"ಬಮೋಜಿಬ್ ಹುಕ್ಕುಂ,"

W. JENNINGS,
Registrar.

KOLAR DISTRICT.

Notice regarding an application of Ram Rao for a certificate under Act XXVII of 1860.

ಕೋಲಾರ ಡಿ|| ಡಿಪ್ಯುಟಿ ಕಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇತಮಂಗಲ ತಾಲ್ಲೂಕು ಬೌರಿಂಗ್ ಪೇಟೆಯಲ್ಲಿರುವ ಕೋಟಗಲ್ಲು ರಾಮರಾಯನು ಫೌತೀಪಟ್ಟ ತನ್ನ ತಮ್ಮ ಗೊಲ್ಲ ಕ್ರಿಷ್ಣರಾಯನ ಲೇವಾದೇವಿ ವಗೈರೇ ಮೊಬಲಗು 500 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ 1860ನೇ ಇಸವಿ 27ನೇ ನಂಬರ್ ಆಕ್ಟು ಪ್ರಕಾರ ತನ್ನ ಹೆಸರಿಗೆ ವಾರಸ್ ಸರ್ಟಿಫಿಕೇಟ್ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜೀಯು ಫಿಬ್ರುವರೀ ತಾರೀಖು 22ಕ್ಕೆ ವಿಚಾರಣೆ ಮಾಡಲ್ಪಡುತ್ತೇಯಾಗಿ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ಇರುವ ಸ್ಥಳಕ್ಕೆ ಬಂದು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 7ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಕೋಲಾರ.

Notice regarding an application of Yalappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಸಬೆ ಬೇತಮಂಗಲದಲ್ಲಿರುವ ಜೋತಿನಗರದ ಯಳಪ್ಪನೆಂಬುವನು ಫೌತೀಪಟ್ಟ ತನ್ನ ತಂದೆ ಚನ್ನಕ್ರಿಷ್ಣಯನಿಗೆ ಬರತಕ್ಕ ಉದ್ರಿ ಬಾಕೀಗಳು ಮೊಬಲಗು 2000 ರೂಪಾಯಿಗಳು ವಸೂಲ್‌ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜೀಯು ಫಿಬ್ರುವರೀ ತಾರೀಖು 21ಕ್ಕೆ ವಿಚಾರಿಸಲ್ಪಡುತ್ತಾಗಿ ಇದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ಯಿರುವ ಸ್ಥಳಕ್ಕೆ ಬಂದು ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ಬತಾರೀಖು 21ನೇ ಮಾಹೆ ಜನವರೀ 1876ನೇ ಯಿಸವಿ, ಮೊಕ್ಕಾಂ ಕೋಲಾರ.

ಕೋಲಾರ ಡಿ|| ಮೇಜಸ್ಟ್ರೇಟರಿಂದ ಕೊಡಲ್ಪಟ್ಟ ನೋಟಿಸ್.

ತಾರೀಖು 27ನೇ ಜನವರೀ 1876.

1. ಮೊಹರಂ ಹಬ್ಬವು ಈ ತಿಂಗಳು 28ನೇ ತಾರೀಖಿನಲ್ಲಿ ಷುರುವಾಗುವದಾದ್ದರಿಂದ ಆ ಹಬ್ಬದ ಕಾಲದಲ್ಲಿ ತಾಬೂತು ಪಂಜಾ ವಗೈರೇ ಇಡಬೇಕೆಂದು ಅಥವಾ ಇಂನ್ಯಾವದಾದರೂ ಮೆರವಣಿಗೆ ಮಾಡಬೇಕೆಂದು ಖಾಯಿಷ್ ಮಾಡುವ ದರೋಬಸ್ತು ಜನಗಳೂ ಆ ಸ್ಥಳದ ಅಮಲ್‌ದಾರರಿಗೆ ಅಥವಾ ಇತರ ಸಬ್ ಮೇಜಸ್ಟ್ರೇಟರಿಗೆ 5 ದಿನಗಳಿಗೆ ಮುಂಚಿತವಾಗಿ ಬರದು ಕೊಂಡು ಸದರೀ ಬಗ್ಯೆ ಲೈಸೆನ್ಸ್ ಪಡೆಯತಕ್ಕದ್ದು.

2. ಸದರೀ ಲೈಸೆನ್ಸಿನಲ್ಲಿ ಪ್ರತಿಸಂಗತಿಯೊಳಗೂ ಯಾವ ಬೀದಿ ಮಾರ್ಗವಾಗಿ ಸದರೀ ಮೆರವಣಿಗೆ ಹೋಗತಕ್ಕದ್ದೋ ಅದನ್ನೂ, ಯಾವ ತಾರೀಖು ಯಾವ ಹೊತ್ತಿಗೆ ಹೊರಟು ಆಯಾ ಸ್ಥಳವನ್ನು ಸೇರತಕ್ಕದ್ದು, ಮತ್ತು ನಿಲ್ಲತಕ್ಕ ಸ್ಥಳ, ಇವುಗಳನ್ನೂ ನಮೂದಿಸತಕ್ಕದ್ದು.

44

3. ಸದರೀ ಮೆರವಣಿಗೆ ನಡಿಸತಕ್ಕ ಮನುಷ್ಯನು ಲೈಸೆನ್ಸನ್ನು ತನ್ನಲ್ಲಿಟ್ಟುಕೊಂಡು ಹೋಗತಕ್ಕದ್ದಲ್ಲದೆ ಮೇಜಸ್ಟ್ರೇಟರಾಗಲಿ ಪೊಲೀಸ್ ಆಫಿಸರಾಗಲಿ ಕೇಳಿದಾಗ ಅದನ್ನು ಹಾಜರು ಪಡಿಸತಕ್ಕದ್ದು. ಸದರೀ ಹುಕುಮುಗಳನ್ನು ಅತಿಕ್ರಮಿಸಿದ ಯಾವ ಮನುಷ್ಯನಾಗಲಿ ಕೂಡ್ಲೆ ಪೊಲೀಸಿನವರಿಂದ ದಸ್ತಗಿರೀಮಾಡಲ್ಪಟ್ಟು ಚಾರ್ಜ್ ತರಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

4. ಬದಸ್ತೂರು ವೇಷ ಹಾಕತಕ್ಕ ಜನಗಳು ಮೇಜಸ್ಟ್ರೇಟರಿಂದ ಲೈಸೆನ್ಸ್ ಪಡಿಯುವ ಬಗ್ಯೆ ಬರದು ಕೊಳ್ಳತಕ್ಕದ್ದು.

5. ಮೇಜಸ್ಟ್ರೇಟಗಳು ಪ್ರತಿ ಮೆರವಣಿಗೆಯೂ ಯಾವ ಮಾರ್ಗವಾಗಿ ಹೋಗತಕ್ಕದ್ದೋ ಆ ಸಂಗತಿಯನ್ನು ಪೊಲೀಸಿನವರ ಸಂಗಡ ಆಲೋಚಿಸಿ ಗುರ್ತು ಹಚ್ಚತಕ್ಕದ್ದು, ಮತ್ತು ಸಾಧ್ಯವಾದ ಮಟ್ಟಿಗೆ ಮಾಮೂಲ್ ಅನುಸರಿಸತಕ್ಕದರಲ್ಲಿ ಮಾರಾಮಾರೀ ವಗೈರೇಗಳೇನೂ ನಡಿಯದಂತೆ ಗೊತ್ತಾದ ಹುಕುಮುಗಳನ್ನು ಕೊಡತಕ್ಕದ್ದು.

6. ಮೆರವಣೀಗೆಗಳು ವಗೈರೇ ಹೋಗುತ್ತಿರುವಲ್ಲಿ ಪೊಲೀಸಿನವರು ಖಂಡಿತವಾಗಿ ಪ್ರವೇಶಿಸುವದು ಅನಾವಶ್ಯಕವಾಗಿ ಇರುವ ಅಂಶದೊಳಗೆ ಅವರು ಪ್ರವೇಶಿಸದೆ ಯಿರುವಂತೆ ತಾಕೀತು ಮಾಡತಕ್ಕದ್ದು, ಮತ್ತು ಜನಗಳಲ್ಲಿ ಆಯಾ ಬಗೆಯವರ ಪೈಕಿ ಜವಾಬದಾರರಾದವರು ಹಾಗೆ ಪ್ರವೇಶಿಸುವದಕೆ ಯಿಷ್ಟು ಮಾತ್ರವೂ ಅಸ್ಪದ ಕೊಡದಂತೆ ತಮ್ಮ ವ್ಯಾಪಕತ್ವವನ್ನೂ ಅಧಿಕಾರವನ್ನೂ ಉಪಯೋಗಿಸುವರೆಂದು ಡಿಸ್ಟ್ರಿಕ್ಟು ಮೇಜಸ್ಟ್ರೇಟರು ನಂಬುತ್ತಾರೆ.

7. ಯಾವ ಮನುಷ್ಯನೂ ಬಾಧಕವಾದ ಅಥವಾ ಅಪಾಯಕರವಾದ ಆಯುಧವನ್ನಾಗಲಿ ದೊಣ್ಣೆಗಳನ್ನಾಗಲಿ ಹಿಡಿದು ಬೀದಿಗಳಲ್ಲಿ ತಿರಗಾಡಿದ್ದೇ ಆದರೆ ಪೊಲೀಸಿನವರಿಂದ ದಸ್ತಗಿರೀ ಮಾಡಲ್ಪಡಲಿಕ್ಕೆ ಗುರಿಯಾದಾನು.

8. ಆಯಾ ಜಾತ್ತಿಯವರ ದೇವಸ್ಥಾನಗಳು ವಗೈರೇ ಮುಂದೆ ವಾದ್ಯಗಳನ್ನು ನಿಲ್ಲಿಸತಕ್ಕದ್ದೆಂದು ನಿಯಮಿಸುವ ನಿಬಂಧನೆಯನ್ನು ಖಂಡಿತವಾಗಿ ಜಾರೀಯಲ್ಲಿತರತಕ್ಕದ್ದು.

9. ಸ್ಪೆಷಲ್ ಪೊಲೀಸ್ ಆಫಿಸರರಿಗಾಗಿ ಪೊಲೀಸಿನವರು ಕೇಳುವ ಅಂಶಗಳನ್ನು ಕೂಡ್ಲೆ ಅಮಲ್‌ದಾರು, ಸಬ್ ಮೇಜಸ್ಟ್ರೇಟರು ಸಹಾ ನೆರವೇರಿಸತಕ್ಕದ್ದು, ಮತ್ತು ಪೊಲೀಸಿನವರ ಕೆಲಸಗಳನ್ನು ನೆರವೇರಿಸುವದಕ್ಕೆ ತಾವೂ ಹಾಜರಿದ್ದು ನಿಯಮಿಸತಕ್ಕದ್ದು.

10. ಮೇಲೆ ಕಂಡ ಹುಕ್ಕುಂಗಳನ್ನು ಕೂಡ್ಲೆ ದಂಡೋರೆ ಮೂಲಕ ಪ್ರಕಟ ಪಡಿಸತಕ್ಕದ್ದು.

P. N. PURNAIYA,
For Dy. Commr.

TUMKUR DISTRICT.

Notice regarding an application of Nanjundappa for a certificate under Act XXVII of 1860.

ತುಮಕೂರು ಡಿ|| ಡಿ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವ ದೇನಂದರೆ,—ಸೀರಾ ತಾಲ್ಲೂಕು ಹಾಲೇನಹಳ್ಳೀ ಗ್ರಾಮದ ವಾಸಸ್ಥನಾಗಿ ಇದ್ದ ಘಾತೀ ಯಾದ ಚಿಕ್ಕಕಪ್ಪಂಣ ನೆಂಬುವನಿಗೆ ಇತರರಿಂದಾ ಬರಬೇಕಾಗಿರುವ 300 ರೂಪಾಯಿಗಳು, ವಸೂಲ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ ಅಪೇಕ್ಷಿಸಿ, ಇವನ ಮಗ ನಂಜುಂಡಪ್ಪ ನೆಂಬುವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಫಿಬ್ರವರೀ ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿರುತ್ತೆ.

ತಾರೀಖು 6ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ತುಮಕೂರು.

C. J. PEARSE,
Dy. Commr.

HASSAN DISTRICT.

Notice regarding an application of Rangappa for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಅತ್ತಿಕುಪ್ಪೆ ತಾಲ್ಲೂಕು ಬೂಕಿನಕೆರೆಯಲ್ಲಿ ಇರುವ ರಂಗಪ್ಪನೆಂಬವನು ಘಾತೀ ಆದ ತನ್ನ ಚಿಕ್ಕಪ್ಪ ಅಂಚೇ ಚಲುವೈಯನ ಸಾಲ 500 ರೂಪಾಯಿ ವಸೂಲುಮಾಡಿಕೊಳ್ಳುವದಕೆ 1860ನೇ

ಇಸವಿ 27ನೇ ಆಕ್ಟುಮೇರೆ ಸರಟಫಿಕೇಟ್ ಕೊಡಿಸಬೇಕೆಂತ ಕೊಟ್ಟ ಅರ್ಜಿ ಫೈಸಲ್ ಬಗ್ಗೆ ಸರ್ನ ಮಜಕೂರ್ ಫೆಬ್ರುವರೀ 16ನೇ ತಾರೀಖಿನ್ನ ನಿಷ್ಕರ್ಷೆ ಮಾಡಿಯಿರುತ್ತೆ, ತಕರಾರು ಯಿರತಕ್ಕವರೆಲ್ಲ ಮೇಲ್ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಯಿದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರ್‌ಮಾಡಿಕೊಳ್ಳತಕ್ಕದ್ದಿದೆ.

ತಾರೀಖು 17—1—1876.

A. SRINIVASAIENGAR,
For Offg. Dy. Commr.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಪ್ಪಿಸಿಕ್ಕೊಂಡು ಹೋದ ಕೈದೀ ದೊಡ್ಡ ಬುಡ್ಡ ಯಂಬವನ ಚಹರೆ ಪಟ್ಟಿ.

ಜೈಲ್ ರಿಜಸ್ಟರ್ ನಂಬರು 3890, ಹೆಸರು ಮತ್ತು ತಂದೇ ಹೆಸರು ದೊಡ್ಡಬುಡ್ಡ ಖಾಸಿಂಖಾನ್, ವಾಸಸ್ಥಳ ಶಿವಮೊಗ್ಗಾ ತಾಲ್ಲೂಕು ಹಿರೂರು, ಜಾತಿ ಮತ್ತು ಕಸಬು ಮುಸಲ್ಮಾನ್ ಕೂಲಿ, ತಪ್ಪಿತ ಡಕಾಇತಿ, ತಾರೀಖು ಸಜಾವಾಯಿದೆ ಮತ್ತು ಮೊಕದ್ದಮಾ ನಂಬರ್, 25ನೇ ನವಂಬರ 1875 ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಫೈಲ್ ನಂಬರು 32ನೇ ಮೊಕದ್ದಮೆಯಲ್ಲಿ 5 ವರುಷಗಳು ಕಠಿಣ ಸಜಾ, ಯಾರಿಂದ ವಿಧಿಸಲ್ಪಟ್ಟದ್ದು ಶಿವಮೊಗ್ಗಾ ಡಿಸ್ಟ್ರಿಕ್ಟು ಮೇಜಸ್ಟ್ರೇಟರಿಂದ, ವಯಸ್ಸು 30 ಎತ್ತರ ಅಡಿ 5, ಅಂಗಲ $3\frac{1}{2}$, ಷರಾ, ಕಪಿಲೇವರ್ಣ, ಕಂಣುಗಳು ಡಿಟ್ಟೋ, ಕೆನ್ನೆ ಎಲುಬುಗಳು ಉಬ್ಬಿಗಿದೆ, ಭುಜಗಳಮಧ್ಯೆ ವಂದು ಚಿಕ್ಕ ಮಚ್ಚೆ, ಬಲತೋಳಿನ ಮುಂಭಾಗದಲ್ಲಿ ವಂದು ಘಾಯದ ಕಲೆ, ಬಲ ಮುಂಗೈಮೇಲೆ ಮುಂದುಗಡೆ ಇಂನ್ನೊಂದು ಕಲೆ, ಯಡಕಂಕುಳಹಿಂದೆ ವಂದು ಮಚ್ಚೆ, ಬಲತೊಡೆಯ ಮುಂಭಾಗ ಯರಡು ಘಾಯದ ಕಲೆಗಳು, ಬಲ ಮೊಣಕಾಲು ಕೀಲಿನ ಹಿಂದೆ ವಂದು ವೃದ್ಧವಾದ ಘಾಯದ ಕಲೆ, ಯಡತೊಡೆಯ ವಳ ಪಾರ್ಶ್ವ ವಂದು ಘಾಯದ ಕಲೆ, ಯಡಗಾಲಿನ ಹೊರಪಾರ್ಶ್ವ ಯರಡು ಘಾಯದ ಕಲೆಗಳು ಇರುತ್ತೆ.

J. VIJAYARAGHAVALU NAIDU,
For Offg. Dy. Commr.

KADUR DISTRICT.

Notice of sale of a coffee jungle in the Koppa Taluk on the 15th February next, the holder having failed to conform to the terms of the patta under which the jungle was granted him.

ಕಡೂರು ಡಿಸ್ಟ್ರಿಕ್ಟು ಕಾಫೀ ಯಿನ್‌ಚಾರ್ಜು ಅಸಿಸ್ಟೆಂಟ್ ಕಮಿಷನರ್ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಮುರವಳ್ಳಿ ಮಾಗಣಿ ಕರಿಕೆಕೊಂಡ ಗ್ರಾಮದ ಕರಿಕೆಕೊಂಡದ ಕಾನ್ ಯಂಬುವದಕ್ಕೆ ತಾಲ್ಲೂಕು ನಂಬರು 96, ನಗರ ಡಿವೀಜನ್ ನಂಬರು 85, ಕಮಿಷನರ ಹಜೂರು ನಂಬರು 2596ನೇ ಪಟ್ಟೆಯನ್ನ ಪಡೆದ ಅಗಳಗುಂಡಿ ವೆಂಕಪ್ಪಯ್ಯನೆಂಬುವನು ರೂಲ್ಸ್ ಪ್ರಕಾರ ಗಿಡಗಳನ್ನ ಹಾಕದೆ ತಪ್ಪಿ ಇರುತ್ತಾನಾಗಿ ಪಟ್ಟೆಯ 3ನೇ ಕಲಂ ಮೇರೆಗೆ ಡಿಪ್ಯುಟಿ ಕಮಿಷನರ್ ಸಾಹೆಬರವರ ಮಾಹೆ ಮಜಕೂರು 14ನೇ ಮರ್ಕುಂ 1313ನೇ ನಂಬರು ಡಾಕೆಟ್ ಅನುಸರಿಸಿ ಈ ಕೆಳಗೆ ಕಾಣಿಸಿ ಯಿರುವ ಚೆಕ್ಕುಬಂದಿವುಳ್ಳ ಸ್ಥಳವನ್ನ ಸರ್ನ1876ನೇ ಇಸವಿ ಫೆಬ್ರುವರೀ ತಿಂಗಳು 15ನೇ ತಾರೀಖು ದಿವಿ 11 ಘಂಟೆ ಲಾಗಾಯತು 4 ಘಂಟೆ ವರಿಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ನಮ್ಮ ಆಫಿಸ್ ರೂಬರೂ ಹರಾಜ್ ಹಾಕಲ್ ಪಡುತ್ತೆ, ಅಪೇಕ್ಷೆವುಳ್ಳವರು ಚಡದರಖಾಸ್ತಿನಿಂದ ಪಡೆಯಬಹುದು.

ಹಾಗೆ ಪಡೆದವರು ಹರಾಜು ಕೈದಾಗುತ್ತಲೇ ಶೇಕಡಾ 25 ರೂಪಾಯಿನಂತೆ ಠೇವಣಾತಿ ಇಟ್ಟು ಮಿಕ್ಕ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ಹಜರ್ಮಾಡಿ ಸದರೀ ಸ್ಥಳವನ್ನು ಸುಫರ್ದು ಮಾಡಿಕೊಳ್ಳಬೇಕ್ಕು, ತಪ್ಪಿದರೆ ಪುನಹಾ ಹರಾಜು ಮಾಡಿಸಿ ಕಮ್ಮಿ ಬರುವ ಹಣಕ್ಕೆ ಮೊದಲು ದರಖಾಸ್ತುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿಯಿಂದ ಭರ್ತೀಮಾಡಿಕ್ಕೊಳ್ಳುವದಲ್ಲದೆ ಈ ಠೇವಣಾತಿಯನ್ನ ಸರಕಾರಕ್ಕೆ ಶೇರಿಸೋಣಾಗುತ್ತದೆ.

ಕರಿಕೆಕೊಂಡದ ಮೇಲುಗಡೆ ಜಂಗಲೀಯಲ್ಲಿ ವಾಟೆಬಿಚ್ಚಲ್‌ಕಾಡಿನಲ್ಲಿ ಈ ಕಾನಿನ ಚತುರ್ಸಡಿ.

1 ಪೂರ್ವಕ್ಕೆ ದುರ್ಗದ ಗುಡ್ಡದ ಬುಡದಲ್ಲಿರುವ ನೆಲ್ಲೀಮರದ ಯಡಕ್ಕೆ ದಿಮ್ಮೀ.

1 ಪಶ್ಚಿಮಕ್ಕೆ ದನತಿರುಗುವ ದಾರೀ ಮಾವಿನ ಮರದ ಹತ್ರ ದಿಮ್ಮೀ.

1 ದಕ್ಷಿಣಕ್ಕೆ ನೀರಸರಕಾಲು, ಮುಡ್ಲೀಮರ, ಬಡಚರನ ಸೊಕಿಹತ್ರ ದಿಮ್ಮಿ, ಕವಲುಮರದ ಹತ್ರ ದಿಮ್ಮೀ ಸಹಾ.
1 ಉತ್ತರಕ್ಕೆ ನೀರಸರಕಾಲು, ಮಡ್ಲೀಮರ, ಹುಲವೇಮರದ ಹತ್ರದಿಮ್ಮೀ.
ಈ ಚತುರ್ಗಡಿ ಮಧ್ಯೆ ಅಳತೆ ಪ್ರಕಾರ ಆಗುವ ಸಲಿಗಜ 195840ಕ್ಕೆ ಯಕರೇ (40) ಗುಂಟೆ (18) ಗಜ (62.)

ಬತಾರೀಖು 29ನೇ ಡಿಶಂಬರು 1875ನೇ ಇಸವಿ, ಚಿಕ್ಕಮಗಳೂರು.

MAHOMED SALIHA,
Officer in charge of Coffee Department.

ಸನ ೧೮೭೫ನೇ ಇಸವಿ ಡಿಸೆಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಮೈಸೂರ್ ಡಿಸ್ಟ್ರಿಕ್ಟ್.

ಮಳೆ—ಈ ತಿಂಗಳೊಳಗೆ ಮಳೆ ಬೀಳಲಿಲ್ಲವು. ಬಹಳ ಕೆರೆಗಳಲ್ಲಿಯೂ ಮತ್ತು ಭಾವಿಗಳಲ್ಲಿಯೂ ನೀರು ಬತ್ತಿ ಹೋಗಿರುತ್ತೆ.

ಬೆಳೆ—ಕೊಂಚಮಳೆ ಬಿದ್ದಿದ್ದರೆ ಹುರಳಿ ಬೆಳೆಗೆ ಬಹಳ ಅನುಕೂಲವಾಗುತ್ತಿತ್ತು, ಅದು ಇಲ್ಲದ್ದರಿಂದ ಸದರೀ ಫಸಲ್ ಮಂಡ್ಯ ತಾಲ್ಲೂಕಿನಲ್ಲಿ ಶುದ್ಧಾಂಗವಾಗಿ ಕೆಟ್ಟು ಹೋಗಿ ಇತರ ತಾಲ್ಲೂಕುಗಳಲ್ಲಿ ಸಾಧಾರಣವಾಗಿ ಆಗತಕ್ಕ ಫಸಲ್ ಪೈಕೀ ಹಾಗವಾಲು ಹುಟ್ಟುವಹಾಗೆ ಆಯಿತು. ನವಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟಿನಲ್ಲಿ ನಮೂದಿಸಲ್ಪಟ್ಟಂತೆ ಡಿಸ್ಟ್ರಿಕ್ಟ್ ಮುಳೆ ಖುಷ್ಕೀ ಫಸಲ್ ಸರ್ವತ್ರ ಕೆಟ್ಟು ಹೋಯಿತು. ಕೆಲವು ದೊಡ್ಡ ಕೆರೆಗಳ ಕೆಳಗೂ, ನದಿಗಳ ಕಾಲುವೆಗಳ ಕೆಳಗೂ, ನೆಲ್ಲು ಬೆಳೆ ಯಿದ್ದ ಮಟ್ಟಿಗೆ ಚನ್ನಾಗಿ ಆಗಿ ಕಟಾವಾಗಿರುತ್ತೆ, ಆದರೆ ಬಹಳ ಕೆರೆಗಳ ಕೆಳಗೆ ನೆಲ್ಲು ಬೆಳೆ ನೀರಿಲ್ಲದೆ ಬೆಳೆಯಲಿಕ್ಕೆ ಆಗಲಿಲ್ಲಾ.

ಆರೋಗ್ಯ—ಅಷ್ಟಗ್ರಾಮ ತಾಲ್ಲೂಕು ಬನ್ನೂರಿನ ಆಸ್ ಪಾಸ್‌ನಲ್ಲಿ ಖೈಜುಲಾಬ್ ಇನ್ನೂ ಯಿಧೆ. 39ಮಂದಿ ಮೃತಪಟ್ಟದ್ದಾಗಿ ರಿಪೋರ್ಟಾಗಿರುತ್ತೆ. ಎಲ್ಲಾ ಕಾರಣಗಳಿಂದಲೂ ಕುಲ್ 568 ಮಂದಿ ಮೃತಪಟ್ಟಿರುವದಾಗಿ ಎಣಿಸಲ್ಪಟ್ಟಿರುತ್ತೆ.

ಕಾಲ್ನಡೆ—ಡಿಸ್ಟ್ರಿಕ್ಟ್ ಮುಳೆ ಗೋಮಾರಿ ರೋಗವೂ ನಿಂತಿದೆ. ಕಾಡು ಮೃಗಗಳಿಂದ ಕೊಲ್ಲಲ್ಪಟ್ಟ 158 ಶೇರಿ 746 ಕಾಲ್ನಡೆಗಳು ಹೋದ್ದಾಗಿ ರಿಪೋರ್ಟಾಗಿರುತ್ತೆ.

ಧಾರಣೆಗಳು—ಬೆಳೆಗಳು ಕೆಟ್ಟು ಹೋದ್ದರಿಂದ ಜಿನಸಿಗಳ ಧಾರಣೆ ಬಹಳ ಚಡಾವಾಗಿದೆ. ಮೈಸೂರಲ್ಲಿ ಅವ್ವಲ್ ತರಹಾ ಅಕ್ಕಿ ರೂಪಾಯಿ 1ಕ್ಕೆ 8½ ಶೇರುಗಳು, ದುಯ್ಯಂ ತರಹಾ ಅಕ್ಕಿ 10 ಶೇರುಗಳು, ರಾಗಿ 16 ಶೇರು, ಹುರಳಿ 20 ಶೇರು, ಹೆಸರು 18 ಶೇರು, ಕಡ್ಲೇ 11 ಶೇರು, ಮತ್ತು ಬ್ಯಾಳೆ 11 ಶೇರಿನಂತೆ ಮಾರಿದವು. ಬಹಳ ಜಿನಸಿಗಳು ಮುಖ್ಯವಾಗಿ ಕೊಇಂಬತೂರ್ ಡಿಸ್ಟ್ರಿಕ್ಟ್ ಕೊಳ್ಳೇಗಾಲದಿಂದ ಮಂಡ್ಯ ತಾಲ್ಲೂಕಿಗೆ ಆಮದ್ ಆಯಿತು.

W. HILL,
Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಮಳೆ—ಕವಲೇದುರ್ಗ ತಾಲ್ಲೂಕು ವಿನಾ ಮತ್ತೆಲ್ಲಿಯು ಮಳೆ ಬಿಳಲಿಲ್ಲ, ಅಲ್ಲಿ 50 ಸೆಂಟ್ಸ್ ಮಳೆ ಬಿದ್ದದ್ದಾಗಿ ಅಳೆಯಲ್ಪಟ್ಟಿರುತ್ತೆ.

ಬೆಳೆ—ನೆಲ್ಲು, ರಾಗಿ, ಗನ್ನಾ, ಕಟಾವಾದವು. ಕಡ್ಲೇ ಮತ್ತು ಇತರ ಖುಷ್ಕೀ ಫಸಲ್ ಬಿತ್ತಲ್ಪಟ್ಟವು.

ಆರೋಗ್ಯ—ಡಿಸ್ಟ್ರಿಕ್ಟ್ ಪೈಕೀ ಎಲ್ಲಾ ತಾಲ್ಲೂಕುಗಳಲ್ಲಿಯು ಖೈ ಜುಲಾಬ್ ವ್ಯಾಪಿಸಿದೆ. ರಿಪೋರ್ಟಾಗಿರುವ ಕುಲ್ ಮೃತಪಟ್ಟವರ ಸಂಖ್ಯೆ 770, ಅಥವ ಕಳೆದ ತಿಂಗಳಿಗಿಂತಾ 16 ಜಾಸ್ತೀ, ಈ ಪೈಕೀ ಖೈಜುಲಾಬಿನಿಂದ 186. ರಜಿಸ್ಟರ್ ಮಾಡಲ್ಪಟ್ಟ ಕುಲ್ ಜನನವಾದ ಸಂಖ್ಯೆ 450, ಅಥವ ಕಳೆದ ತಿಂಗಳಿಗಿಂತಾ 29 ಕಮ್ಮಿ.

ಕಾಲ್ನಡೆ—ಗೋಮಾರಿ ವ ಇತರ ರೋಗಗಳಿಂದ 1156 ಕಾಲ್ನಡೆಗಳು, ಮತ್ತು ಕಾಡ ಮೃಗಗಳಿಂದ 19, ಹೋಗಿರುತ್ತೆ.

ಧಾರಣೆ—ಹೆಚ್ಚು ಕಡಿಮೆ ಯಾಗುತ್ತಾ ಯಿದೆ.

MAHOMED HUSEN BINTURI,
For Offg. Dy. Commr.

ಕಡೂರು ಡಿಸ್ಟ್ರಿಕ್ಟ್.

ಸ್ 1875ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಮಳೆ ಬೀಳಲಿಲ್ಲವು. ನೀರಿಗೂ ಮತ್ತು ಮೇವಿಗೂ ದುರ್ಭಿಕ್ಷವಾಗಿರುತ್ತೆ.

ಮಳೆ,—ಸ್ 1875ನೇ ನವಂಬರ್ ತಿಂಗಳಲ್ಲಿ ಇಂ.—0—ಸೆಂ.—0,—1875ನೇ ಡಿಸೆಂಬರ್ ತಿಂಗಳಲ್ಲಿ ಇಂ.—0—ಸೆಂ. 95, 1874ನೇ ಡಿಸೆಂಬರ್ ತಿಂಗಳಲ್ಲಿ ಇಂ.—1—ಸೆಂ.—36½, ಬಿದ್ದಿರುತ್ತೆ.

ಬೆಳೆ,—ಬಾಣಾವಾರ, ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಡ್ಲೆ, ಮತ್ತು ಕಡವೆ ಸ್ಥಳಗಳಲ್ಲಿ ಗೋಧಿ ಬಿತ್ತಲ್ಪಟ್ಟವು, ಕಾಲೋಚಿತ ಮಳೆ ಬಾರದ್ದರಿಂದ ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆಯಲ್ಲಿರುವ ಫಸಲ್ ಹೋಣಗುತ್ತಿರುವದಾಗಿ ರಿಪೋರ್ಟಾಗಿರುತ್ತೆ.

ಮೆಣಸಿನಕಾಯಿ, ನೆಲ್ಲು, ಹುರಳಿ, ಹರಳು, ಕಟಾವಾದವು. ಏಲಕ್ಕಿ, ಕಾಫೀ ಕಾಯಿಗಳು ಕೀಳಲ್ಪಡುತ್ತಲಿವೆ, ಮತ್ತು ಮಲ್ನಾಡು ತಾಲ್ಲೂಕಿನಲ್ಲಿ ಸುಪಾರೀ ಕಟಾವಾಗಿರುತ್ತೆ.

ಆರೋಗ್ಯ,—ಡಿಸ್ಟ್ರಿಕ್ಟಿನ ಆರೋಗ್ಯವು ಸಾಧಾರಣವಾಗಿತ್ತು. ಬಾಣಾವಾರ, ತರೀಕೆರೆ, ಚಿಕ್ಕಮಗಳೂರು ಈ ತಾಲ್ಲೂಕುಗಳಲ್ಲಿ ಫೈಜಲಾಬ್, ಮತ್ತು ತರೀಕೆರೆ, ಲಕ್ಕವಳ್ಳಿ, ಕೊಪ್ಪ ತಾಲ್ಲೂಕುಗಳಲ್ಲಿ ಚಳಿಜ್ವರ ವ್ಯಾಪಿಸಿತ್ತು. ಎಲ್ಲಾ ಕಾರಣಗಳಿಂದಲೂ ಈ ತಿಂಗಳಲ್ಲಿ 339 ಮಂದಿ ಮೃತಪಟ್ಟದ್ದಾಗಿ ರಿಪೋರ್ಟಾಗಿರುತ್ತೆ. ಕಳೆದ ತಿಂಗಳಲ್ಲಿ 302, ಮತ್ತು 1874ನೇ ಡಿಸೆಂಬರ್ ತಿಂಗಳಲ್ಲಿ 224 ಮಂದಿ ಹೋದರು.

ಕಾಲ್ನಡೆ.—ಎಲ್ಲಾಕಡೆಯು ಜಾನವರ್‌ಗಳ ಸ್ಥಿತಿ ಚನ್ನಾಗಿರಲಿಲ್ಲ. ತರೀಕೆರೆ, ಕೊಪ್ಪ ತಾಲ್ಲೂಕುಗಳ ಶಿವಾಇ ಕಡವೆ ಯುಳ್ಳಾ ತಾಲ್ಲೂಕುಗಳಲ್ಲಿ ದೊಡ್ಡರೋಗ, ಮತ್ತು ಕಾಲುಬಾಯಿಜ್ವರ ವ್ಯಾಪಿಸಿತ್ತು. ಲಕ್ಕವಳ್ಳಿ, ಕೊಪ್ಪ ತಾಲ್ಲೂಕುಗಳಲ್ಲಿ ಕಾಡು ಮೃಗಗಳಿಂದ ಬಹಳ ಜಾನವರ್ ಕೊಲ್ಲಲ್ಪಟ್ಟದ್ದಾಗಿ ರಿಪೋರ್ಟಾಗಿರುತ್ತೆ.

ಎಲ್ಲಾ ಕಾರಣಗಳಿಂದಲೂ, ಈ ತಿಂಗಳಲ್ಲಿ 1190, ಕಳೆದ ತಿಂಗಳಲ್ಲಿ 1444, ಮತ್ತು 1874ನೇ ಡಿಸೆಂಬರ್ ತಿಂಗಳಲ್ಲಿ 732 ಹೋದವು.

P. KRISHNA RAO,
Dy. Commr.

PRIVATE ADVERTISEMENT.

ಸ್ವಂತ ಪ್ರಕಟಣೆ.

ಶ್ರೀನಿವಾಸಪುರ ಮುನಸಿಫ್ ಬ್ಯಾಂಕ್ ಲಿಮಿಟೆಡ್ ಆಫಿಸಿನಿಂದ.

ಬ್ಯಾಂಕ್ ಮುಜಕೂರಿನ ಸ್ 1871ನೇ ಇಸವಿ ಅಕ್ಟೋಬರ್ 31ರ ಲಾಗಾಯತು ಸ್ 1875ನೇ ಇಸವಿ ನವಂಬರ್ 6ವರಿವಿಗೆ ಮಾಡಿರುವ ರೂಲ್ಸ್‌ಗಳಲ್ಲಿರುವ ನಿಬಂಧನೆಗಳ ಅಭಿಪ್ರಾಯವನ್ನು ಸಮಸ್ತ ಜನಗಳಿಗೂ ಚನ್ನಾಗಿ ತಿಳಿಯತಕ್ಕದ್ದಕ್ಕೆ ಇದರಿಂದ ಪ್ರಕಟಿಸುವದೇನಂದರೆ.—

ಈ ಬ್ಯಾಂಕಿನ ಮೂಲಧನವು 20,000 ರೂಪಾಯಿಗಳಾಗಿಯೂ, ಇದು 10 ರೂಪಾಯಿಗಳ ಮೇರಿಗೆ 2,000 ಭಾಗಗಳಾಗಿಯೂ, ಸ್ 1866ನೇ ಇಸವಿ ಯಿಂಡ್ಯನ್ ಕಂಪೆನೀಸ್ ಆಕ್ಟು ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟದ್ದಾಗಿ ಯಿದೆ.

ಷೇರ್ ಮೊಬಲಗು ಪಾವತೀ ಮಾಡುವದು ಆಯಾ ತಿಂಗಳು 10ನೇ ತಾರೀಖು ವಳಗಾಗಿ ಪಾವತೀ ಮಾಡಬೇಕು. ಅದರ ಮೇಲೆ 20ನೇ ತಾರೀಖು ವಳಗಾಗಿ ಪಾವತೀ ಮಾಡಿದಲ್ಲಿ ರೂಪಾಯಿ 1ಕ್ಕೆ 2ಪೈ ಪ್ರಕಾರವೂ, 21ನೇ ತಾರೀಖು ಲಾಗಾಯತು ಮಾಹೆ ಆಖೈರ್ ವಳಗಾಗಿ ಕೊಡತಕ್ಕವರು ರೂಪಾಯಿ 1ಕ್ಕೆ 3ಪೈ ಪ್ರಕಾರವೂ, ಷೇರ್ ಬಡ್ಡೀ ಸಹಾ ಪಾವತೀ ಮಾಡಬೇಕು. ಅವರಿಗೆ ಆ ತಿಂಗಳು ಪೂರಾ ನಫೇ ದೊರಿಯುತ್ತೆ.

ಪ್ರತಿ ಹಿಸ್ಸೇದಾರರೂ ಷೇರ್ ಮೊಬಲಗ್ಗೆ ರೂಪಾಯಿ 1ಕ್ಕೆ ಪೈ 3ರಲ್ಲು ಎಂಟ್ರೆನ್ಸ್ ಫೀಯೂನೇ ಪ್ರವೇಶ ಧನ ಪಾವತೀ ಮಾಡತಕ್ಕದ್ದು.

1. ಹುಂಡೀ ವ್ಯಾಪಾರವೆಂದರೆ, ಮೂರು ತಿಂಗಳು ವಾಯಿದೆಗೆ ಅತಿಕ್ರಮಿಸದ ವಾಇದೆಗೆ ಮಾಹೇಯಾನಾ ರೂಪಾಯಿ 1ಕ್ಕೆ 3 ಪೈ ಮೇರಿಗೆ ಬಡ್ಡೀ ಅವ್ವಲ್ ಕಟಾಯಿಸಿಕ್ಕೊಂಡು ಮೊಬಲಗು ಕೊಡತಕ್ಕದ್ದು.

2. ಭಂಗಾರ, ಬೆಳ್ಳೀ ನಗಗಳು ಮತ್ತು ಬ್ಯಾಂಕಿನಲ್ಲಿ ಯಿಟ್ಟುಕೊಳ್ಳಬಹುದಾದ ಇತರ ಚರಸ್ವತ್ತುಗಳು ಇವುಗಳ ಆಧಾರದ ಮೇಲೆ ಆಯಾಯ ಸ್ವತ್ತಿನ ಅಂದಾಜಿನಲ್ಲಿ ನಾಲ್ಕರಲ್ಲಿ ಮೂರು ಹಿಸ್ಸೆಗೆ ಮೀರದೆ ಸಾಲಾ ಕೊಡುವದು. ಇದಕ್ಕೆ ಮೋಹೆಯಾನ 50 ರೂಪಾಯಿ ವಳಗಾಗಿ 3 ಪೈ, ಅದರ ಮೇಲೆ 100ರ ವೊಳಗಾಗಿ 2½ ಪೈ, ಅದರ ಮೇಲೆ 2 ಪೈ, ಈ ಮೇರಿಗೆ ನಫೇ ಮುಂಚಿತವಾಗಿ ಕಟಾಯಿಸಿಕೊಂಡು 6 ತಿಂಗಳ ಮೀರದ ವಾಯಿದೆಗೆ ಕೊಡತಕ್ಕದ್ದು.

3. ಮೇಲ್ಕಂಡ ಆಧಾರಗಳ ಮೇಲೆ ಅಥವಾ ಖಾತರ್ ಜಾಮೀನ ಮೇಲೆ 10 ತಿಂಗಳು ಯಾ 5 ತಿಂಗಳು ವಾಯಿದೆಗೆ ಮೀರದ ಕಂತಿಗೆ ಕೊಡತಕ್ಕದ್ದು. ಇದಕ್ಕೆ 10 ತಿಂಗಳ ಕಂತಿಗೆ ಸೇಕಡಾ 10 ರೂಪಾಯಿ ಮೇರಿಗೂ, 5 ತಿಂಗಳ ಕಂತಿಗೆ ಸೇಕಡಾ 5 ರೂಪಾಯಿ ಪ್ರಕಾರವೂ ಬಡ್ಡೀ ಮುಂಚಿತವಾಗಿ ಕಟಾಯಿಸಿಕೊಂಡು ಹಣ ಕೊಡತಕ್ಕದ್ದು. ಮಾಬಾದಲೇ ದಿನ 1ಕ್ಕೆ ರೂಪಾಯಿ 1ಕೆ ಕಾಲ್‌ಕಾಸ್ ಪ್ರಕಾರ 1 ಇಸಮಿಗೆ 10 ರೂಪಾಯಿ ವೊಳಗಾಗಿ 30 ದಿನ ಮೀರದ ವಾಯಿದೆಗೆ ಕೊಡತಕ್ಕದ್ದು.

4. ಭಾಗಸ್ಥರು ತಾವು ಪಾವತೀ ಮಾಡಿ ಇರುವ ಷೇರ್ ಮೊಬಲಗಿನಲ್ಲಿ ಮೂರು ಪಾಲಿಗಿಂತ ಜಾಸ್ತೀಯಾಗಿ ಸಾಲ ತೆಗೆದುಕೊಳ್ಳಕೂಡದು. ಹಾಗೆ ತೆಗದುಕೊಳ್ಳುವರು ಯರಡನೇ ತರಹಾ ಲೇವಾದೇವಿ ಬಡ್ಡೀ ದರದ ಮೇರಿಗೆ ಬಗರ್ ಜಾಮೀನಿ ಮೊಬಲಗು ತೆಗದುಕೊಳ್ಳಬಹುದು.

1ನೇ ತರಹಾ ದೇಣೇದಾರ್ರು ಅವರು ನಿಷ್ಕರ್ಷೆ ಮಾಡಿಕೊಂಡು ಇರುವ ವಾಯಿದೆಗೆ ಸರಿಯಾಗಿ ಹಣ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡುವದಕ್ಕೆ ಅನುಕೂಲವಿಲ್ಲದಿದ್ದರೆ ಬ್ಯಾಂಕಿನವರಿಗೆ ಮುನಾಸಬ್ ತೋರಿದ ಪಕ್ಷಕ್ಕೆ ಮುಂದೆ ಮೂರು ತಿಂಗಳ ವಾಯಿದೆಗೆ ಮೊದಲ್ ತಾವು ಕೊಟ್ಟು ಇರುವ ಬಡ್ಡಿ ದರದ ಮೇರಿಗೆ ರಿನ್ಯೂ ಮಾಡಿಸಿಕೊಳ್ಳಬಹುದು.

2ನೇ ತರಹಾ ದೇಣೇದಾರ್ರು ವಾಯಿದೆಶಿರ್ ಮೊಬಲಗು ಕೊಡದೇ ಇದ್ದರೆ ಬ್ಯಾಂಕಿನವರಿಗೆ ಯುಕ್ತವಾಗಿ ತೋರಿದ ಪಕ್ಷಕ್ಕೆ ಮುಂದೆ 6 ತಿಂಗಳ ವಾಯಿದೆಗೆ ಮೀರದಂತೆ ರಿನ್ಯೂ ಮಾಡಬಹುದು, ಹಾಗೂ ಮಾಡಿಕೊಳ್ಳದೆ ತಪ್ಪಿದರೆ ಬ್ಯಾಂಕಿನವರು ನೋಟಿಸ್ ಕೊಟ್ಟು ಆಧಾರ ಸ್ವತ್ತುಗಳು ವಿಕ್ರಯ ಮಾಡುವರು. ಅಂತಾ ಸ್ವತ್ತು ಮೂಲಕ ಹೊರಡುವ ಮೊಬಲಗಿನಿಂದ ಕುಲ್ ದೇಣೆ ಮೊಬಲಗು ಚಾಲ್ತೀ ಬಡ್ಡೀ ರೂಪಾಯಿ 1ಕ್ಕೆ ದಿನ 1ಕ್ಕೆ ಅರ್ಧ ಪೈ ಮೇರಿಗೆ ಆಗುವದನ್ನೂ ಮತ್ತು ತರದೂದು ಲಾಗವಡನ್ನೂ ಭರ್ತಿ ಆಗದೇ ಹೋದರೆ ಅಂತಾ ಮಾಲೀಕನ ಇತರ ಸ್ಥಿರ ಚರಸ್ವತ್ತುಗಳೂ ಮತ್ತು ಅವನ ಶರೀರವೂ ಕಂಭರ್ತಿಗೆ ಈಡಾಗತಕ್ಕದ್ದು.

3ನೇ ತರಹಾ ದೇಣೇದಾರ್ರು ಆಯಾಯ ತಿಂಗಳು 5ನೇ ತಾರೀಖು ವೊಳಗಾಗಿ ಕಂತು ಮೊಬಲಗು ಸರಿಯಾಗಿ ಪಾವತೀ ಮಾಡಬೇಕು.

ಕಂತು, ವಾಯಿದೆ ಗಿರ್ವಿ, ಮುಬಾದಲ್ ಈ ಬಾಬುಗಳ ರಿನ್ಯೂ ಮತ್ತು ವಾಯಿದೆ ತಪ್ಪಿದ ವಿಷಯದಲ್ಲಿ ಹಾಗೆ ತಪ್ಪುವ ದಿನಗಳಿಗೆ ದಿನ 1ಕ್ಕೆ ರೂಪಾಯಿ 1ಕ್ಕೆ ಅರ್ಧ ಪೈ ಮೇರಿಗೆ ಬಡ್ಡೀ ಪಾವತೀ ಮಾಡತಕ್ಕದ್ದು.

ಭಾಗಸ್ಥರು ತಮ್ಮ ಭಾಗದ ಮೊಬಲಗು ವಾಪಸ್ ತೆಗದುಕೊಳ್ಳಬೇಕಾದರೆ ಮೀಟಿಂಗ್ ಕಾಲದಲ್ಲಿ ತೆಗದುಕೊಳ್ಳಬಹುದು. ಮಧ್ಯ ಕಾಲದಲ್ಲಿ ತೆಗದುಕೊಂಡರೆ ಮೂರು ತಿಂಗಳು ನಫೇ ಸಲ್ಲಲಾರದು, ಅಂತಾ ನಫೇ ಮೊಬಲಗನ್ನ ಬ್ಯಾಂಕಿನಲ್ಲಿಯೇ ಜಖೀರಿ ಫಂಡ್ ಯೆಂದು ಷೇರಿಗೆ ದಾಖಲ್ ಮಾಡಬೇಕು.

ವೊಟ್ಟು ನಫೇ ಮೊಬಲಗಿನಲ್ಲಿ ಖರ್ಚುಗಳಿಗೋಸ್ಕರ ಚಪ್ರಥಾಯಿ ಮೊಬಲಗು ತೆಗಿಯುವದರಲ್ಲಿ ಕುಲ್ ನಫೇಯಲ್ಲಿ ಸೇಕಡಾ ೨ರ ಮೇರಿಗೆ ಶ್ರೀಚಂದ್ರಮವುಳೀಶ್ವರ ಸ್ವಾಮಿಗೆ ಧರ್ಮ ಫಂಡನ್ನು ಸೇಕಡಾ 2ರ ಪ್ರಕಾರ ರಿಜರ್ವಿಂಗ್ ಫಂಡನ್ನು ನೌಕರ ತಲಬು ಆಫಿಸ್ ಭಾಡಾ ರಿಜಿಸ್ಟ್ರೇಷರ್ ಫೀ ವಗೈರೇ ವಿಷ್ಟು ಖರ್ಚುಗಳು ಜಾತಾ ಮೊಬಲಗು ಪ್ರಸೀಡೆಂಟರು ತೆಗದುಕೊಳ್ಳಬೇಕು. ಮುಪ್ಪಾಗುಪಾಲ್‌ನಲ್ಲಿ ವೊಂದು ಕಾಸ್ ಕಮ್ಮಿ ಇಲ್ಲದಂತೆ ಷೇರ್‌ದಾರ್ರಿಗೆ ಪಾವತೀ ಆಗುತ್ತಾ ಬರಬೇಕು. ಮೋಹನತ್ತಾನ ತೆಗದುಕೊಳ್ಳುವ ಪ್ರಸೀಡೆಂಟರು ತಲಬುದಾರ್ರಿಗೆ ಜಾಸ್ತೀ ಮಾಡುವದಕ್ಕೂ ಕಮ್ಮಿ ಮಾಡುವದಕ್ಕೂ ಸಹಾ ಸ್ವತಂತ್ರರಾಗಿರುತ್ತಾರೇ ಹೊರ್ತು ಈ ಸಂದರ್ಭದಲ್ಲಿ ಷೇರ್‌ದಾರ್ರು ಪ್ರವೇಶಾ ಮಾಡಲೂ ಯೇನು ನಿಮಿತ್ತ್ಯವಿರುವದಿಲ್ಲ.

ಸಹಾಯಾಧಿಪತಿಗಳು ಮೂರು ಜನವು ಆಡಿಟರ್ ವೊಂದು ಅಂತು ಇಸಂ 4ಕ್ಕೆ ಮೊಹನತಾನಾ ತೆಗಿಯುವ ಚೌಥಾಯಿ ಮೊಬಲಗಿನಲ್ಲಿ ಸೇಕಡಾ 4ರ ಪ್ರಕಾರ ದರ ಇಸಂ 1ಕ್ಕೆ 1ರ ಮೇರಿಗೆ ತೆಗದುಕೊಳ್ಳಬೇಕು. ಅವರು ಕೆಲಸ ನೋಡದೆ ಅಶ್ರದ್ಧೇ ಮಾಡಿದರೆ ಆಂದಾಮಾಷಾಯಿ ಪ್ರಕಾರ ಅವರ ಮೋಹನತ್ತಾನಾ ಮೊಬಲಗಿನಲ್ಲಿ ಹಿಡಿಯುವ ಅಂಶವು ಪ್ರಸೀಡೆಂಟರಿಗೆ ಬಾಧ್ಯಪಟ್ಟಿರುತ್ತೆ.

ಬ್ಯಾಂಕ್ ಅಭಿವೃದ್ಧಿಗೆ ಅಡಚಣೆ ಆಗುವ ಹಾಗೆ ಯಾವ ಮೆಂಬರ್ ಆಗಲಿ ವುದ್ಯೋಗಸ್ತರೇ ಆಗಲಿ ಮಾಡುವ ಹಾಗೆ ಸ್ಪಷ್ಟವಾಗಿ ತಿಳಿದು ಬಂದರೆ, ಅಂಥಾವರನ್ನ ಬ್ಯಾಂಕಿನಿಂದ ತೊಲಗಿಸುವ ವಿಷಯದಲ್ಲಿ ಪ್ರಸೀಡೆಂಟರವರು ಮೊಖ್ತ್ಯಾರ್ ಆಗಿರುತ್ತಾರೆ.

ರುಜು ಸದಾಶಿವೈಯ,
ಪ್ರೆಸೀಡೆಂಟ.

49

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 29, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

4ನೇ ಭಾಗ.

ಸಾಲ್ ಮರಗಳನ್ನು ಕತ್ತರಿಸುವದು ವ ರೆಂಬೆ ಕಡಿಯುವದು ಯಿವುಗಳನ್ನು ಕುರಿತು.

1. ಮರಗಳನ್ನು ಒತ್ತಾಗಿ ಬೆಳೆಸುವಪಕ್ಷಕ್ಕೆ ಅವುಗಳ ರೆಂಬೇ ಕಡಿಯುವದು ಅಥವಾ ಕತ್ತರಿಸುವದು ಇವುಗಳುಕಡಮೇಯಾದಷ್ಟೂ ವಳ್ಳೇದು. ಅವುಗಳು ತಮ್ಮಷ್ಟಕ್ಕೆತಾವೇ ವಿರಳವಾಗುತ್ತವೆ. ಮತ್ತು ಮನುಷ್ಯಕೃತಗಳಾದ ಸಾಧನಗಳಿಂದ ಕೀಳಲ್ಪಡುವದಕ್ಕಿಂತ ಹೆಚ್ಚಾಗಿ ಯಲೆಗಳು ಬಹಳ ಸುಲಭವಾಗಿ ತಾವೇ ಬಿದ್ದುಹೋಗುತವೆ.

2. ಸಾಲ್ ಮರಗಳೊಂದಕ್ಕೊಂದು ಕೆಲವು ದೂರದಲ್ಲಿ ನೆಡಬೇಕಾದ ಆವಶ್ಯಕತೆ ಯಿರುವದರಿಂದ ಮರಗಳು, ಬಹಳ ಕೆಳಗಡೆಗೆ ಬುಡದಿಂದ ಬಹಳವಾಗಿ ಪಕ್ಕರೆಂಬೆಗಳು ಬಿಡಲಿಕ್ಕೆ ಆಸ್ಪದಗಳಾಗುತ್ತವೆ. ಮರಗಳ ಸುತ್ಲೂ ಯಿರುವ ಬೆಳಕು ಗಾಳಿ ಯಿವುಗಳು ಆಮೇರೆ ರೆಂಬೆಗಳು ಬಿಡಲಿಕ್ಕೆ ಕಾರಣಗಳಾಗುತ್ತವೆ. ಬುಡಭಾಗ ರೆಂಬೆಗಳವರಿಗೆ ನೆಟ್ಟನೆ ಸಫೈ ಯಿರಲಿಕ್ಕೋಸ್ಕರ ಕೆಳಗೆರೆಂಬೆ ಬಿಡುವದನ್ನು ತಪ್ಪಿಸುತ್ತಾ ಬಂದು ಪ್ರಯಾಣಸ್ಥರಿಗೆ ನೆರಳುಂಟು ಮಾಡುವದಕ್ಕೂ ವ್ಯಾಪಾರಕ್ಕೆ ಬಾಧಕವಾಗದೇ ಯಿರುವದಕ್ಕೂ ಅನುಕೂಲವಾದಷ್ಟು ಯೆತ್ತರದಲ್ಲಿ ರೆಂಬೆಗಳು ಬಿಡುವಂತೆ ಮಾಡತಕ್ಕದ್ದು.

3. ಬಹಳವಾಗಿ ರೆಂಬೆಗಳು ಕತ್ತರಿಸಿಹಾಕುವದಕ್ಕಿಂತ ಬಹಳ ಸ್ವಲ್ಪವಾಗಿ ರೆಂಬೆ ಕತ್ತರಿಸುವದು ತಪ್ಪಾದಾಗ್ಯೂ ಚಿಂತೆಇಲ್ಲವು. ಈ ನ್ಯಾಯವು ವಿಶೇಷವಾಗಿ ರೆಂಬೆಗಳು ಕತ್ತರಿಸುವದಕ್ಕೇನೆ ಲಗಾವಾಗುತ್ತದೆ, ಮತ್ತು ಯೆರಡು ಮೂರು ವರುಷಗಳು ಸಾಮಾನ್ಯವಾಗಿ ಹಾಗೆ ರೆಂಬೆಗಳು ಕತ್ತರಿಸುವದು ಮತ್ತು ಕಡಿಯುವದು ಈ ಕೆಲಸಗಳು ನಡಿಯುವಣ ಪ್ರಯೋಜನಕರವಾಗಿರುತ್ತೆ.

4. ಒಂದು ಸಾಲ್‌ಮರದ ಬೆಳವಿಗೆಯನ್ನು ಕ್ರಮಪಡಿಸುವ ಕಾರ್ಯಗಳು ಮರಗಳ ಯಳೇಸ್ಥಿತಿಯಲ್ಲಿಯೇ ಷುರುವಾಗತಕ್ಕದ್ದು. ಪರಂತು ಯಾವ ಮರವಾಗಲಿ ಚನ್ನಾಗಿ ಬೇರಿಳದು ಬಲವಾಗಿ ಬೆಳೆಯುತ್ತಿದ್ದ ಹೊರ್ತು ಅದನ್ನು ಶುದ್ಧಾಂಗ ಮುಟ್ಟಕೂಡದು. ಬೇರು ಚನ್ನಾಗಿ ಯಿಳಿಯತಕ್ಕದ್ದು, ಸೊಶಿಯ ಗೋಮಾದ ಸ್ಥಿತಿಯಿಂದ ಸದರೀ ಮೇರೆ ಬೇರು ಪೂರಿದಂತೆ ಕಾಣಬಂದಲ್ಲಿ ರೆಂಬೆ ಕಡಿಯುವ ಕೆಲಸ ಷುರುವಾಗಬಹುದು. ಗಿಡದ ವಯಸ್ಸನ್ನು ಕುರಿತು ಯಾವ ನಿಬಂಧನೆಯನ್ನೂ ಮಾಡುವದಕ್ಕಾಗುವದಿಲ್ಲವು. ಆದರೆ, ಕೆಲವು ಮರಗಳನ್ನು ಯರಡು ಅಥವಾ ಮೂರು ವರುಷಗಳ ವಯಸ್ಸಿನ ಬಳಿಕಲೇ ಮುಟ್ಟುವದು ವಳ್ಳೇದು. ರೆಂಬೆಗಳು ನಾಟಿ ಬೆಳೆಯುವ ಮರಗಳ ಕೆಲವು ಯೆಲೆಗಳನ್ನು ಕೈಯಿಂದ ಕಿತ್ತು ಹಾಕಬಹುದು.

5. ಸಾಲ್‌ಮರಗಳು ದೂಲಗಳಿಗಾಗಿ ಬೆಳಸತಕ್ಕದ್ದಲ್ಲಾ. ಪ್ರಥಮತಃ ಅವಶ್ಯಕವಾದ ಅಂಶವೇನಂದರೆ, ವ್ಯಾಪಾರಕ್ಕೆ ಬಾಧಕವಿಲ್ಲದಂತೆ ವಿಶೇಷವಾದ ನೆರಳು ಉಂಟು ಮಾಡಬೇಕೆಂಬದು. ಮತ್ತೊಂದು ಅಂಶವು ಸಹಾ ಯೋಚಿಸ ಬೇಕಾದ್ದೇ, ಅದೇನಂದರೆ, ಮೈಸೂರು ಶೀಮೆಯಲ್ಲಿ ರೈತರು ಅಂತಾ ವೃಕ್ಷದ ಫಲಗಳನ್ನು ಅನುಭವಿಸುವ ಷರತ್ತಿನ ಮೇಲೆ ಮರಗಳನ್ನು ನಾಟುತ್ತಾರೆ, ಆದ್ದರಿಂದ ರಸ್ತೇಗಳಿಗೆ ಅಡ್ಡವಾಗಿ ಮರಗಳು ಬಹಳ ಎತ್ತ್ರ ಬೆಳಿಯುವಂತೆ ಮಾಡಕೂಡದು.

6. ಸಂವತ್ಸರದ ಸರ್ವಕಾಲದಲ್ಲೂ ರೆಂಬೆ ಕಡಿಯತಕ್ಕ ಕೆಲಸವನ್ನು ನೆರವೇರಿಸತಕ್ಕದ್ದಲ್ಲ. ಮುಖ್ಯವಾಗಿ ಇದಕ್ಕೆ ಉತ್ತಮವಾದ ಕಾಲ ಮಳೆಗಾಲದ ಅಖೈರ್ ಭಾಗವಾಗಿರುತ್ತೆ, ಯಾತಕ್ಕಂದರೆ, ಆ ಕಾಲದಲ್ಲಿ ಕಡಿಯಲ್ಪಟ್ಟ ಭಾಗದಲ್ಲಿ ಕಡಮೇಯಾಗಿ ರಸ ಹೊರಡುವದು.

7. ಕೆಳಗಡೆ ಎಳೇದಾಗಿರುವ ಪಕ್ಕದ ರೆಂಬೆಗಳನ್ನು ಚಿವುಟಿ ಹಾಕತಕ್ಕದ್ದು, ಅಥವಾ ಹಾಗೆ ತೆಗಿಯಲಿಕ್ಕೆ ಆಗದೆ ಬಹಳ ಘಟ್ಟಿಯಾಗಿದ್ದಪಕ್ಷಕ್ಕೆ ಹರಿತವಾದ ಚೂರಿಇಂದ ಬುಡಕ್ಕೆ ಶೇರಿದಂತೆ ಸನುನಾಗಿ ಸಾಫ್ ಕತ್ತರಿಸತಕ್ಕದ್ದು.

8. ಬಂದೇಸ್ಥಳದಿಂದ ಎರಡು ರೆಂಬೆಗಳು ಹೊರಟಿದ್ದರೆ ಎರಡನ್ನು ಕತ್ತರಿಸುವದು ಅನಾವಶ್ಯಕವಾದಲ್ಲಿ ಒಂದನ್ನು ಯಾವಾಗ್ಯೂ ತೆಗದು ಹಾಕತಕ್ಕದ್ದು. ಯಾವದಾದರೂ ಒಂದು ರೆಂಬೆ ಇತರ ರೆಂಬೆಗಳಿಗಿಂತಾ ವೇಗವಾಗಿ ಬೆಳಿಯುತ್ತಿದ್ದರೆ, ಅದನ್ನು ಶುದ್ಧಾಂಗ ಕತ್ತರಿಸದೇ ಹೋದಾಗ್ಯೂ ಹಾಗೆ ಬೆಳಿಯ ಗೊಡಿಸದಂತೆ ಹಿಂದಕ್ಕೆ ಕತ್ತರಿಸತಕ್ಕದ್ದು. ಒಂದು ಮರ ಎರಡು ಕವಲಾಗಿ ಹುಟ್ಟಿದ್ದರೆ ಒಂದನ್ನು ಸಾಫಾಗಿ ಕತ್ತರಿಸಿ ಬಿಡತಕ್ಕದ್ದು.

9. ಸಾಲ್‌ಮರಗಳು ವಿಶೇಷ ಹಳೇದಾಗಿದ್ದಲ್ಲಿ ಬಾರ್ ಬಾರ್ ರೆಂಬೆ ಕತ್ತರಿಸುತ್ತಾ ಹಾಗೆ ಕತ್ತರಿಸುವದರಲ್ಲಿ ಬಹಳ ಜಾಗರೂಕತೆಯನ್ನು ವಹಿಸ ಬೇಕು.

10. ರೆಂಬೆಗಳನ್ನೆಲ್ಲಾ ಕತ್ತರಿಸುವಾಗ್ಯೆ ಮರದ ಬುಡಕ್ಕೆ ಸಮರೇಖೆಯಾಗಿ ಅಧಕ್ಕೆ ಕೂಡಿದಷ್ಟು ಸಮೀಪಕ್ಕೆ ಕತ್ತರಿಸತಕ್ಕದ್ದು, ಮತ್ತು ಮರದ ಬೊಬ್ಬಡೆ ಏನೂ ಸುಲಿದು ಹೋಗಿ ಮರಕ್ಕೆ ಯಾವ ವಿಧದಿಂದಲೂ ಜಾಯವಾಗದಂತೇಯೂ, ಆ ಮೂಲಕ ಮರಕ್ಕೆ ವಿಶೇಷ ಜಖಂ ತಗಲದಂತೇಯೂ, ಎಚ್ಚರಿಕೆ ಯಿಂದ ಕಡಿಯತಕ್ಕದ್ದು. ಮುಂದಕ್ಕೆ ಹೊರಟಿರುವ ಮೋಟನ್ನು ಬಿಡತಕ್ಕದ್ದಲ್ಲ, ಸಾಫ್ ಕತ್ತರಿಸಿಬಿಡತಕ್ಕದ್ದು.

11. ರೆಂಬೆಗಳನ್ನು ಕಡಿಯುವಲ್ಲಿ ಶುದ್ಧಾಂಗವಾಗಿ ಮೇಲಿನಿಂದಲೇ ಕತ್ತರಿಸಿದ ಪಕ್ಷಕ್ಕೆ ಬುಡದ ಮೇಲಿನ ಬೊಬ್ಬಡೆ ಪ್ರಾಯಶಃ ಸುಲಿದು ಹೋಗುವ ವಾಡಿಕೆ ಉಂಟಾಗಿ ಹಾಗೆ ಆಗದಂತೆ ಮೊದಲು ಕೆಳಭಾಗಕ್ಕೆ ಕಚ್ಚು ಮಾಡತಕ್ಕದ್ದು. ದೊಡ್ಡ ರೆಂಬೆಗಳು ಕತ್ತರಿಸಬೇಕಾದಾಗ ಹಿಂದಕ್ಕೆ ಸ್ವಲ್ಪವಾಗಿ ಕತ್ತರಿಸಿ ತರುವಾಯ ಮೋಟನ್ನು ಎಚ್ಚರಿಕೆ ಇಂದಾ ಕಡದು ಹಾಕತಕ್ಕದ್ದು, ಹಾಗೆ ಮಾಡುವದರಲ್ಲಿ ಕೆಳಗಿನಿಂದ ಕಚ್ಚು ಮಾಡುವದನ್ನು ಮರಿಯಬಾರದು.

12. ಒಂದು ಗುಣಿಯಲ್ಲಿ ಎರಡು ಸೊಸಿಗಳು ನಾಟಲ್ಪಟ್ಟು ಅವುಗಳು ಇನ್ನು ಎಳ ದಾಗಿದ್ದಲ್ಲಿ ಅವುಗಳ ಪೈಕೀ ಸಣ್ಣದಾಗಿರುವದನ್ನು ಕೂಡ್ಲೆ ತೆಗದು ಹಾಕತಕ್ಕದ್ದು,ಮುಖ್ಯವಾಗಿ ಎರಡು ಸೊಸಿಗಳೂ ವೊಂದೇ ಜಾತಿ ಮರವಾಗಿದ್ದಲ್ಲಿ ಆಮೇರೆ ಮಾಡತಕ್ಕದ್ದು. ಆದರೆ, ಮರಗಳು ಕೆಲವು ಸಂವತ್ಸರಗಳ ವರಿಗೆ ಜಂಟಿಯಾಗಿ ಬೆಳದಿದ್ದಲ್ಲಿ ಅವುಗಳನ್ನು ಹಾಗೆ ಬಿಡತಕ್ಕದ್ದು,(ಒಂದಕ್ಕಿಂತಾ ಮತ್ತೊಂದು ಬಹಳ ಗಿಡ್ಡಾಗಿದ್ದಲ್ಲಿ) ಅದನ್ನು ಕತ್ತರಿಸಬಹುದು, ಯಾತಕ್ಕಂದರೆ, ಹಾಂಗೆ ಉಳಿಸಲ್ಪಟ್ಟ ಮರವು ಪ್ರಾಯಶಃ ಒಂದೇಕಡೆ ಬಹಳವಾಗಿವಾಲಿರತಕ್ಕ ಮರವಾಗಿಯೇ ಇರಬಹುದು.

MYSORE GOVERNMENT PRESS, BANGALORE—1876.

51

ಮೈಸೂರ ಗೆಜೆಟ್.

ನಂ. 5 ಸರ್ಕಾರದಿಂದ ಛಾಯಿಷ್ ಆದ್ದು. ಸ‍ೇ 1876.

ಬೆಂಗಳೂರು, ಶನಿವಾರ, ಫೆಬ್ರುವರಿ ತಾ|| 5, ಸ‍ೇ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ–ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	15—17
2ನೇ ಭಾಗ–ಜುಡಿಷಲ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರಡರ್ ಕಂಟ್ರೋಲರು, ಪಬ್ಲಿಕ್ ವರಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. ..	37—47
3ನೇ ಭಾಗ–ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ-ಸಭೆಯವರ ಆಕ್ಟುಗಳು. ..	
4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ.	1—8

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 12ನೇ ಜನವರೀ 1876.

ನಂ. 338.

ಈ ಕೆಳಗೆ ಬರುವ ತಿದ್ದುಪಡಿಯಾದ ಬೈಲಾನಿಬಂಧನೆಯು ಆಫಿಷಿಯೇಟಿಂಗ್ ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುತ್ತೆ.

2—45 ಕಂಟೋನ್ಮೆಂಟ್ ಸರಹದ್ದಿನೊಳಗೆ 10 ಮಂದಿಗಿಂತಲೂ ಹೆಚ್ಚಾಗಿ ನೌಕರೀ ಇಟ್ಟುಕೊಂಡಿರುವ, ಕಟ್ಟಗಳನ್ನು ಕಟ್ಟುವದರಲ್ಲಿ ಪ್ರವರ್ತಿಸಿರುವ ಕಂಟ್ರಾಕ್ಟದಾರ್ರು ವ ಇತರರು ಅಥವಾ ಯಾವದಾದರೂ ಸ್ಥಳದಸ್ವಂತಗಾರ್ರು ಯಾ ಭೋಗೋಟ್ಟೀದಾರ್ರು ತಾವುಗಳು ಯಿಟ್ಟುಕೊಂಡಿರುವ ಕಾರೀಗಾರ್ರಾದ ವ ಕೂಲಿಯವರಾದ ಗಂಡಸರು ವ ಹೆಂಗಸರು ಯಿವರುಗಳ

ಉಪಯೋಗದ ಬಗ್ಯೆ ತಕ್ಕ ಯರಡು ಪಾಯಖಾನೆಗಳನ್ನು ಕಟ್ಟಿಸಿ ದುರಸ್ತು ಇಡತಕ್ಕದ್ದಲ್ಲದೆ ಅಂತಾ ಪಾಯಖಾನೆಗಳನ್ನು ದಿನನಹಿ ಬೆಳಿಗ್ಯೆ 7 ಘಂಟೆಗೆ ಮುಂಚಿತವಾಗಿ ಪಾಕಮಾಡಿಸಿ ಇಡತಕ್ಕದ್ದು. ಈ ಬೈಲಾನಿಬಂಧನೆಗೆ ಏನಾದರು ಉಲ್ಲಂಘನೆ ನಡದಲ್ಲಿ ಅದು ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟ ಅಂತಾ ತಪ್ಪಿತ ಮಾಡಿದ ಆಸಾಮಿಯು 20 ರೂಪಾಯಿಗೆ ಜಾಸ್ತೀಯಿಲ್ಲದ ವಂದು ಜುರ್ಮಾನೆಗೆ ಗುರಿಯಾಗುವದಲ್ಲದೆ, ಅಂತಾ ತಪ್ಪಿತ ಪುನಃ ನಡಿಸಲ್ಪಡುವ ಪ್ರತಿ ದಿವಸಕ್ಕೂ 10 ರೂಪಾಯಿಗಳ ಜಾಸ್ತೀ ಜುರ್ಮಾನೆಗಳು ಸಹಾ ವಿಧಿಸಲ್ಪಡತಕ್ಕದ್ದು.

ಡಿಕ್ಲೇರೇಷನ್.

ನಂ. 339. ತಾರೀಖು 12ನೇ ಜನವರೀ 1876.

ಸನ್ 1870ನೇ ಇಸವಿಯ 10ನೇ ಆಕ್ಟು ಎಂಬ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ನಿಬಂಧನೆಗಳನುಸರಿಸಿ ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ, ಮೀನಾಕ್ಷಿಕೋಯಿಲ್ ಬೀದಿಯಲ್ಲಿರುವ ದಾದಾ ರಾಮಶೆಟ್ಟಿಯ ನಿವೇಶನದ ಪೈಕೀ ಒಂದು ಭಾಗವಾದ ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರ ಕೆಲಸದ ಬಗ್ಯೆ ಅಂದರೆ, ಬೆಂಗಳೂರು ಲಷ್ಕರ್‌ನಲ್ಲಿ ಸದರೀ ಮೀನಾಕ್ಷಿಕೋಯಿಲ್ ಬೀದಿಯನ್ನು ಅಗಲಪಡಿಸುವದಕ್ಕೋಸ್ಕರ ಬೇಕಾಗಿರುತ್ತೆ.

2. ಹಾಲೀ ಬೇಕಾಗಿರುವ ಜಮೀನು 104 ಸಲಗಜ ಮತ್ತು 2 ಸಲಅಡಿ ಯಿರುವದಲ್ಲದೆ, ಪೂರ್ವಕ್ಕೆ ಅನಂತಯ್ಯಶೆಟ್ಟಿ ನಿವೇಶನವೂ, ಪಶ್ಚಿಮಕ್ಕೆ 3ನೇ L. ನಂಬರ್ ಗಲ್ಲಿಯೂ, ಉತ್ತರಕ್ಕೆ ಮೀನಾಕ್ಷಿಕೋಯಿಲ್ ಬೀದಿಯೂ, ದಕ್ಷಿಣಕ್ಕೆ ದಾದಾ ರಾಮಶೆಟ್ಟಿ ನಿವೇಶನವೂ, ಯಿರುತ್ತೆ.

3. ಸದರೀ ಜಮೀನಿನ ನಕ್‌ಷೆಯು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸ್‌ನಲ್ಲಿ ನೋಡತಕ್ಕ ಬಗ್ಯೆ ಸಿದ್ಧವಾಗಿರುತ್ತೆ.

ನಂ. 347. ತಾರೀಖು 19ನೇ ಜನವರೀ 1876.

ನೀರಿಗೆ ದುರ್ಭಿಕ್ಷ ಉಂಟಾಗಿರುವದರಿಂದಲೂ, ಮತ್ತು ಬರುವ ತಿಂಗಳಲ್ಲಿ ವಿಸ್ತಾರವಾಗಿ ದನಗಳ ಮಂದೇ ಶೇರಿದಾಗ ಅವಕ್ಕೆ ಹುಲ್ಲು ವದಗಿಸುವದು ಕಷ್ಟವಾಗುವದಾದ್ದರಿಂದಲೂ, ಬೆಂಗಳೂರಲ್ಲಿ ವರುಷಂಪ್ರತಿ ನಡಿಯತಕ್ಕ ದನಗಳ ತಮಾಷೇಯೂ ಈ ವರುಷ ನಡಿಯುವದಿಲ್ಲವೆಂದು ಆಫೀಷಿಯೇಟಿಂಗ್ ಚೀಫ್ ಕಮೀಷನರವರು ಅಪ್ಪಣೇ ಕೊಡುತ್ತಾರೆ.

ನಂ. 357. ತಾರೀಖು 27ನೇ ಜನವರೀ 1876.

ಸನ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟು 4ನೇ ಸೆಕ್‌ಷನ್ನಿನ ನಿಬಂಧನೆಗಳನುಸರಿಸಿ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ದೊಡ್ಡೇರಿ ತಾಲ್ಲೂಕು ಬಡವಾನ ಹಳ್ಳೀಯಲ್ಲಿರುವ ಈ ಕೆಳಗೆ ವಿವರಿಸಲ್ಪಟ್ಟ ಚಕ್ಕುಬಂದಿಗೆ ಶೇರಿದ ಜಮೀನ್ ಸರಕಾರ ಕೆಲಸಕ್ಕಾಗಿ ಅಂದರೆ, ಅಮೃತಮಹಲ್ ಯಿಲಾಖಾ ಪ್ರಯೋಜನಕ್ಕಾಗಿಯೂ, ಮತ್ತು ಸಾಮಾನ್ಯವಾಗಿ ಜನಗಳ ಪ್ರಯೋಜನಕೋಸ್ಕರವೂ, ಹೊಟ್ಟಿಗನೆಂಬುವನಿಂದ ಕಟ್ಟಲ್ಪಟ್ಟ ಕೆರೆನೀರನ್ನು ಜಮಾಯಿಸುವದಕ್ಕೋಸ್ಕರ ಬೇಕಾಗಿರುತ್ತೆ.

ತಾಲ್ಲೂಕು ದೊಡ್ಡೇರಿ, ಹೋಬಳಿ ಪರಶುರಾಮಪುರ, ಗ್ರಾಮ ಬಡವಾನಹಳ್ಳಿ, ಪಟ್ಟಾದಾರನ ಹೆಸರು ಮಂಗೇರಹಳ್ಳೀ ತಿಮ್ಮನಮಗ ತಿಮ್ಮ, ಸರ್ವೇ ಬೀಜವರಿ ಯ. 5 ಗುಂ. 38, ಬೇರೀಜು ರೂ. 1 ಆ. 8, ಚಕ್ಕುಬಂದಿ ಪೂರ್ವಕ್ಕೆ ಬಳಿಗೆರೆ ಸರಹದ್ದಿನ ಎಲ್ಲೆ, ಪಶ್ಚಿಮಕ್ಕೆ ಕಾಪರಬಲ್ಲಿ ಅಮೃತ ಮಹಲ್ ಕಾವಲ್, ಉತ್ತರಕ್ಕೆ ಡಿಟೋ ಕಾವಲ್, ದಕ್ಷಿಣಕ್ಕೆ ಡಿಟೋ ಬಡವಾನಹಳ್ಳೀ ಅಮೃತ ಮಹಲ್ ಕಾವಲ್.

ನಂ. 359. ತಾರೀಖು 31ನೇ ಜನವರೀ 1876.

ಮೈಸೂರು ಡಿವೀಜನ್ ಮತ್ತು ಸೀಡೆಡ್ ಡಿಸ್ಟ್ರಿಕ್ಟು ಇಂಡಿಯನ್ ಮೆಡಿಕಲ್ ಡಿಪಾರ್ಟುಮೆಂಟ್ ಡಿಪ್ಯುಟಿ ಸರ್ಜನ್ ಜನರಲ್ ಡಾಕ್ಟರ್ ಜೆ. ಸ್ಮಿತ್ ಸಾಹೇಬರವರು ಪ್ರಿವಿಲೀಜ್ ರಜಾದಿಂದ ಬೆಂಗಳೂರಿಗೆ ವಾಪಸ್ ಬಂದದ್ದನ್ನು ರಿಪೋರ್ಟು ಮಾಡಿ ಸನ್ 1876ನೇ ಇಸವಿ ಜನವರೀ ತಾರೀಖು 19ರಲ್ಲಿ ತಮ್ಮ ಆಫೀಸಿನ ಚಾರ್ಜನ್ನು ತೆಗದುಕೊಂಡಿರುತ್ತಾರೆ.

ನಂ. 360. ತಾರೀಖು 2ನೇ ಫಿಬ್ರವರೀ 1876.

ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಕೆಪ್ಟನ್ ಲಾರೆನ್ಸ್ ಸಾಹೆಬರಿಗೆ 1875ನೇ ಇಸವಿ ಡಿಶಂಬರ 7ನೇ ಮುಕ್ಕಾಂ 314ನೇ ನಂಬರ ಇಸ್ತಿಹಾರಿನಲ್ಲಿ ಕೊಡಲ್ಪಟ್ಟಿದ್ದ 10 ದಿನಗಳ ಪ್ರಿವಿಲೀಜ್ ರಜಾ ಅವರ ಖಾಯಿಷ್ ಪ್ರಕಾರ ರದ್ದು ಮಾಡಲ್ಪಟ್ಟಿದೆ.

"ಬಮೋಜೀಬ್ ಹುಕ್ಕುಂ,"

J. S. F Mackenzie,
For Offg. Secretary.

ಇಂಡ್ಯ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ಲೆಕ್ಕದ ವಿಷಯು.

ನಿರ್ಣಯವು.

ತಾರೀಖು 12ನೇ ಜನವರೀ 1876, ಮೊಕ್ಕಾಂ ಫೋರ್ಟ್ ವಿಲಿಯಂ, ನಂಬರ 191.

ಮಂತ್ರಾಲೋಚಕ ಸಭೆಯೊಳಗಣ ಗವರ್ನರ ಜನರಲ್ ಸಾಹೆಬರವರು ನಿರ್ಣಯಿಸುವದೇನಂದರೆ,—ಶೇಕಡಾ 4¼ಗೆ ಕಮ್ಮೀಬಡ್ಡೀ ಮೇಲೆ ವೊಂದು ಸ್ಪೆಷಿಯಲ್ ಲಾ ಕಾನೂನಿನ ನಿಬಂಧನೆ ಅನುಸಾರವಾಗಿ ಸರಕಾರ ಹಣದಿಂದ ಯಾವ ಮುಬಾದಲೆಯು ನ್ನಾಗಲಿ ಫಿನಾನ್ಷಿಯಲ್ ಇಲಾಖೇಯಲ್ಲಿ ಇಂಡ್ಯಗವರ್ನಮೆಂಟನವರ ಸಾಂಕ್ಷನ್ ಮುಂಚಿತವಾಗಿ ಪಡಯದೇ ಕೊಡಕೂಡದು. ಹಾಂಗಿಲ್ಲದಿದ್ದರೆ ಅಂತಾ ಮುಬಾದಲೆಯುನ್ನು ಶೇಕಡಾ 6ಕ್ಕೆ ಕಮ್ಮೀಯಾಗಿ ಬಡ್ಡೀ ಮೇಲೆ ಕೊಡತಕ್ಕದ್ದಲ್ಲ. ಹುಕ್ಕುಂ—ಐಜನ್ ನಿರ್ಣಯವು ಈ ಕೆಳಗೆ ಕಂಡ ರೀತ್ಯಾ ಅವರವರ ತಿಳುವಳಿಕೆ ಬಗ್ಗ್ಯಾ ನಡವಳಿಕೆ ಬಗ್ಗ್ಯಾ ಕಳುಹಿಸಲ್ಪಡತಕ್ಕದ್ದು.

ರೆವಿನ್ಯೂ ಆಗ್ರಿಕಲ್ಚರಲ್ ವ ಕಾಮರಸ್ ಇಲಾಖೆಗೆ, ಅನೇಕ ಲೋಕಲ್ ಗವರ್ನಮೆಂಟಗಳಿಗೆ, ವ ಅಡಮಿನಿಸ್ಟ್ರೇಟರ್ಸಗಳಿಗೆ, ಕಂಟ್ರೋಲರ ಜನರಲ್‌ಯವರಿಗೆ, ಮತ್ತು ಸ್ವತಂತ್ರ ಚಾರ್ಜಉಳ್ಳ ಅನೇಕ ಅಕ್ಕೌಂಟೆಂಟ್ ಜನರಲ್ ಯವರಗಳಿಗೆ, ವ ಡಿಪ್ಟಿ ಅಕ್ಕೌಂಟೆಂಟ ಜನರಲ್‌ಯವರಿಗೆ.

ಲೀವ ವ ಅಲ್ಲೌನ್ಸೆಸ.

ನಂ. 29. ತಾರೀಖು 6ನೇ ಜನವರೀ 1876, ಮೊಕ್ಕಾಂ ಫೋರ್ಟ್‌ವಿಲಿಯಂ.

ಮಂತ್ರಾಲೋಚಕ ಸಭೆಯೊಳಗಣ ಗವರ್ನರ ಜನರಲ್ ಯವರು ನಿಬಂಧಿಸುವದೇನಂದರೆ, ವೊಟ್ಟು ಪಬ್ಲಿಕ್ ಆಫಿಸರರು, ಫಾಸಲೆ ಪ್ರಕಾರ ಟ್ರಾವಿಲಿಂಗ್ ಅಲ್ಲೌನ್ಸ ಯಾನೆ ಮಾರ್ಗ ಭತ್ತ್ಯಾಕ್ಕೆ ಹಕ್ಕು ಉಂಟಾಗುವ ಸಂಗತಿಯಲ್ಲಿ ರೇಲ್ವೆದ್ವಾರಾ ಪ್ರಯಾಣ ಮಾಡಿ ಅವರು ಸಂಚರಿಸುವ ಫಾಸಲೆಗಿಂತ ಜಾಸ್ತೀ ಫಾಸಲೇ ಬಗ್ಗೆ ಮೊಬಲಗು ಕೊಡಬೇಕಾಗಿ ಬಂದಲ್ಲಿ ಅಂತಾ ಜಾಸ್ತೀ ಫಾಸಲೆ ಬಗ್ಗೆ ಅವರಿಂದ ಕೊಡಲ್ಪಟ್ಟ ಮೊಬಲಗು ಅವರಿಗೆ ವಾಪಸ ಸಲ್ಲತಕ್ಕದ್ದು.

R. B. Chapman,
Secy. to the Govt. of India.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ॥ 5, ಸರ್ನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 28ನೇ ಜನವರೀ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮಿಷ್ನರರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಸ್ಪೂಟೆ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು	ಪ್ರತಿವಾದಿಗಳ ಹೆಸರು	ಹಿಯರಿಂಗ್ ತಾರೀಖು.
ಸ್ಪಿ. ಅ. ೨	ರಾಮಸ್ವಾಮಿಶೆಟ್ಟಿ ..	ಗೋವಿಂದಪ್ಪಾ ವಗೈರೇ ..	೧೫ನೇ ಫೆಬ್ರುವರೀ
ಸ್ಪಿ. ಅ. ೧	ಸುಬ್ಬಾಜೊಇಸ ವುರಫ್ ತಮ್ಮಾಜೊಇಸ	ತಿಪ್ಪಮ್ಮ ವಗೈರೇ ..	ಡಿಟೋ
ಫೂಟೆ ಸ್ಪಿ. ಅಪ್ಪೀಲ್ ೧	ಹೊಸೂರು ಯಲ್ಲಪ್ಪಾ ವಗೈರೇ ..	ದೊಡ್ಡ ದೇವಾಸಾನಿ ..	ಡಿಟೋ
ಕೊ. ಸ್ಪಿ. ಅ. ೧	ಮಂಜೈಯ ..	ಕಿಟ್ಟಿ ..	ಡಿಟೋ
ಕೊ. ಸ್ಪಿ. ಅ. ೨	ಶಾಂತ ಮಲ್ಲೈಯ ..	ಬಳೇಮಾಗಪ್ಪೈಯ ವುರಫ್ ಚನ್ನಬಸವೈಯ ವಗೈರೇ ..	ಡಿಟೋ
ಸ್ಪಿ. ಅ. ೩	ಪಾದಷಾ ಮೊಹದೀನ್‌ಷಾಖಾದ್ರಿ ..	ಬುರ್ಹಾನ್‌ಷಾ ಖಾದ್ರಿ ವಗೈರೇ ..	ಡಿಟೋ
ಫೂಟೆ ಸ್ಪಿ. ಅ. ೨	ಮೆ॥ ಓಕ್‌ಸ್ ಅಂಡ್ ಕಂಪೆನಿ ..	ಮೆ॥ ಬ್ರೋಕ್‌ಮ್ಯಾನ್ ..	ಡಿಟೋ
ಫೂಟೆ ಅ. ೧	ನಂಜರಾಜೇ ಅರಸು ..	ದೇವರಾಜೇ ಅರಸು ..	ಡಿಟೋ
ಕೊ. ಸ್ಪಿ. ಅ. ೩	ಹಜಾಮುರ ಹುಚ್ಚಾ ..	ಕಾಳೇಗೌಡ ..	ಡಿಟೋ
ಸ್ಪಿ. ಅ. ೫	ಶಿದ್ದಲಿಂಗಪ್ಪ ..	ಶಿದ್ದವೀರಶೆಟ್ಟಿ ವಗೈರೇ ..	ಡಿಟೋ
ಸ್ಪಿ. ಅ. ೬	ವೀರಶೆಟ್ಟಿ ವಗೈರೇ ..	ಲಿಂಗಾಚಾರಿ ..	ಡಿಟೋ
ಫೂಟೆ ಅ. ೨	ಪಾರ್ವತಿಬಾಯಿ ..	ಕೃಷ್ಣನಾರಾಯಣ ದಾಸ್ ..	ಡಿಟೋ
ಅಪ್ಪೀಲ್ ೧	ಲಕ್ಷ್ಮಮ್ಮೈಯ ..	ಶ್ರೀಧರಲಕ್ಷ್ಮೀನರಸಿಹ್ಮಶಾಸ್ತ್ರಿವಗೈರೆ	೧೭ನೇ ಡಿಟೋ
ಸ್ಪಿ. ಅ. ೪	ನಾಮಗಿರಿಯಮ್ಮ ..	ಶ್ರೀನಿವಾಸರಾಘವಾಚಾರಿ ವಗೈರೇ ..	ಡಿಟೋ

H. T. PRINSEP,
Offg. Judl. Commissioner.

ಇನಾಂ ಇಲಾಖಾ.

ನಂ. 16. ತಾರೀಖು 19ನೇ ಜನವರೀ 1876.

ಹಾಸನ ಡಿಸ್ಟ್ರಿಕ್ಟ್ ಹಾರನಹಳ್ಳೀ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಮೆ॥ ಟ. ಕಿಟ್ಟೋ ಸಾಹೇಬರಿಂದ ಸದರೀ ಕಸಬಾದಲ್ಲಿ 1876ನೇ ಇಸವಿ ಮೇ 1ನೇ ಮರ್ಕ್ಕು ಮಿನಲ್ಲಿ ಪ್ರಾರಂಭಿಸುವದು.

ಮೇಲ್‌ಕಂಡ ತಾಲ್ಲೂಕಿನಲ್ಲಿ ಇರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕು ದಾರೀಗಳನ್ನು ಸ್ಥಾಪಿಸುವ ಬಗ್ಯೆ, ತಮ್ಮ ಬಳೀ ಇರುವ ಸನ್ನದುಗಳನ್ನು ವ ಇತರ ದಸ್ತಾವೇಜುಗಳನ್ನು ಹಾಜರ್ ಪಡಿಸುವ ಬಗ್ಯೆ, ತಾವು ಖುದ್ದಾಗಲಿ ಮುತಾಲೀಕರ ಮೂಲಕವಾಗಲಿ ಹಾಜರಾಗಬೇಕೆಂದು ಇದರಿಂದ ತಾಕೀದ್ ಮಾಡೋಣಾಗುತ್ತೆ. ಹಾಗೆ ಹಾಜರ್ಾಗದೇ ಹೋದಲ್ಲಿ ಪ್ರಥಮತಃ ಅವರಗಳ ಇನಾಂ ಜಪ್ತು ಮಾಡಲ್ಪಟ್ಟು ತರುವಾಯ ಆಖೈರಾಗಿ ಸರಕಾರಕ್ಕೆ ಸೇರಿಸಿಕ್ಕೊಳ್ಳಲ್ಪಡುವದು.

ನಂ. 17. ತಾರೀಖು 19ನೇ ಜನವರೀ 1876.

ಹಾಸನ ಡಿಸ್ಟ್ರಿಕ್ಟ್ ಪೈಕೀ ಬೇಲೂರು ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಸೂಪ್ರಿಂಟೆಂಡೆಂಟರ ಅಸಿಸ್ಟೆಂಟರಾದ ಮೆ॥ ನರಸಿಹ್ಮಯ್ಯಂಗಾರ್ರಿಂದ ಸದರೀ ಕಸಬೇಯಲ್ಲಿ ಸರ್ 1876ನೇ ಯಿಸವಿ ಏಪ್ರೆಲ್ 10ನೇ ಮರ್ಕ್ಕು ಮಿನೊಳಗೆ ಪ್ರಾರಂಭಿಸಲ್ಪಡುವದು.

ಸದರೀ ತಾಲ್ಲೂಕಿನಲ್ಲಿರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕು ದಾರೀಗಳನ್ನು ಸ್ಥಾಪಿಸುವ ಬಗ್ಯೆ, ತಮ್ಮ ಬಳೀ ಯಿರುವ ಸನ್ನದುಗಳನ್ನು ವ ಇತರ ದಸ್ತಾವೇಜುಗಳನ್ನು ಹಾಜರ್ ಪಡಿಸುವ ಬಗ್ಯೆ, ತಾವು ಖುದ್ದಾಗಲಿ, ಮುತಾಲೀಕರ ಮೂಲಕವಾಗಲಿ ಹಾಜರಾಗಬೇಕೆಂದು ಇದರಿಂದ ತಾಕೀದ್ ಮಾಡೋಣಾಗುತ್ತೆ. ಹಾಗೆ ಹಾಜರ್ಾಗದೇ ಹೋದಲ್ಲಿ ಪ್ರಥಮತಃ ಅವರಗಳ ಇನಾಂ ಜಪ್ತು ಮಾಡಲ್ಪಟ್ಟು ತರುವಾಯ ಆಖೈರಾಗಿ ಸರಕಾರಕ್ಕೆ ಸೇರಿಸಿಕ್ಕೊಳ್ಳಲ್ಪಡುವದು.

ನಂ. 18. ತಾರೀಖು 20ನೇ ಜನವರೀ 1876.

ಸರ್ 1875ನೇ ಇಸವಿ ಸೆಪ್ಟಂಬರ್ 8ನೇ ಮರ್ಕ್ಕುಂ 10ನೇ ನಂಬರ್ ಈ ಆಫಿಸಿನ ಇಶ್ತಿಹಾರ್‌ನಾಮೇ ಅನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ,—ಮಾಗಡೀ ತಾಲ್ಲೂಕು ಇತರ ಹೋಬಳೀಗಳ ಇನಾಮತಿ ವಿಚಾರಣೆಯು ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಮೆ॥ ಸೈಯದ್ ನಸರುದ್ದೀನ್ ಸಾಹೇಬರಿಂದ ಮಾಗಡೀ ಕಸಬೇಯೊಳಗೆ ಸರ್ 1876ನೇ ಇಸವಿ ಮಾರ್ಚೀ ಗುರ್ರೇ ಲಾಗಾಯತು ನಡಿಸಲ್ಪಡುವದು.

ಸದರೀ ತಾಲ್ಲೂಕಿನಲ್ಲಿರುವ ಇನಾಂಗಳಿಗೆ ಸಂಬಂಧಪಟ್ಟ ದರೋಬಸ್ತು ಜನಗಳು ತಮ್ಮ ತಮ್ಮ ಹಕ್ಕು ದಾರೀಗಳನ್ನು ಸ್ಥಾಪಿಸಿಕ್ಕೊಡುವ ಬಗ್ಯೆ ಕ್ರಮವಾದ ಕಾಲಕ್ಕೆ ಮಾಗಡೀಯಲ್ಲಿ ಅಸಿಸ್ಟೆಂಟರ ಆಫಿಸಿಗೆ, ತಾವು ಖುದ್ದಾಗಲಿ, ಮುತಾಲೀಕರ ಮೂಲಕವಾಗಲಿ, ಹಾಜರಾಗಬೇಕೆಂದು ಕೋರೋಣಾಗುತ್ತೆ. ಹಾಗೆ ತಪ್ಪಿದರೆ ಅವರ ಇನಾಂಗಳು ಪ್ರಥಮತಃ ಜಪ್ತು ಮಾಡಲ್ಪಟ್ಟು ನಂತರ ಆಖೈರಾಗಿ ಸರಕಾರಕ್ಕೆ ದಾಖಲ್ ಮಾಡಿಕ್ಕೊಳ್ಳಲ್ಪಡುವದು.

ನಂ. 19. ತಾರೀಖು 24ನೇ ಜನವರೀ 1876.

ಇದರಿಂದ ಇನಾಂದಾರ್ರುಗಳಿಗೆ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ಇನಾಂಗಳ

ಹೊಸಕೋಟೆ, ನೆಲಮಂಗಲ, ಬೆಂಗಳೂರು, ದೇವನಹಳ್ಳಿ, ಬೇತಮಂಗಲ, ಕೋಲಾರ, ಮುಳಬಾಗಲ್, ಗುಮ್ಮನಾಯಕನಪಾಳ್ಯ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಗೋರಿಬಿದ್ನೂರು, ಕೊಪ್ಪಾ, ಲಕ್ಕುವಳ್ಳಿ, ತರೀಕೆರೆ, ಚಿಕ್ಕಮಗಳೂರು, ವಸ್ತಾರಾ.

ಬಗ್ಯೆ, 62 ಪೂರಾ ಗ್ರಾಮಗಳ ಬಾಬತು ಆಡ್ ಇಂಟರಿಂ ಯಂಬ ಮಧ್ಯಕಾಲದ ಟೈಟಲ್ ಡೀಡ್‌ಗಳೂ, 2ನೇ ನಂಬರ್ ನಮೂನೇ ಯಿಂದ ತೆಗಿಯಲ್ಪಟ್ಟ 160 ಯಕ್ಸ್‌ಟ್ರಾಕ್ಟ್‌ಗಳೂ, ಸಹಾ ಬಟವಾಡೆ ಬಗ್ಯೆ ಸರ್ 1876ನೇ ಇಸವಿ ಜನವರೀ 8 ಮತ್ತು 24, ಈ ತಾರೀಖುಗಳಲ್ಲಿ ಬೆಂಗಳೂರು, ಕೋಲಾರ, ಕಡೂರು, ಈ ಡಿಸ್ಟ್ರಿಕ್ಟ್‌ಗಳ ಡಿಪ್ಯುಟಿ ಕಮಿಷನರ್‌ಗಳಿಗೆ ಕಳುಹಿಸಲ್ಪಟ್ಟುವು.

2\. ಅವರವರಿಗೆ ಮೇಲ್‌ಕಂಡ ತಾಲ್ಲೂಕುಗಳ ಅಮಲ್‌ದಾರ್ರಿಂದ ನೋಟಿಸ್ ತಲಪಿದ ಮೇಲೆ ಸದರೀ ಟೈಟಲ್ ಡೀಡ್‌ಗಳನ್ನು ತೆಗದುಕ್ಕೊಳ್ಳುವ ಬಗ್ಯೆ ಆ ಮೇರೆ ಹಾಜರಾಗತಕ್ಕದ್ದು, ಮತ್ತು ಅಂತಾ ನೋಟಿಸ್‌ಗಳನ್ನು ಕೂಡ್ಲೇ ಕೊಡುವಂತೆ ಅಮಲ್‌ದಾರ್ರುಗಳಿಗೆ ಹುಕ್ಕುಂ ಆಗಿರುತ್ತೆ.

R. A. COLE,
Supt. of Inam Settlements.

ಫೈನಾನ್ಷಿಯಲ್ ಇಲಾಖಾ.

ತಾರೀಖು 12ನೇ ಜನವರೀ 1876.

ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ಟ್ರೆಜರೀಗಳ ಮೇಲೆ 500 ರೂಪಾಯಿಗೆಳಿಗೆ ಕಡಮೆಯಿಲ್ಲದ ಮೊಬಲಗಿಗೆ ಸದರೀ ಡಿಸ್ಟ್ರಿಕ್ಟು ಖಜಾನೇಗಳಲ್ಲಾಗಲಿ, ತಾಲ್ಲೂಕು ಖಜಾನೇಗಳಲ್ಲಾಗಲಿ, ಮೊದಲು ವದಗಿದ ಮೊಬಲಗಿನಿಂದ ಹಣ ಸಲ್ಲತಕ್ಕ ಸೇಕಡಾ 2 ಆಣೆ ವಟ್ಟಕ್ಕೆ ಸಪ್ಲೈ ಬಿಲ್‌ಗಳೆಂಬ ಹುಂಡಿಗಳನ್ನು ಕೊಡಲಿಕ್ಕೆ ಈ ಕೆಳಗೆ ರುಜು ಮಾಡಿರುವವರು ತಯಾರಾಗಿರುತ್ತಾರೆ.

ಟಪ್ಪಾಲ್ ರಿಜಿಸ್ಟ್ರೇಷನ್ ರುಸುಂ.

ತಾರೀಖು 31ನೇ ಜನವರೀ 1876, ಸರ್ಕ್ಯುಲರ ನಂ. 1246.

ಡಿಸ್ಟ್ರಿಕ್ಟು ಟ್ರೆಜರೀ ಇನ್‌ಚಾರ್ಜ್ ಆಫಿಸರಗಳಿಗೆ—ಡಿಪ್ಯುಟಿ ಅಕೌಂಟೆಂಟ್ ಜನರಲ್ ಯವರು ಕೋರುವದೇನಂದರೆ, ತಮ್ಮ ಟ್ರೆಜರೀ ಲೆಕ್ಕಗಳಲ್ಲಿ ಪೋಸ್ಟ್ ಆಫಿಸ್ ಯೆಂಬ ಹೆಡ್ ಕೆಳಗೆ ಪ್ರತ್ಯೇಕ ಖತಾಯಿತಿ ಮೂಲಕ "ಟಪ್ಪಾಲ್ ರಿಜಿಸ್ಟ್ರೇಷನ್ ರುಸುಂ" ಮೊಬಲಗನ್ನು ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಗಳು ತೋರಿಸತಕ್ಕದ್ದಲ್ಲದೆ ಟ್ರೆಜರೀ ಲೆಕ್ಕದ ಛಾಪಿಸಲ್ಪಟ್ಟ ನಮೂನೆಯಲ್ಲಿ ನಮೂದಾದ ಬಾಬತು ಅಲ್ಲದ ಇತರ ರಖಂಗಳನ್ನು ಸಹಾ ತೋರಿಸತಕ್ಕದ್ದು.

H. Hudson,
Dy. Acctt. Genl. in Mysore.

ಫಾರೆಸ್ಟ್ ಇಲಾಖಾ.

ತಾರೀಖು 11ನೇ ಡಿಸೆಂಬರ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಚ್ಚು ಕಡಮೆ ಷುಮಾರ 24 ಟನ್‌ಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫೆಬ್ರುವರೀ 15ನೇ ಮಧ್ಯಾಹ್ನದಲ್ಲಿ, ಶಿವಮೊಗ್ಗಾ ಕೋಠೀಯೊಳಗೆ $18\frac{1}{2}$ ಟನ್‌ಗಳು. ಬಗರ್ ಅದದ್.
1876ನೇ ಫೆಬ್ರುವರೀ 24ನೇ ಮಧ್ಯಾಹ್ನದಲ್ಲಿ, ಕವಲೇದುರ್ಗ ಕೋಠೀಯಲ್ಲಿ $5\frac{1}{8}$ ಟನ್‌ಗಳು. ಚಕ್ಕೆ ವ ಬುಕಣಿ.

ಹರಾಜ್ ತಾರೀಖು ಲಾಗಾಯತು ಮೂರು ದಿನಗಳೊಳಗಾಗಿ ದರಖಾಸ್ತು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವಿಜನ್ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೇಮರ	ಜಂಗ್ಲೀಮರ	ತೇಗದ ಕೊಚಗಳು	ಜಂಗ್ಲೀ ಮರದ ಕೊಚಗಳು	ಜುಮ್ಲಾ.
ಶಿಕ್ಕಾರಿಪುರ ತಾಲ್ಲೂಕಿನಲ್ಲಿರುವ ಶಿಕ್ಕಾರಿಪುರದ ಡಿಪೋ	15ನೇ ಮಾರ್ಚಿ 1876.	959	633	408	265	57	2,322
ಶಿಕಾರಿಪುರ ತಾಲ್ಲೂಕಿನಲ್ಲಿರುವ ಶಿರಾಳ ಕೊಪ್ಪದ ಡಿಪೋ	25ನೇ ಮಾರ್ಚಿ 1876.	129	162	574	37	43	945
ಜುಮ್ಲಾ.		1,088	795	982	302	100	3,267

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ ಇಸ್ತಿಹಾರ್ ಪ್ರಕಾರ.

ಶಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು, ಖರೀದಿ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಪ್ರಕಾರ ಜರ್ನ ಖಜಾನೇಯಲ್ಲಿ ಪಾವತೀಮಾಡಿ ಆಬಗ್ಗೆ ಪಡೆದ ರಶೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣಾ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯರಡನೇ ಹರಾಜ್ ನಡಿಸಲ್ಪಡುವದು.

ತಾರೀಖು 3ನೇ ಫೆಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಕೊಡಗು ಶೀಮೇ ಉತ್ಪತ್ತಿ ಬಾಬತು ಈ ಕೆಳಗೆ ನಮೂದಿಸಲ್ಪಡುವ ತೇಗಿನ ವ ಯಿತರ ಮರಗಳ ದಿಮ್ಮೀಗಳು, ಯಿದರಡಿ ತಿಳಿಸಲ್ಪಟ್ಟ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದ ದಿಮ್ಮಿಗಳು.	ತೇಗದಸೌದೆ ತುಂಡುಗಳು.	ಬೀಟೆಮರದ ದಿಮ್ಮಿಗಳು.	ಹೊನ್ನೆ ದಿಮ್ಮಿಗಳು.	ಬೀಟೆಮರದ ಕೊಂಬೆಗಳು, ಬೀಟೆ ಬೇರುಗಳು.	ಕಾಡುಮರದ ದಿಮ್ಮಿಗಳು.	ಬೀಟೆಮರದ ಕೊಂಬೆಗಳು.	ಬಿದರು.	
ಹುಣಸೂರು	15ನೇ ಫೆಬ್ರವರೀ 1876	100	3	8	..	.	..	..	..	ಹೆಚ್ಚು ಕಡಿಮೆ.
ತಿತ್ತಿಮಟ್ಟಿ	19ನೇ ಡಿಟೋ	50	..	50	200	150	..	..	40,000	
ಮಾಲ್ಧೂರೆ	22ನೇ ಡಿಟೋ	..	..	40	40	50	..	..	40,000	
ವೀರರಾಜೆಂದ್ರಪೇಟೆ	25ನೇ ಡಿಟೋ	..	..	100	100	50	..	..	60,000	
ಫ್ರೆಜರಪೇಟೆ	2ನೇ ಮಾರ್ಚೀ 1876	75	..	110	110	120	..	..	1,10,000	
ಶಿದ್ದಲಿಂಗಪುರ	4ನೇ ಡಿಟೋ	..	.	49	96	..	22	483	14,670	
ಕಿಸರಹಳ್ಳಿ	7ನೇ ಡಿಟೋ	..	..	12	66	..	..	127	496	
ಸೋಮವಾರ ಪೇಟೆ	11ನೇ ಡಿಟೋ	..	..	2 67	6	..	..	96	25,000	
ಮಡಿಕೆರೆ	15ನೇ ಡಿಟೋ	..	..	50	..	100	..	..	25,000	

ಹರಾಜು ನಿಬಂಧನೆಗಳು,—1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ ಇಸ್ತಿಹಾರಿನಲ್ಲಿ ಪ್ರಸಿದ್ಧ ಪಡಿಸಿರುವ ಮೇರಿಗೆ. ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಮರಗಳಿಗೋಸ್ಕರ ಸಲ್ಲಬೇಕಾದ ಮೊಬಲಗಿನ ಪಾವತೀ ಬಗ್ಗೆ ವಾಯಿದೆಯು 1876ನೇ ಇಸವಿ ಮಾರ್ಚೀ 25ನೇ ತಾರೀಖಿನ ದಿನ ಪೂರೈಸುವದು. ಆ ಕಾಲದೊಳಗಾಗಿ ದರೋಬಸ್ತು ಮೊಬಲಗ್ ಪಾವತೀ ಮಾಡತಕ್ಕದ್ದಿಧೆ, ಯಿದಕ್ಕೆ ತಪ್ಪಿದರೆ ದಂಡನೆ ಷರತ್ತುಗಳು ಜಾರೀಯಲ್ಲಿ ತರಲ್ಪಡುವವು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice regarding an application of Nanjappa for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡಿ|| ಕಮ್ಮಿಷನರ್ ಕೋರ್ಟಿನಿಂದ.

ಸನ್ 1876ನೇ ಇಸವಿ ಶಿವಿಲ್ ಮಿಸಿಲೇನಿಯಸ್ ನಂಬರ 7.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಬಳ್ಳೆಪೆಟ್ಟ ಪೇಟೆಯಲ್ಲಿ ಯಿರುವ ಶಿಂಗಾಡಿ ನಂಜಪ್ಪ ನೆಂಬವನು ತನ್ನ ತಂದೆ ನರಸಪ್ಪನ ಲೇಣೆ 500 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸನ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟು ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಶನ್ 1876ನೇ ಇಸವಿ ಫಿಬ್ರುವರೀ 25ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೇಯಾಗಿ ಆ ಮೊಬಲಗ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 27ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು.

ತಾರೀಖು 20ನೇ ಜನವರೀ 1876.

ಇದರಿಂದ ತಿಳಿಸುವದೇನಂದರೆ, ಹಳೇ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಬಗ್ಯೆ ರೂಲಿಸ್ ಪ್ರಕಾರ 1869, 1870ನೇ ಇಸವಿಗಳಲ್ಲಿ ದಾಖಲಾದ ದಾವೆಗಳೊಳಗೆ ಕಕ್ಷಿಗಾರರಿಂದ ದಾಖಲ್‌ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ ಕಾಗದ ಪತ್ರಗಳೂ 1876ನೇ ಮೇ 1ನೇ ಮುಕ್ಕಾಂನಲ್ಲಿ ನಾಶಪಡಿಸಲ್ಪಡುವದು, ಆದ್ದರಿಂದ ವಾಪಸ್ ತೆಗೆದುಕೊಳ್ಳಲಿಕ್ಕೆ ಕಕ್ಷಿಗಾರರು ಖಾಯಿಷ್‌ಮಾಡುವ ಬೆಲೆಯುಳ್ಳ ಯಾವದಸ್ತಾವೇಜುಗಳನ್ನಾದರೂ ವಾಪಸ್ ಮಾಡುವ ಬಗ್ಯೆ ಮೇಲ್ಕಂಡ ಕಾಲದೊಳಗೆ ಅರ್ಜೀ ಬರದುಕೊಳ್ಳತಕ್ಕದ್ದು.

"ಬಮೋಜಿಬ್ ಹುಕ್ಕುಂ,"

W. JENNINGS,
Registrar.

KOLAR DISTRICT.

ಕೋಲಾರ ಡಿ|| ಮೇಜಸ್ಟ್ರೇಟರಿಂದ ಕೊಡಲ್ಪಟ್ಟ ನೋಟಿಸ್.

ತಾರೀಖು 27ನೇ ಜನವರೀ 1876.

1. ಮೊಹರಂ ಹಬ್ಬವು ಈ ತಿಂಗಳು 28ನೇ ತಾರೀಖಿನಲ್ಲಿ ಷುರುವಾಗುವದಾದ್ದರಿಂದ ಆ ಹಬ್ಬದ ಕಾಲದಲ್ಲಿ ತಾಬೂತು ಪಂಜಾ ವಗೈರೇ ಇಡಬೇಕೆಂದು ಅಥವಾ ಇಂನ್ಯಾವದಾದರೂ ಮೆರವಣಿಗೆ ಮಾಡಬೇಕೆಂದು ಖಾಯಿಷ್ ಮಾಡುವ ದರೋಬಸ್ತು ಜನಗಳೂ ಆ ಸ್ಥಳದ ಅಮಲ್‌ದಾರರಿಗೆ ಅಥವಾ ಇತರ ಸಬ್ ಮೇಜಸ್ಟ್ರೇಟರಿಗೆ 5 ದಿನಗಳಿಗೆ ಮುಂಚಿತವಾಗಿ ಬರದು ಕೊಂಡು ಸದರೀ ಬಗ್ಯೆ ಲೈಸೆನ್ಸ್ ಪಡೆಯತಕ್ಕದ್ದು.

2. ಸದರೀ ಲೈಸೆನ್ಸಿನಲ್ಲಿ ಪ್ರತಿಸಂಗತಿಯೊಳಗೂ ಯಾವ ಬೀದಿ ಮಾರ್ಗವಾಗಿ ಸದರೀ ಮೆರವಣಿಗೆ ಹೋಗತಕ್ಕದ್ದೋ ಅದನ್ನೂ, ಯಾವ ತಾರೀಖು ಯಾವ ಹೊತ್ತಿಗೆ ಹೊರಟು ಆಯಾ ಸ್ಥಳವನ್ನು ಶೇರತಕ್ಕದ್ದು, ಮತ್ತು ನಿಲ್ಲತಕ್ಕ ಸ್ಥಳ, ಇವುಗಳನ್ನೂ ನಮೂಡಿಸತಕ್ಕದ್ದು.

3. ಸದರೀ ಮೆರವಣಿಗೆ ನಡಿಸತಕ್ಕ ಮನುಷ್ಯನು ಲೈಸೆನ್ಸನ್ನು ತನ್ನಲ್ಲಿಟ್ಟುಕೊಂಡು ಹೋಗತಕ್ಕದ್ದಲ್ಲದೆ ಮೇಜಸ್ಟ್ರೇಟರಾಗಲಿ ಪೊಲೀಸ್ ಆಫಿಸರಾಗಲಿ ಕೇಳಿದಾಗ ಅದನ್ನು ಹಾಜರು ಪಡಿಸತಕ್ಕದ್ದು. ಸದರೀ ಹುಕುಮುಗಳನ್ನು ಅತಿಕ್ರಮಿಸಿದ ಯಾವ ಮನುಷ್ಯನಾಗಲಿ ಕೂಡಲೆ ಪೊಲೀಸಿನವರಿಂದ ದಸ್ತಗೀರ್‌ಮಾಡಲ್ಪಟ್ಟು ಚಾರ್ಜಿ ತರಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

4. ಬದಸ್ತೂರು ವೇಷ ಹಾಕತಕ್ಕ ಜನಗಳು ಮೇಜಸ್ಟ್ರೇಟರಿಂದ ಲೈಸೆನ್ಸ್ ಪಡಿಯುವ ಬಗ್ಯೆ ಬರದುಕೊಳ್ಳತಕ್ಕದ್ದು.

5. ಮೇಜಸ್ಟ್ರೇಟುಗಳು ಪ್ರತಿ ಮೆರವಣಿಗೆಯೂ ಯಾವ ಮಾರ್ಗವಾಗಿ ಹೋಗತಕ್ಕದ್ದೋ ಆ ಸಂಗತಿಯನ್ನು ಪೊಲಿ

ಸಿನವರ ಸಂಗಡ ಆಲೋಚಿಸಿ ಗುರ್ತು ಹಚ್ಚತಕ್ಕದ್ದು, ಮತ್ತು ಸಾಧ್ಯವಾದ ಮಟ್ಟಿಗೆ ಮಾಮೂಲ್ ಅನುಸರಿಸತಕ್ಕದರಲ್ಲಿ ಮಾರಾಮಾರೀ ವಗೈರೇಗಳೇನೂ ನಡಿಯದಂತೆ ಗೊತ್ತಾದ ಹುಕುಮುಗಳನ್ನು ಕೊಡತಕ್ಕದ್ದು.

6. ಮೆರವಣೀಗೆಗಳು ವಗೈರೇ ಹೋಗುತ್ತಿರುವಲ್ಲಿ ಪೊಲೀಸಿನವರು ಖಂಡಿತವಾಗಿ ಪ್ರವೇಶಿಸುವದು ಅನಾವಶ್ಯಕವಾಗಿ ಇರುವ ಅಂಶದೊಳಗೆ ಅವರು ಪ್ರವೇಶಿಸದೆ ಯಿರುವಂತೆ ತಾಕೀತು ಮಾಡತಕ್ಕದ್ದು, ಮತ್ತು ಜನಗಳಲ್ಲಿ ಆಯಾ ಬಗೆಯವರ ಪೈಕಿ ಜವಾಬದಾರರಾದವರು ಹಾಗೆ ಪ್ರವೇಶಿಸುವದಕೆ ಯೆಷ್ಟು ಮಾತ್ರವೂ ಅಸ್ಪದ ಕೊಡದಂತೆ ತಮ್ಮ ವ್ಯಾಪಕತ್ವವನ್ನೂ ಅಧಿಕಾರವನ್ನೂ ಉಪಯೋಗಿಸುವರೆಂದು ಡಿಸ್ಟ್ರಿಕ್ಟು ಮೇಜಸ್ಟ್ರೇಟರು ನಂಬುತ್ತಾರೆ.

7. ಯಾವ ಮನುಷ್ಯನೂ ಬಾಧಕವಾದ ಅಥವಾ ಅಪಾಯಕರವಾದ ಆಯುಧವನ್ನಾಗಲಿ ದೊಣ್ಣೆಗಳನ್ನಾಗಲಿ ಹಿಡಿದು ಬೀದಿಗಳಲ್ಲಿ ತಿರಗಾಡಿದ್ದೇ ಆದರೆ ಪೊಲೀಸಿನವರಿಂದ ದಸ್ತಗಿರೀ ಮಾಡಲ್ಪಡಲಿಕ್ಕೆ ಗುರಿಯಾದಾನು.

8. ಆಯಾ ಜಾತಿಯವರ ದೇವಸ್ಥಾನಗಳು ವಗೈರೇ ಮುಂದೆ ವಾದ್ಯಗಳನ್ನು ನಿಲ್ಲಿಸತಕ್ಕದ್ದೆಂದು ನಿಯಮಿಸುವ ನಿಬಂಧನೆಯನ್ನು ಖಂಡಿತವಾಗಿ ಜಾರೀಯಲ್ಲಿತರತಕ್ಕದ್ದು.

9. ಸ್ಪೆಷಲ್ ಪೊಲೀಸ್ ಆಫಿಸರರಿಗಾಗಿ ಪೊಲೀಸಿನವರು ಕೇಳುವ ಅಂಶಗಳನ್ನು ಕೊಡ್ಲಿ ಅಮಲ್‌ದಾರು, ಸಬ್ ಮೇಜಸ್ಟ್ರೇಟರು ಸಹಾ ನೆರವೇರಿಸತಕ್ಕದ್ದು, ಮತ್ತು ಪೊಲೀಸಿನವರ ಕೆಲಸಗಳನ್ನು ನೆರವೇರಿಸುವದಕ್ಕೆ ತಾವೂ ಹಾಜರಿದ್ದು ನಿಯಮಿಸತಕ್ಕದ್ದು.

10. ಮೇಲೆ ಕಂಡ ಹುಕ್ಕುಂಗಳನ್ನು ಕೂಡ್ಲಿ ದಂಡೋರೆ ಮೂಲಕ ಪ್ರಕಟ ಪಡಿಸತಕ್ಕದ್ದು.

P. N. PURNAIYA,
For Dy. Commr.

Notice regarding an application of Lakshmakka for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಡಿಬಂಡೇ ತಾಲ್ಲೂಕು ಚಂಜೂರಿನಲ್ಲಿ ಯಿರುವ ಪೊಲೀಸ್ ಕೃಷ್ಣಪ್ಪನ ಹೆಂಡತಿ ಲಕ್ಷ್ಮಕ್ಕ ನೆಂಬವಳು ಫೌತೀಪಟ್ಟ ತನ್ನ ಗಂಡನಿಗೆ ಬರತಕ್ಕ ವೃದ್ಧಿ ಬಾಕೀಗಳು 300 ರೂಪಾಯಿಗಳು ವಸೂಲು ಮಾಡಿಕೊಳ್ಳಲೂ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರ್ಟಿಫಿಕೇಟ ಕೊಡಿಸಿಕ್ಕೊಡಬೇಕೆಂದು ಗುಜರಾಯಿಸಿದ ಅರ್ಜೀಯು ಫಿಬ್ರವರೀ 25ಕ್ಕೆ ವಿಚಾರಿಸಲ್ಪಡುತ್ತಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು—ನೇ ಮಾಹೆ ಜನವರೀ ಸರ್ 1876ನೇ ಇಸವಿ, ಮೊಕ್ಕಾಂ ಕೋಲಾರ.

J. RAMAIYA,
For Dy. Commr.

HASSAN DISTRICT.

Notice regarding an application of Kempegauda and five others for a certificate under Act XXVII of 1860

ಹಾಸನ ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತಜನಗಳಿಗೆ ತಿಳಿಯಪಡಿಸುವದೇನಂದರೆ,—ಅತ್ತಿಕುಪ್ಪ ತಾಲ್ಲೂಕು ಮೇಲುಕೋಟೆ ಹೋಬಳಿ ಮೊರಬಳ್ಳೀಲಿರುವ ಫೌತೀ ಆದ ಲಕ್ಷ್ಮೀಗೌಡನ ಮಕ್ಕಳು 1ನೇ ಕೆಂಪೇಗೌಡ, 2ನೇ ಲಕ್ಷ್ಮೀಗೌಡ, 3ನೇ ಪುಟ್ಟೇಗೌಡ, 4ನೇ ಚಿಕ್ಕಪ್ಪಯ್ಯ, 5ನೇ ಕೆಂಪೈಯ, 6ನೇ ಲಕ್ಷ್ಮಯ್ಯ ಸಹಾ ತಮ್ಮ ತಂದೆ ಸಾಲಾ 1500 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರ್ಟಿಫಿಕೇಟ್ ಕೊಡಿಸಬೇಕೆಂತಾ ಕೊಟ್ಟ ಅರ್ಜಿ ಫೈಸಲ್‌ಬಗ್ಗೆ ಸರ್ ಮುಜಕೂರು ಫಿಬ್ರವರೀ 24ನೇ ತಾರೀಖನ್ನು ನಿಷ್ಕರ್ಷೆ ಮಾಡಿರುವದರಿಂದ ತಕರಾರು ಯಿರತಕ್ಕವರೆಲ್ಲಾ ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟು ಯಿದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು ಯಿರುತ್ತೆ.

ತಾರೀಖು 24ನೇ ಜನವರೀ ಸರ್ 1876ನೇ ಇಸವಿ.

Notice of sale of a coffee jungle cultivated surreptiously in the Manjarabad Taluk on the 28th February 1876.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಮಂಜರಾಬಾದ್ ಹೋಬಳಿ ಜಂಬಹಳ್ಳೀಗ್ರಾಮಕ್ಕೆ ಸೇರಿದ ಚನ್ನಹಳ್ಳೀ ಈ ರೈಯ ನೆಂಬವನು ಬಗರಹುಕ್ಕುಂ ಕಾಫೀ ಸಾಗುವಳೀ ಮಾಡಿರುವ ಈ ಕೆಳಗೆ ನಮೂದಾಗಲ್ಪಡುವ ಜಂಗಲ್ ಜಮೀನನ್ನು ಅದೇಸ್ಥಳದಲ್ಲಿ ಸರ್ 1876ನೇ ಇಸವಿ ಫಿಬ್ರವರೀ ತಾರೀಖು 28ನೇ ದಿವಸ ಹಗಲು 11 ಘಂಟೆ ಲಾಗಾಯತು 3 ಘಂಟೆ ಪರಿಯಂತ್ರ ಹರಾಜ್ ಕೂಗಿಸಲ್ಪಡುತ್ತೆ. ಯಿಚ್ಛೆ ಯಿರತಕ್ಕವರು ಆ ಕಾಲದಲ್ಲಿ ಹಾಜರಾಗಿ ಪೋಟಾಪೋಟೀಯಿಂದ ಛಡದರಖಾಸ್ತು ಮಾಡಿ ತೆಗದುಕೊಳ್ಳಬಹುದು.

ಹರಾಜು ಮಾಡಿಸುವ ಆಫಿಸರು ಆಕಾಲದಲ್ಲಿ ಹರಾಜು ಷರತ್ತುಗಳನ್ನು ರೂಬರೂ ತಿಳಿಸಾರು.

ಮತ್ತು ಯಿದಕ್ಕಾಗಿ ದರಖಾಸ್ತು ಬರದುಕೊಳ್ಳ ತಕ್ಕವರು ನಮ್ಮ ಕಚ್ಚೇರಿ ಹೆಸರಿಗೆ ಸ್ನ 1876ನೇ ಇಸವಿ ಫೆಬ್ರುವರೀ ತಾರೀಖು 20 ರ ವರಿಗೂ ಬರದುಕೊಳ್ಳುತ್ತಾ ಬರಬಹುದು. ಆದರೆ, ಅಂಥಾವರು ಹರಾಜು ಸ್ಥಳದಲ್ಲಿ ಆಕಾಲದಲ್ಲಿ ಹಾಜರು ಯಿರಬೇಕು. ತಪ್ಪಿದರೆ ಅಂಥಾವರ ದರಖಾಸ್ತನ್ನ ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಡಿಪ್ಯುಟಿ ಕಮ್ಮಿಷನರ ಸಾಹೆಬರವರೇ ಯಿಟ್ಟುಕೊಂಡಿದ್ದಾರೆ.

ವತ್ತುವರೀ ನಂಬರು 28ನೇ ಜಾಗರಳಕೆರೆಗೆ ದಕ್ಷಿಣವಾಗಿರತಕ್ಕ ಕೆರೇಮೇಲಣ ಹಿತ್ತಲ್.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಶಿದ್ದವೀರೈಯನ ವೃಷ್ಟೀಗೆರೆ	ವುತ್ತರಕ್ಕೆ—ದಿಂಣೆ
ದಕ್ಷಿಣಕ್ಕೆ—ದಿಂಣೆ	ಪಶ್ಚಮಕ್ಕೆ—ದಿಂಣೆ

ಈ ಮಧ್ಯೆ ಅಳತೆ ಪೂರ್ವ ಪಶ್ಚಿಮ ಗಜ 76, ದಕ್ಷಿಣಉತ್ರ ಗಜ 97, ಸಲೆಗಜಗಳು 7327ಕ್ಕೆ

ಯೆಕರೆ 1, ರೋಡ್ 2, ಪೋಲ್ 3, ಗಜ 21¼.

ಬತಾರೀಖು 28ನೇ ಮಾಹೆ ಜನವರೀ ಸ್ನ 1876ನೇ ಇಸವಿ, ಮೊಕ್ಕಾಂ ಬಾಗೂರು ಅಜ, ತಾಲ್ಲೂಕು ಚನ್ನರಾಯಪಟ್ಣ.

E. Shaw,
Offg. Dy. Commr.

SHIMOGA DISTRICT.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಪ್ಪಿಸಿಕೊಂಡು ಹೋದ ಕೈದೀ ದೊಡ್ಡ ಬುಡ್ಡ ಯಂಬವನ ಚಹರೆ ಪಟ್ಟಿ.

ಜೈಇಲ್ ರಿಜಸ್ಟರ್ ನಂಬರು 3890, ಹೆಸರು ಮತ್ತು ತಂದೇ ಹೆಸರು ದೊಡ್ಡಬುಡ್ಡ ಖಾಸಿಂಖಾನ್, ವಾಸಸ್ಥಳ ಶಿವಮೊಗಾ ತಾಲ್ಲೂಕು ಹಿರೂರು, ಜಾತಿ ಮತ್ತು ಕಸಬು ಮುಸಲ್ಮಾನ ಕೂಲಿ, ತಪ್ಪಿತ ಡಕಾಇತಿ, ತಾರೀಖು ಸಜಾವಾಯಿದೆ ಮತ್ತು ಮೊಕದ್ದಮಾ ನಂಬರ್, 25ನೇ ನವಂಬರ 1875 ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಫೈಲ್ ನಂಬರು 32ನೇ ಮೊಕದ್ದಮೆಯಲ್ಲಿ 5 ವರುಷಗಳು ಕಠಿಣ ಸಜಾ, ಯಾರಿಂದ ವಿಧಿಸಲ್ಪಟ್ಟದ್ದು ಶಿವಮೊಗ್ಗಾ ಡಿಸ್ಟ್ರಿಕ್ಟು ಮೇಜಸ್ಟ್ರೇಟರಿಂದ, ವಯಸ್ಸು 30 ಎತ್ತರ ಅಡಿ 5, ಅಂಗಲ 3½, ಷರಾ, ಕಪಿಲೇವರ್ಣ, ಕಂಣುಗಳು ಡಿಟೋ, ಕೆನ್ನೆ ಎಲಬುಗಳು ಉಬ್ಬಿಗಿದೆ, ಭುಜಗಳಮಧ್ಯೆ ವಂದು ಚಿಕ್ಕಮಚ್ಚೆ, ಬಲತೋಳಿನ ಮುಂಭಾಗದಲ್ಲಿ ವಂದು ಘಾಯದ ಕಲೆ, ಬಲ ಮುಂಗೈಮೇಲೆ ಮುಂದುಗಡೆ ಇಂನ್ನೊಂದು ಕಲೆ, ಯಡಕಂಕುಳಹಿಂದೆ ವಂದು ಮಚ್ಚೆ, ಬಲತೊಡೆಯ ಮುಂಭಾಗ ಯರಡು ಘಾಯದ ಕಲೆಗಳು, ಬಲ ಮೊಣಕಾಲು ಕೀಲಿನ ಹಿಂದೆ ವಂದು ವುದ್ದವಾದ ಘಾಯದ ಕಲೆ, ಯಡತೊಡೆಯ ವಳಪಾರ್ಶ್ವ ವಂದು ಘಾಯದ ಕಲೆ, ಯಡಗಾಲಿನ ಹೊರಪಾರ್ಶ್ವ ಯರಡು ಘಾಯದ ಕಲೆಗಳು ಇರುತ್ತೆ.

J. Vijayaraghavalu Naidu,
For Offg. Dy. Commr.

ಇದರಿಂದ ತಿಳಿಯಪಡಿಸುವದೇನಂದರೆ, ಹಳೇ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ವಿಷಯದಲ್ಲಿ ವುಂಟಾಗಿರುವ ರೂಲಸ್ ಅನುಸರಿಸಿ 1869ನೇ ಇಸವಿ ಮೇತಾರೀಖು 11ನೇ ಲಾಗಾಯತು 1870ನೇ ಇಸವಿ ಡಿಸೆಂಬರು 31ನೇ ವರಿಗೆ ಈ ಕೋರ್ಟಿನ ಆರಿಜಿನಾಲ್, ಸ್ಮಾಲ್‌ಕಾಜ್, ಅಮಲ್‌ಜಾರೀ ವ ಇತರ ಮಿಸಲೇನಿಯಸ್ ಮೊಕದ್ದಮೆಗಳಲ್ಲಿ ವ ನಡಿವಳಿತಗಳಲ್ಲಿ ಕಕ್ಷಿಗಾರ್ರಿಂದ ದಾಖಲ ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ ಸಾಧನಗಳೂ, ಲೆಕ್ಕಗಳೂ, ವ ಇತರ ಕಾಗದಗಳೂ ಸಹಾ 1876ನೇ ಇಸವಿ ಜೂನ ತಿಂಗಳು 30ನೇ ತಾರೀಖಿನಲ್ಲಿ ನಾಶ ಮಾಡಲ್ಪಡುತ್ತವೆ.

ಮೇಲೆ ತಿಳಿಸಲ್ಪಟ್ಟ ಮೊಕದ್ದಮೆಗಳಲ್ಲಿ ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತಾವೇಜುಗಳನ್ನಾಗಲಿ ವಾಪಸ್ ತೆಗದುಕ್ಕೊಳ್ಳತಕ್ಕ ಖಾಯಿಷ್ ವುಳ್ಳ ಕಕ್ಷಿಗಾರ್ರು ಮೇಲೆ ನಮೂದಿಸಲ್ಪಟ್ಟ ತಾರೀಖಿಗೆ ಪೂರ್ವವೇ ಕೋರ್ಟು ದಿವಸಗಳಲ್ಲಿ ಮಧ್ಯಾನ್ನ 11 ಘಂಟೆ ಲಾಗಾಯತು 4 ಘಂಟೆ ವಳಗಾಗಿ ಕೋರ್ಟಿಗೆ ತಿಳಿಯಪಡಿಸತಕ್ಕದ್ದು.

ಬತಾರೀಖು 26ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

V. N. Tirumalachari,
Judl. Asstt. Commr.

KADUR DISTRICT.

Notice of sale of a coffee jungle in the Koppa Taluk on the 15th February next, the holder having failed to conform to the terms of the patta under which the jungle was granted him.

ಕಡೂರು ಡಿಸ್ಟ್ರಿಕ್ಟು ಕಾಫೀ ಯಿನ್‌ಚಾರ್ಜ್ ಅಸಿಸ್ಟೆಂಟ್ ಕಮಿಷನರ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಮುರವಳ್ಳಿ ಮಾಗಣಿ ಕರಿಕೆಕೊಂಡ ಗ್ರಾಮದ ಕರಿಕೆಕೊಂಡದ ಕಾನ್ ಯಂಬುವದಕ್ಕೆ ತಾಲ್ಲೂಕು ನಂಬರು 96, ನಗರ ಡಿವಿಜನ್ ನಂಬರು 85, ಕಮಿಷನರ ಹಜೂರು ನಂಬರು 2596ನೇ ಪಟ್ಟೆಯನ್ನ ಪಡೆದ ಅಗಳಗುಂಡಿ ವೆಂಕಪ್ಪಯ್ಯನೆಂಬುವನು ರೂಲ್ಸ್ ಪ್ರಕಾರ ಗಿಡಗಳನ್ನ ಹಾಕದೆ ತಪ್ಪಿ ಇರುತ್ತಾನಾಗಿ ಪಟ್ಟೆಯ 3ನೇ ಕಲಂ ಮೇರೆಗೆ ಡಿಪ್ಯುಟಿ ಕಮಿಷನರ್ ಸಾಹೆಬರವರ ಮಾಹೆ ಮಜಕೂರು 14ನೇ ಮರ್ಸುಂ 1313ನೇ ನಂಬರು ಡಾಕೆಟ್ ಅನುಸರಿಸಿ ಈ ಕೆಳಗೆ ಕಾಣಿಸಿಯಿರುವ ಬಾರ್ಡರಿವುಳ್ಳ ಸ್ಥಳವನ್ನ ಸನ್ 1876ನೇ ಇಸವಿ ಫಿಬ್ರವರೀ ತಿಂಗಳು 15ನೇ ತಾರೀಖು ದಿವಿ 11 ಘಂಟೆ ಲಾಗಾಯತು 4 ಘಂಟೆ ವರಿಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ನಮ್ಮ ಆಫಿಸ್ ರೂಬರೂ ಹರಾಜ್ ಹಾಕಲ್ಪಡುತ್ತೆ, ಅಪೇಕ್ಷೆವುಳ್ಳವರು ಚಡದರಖಾಸ್ತಿನಿಂದ ಪಡೆಯಬಹುದು.

ಹಾಗೆ ಪಡೆದವರು ಹರಾಜು ಕೈದಾಗುತ್ತಲೇ ಸೇಕಡಾ 25 ರೂಪಾಯಿನಂತೆ ಠೇವಣಾತಿ ಇಟ್ಟು ಮಿಕ್ಕ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ಹಾಜರ್ಮಾಡಿ ಸದರೀ ಸ್ಥಳವನ್ನು ಸುಫರ್ದು ಮಾಡಿಕೊಳ್ಳಬೇಕು, ತಪ್ಪಿದರೆ ಪುನಹಾ ಹರಾಜು ಮಾಡಿಸಿ ಕಮ್ಮಿ ಬರುವ ಹಣಕ್ಕೆ ಮೊದಲು ದರಖಾಸ್ತುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿಯಿಂದ ಭರ್ತಿಮಾಡಿಕೊಳ್ಳುವದಲ್ಲದೆ ಈ ಠೇವಣಾತಿಯನ್ನ ಸರಕಾರಕ್ಕೆ ಶೇರಿಸೋಣಾಗುತ್ತದೆ.

ಕರಿಕೆಕೊಂಡದ ಮೇಲುಗಡೆ ಜಂಗಲೀಯಲ್ಲಿ ವಾಟಿಬಿಜ್ಜಲ್‌ಕಾಡಿನಲ್ಲಿ ಈ ಕಾನಿನ ಚತುರ್ಗಡಿ.

1 ಪೂರ್ವಕ್ಕೆ ದುರ್ಗದ ಗುಡ್ಡದ ಬುಡದಲ್ಲಿರುವ ನೆಲ್ಲೀಮರದ ಯಡಕ್ಕೆ ದಿಮ್ಮೀ. 1 ಪಶ್ಚಿಮಕ್ಕೆ ದನತಿರುಗುವ ದಾರೀ ಮಾವಿನ ಮರದ ಹತ್ರ ದಿಮ್ಮೀ.

1 ದಕ್ಷಿಣಕ್ಕೆ ನೀರಸರಕಾಲು, ಮಡ್ಲೀಮರ, ಬಡಚರನ ಸೊಹಿಹತ್ರ ದಿಮ್ಮೀ, ಕವಲುಮರದ ಹತ್ರ ದಿಮ್ಮೀ ಸಹಾ. 1 ಉತ್ತರಕ್ಕೆ ನೀರಸರಕಾಲು, ಮಡ್ಲೀಮರ, ಹುಲವೇಮರದ ಹತ್ರದಿಮ್ಮೀ.

ಈ ಚತುರ್ಗಡಿ ಮಧ್ಯೆ ಅಳತೆ ಪ್ರಕಾರ ಆಗುವ ಸಲೆಗಜ 195840ಕ್ಕೆ ಯಕರೇ (40) ಗುಂಟೆ (18) ಗಜ (62.) ತಾರೀಖು 29—11—75

MAHOMED SALIHA, *Officer in charge of Coffee Department.*

Notice of sale of contract for ganja &c. on the 21st February 1876.

ಕಡೂರು ಡಿಸ್ಟ್ರಿಕ್ಟು ಡಿ|| ಕ|| ಕಚ್ಚೇರಿಯಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರು ಗಾಂಜಾ ಬಾಬು ತಾಲ್ಲೂಕುವಾರಾಗಿಯೂ, ಷರಾಬು ದುಕಾನ್‌ಗಳ ಪೈಕೀ ಕೆಲವನ್ನ ದುಕಾನ್‌ವಾರಾಗಿ ಹರಾಜು ಮಾಡಿಸುವದಲ್ಲದೆ ಕೆಲವನ್ನ ಲೈಸೆನ್ಸು ಜಾರಿ ಅಥವಾ ಈ ಕೆಳಗೆ ನಮೂದುಮಾಡಿರುವ ನಿಬಂಧನೆ ಪ್ರಕಾರ ಮಾಡುವ ಹರಾಜುನಿಂದಾ ವಿಲೇ ಮಾಡಿಸೋಣವಾಗುತ್ತದೆ. ಈ ಯೇರ್ಪಾಡು 1876ನೇ ಇಸವಿ ಏಪ್ರೀಲ್ ಗುರ್ರೆ ಲಾಗಾಯತು 1877ನೇ ಇಸವಿ ಮಾರ್ಚಿ ಆಖೈರುವರಿಗೆ ಪೂರ್ಜಿತವಾಗಿ ನಡಿಯತಕ್ಕದ್ದು. ಈ ಬಾಬುಗಳು ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ನಮ್ಮ ಅಥವಾ, ಅ|| ಕಮ್ಮಿಷನರ್ ಸಾಹೆಬರವರ ರೂಬರೂ 1876ನೇ ಇಸವಿ ಫಿಬ್ರವರೀ ತಾರೀಖು 21ರಲ್ಲು ಪಬ್ಲಿಕ್ ಹರಾಜ್ ಮೂಲಕ ಚಡದರಖಾಸ್ತುದಾರನಿಗೆ ಕೊಡಲ್ಪಡುತ್ತೆ ದರಖಾಸ್ತುದಾರ್ರ ತಿಳುವಳಿಕೆಗೋಸ್ಕರ ಈ ಬಾಬುಗಳ ಯರಡುಸಾಲಿನ ವುತ್ಪತ್ತಿಯನ್ನ ಈ ಕೆಳಗೆ ಕಾಣಿಸಿ ಇರುತ್ತೆ.

ಸಾಲವಾರಿ	ಷರಾಬು ದುಕಾನುಗಳು.										ಗಾಂಜಾ.									
	ಬಾಣಾವಾರ.		ತರೀಕೆರೆ.		ಲಕ್ಕುವಳ್ಳಿ.		ಕೊಪ್ಪ.		ಚಿಕ್ಕಮಗಳೂರು.		ಬಾಣಾವಾರ.		ತರೀಕೆರೆ.		ಲಕ್ಕುವಳ್ಳಿ.		ಕೊಪ್ಪ.		ಚಿಕ್ಕಮಗಳೂರು.	
	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಹರಾಜು ಮೊಬಲಗು	[illegible]	ಲೈಸೆನ್ಸು ಫಿ.
1874-75	205	252	1193	396	562	444	1949	1206	2010	1518	0	0	0	0	0	0	0	0	260	0
1875-76	128	212	1208	568	330	536	422¼	968	3326	2900	7	24	0	8	0	0	0	0	186	108

ಹರಾಜು ಆಗತಕ್ಕ ದುಕಾನುಗಳು.

20. ಚೆನ್ನಾವಾರ ತಾಲ್ಲೂಕು ಬಾಬತು.

2 ಚೆನ್ನಾವಾರ 2 ಜಾವಗಲ್ಲು
2 ಕಂಣಿಕಟ್ಟೆ 2 ಬೆಂಡಗೆರೆ
2 ಶಿಂಗಲುಗೆರೆ 1 ಕೆಂಗುರಲ್ಲಿ
2 ಕತೂರು 2 ಬೀರೂರು
2 ಯುಗಟಿ
1 ಬಳಿಗಂನೂರು 2 ಹೊಜ್ಜೆಹಳ್ಳಿ

23. ತರೀಕೆರೆ ತಾಲ್ಲೂಕು ಬಾಬತು.

2 ತರೀಕೆರೆ 2 ಈಚಾಪುರ
2 ಅಜ್ಜಂಪುರ 2 ದುರ್ವಿಗೆರೆ
1 ಸಪಿಗೇಕಾನು 1 ಹುರುಳಿಹಳ್ಳಿ
1 ಚಿಕ್ಕ ಆಸಂದು 1 ಪಿಳ್ಳೇಬೊರನಹಳ್ಳಿ
1 ನೆಗೇನಹಳ್ಳಿ
1 ಸೂಳಗವುನೆ 1 ವೊಂಡೆ
1 ನಂದೀಬಟ್ಲು 1 ಮುದಗುಡಿ
1 ಹಾದಿದುಗಾಪುರ 1 ಚಂಡಗಟ್ಟೆ
1 ಚಟ್ಟನಹಳ್ಳಿ 1 ಲಿಂಗದಹಳ್ಳಿ
1 ಎರೇಹಳ್ಳಿ
1 ಕಲ್ಲತ್ತಪೇರಿ ಯಿಜಾರೇ ಸಹಾ

19. ಲಕ್ಕವಳ್ಳೀ ತಾಲ್ಲೂಕು ಬಾಬತು.

2 ಲಕ್ಕವಳ್ಳಿ 2 ಯಡೇಹಳ್ಳಿ
1 ಮಿಹಲ್ಲು 1 ಕಡಸೂ
1 ಕೆಸರುಕುಪ್ಪಾ 1 ಎರೆಬೊಮ್ಮನಹಳ್ಳಿ
1 ಹಿರೇಕಾನುಪುರ 1 ಹೊಸವುನೆ
1 ನಂದಿಗಾವೆ 1 ಶಿರವಾಸೆ
1 ಹೊಂಬಳಾ 1 ಮುಕ್ಕಳವ್ಮನ ತೋಟ್ಲು
1 ಪಂಡರವಳಿ 1 ಆಡಕಾನು
1 ಜಾಗರ
1 ಸಂಗಮೇಶ್ವರ ಪೇಟೆ
1 ಬಾಳೇಹೊಂನೂರು

29. ಕೊಪ್ಪ ತಾಲ್ಲೂಕು ಬಾಬತು.

2 ಹರಿಹರಪುರ 2 ಕೊಪ್ಪ
2 ಕಿಗ್ಗಾ 2 ಬಗ್ಗುಂಜಿಕಟ್ಟೆ
1 ಬಗುಂಗ್ಗಜಿ ಪೇಟೆ 1 ಕಲ್ಲುಬಸ್ತಿ
1 ಬಂಡಗಡಿ 1 ಬಾಲನಕೊಪ್ಪ
1 ಜಾಡ್ರಿಗೆರಿ 1 ಬೆಂಕೆಹಡ್ಲು
1 ನೆವ್ಮಾರು 1 ತೊರನಗದ್ದೆ
1 ಮೂಡದೇವಸ್ತಾನ 1 ಸೂಲನ ಕೊಡಗಿ
1 ಗುಬ್ಬುಗೊಡಕಟ್ಟೆ 2 ಶ್ರೀಂಗೇರಿ
1 ಕೇಟವಳ್ಳಿ 1 ಹೊಳೆಅಗ್ರಹಾರ
1 ಹಂಗಡೂರು 12 ಕುಂಚೂ ಬೈಲು
1 ತೈಗೂಡಹಳ್ಳಿ 1 ಕೊಡ್ಲಿ
1 ಬೆಂಣೇಗೂಡೆ
1 ಜಾರನ ಬೈಲು 1 ಜೇಗಾರು

91. ಚಿಕ್ಕ ಮಗಳೂರು ತಾಲ್ಲೂಕು ಬಾ||

9 ಚಿಕ್ಕ ಮಗಳೂರು 2 ಮತಾವಾರ
2 ಹಿಂದಾವಾರ 2 ಕರ್ತಿಕೆರೆ
2 ಬಿಗ್ಗನಹಳ್ಳಿ 2 ಸಖರಾಪಟ್ಣ
2 ತೋಟದಹಳ್ಳಿ 2 ಹಿರೆಮಗಳೂರು
1 ಕಳಿಹಳ್ಳಿ 2 ತೊಗರಿಹಂವ್ಲು
1 ಯಮ್ಮೆಕಾನು 1 ಅಲ್ಲಂಪುರ
1 ಆಂವುಳೆ 1 ಮಗರೇಹಳ್ಳಿ
1 ಪಾಳ್ಯ 1 ಲಿಂಗೇನಹಳ್ಳಿ
1 ನರಗನಹಳ್ಳಿ 1 ನಿರ್ವಾಣದೇವರ ಪುರ
1 ರಾಮೇನಹಳ್ಳಿ 1 ಗವುನವಳ್ಳಿ
1 ಮಾಗಡೀ 1 ಹೋಬಳಿ
1 ಡರಗಣಿ 1 ಮುಳಲೂರು
1 ಮಿರ್ಲೆ 1 ಕರಗಡಾ
2 ಕಳಸಾಪುರ 2 ವಸ್ತಾರ
2 ಶುಕ್ರವಾರ ಪೇಟೆ 6 ಆಲದೂರು
6 ಜೋಳಗಾಳು 2 ಕುಂದವಳ್ಳಿ
2 ತಳಿಹಳಾ 2 ಕೊಡವಳ್ಳಿ
2 ಆಡಕಿನತವರು 2 ಕೂವೆ
2 ಕಳಸಾ 2 ಜಾವಳಿ
1 ಬಸಗಲ್ಲು 2 ಹಲಸವುನೆ
1 ತರಿಗಸಿ 1 ಗುಳದಪೇಟೆ
1 ಬಳಾದರಿ 1 ಶಿರಗೂರು
1 ಪುರದಹರಾ 2 ಆಣೂರು
1 ಹಾರ್ಜಿಹಳ್ಳಿ 1 ಹಾಂದಿ
1 ಬೈಗೂರು 1 ಬಿಲೇನಹಳ್ಳಿ
1 ಹೊಂಕೂವ
1 ಆಸಿಗನಹಳ್ಳಿ 2 ಬಾಳೂರು
1 ಬರಗೂರು

ವಟ್ಟು ಜುವ್ಲಾ ಹರಾಜು ಆಗತಕ್ಕ ದುಕಾನುಗಳು 182.

ಲೈಸೆನ್ಸ್ ಕೊಡತಕ್ಕ ದುಕಾನು ದೇಖೀಲ್ ಜುಮ್ಲಾ 203.

21 ಲೈಸೆನ್ಸ್ ಫೀ ಕೊಡತಕ್ಕ ದುಕಾನುಗಳು.

2. ಚೆನ್ನಾವಾರ ತಾಲ್ಲೂಕು ಬಾಬತು.

1 ಲಿಂಗೈಯುಪುರ 1 ಕೆರೆಸಂತೆ

3. ಲಕ್ಕವಳ್ಳಿ ತಾಲ್ಲೂಕು ಬಾಬತು.

1 ಕೊಳಗಾಂವೆ 1 ಈಚಕೆರೆ
1 ದಾಳಿವಾಸ

11. ಕೊಪ್ಪ ತಾಲ್ಲೂಕು ಬಾಬತು.

1 ಬಂಟವಾನಿ 1 ನಾರವೆ
1 ನುಸಿಮಕ್ಕಿ 1 ಕುಂಜಾರು
1 ಶಂಕರದೇವಸ್ತಾನ 1 ಯತ್ತಿನಹಟ್ಟೆ
1 ಹೊಸಪಟ್ಣ 1 ಶಿದ್ದರಪುರ
1 ಬಾನುವಳ್ಳಿ ದೇವಸ್ಥಾನ
1 ಮುಳವಳಿ 1 ಕಲಮಕ್ಕಿ

5. ಚಿಕ್ಕಮಗಳೂರು ತಾಲ್ಲೂಕು ಬಾಬತು

1 ಹನಿಕೆ 1 ದಟ್ಟ ಸನಮಿಕ್ಕಿ
1 ದಂಮಿದಹಳ್ಳಿ
1 ಕೆಳಗಣಿ 1 ಮಾಜಿಗನಹಳ್ಳಿ

1. ಈ ಮೇಲೆ ನಮೂದಾಗಿ ಯಿರುವ ಜಾಗಗಳ ಶಿವಾಯಿ ಯಿನ್ನು ಯಲ್ಲಿ ಆದರು ದುಕಾನುಗಳನ್ನ ಯಿಡುವದಕ್ಕೆ ಲಾಯಖಾದ ಸ್ತಳಗಳು ಯೇನಾವರು ಯಿದ್ದು ಯಾರಾದರೂ ಅಂಥಾ ಸ್ಥಳಗಳನ್ನ ಖಾಯಿಷ್ ಮಾಡುವ ಹಾಗೆ ಯಿದ್ದರೆ ಹರಾಜು ಕಾಲದಲ್ಲಿ ಕೇಳಬೇಕು. ಪೈಕೀ ಹರಾಜಿಗೆ ನೇಮಿಸಿ ಯಿರುವ ದುಕಾನುಗಳು ಹರಾಜು ಹಾಕಿಸಲ್ಪಡುತ್ತೆ, ಲೈಸೆನ್ಸು ಅಥವಾ ಹರಾಜಿಗೆಂದು ದಾಖಲಾಗಿರುವ ಯಾವ ದುಕಾನುಗಳಿಗೆ ಗುದಸ್ತಾ ಲೈಸೆನ್ಸುದಾರ ಅಥವಾ ಯಿತರ ಖಾಯಿಷ್ ವುಳ್ಳವರು ಫೆಬ್ರವರೀ——ನೇ ತಾರೀಖಿನ ವಳಗೆ ಬರಹ ಮೂಲಕ ದರಖಾಸ್ತುಗಳನ್ನ ಕಳುಹಿಸಬೇಕು. ಲೈಸೆನ್ಸು ಫೀಗೆ ನೇಮಿಸಿ ಯಿರುವ ದುಕಾನುಗಳ ಪೈಕೀ ಯಾವ ದುಕಾನುಗಳಿಗೆ ಗುದಸ್ತಾ ಲೈಸೆನ್ಸುದಾರ ಶಿವಾಯಿ ಯಿತರ ಜನರು ಖಾಯಿಷ್ ಮಾಡುತ್ತಾರೋ ಅಂಥಾವುಗಳನ್ನ ಹರಾಜು ಹಾಕಿಸಲ್ಪಡುತ್ತೆ. ಹಾಂಗೆ ಅಲ್ಲದೆ ಗುದಸ್ತಾ ಲೈಸೆನ್ಸುದಾರ ವೊಬ್ಬನೆ, ಅಥವಾ ಅವನು ಖಾಯಿಷ್ ಮಾಡದೆ ಬೇರೆ ಮನುಷ್ಯನು

ಅಪೇಕ್ಷೆ ಮಾಡದೆ ಹರಾಜ್ ಸಿವಾಯಿ ಲೈಸೆನ್ಸು ಜಾರೀ ಮಾಡುವದರಲ್ಲಿ ಬರುತ್ತೆ. ಫಿಬ್ರವರೀ—ನೇ ತಾರೀಖಿನ ನಂತರ ಬರುವ ದರಖಾಸ್ತುಗಳನ್ನ ಮಂಜೂರ್ ಮಾಡದೇ ವಾಪಸ್ ಮಾಡಲಾಧೀತು.

2. ಷರಾಬ್ ದುಕಾನುಗಳನ್ನ ಹರಾಜಿನಲ್ಲಿ ಪಡಕೊಂಡ 24 ಘಂಟೆ ವಳಗಾಗಿ ಹರಾಜು ಮೊಬಲಗು ಪೂರಾ ವಸೂಲ್ ಕೊಡಬೇಕು. ಆ ಮೇರಿಗೆ ಕೊಡದೇ ಯಾವ ದುಕಾನುದಾರ ತಪ್ಪುತ್ತಾನೋ ಅಂಥಾ ದುಕಾನುಗಳನ್ನ ಪುನಹಾ ಹರಾಜಿನಿಂದಾ ಲುಕ್ಸಾನು ಹೊಂದುವ ಮೊಬಲಗ್ಯೆ ಅವ್ವಲ್ ದರಖಾಸ್ತುದಾರನನ್ನ ಗುರಿಮಾಡಲ್ಪಡುತ್ತೆ. ಮಾಯಿ ಲೈಸೆನ್ಸ್ ಫೀ ಕೊಡಬೇಕಾದ ವಿಷಯದಲ್ಲಿಯೂ ನಡವಳಿಕೆ ವಿಷಯದಲ್ಲಿಯೂ ಸಹಾ ಈ ವಿಷಯವಾಗಿ ಕೊಡಲ್ಪಡುವ ಲೈಸೆನ್ಸಿನಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಯಿರಬೇಕು.

3. ಈ ಬಾಬತು ಲೈಸೆನ್ಸು ಫೀ ಮೊಬಲಗನ್ನ ಆಯಾಯ ಖಿಸ್ತಿನ ಪ್ರಕಾರ ಮೊಬಲಗು ಕ್ವಾರ್ಟರ್‌ಲಿ ಗುರ್ರೇ ತಾರೀಖಿನಲ್ಲಿಯೇ ವಸೂಲ್ ಕೊಡಬೇಕು, ಹಾಂಗೆ ಕೊಡದೇ ಯಾವ ದುಕಾನುದಾರ ತಪ್ಪುತ್ತಾನೋ ಅಂಥಾ ದುಕಾನನ್ನ ಕೂಡ್ಲೇ ರದ್ದು ಪಡಿಸಿ ಲೈಸೆನ್ಸನ್ನ ವಾಪಸ್ ತರಿಸಿಕೊಳ್ಳಲ್ಪಡುತ್ತೆ.

4. ಮಧ್ಯ ಕಾಲದಲ್ಲಿ ದರಖಾಸ್ತು ಬರುವ ದುಕಾನುಗಳು ಯಾವ ತಿಂಗಳಲ್ಲಿ ಜಾರೀ ಬರುತ್ತೆಯೊ ಆ ತಿಂಗಳಲ್ಲಿ ಕೆಲವು ದಿವಸ ಸಾಗುವಳೀ ಆದಾಗ್ಯೂ ಆ ಬಾಬತು ದುಕಾನಿಗೆ ರೂಲ್ಸ್ ಪ್ರಕಾರ ಆಗುವ ಆ ತಿಂಗಳ ಪೂರಾ ಲೈಸೆನ್ಸು ಫೀ ಮೊಬಲಗನ್ನ ಕೊಡಬೇಕು.

5. ಗಾಂಜಾ ಬಗೆ ಹರಾಜ್ ಕೈದಾದ ಕೂಡ್ಲೇ ಹರಾಜು ಮೊಬಲಗಿನ ಆಡ ಯರಡು ಖಿಸ್ತಿನ ಹಣವನ್ನ ಠೇವಣಾತಿಯಾಗಿ ಇಡಬೇಕಲ್ಲದೆ ಯಿಜಾರೇ ಮೊಬಲಗ್ಯೆ ತಕ್ಕ ಸ್ಟಾಂಪು ಕಾಗದದಲ್ಲಿ ಇಜಾರೇ ಮುಚ್ಚಳಿಕೆಯನ್ನ ಬರಕೊಟ್ಟು ಲಾಯಖು ಜಾಮೀನು ಸಹಾ ಕೊಡಬೇಕು. ಆ ರೀತಿ ನಡಿಯದೇ ತಪ್ಪಿದ ಪಕ್ಷದಲ್ಲಿ ಬಾಬ್ ಯರಡನೇ ಹರಾಜಿನಿಂದಾ ಲುಕ್ಸಾನು ಹೊಂದುವ ಮೊಬಲಗ್ಯೆ ಅವ್ವಲ್ ದರಖಾಸ್ತುದಾರನನ್ನ ಗುರಿಮಾಡಲ್ಪಡುತ್ತೆ.

6. ಈ ಬಾಬಿನ ಖಿಸ್ತು ಮೊಬಲಗು ಮತ್ತು ಲೈಸೆನ್ಸು ಮೊಬಲಗು ಸಹಾ ಆಯಾಯ ತಿಂಗಳ ತಾರೀಖು 20ರ ವಳಗಾಗಿ ಪೂರಾ ಮೊಬಲಗು ಪಾರಖಾವಣಿಮಾಡಿ ರಸೀತಿ ಪಡಿಯಬೇಕು. ಆ ರೀತಿ ಕೊಡದೇ ತಪ್ಪುವ ಪಕ್ಷದಲ್ಲಿ ಬಾಬ್ ಯರಡನೇ ಹರಾಜಿನಿಂದ ಕಂಭರ್ತಿ ಮೊಬಲಗು ಇಜಾರೇದಾರ ಮತ್ತು ಜಾಮೀನಿದಾರನ ಜಿಂದಗಿಯಿಂದ ಭರ್ತೀ ಮಾಡಿ ಕೊಳ್ಳಲ್ಪಡುತ್ತೆ.

7. ಈ ಬಾಬತು ಲೈಸೆನ್ಸು ಫೀ ವಿಷಯದಲ್ಲಿಯೂ ಮತ್ತು ನಡವಳಿಕೆ ವಿಷಯದಲ್ಲಿಯೂ ಸಹಾ ಈ ವಿಷಯವಾಗಿ ಕೊಡಲ್ಪಡುವ ಲೈಸೆನ್ಸಿನಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಯಿರುತ್ತೆ.

ಬತಾರೀಖು 24ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

P. Krishna Rao,
Dy. Commr.

ಮ್ಯಾಗಜೀನ್ ಇಲಾಖಾ.

ತಾರೀಖು 25ನೇ ಜನವರೀ 1876.

ಈ ಕೆಳಗೆ ನಮೂದಿಸಲ್ಪಡತಕ್ಕ ವಸ್ತು ಬಗ್ಯೆ (ಅರಗು ಮೊಹರು ಮಾಡಲ್ಪಟ್ಟ ದರಖಾಸ್ತುಗಳನ್ನು ಬೆಂಗಳೂರಲ್ಲಿರುವ ಆರ್ಡ್‌ನೆನ್ಸ್ ಕಮ್ಮಿಸ್ಸೇರಿ ಸಾಹೇಬರವರು 1876ನೇ ಇಸವಿ ಫಿಬ್ರವರೀ 29ನೇ ಮುಕ್ಕಾಂ ಮಧ್ಯಾನ್ಹದವರಿಗೂ ತೆಗದುಕೊಳುತ್ತಾರೆ, ಮತ್ತು ಸದರೀ ಕಾಲದಲ್ಲಿ ದರಖಾಸ್ತುಗಳು ತೆಗಿಯಲ್ಪಡುವವು.

ವಸ್ತು	ದರ	ತೇದಾದ್ ವೆ ಸಂಖ್ಯೆ	ಯಾವಾಗ ಹಾಜರ್ಮಾಡತಕ್ಕದ್ದು, ಮತ್ತು ಯಾವ ಖಿಸ್ತುಗಳಪ್ರಕಾರ.
ಕುದರೆಗಳ ಬ್ಲ್ಯಾಂಕೆಟ್‌ಗಳು		524	1876ನೇ ಇಸವಿ ಮಾರ್ಚೀ ಗುರ್ರೇ ತಾರೀಖು ಲಾಗಾಯತು ಪ್ರತಿ ತಿಂಗಳಲ್ಲಿ 250ರ ಪ್ರಕಾರ.

ಮುಖ್ಯಾಂಶ,—ದರಖಾಸ್ತುಗಳ ವಿಷಯದಲ್ಲಿ ಸರ್ 1872ನೇ ಇಸವಿ ಡಿಶಂಬರು ತಿಂಗಳಿನ ಫೋರ್ಟ್‌ಸೆಂಟ್‌ಜಾರ್ಜ್ ಗೆಜೆಟ್ಟಿನಲ್ಲಿ ಫೌಯಿಷ್ ಮಾಡಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಸಲ್ಪಡುವವು. ಹಾಲೀ ಬೇಕಾಗಿರುವ ವಸ್ತುವಿನ ಮಾದ್ರಿಯನ್ನು ನೋಡಬಹುದು. ದರಖಾಸ್ತು ನಮೂನೆಗಳು ಮತ್ತು ಜಾಮಿನ್ ಮೊಬಲಗ್ ಪಾವತೀ ವಗೈರೇ ವಿಷಯಗಳ ದರೋಬಸ್ತು ತಪಶೀಲ್ ಗಳನ್ನು ಬೆಂಗಳೂರು ಕಿಲ್ಲೆ ಯಲ್ಲಿರುವ ಮ್ಯಾಗೆಜೀನ್ ಆಫಿಸ್‌ನಲ್ಲಿ ಭಾನುವಾರ ವ ಗವರ್ನಮೆಂಟ್ ರಜಾದಿನಗಳು ಯಿವು ಶಿವಾಯಿ ಮಿಕ್ಕ ಯಾವ ದಿನದಲ್ಲಾಗಲಿ ಬೆಳಿಗ್ಗೆ 9 ಘಂಟೆ ಸಾಯಂಕಾಲ 4 ಘಂಟೆ ಈ ಮಧ್ಯೆ ಯಾವ ಕಾಲದಲ್ಲಾಗಲಿ ತಿಳದು ಕೊಳ್ಳಬಹುದಾಗಿರುತ್ತೆ.

ತಾರೀಖು 2ನೇ ಫಿಬ್ರವರೀ 1876.

ಹಳೇಸೀಸ 1000 ಪೌಂಡಿಗೆ ವೊಂದು ಲಾಟ್ ಪ್ರಕಾರ 32,000 ಪೌಂಡುಗಳನ್ನು ಕೊಂಡುಕೊಳ್ಳತಕ್ಕ ಬಗ್ಯೆ ಅರಗು ಮೊಹರ್ ನಿ ಮಾಡಲ್ಪಡುವ ದರಖಾಸ್ತುಗಳನ್ನು ಬೆಂಗಳೂರಲ್ಲಿರುವ ಮ್ಯಾಗೆ ಜೀನ್ ಇನ್ ಚಾರ್ಜ್ ಆರ್ಡ್ ನೇನ್ಸ್ ಕಮ್ಮಿಸ್ಸೇರಿ ಸಾಹೆಬರವರು 1876ನೇ ಇಸವಿ ಮಾರ್ಚಿ ಗುರ್ರೇ ತಾರೀಖಿನ ಮದ್ಯಾನ್ಹದ ಪರಿಯಂತ ತೆಗೆದುಕೊಳ್ಳುತ್ತಾರೆ.

ದರಖಾಸ್ತು ಅಂಗೀಕರಿಸಲ್ಪಟ್ಟರೆ, ದರಖಾಸ್ತು ಮಾಡಲ್ಪಟ್ಟ ಸೀಸದ ತೇದಾದಿನ ವೊಟ್ಟು ಕಿಮ್ಮತ್ತಿನ ಮೇಲೆ ಸೇಕಡಾ 10 ರೂಪಾಯಿ ಪ್ರಕಾರ ಠೇವಣಿಯನ್ನು 1876ನೇ ಮಾರ್ಚಿ 15 ರಲ್ಲು ಪಾವತೀ ಮಾಡಬೇಕು. ಕೊಂಡುಕೊಳ್ಳಲ್ಪಟ್ಟ ಸೀಸದ ಪೂರಾ ಮೊಬಲಗು ಅದನ್ನು ಸಾಗಿಸುವದಕ್ಕೆ ಮುಂಚೇ ಪಾವತೀ ಮಾಡಬೇಕು.

ಅರ್ಜೀ ಬರದಕೊಳ್ಳುವ ಮೂಲಕ ಮ್ಯಾಗೆಜೀನ್ನಲ್ಲಿ ಸೀಸವನ್ನು ನೋಡಬಹುದು.

ಸರ್ 1870ನೇ ಇಸವಿ ಜನವರೀ ತಿಂಗಳ ಫೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಅಸ್ತಿಹಾರಿನಲ್ಲಿ ವಿವರಿಸಲ್ಪಟ್ಟ ಷರತ್ತುಗಳ ಪ್ರಕಾರ ದರಖಾಸ್ತುಗಳ ವಿಷಯದಲ್ಲಿ ನಡಿಸಲ್ಪಡುವದು.

D. Straker, *Captain, R. A.*,
Commissary of Ordnance.

ನೋಟಿಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ನಾರ್ತ ಆರ್ಕಾಟ ಡಿಸ್ಟ್ರಿಕ್ಟು ಅನೇಕ ಕಡೆಗಳೊಳಗೂ, ಮತ್ತು ಕಾಳಹಸ್ತ್ರೀ ಷಹರಿನಲ್ಲಿಯೂ, ಉಖಾಲ್ ಜುಲಾಬ್ ಉಪದ್ರವು ಅದ್ಯಾಪಿ ವ್ಯಾಪಿಸಿರುವದ್ದರಿಂದ ಮುಂದೆ ಬರುವ ಶಿವರಾತ್ರೆ ಹಬ್ಬಕ್ಕೆ ಕಾಳಹಸ್ತ್ರಿಗೆ ಹೋಗ ಯತ್ನಿಸುವ ಜನಗಳು ಈ ವರುಷ ಅಲ್ಲಿಗೆ ಹೋಗೋಣದ್ದರಿಂದ ಉಂಟಾಗುವ ಅಪಾಯಕ್ಕೆ ಗುರಿಯಾಗದಂತೆ ತಿಳಿಯ ಹೇಳಲ್ಪಟ್ಟಿರುತ್ತಾರೆ.

W. S. Whiteside,
Collector.

Mysore Government Press, Bangalore—1876.

ಭಾರೀ ತಕಸೀರಗಳಿಗೋಸ್ಕರ ಖೈದ ಮಾಡಲ್ಪಟ್ಟು ಸಜಾ ವಾಯಿದೆ ಪೂರೈಸಿದ ಬಳಿಕ ಖುಲಾಸೇ ಮಾಡಲ್ಪಟ್ಟ ಜನಗಳ ಚಹರೇ ಪಟ್ಟಿ.

ಯಾವ ಜೈಯಿಲಿನಿಂದ ಖುಲಾಸೇ ಮಾಡಲ್ಪಟ್ಟಿತು.	ಜೈಯಿಲ ರಜಿಸ್ಟರಿನ ನಂಬರು.	ಹೆಸರು, ಜಾತಿ, ಸಾಧಾರಣ ಕಸಬು, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರೂ ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜೈಯಿಲಿನಲ್ಲಿದ್ದದ್ದು.	ಷರಾ.	ಜೈಯಿಲ ಸೂಪರಿಂಟೆಂಡೆಂಟರ ದಸ್ತಖತು.
1	2	3	4	5	6	7	8	9	10
ಬೆಂಗಳೂರು.	8561	ಯಲ್ಲ, ಹೊಲೆಯ, ಕುದರೇಯವ, ಲಷ್ಕರ.	ವಿಕಾರವಾದ ಅಂಗಾಂಗಗಳು, ಮಡ್ಡಿಯಾದ ಮುಖರಸ ಬಹಳಕಪ್ಪುವರ್ಣ, ಹುಬ್ಬಿನಮೇಲೆ ಅನೇಕ ಸುಟ್ಟ ಕಲೆಗಳು ಇರುತ್ತೆ, ಎತ್ತರ 5—4½.	ತಿಮ್ಮ, ಲಷ್ಕರ.	ಆರು ತಿಂಗಳು ಕಠಿಣ ಸಜ, 17ನೇ ಜೂನ 1875, ಕಟ್ಟಡದಲ್ಲಿ ಕಳವು, ಕೇಸ ನಂಬರ 10, ಬೆಂಗಳೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ.	17ನೇ ಡಿಸೆಂಬರ 1875.	ಯರಡಾವರ್ತಿ.		
	4149	ರಾಮ, ವಡ್ಡರ, ವ್ಯವಸಾಯ, ಸರ್ಜಾಪುರ.	ಬಹಳವೃದ್ಧ, ವೃದ್ಧಮುಖ, ಬಲಗಿವಿ ಮೇಲೆಚಿಕ್ಕ ಮಚ್ಚೆ, ಬಲತೋಲಿ ಕೊನೆ ಕೆಳಗೆ ಘಾಯದಕಲೆ, ಎತ್ತರ 5—9.	ವೆಂಕಟಿಗ, ಸರ್ಜಾಪುರ.	ಎಂಟು ವರುಷಗಳು ಡಿಟೋ 18ನೇ ಡಿಸೆಂಬರ 1867, ಡಕಾಯತಿ, ಮೊಕದ್ದಮೆ ನಂಬರ 1, ನಂದೀದುರ್ಗ ಡಿವಿಜನ ಸೆಷನ್ಸ ಕೋರ್ಟು.	18ನೇ ಡಿಟೋ.	ಇಲ್ಲ.		
	7874	ವೆಂಕಟ, ಮಾದಿಗ, ತೋಟದವ, ಲಷ್ಕರ	ಯಣ್ಣೆಗೆಂಪು, ಮೇಲಣಹಲ್ಲು ಬಿದ್ದುಹೋಗಿರುತ್ತೆ, ಮಣಿಕಟ್ಟಿನಮೇಲೆ ಹಚ್ಚೆ ಗುರುತು ಇರುತ್ತೆ, ಎತ್ತರ 5—3.	ನಂಜ, ಲಷ್ಕರ.	ಎರಡು ವರುಷಗಳು ಡಿಟೋ 20ನೇ ಡಿಸೆಂಬರ 1873, ಕಳವು, ಮೊಕದ್ದಮೆ ನಂಬರ 10, ನಂದೀದುರ್ಗ ಡಿವಿಜನ ಸೆಷನ್ಸ ಕೋರ್ಟು.	20ನೇ ಡಿಟೋ.	ಮೂರಾವರ್ತಿ.		

ಯಾವ ಜೈಲಿನಿಂದ ಬಿಡುಗಡೆಯಾದದ್ದು.	ಜೈಲಿನ ರಿಜಿಸ್ಟರಿನ ಸರಣಿ ನಂಬರು.	ಹೆಸರು, ಜಾತಿ, ಸಾಧಾರಣ ಕಸಬು, ಮತ್ತು ವಾಸಸ್ಥಳ.	ಎತ್ತರ, ಮತ್ಯಾವದಾದರು ಮುಖ್ಯವಾದ ಗುರುತು ಇವುಗಳು ದೇಖೀಲ್ ಚಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರ ಗೋಸ್ಕರ.	ಖುಲಾಸೇ ತಾರೀಖು.	ಯಿದಕ್ಕೆ ಮುಂಚೆ ಎಷ್ಟು ದಫಾ ಜೈಯಿಲ್ ನಲ್ಲಿದ ದ್ದು.	ಷರಾ.	ಜೈಲಿನ ಸುಪರಿಂಟೆಂಡೆಂಟರ ದಸ್ತಕತ್ತು
1	2	3	4	5	6	7	8	9	10
ಬೆಂಗಳೂರು.	666	ವೆಂಕಟಾಭೋಇ, ವಡ್ಡರ್, ಕೂಲಿ, ಯಲಹಂಕ.	ಹುಬ್ಬುಗಳ ನಡುವೆ ಒಂದು ಹಜ್ಜೇಗೆರೆ, ಯಡರೆಕ್ಕೆ ಮೇಲೆ ಹೊರಗೆ ಕಾಣುವಹಾಗೆ ಘಾಯದಕಲೆ, ಸೊಂಟದಮೇಲೆ ಯಡಗಡೆ ಒಂದುಚಿಕ್ಕ ನರಹುಲಿಇರುತ್ತೆ, ಎತ್ತರ 6—0.	ನಾಗಾಭೋಇ, ಯಲಹಂಕ.	ಹದಿನಾಲ್ಕು ವರುಷಗಳು ಕಠಿಣಸಜ, 22ನೇ ಡಿಸೆಂಬರ್ 1861, ಕಾಲ್ನಡೆಗಳನ್ನು ಕದ್ದದ್ದು, ಜೂಡಿಷಿಯಲ್ ಕಮಿಷನರ್ರ ಆರ್ಡರ್ ನಂಬರು 200.	22ನೇ ಡಿಸೆಂಬರ್ 1875.	ಎರಡಾವರ್ತಿ.		J. HENDERSON, M. D., *Supt., Central Jail.*
	667	ಗುರುವಾಭೋಇ, ಡಿಟೋ, ದೊಡ್ಡಬಳ್ಳಾಪುರ.	ಯಡಮೊಲೇಕೊನೆ ಮೇಲ್ಭಾಗಕ್ಕೆ ವುಬ್ಬಾದ ಘಾಯಗಳ ಸೊಟ್ಟವಾದ ಗೆರೆಗಳು, ಭುಜದ ರೆಕ್ಕೆಯ ಮಧ್ಯದಲ್ಲಿಘಾಯದ ಕಲೆ, ಎತ್ತರ 5—10.	ನಾಗಾಭೋಇ, ದೊಡ್ಡಬಳ್ಳಾಪುರ.	ಡಿಟೋ.	ಡಿಟೋ.	ಒಂದಾವರ್ತಿ.		
	8713	ರಂಗ, ಮಾದಿಗ, ಕೂಲಿ, ಬೆಂಗಳೂರು.	ಬಲಗಂಣಿನ ಮೇಲೆಯರಡು ಘಾಯದಕಲೆಗಳು, ಎತ್ತರ 5—2.	ರಂಗಾ, ಬೆಂಳೂರು.	ಮೂರು ತಿಂಗಳು ಡಿಟೋ 23ನೇ ಸೆಪ್ಟಂಬರ್ 1875, ಜೀವನಕ್ಕೆ ಮಾರ್ಗವಿಲ್ಲದ್ದು, ಮೊಕದ್ದಮ ನಂ॥ 558, ಷಹರ್ ಮತ್ತು ಲಷ್ಕರ್ ಮ್ಯಾಜಿಸ್ಟ್ರೇಟ್.	23ನೇ ಡಿಟೋ.	ಎರಡಾವರ್ತಿ.		
	8715	ಅಜ್ಜಯ್ಯ, ಡಿಟೋ,	ದೊಡ್ಡ-ಬಾಇ, ಚಿಕ್ಕ ಕಂಣುಗಳು, ಯಡಮೊಳಕಾಲಿನ ವಳಪಾರ್ಶ್ವ ಘಾಯದಕಲೆ, ಎತ್ತರ 5—5.	ಡಿಟೋ.	ಡಿಟೋ.	ಡಿಟೋ.	ಎರಡಾವರ್ತಿ.		

2

ತುಮಕೂರು.	997	ನಂಜಾ, ಗಾಣಿಗ, ಕು ಣಿಗಲ್ ತಾಲ್ಲೂಕು ಭಂ ಡೀಹಳ್ಳಿ, ಜಿರಾಯಿತು.	ಕಪ್ಪುವರ್ಣ, ಯಡಗಡೆ ಕುತ್ತಿಗೆ ಹಿಂಭಾಗದಲ್ಲಿ ಹುಣ್ಣು ಯೆದ್ದ ಕಲೆ ಒಂದು ಕಾಸಿನಗಲ ಯಿಥೆ, ವುದ್ದಾ 5 ಅಡಿ, 3 ಅಂಗುಲ.	ಕೆಂಪಾ, ಕುಣಿಗಲ್ ತಾಲ್ಲೂಕು ಭಂಡೀಹಳ್ಳಿ.	1875ನೇ ಇಸವಿ ಸೆಪ್ಟಂಬರ್ ತಾರೀಖು 18 ರಲಾಗಾಯತು 3 ತಿಂಗಳು ಕಠಿಣಸಜಾ 457ನೇ ಸೆಕ್ಷರ್ ಪ್ರಕಾರ ಅತಿಕ್ರಮ ಪ್ರವೇಶ.	1875ನೇ ಇಸವಿ ಡಿಸೆಂಬರ್ ತಾರೀಖು 18 ರಲ್ಲು.	ಇಲ್ಲ.			V. KRISHNASWAMI, *Officer in charge of Jail.*
	1009	ವೆಂಕಟ್ಯಾ, ಕಲ್ಲುವಡ್ಡರವ, ತುಮಕೂರು ತಾಲ್ಲೂಕು ಚಿಕ್ಕ ದೊಡ್ಡ ವಾಡಿ, ಜಾತಿಕೆಸಬು.	ಕೆಂಪುವರ್ಣ, ಯಡದ ಮೊಳಕಾಲ್ ಚಿಪ್ಪಿನ ಮೇಲೆ ತೊಗರಿಕಾಳುಥಪ್ಪ 5 ನರಹುಳಿಹಾಗೆ ಗಂಟು ಯಿಥೆ, ಹೊಟ್ಟೇಮಧ್ಯಭಾಗದಲ್ಲಿ 2 ಘಾಯದಕಲೆ ಯಿಥೆ, ವುದ್ದಾ 5 ಅಡಿ, 4 ಅಂಗುಲ.	ವೆಂಕಟ್ಯಾ, ತುಮಕೂರು ತಾಲ್ಲೂಕು ಚಿಕ್ಕ ದೊಡ ವಾಡಿ.	1875ನೇ ಇಸವಿ ನವಂಬರ್ ತಾರೀಖು 12 ರಲಾಗಾಯತು 37 ದಿವಸ ಕಠಿಣ ಸಜಾ 380ನೇ ಸೆಕ್ಷರ್ ಪ್ರಕಾರ ಕಳವು.	1875ನೇ ಇಸವಿ ಡಿಸೆಂಬರ್ ತಾರೀಖು 19 ರಲ್ಲು.	ಡಿಟೋ.			
ಶಿವಮೊಗ್ಗಾ.	3877	ನಂಜವಮ್ಮಾ, ಮರಾಟಿ ಕೂಲಿ, ಶಿವಮೊಗ್ಗಾ.	ಮೊಖದಮೇಲೆ ತುಂಬಾ ಮೈಲಿ ಕಲೆಗಳು, ಗಲ್ಲದ ಮೇಲ್ಯಲುವು ಯತ್ತರವಾಗಿಇಥೆ, ಬಾಇ ಅಗಲವಾಗಿಇಥೆ, ಭುಜಗಳು ಚೌಕವಾಗಿಯಿವೆ, ಕುತ್ತಿಗೆಯ ಬಲಪಾರ್ಶ್ವದಲ್ಲಿ ವಂದು ಕಪಪ್ಪದ ಮತ್ತು ದೊಡ್ಡದಾದ ಕಲೆ ಇಥೆ, ವಯಸ್ಸು 40, ಯತ್ತರ 5—9.	ಥೋಟಪ್ಪಾ, ಶಿವಮೊಗ್ಗಾ.	ಶಿವಮೊಗ್ಗಾ ತಾಲ್ಲೂಕು 3ನೇ ಕ್ಲಾಸ್ ಮೇಜಸ್ಟ್ರೇಟರವರ ಚಾಲತೀ ಇಸವಿ ಫೈಲ್ ನಂಬರು—ದೊಕದ್ದಮೇ ಯಲ್ಲಿ, ಸ 1875ನೇ ಇಸವಿ ನವಂಬರ ತಾರೀಖು 15ರಲ್ಲು ಕಳವಿನ ತಪ್ಪಿತಕ್ಕಾಗಿ, 15ದಿವಸಬರೀಕೈದು, 5ರೂಪಾಯಿ ಜುರುಮಾನೆ, ಕೊಡದೆ ತಪ್ಪಿಧರೆ ತಿರಿಗಿ 7 ದಿವಸ ಬದಸ್ತೂರು ಕೈದು ಸಜಾ.	7ನೇ ಡಿಸೆಂಬರ 1875.	ಇಲ್ಲ.			
	3887	ಕೃಷ್ಣ, ಲಂಬಾಣಿ ಕೂಲಿ, ದಾವಣಗೆರೆ.	ಶಾಮ ವರ್ಣ, ಯರಡು ಕಪಾಲಗಳ್ಲಲ್ಲಿಯೂ ಐದು ಐದು ಹಚ್ಚೇ ಕಲೆಗಳು, ಇನ್ನೊಂದು ಹಚ್ಚೇ ಕಲೆಮೂಗಿನ ಯಡಪಾರ್ಶ್ವದಲ್ಲಿ, ಯದೇಮೇಲೆ ತುಂಬಾ ಹಚ್ಚೇ ಕಲೆಗಳುಯಿವೆ, ವಯಸ್ಸು 18, ಯತ್ತರ 5—2.	ಭವಾನಿ, ದಾಣಗೆರೆ.	ಸಾಗರ ತಾಲ್ಲೂಕು 3ನೇ ಕ್ಲಾಸ್ ಮೇಜಸ್ಟ್ರೇಟರಿಂದ ಅವರ ಕೋರ್ಟು ಚಾಲತೀಇಸವಿ .ಕೇಸ್ ನಂಬರು—ನೇ ಕೇಸ್‌ನಲ್ಲಿ ಸ 1875ನೇ ಇಸವಿ ನವಂಬರ ತಾರೀಖು 13ನೇ ದಿವಸ ಕಳವಿನ ತಕಸ್ಸೀರಿಗಾಗಿ 1 ತಿಂಗಳು ಬರೀ ಕೈದು ಸಜಾ.	13ನೇಡಿಟೋ.				

ಯಾವ ಜ್ಯೈಲಿನಿಂದ ಓಡಿಹೋದ್ದು.	ಜ್ಯೈಲ್ ರಿಜಿಸ್ಟರಿನ ನಂಬರ್.	ಹೆಸರು, ಜಾತಿ, ಸಾಧಾರಣ ಕಸಬ್, ಮತ್ತು ವಾಸಸ್ಥಳ.	ಎತ್ತರ, ಮತ್ತ್ಯಾವದಾದರು ಮುಖ್ಯವಾದ ಗುರುತು ಇವುಗಳು ದೇಖೀಲ್ ಜಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟು ದಫಾ ಜ್ಯೈಯಿಲ್ ನಲ್ಲಿದ್ದದ್ದು.	ಷರಾ.	ಜ್ಯೈಲಿನಿಂದ ಓಡಿಹೋದ ತಾರೀಖು.
1	2	3	4	5	6	7	8	9	10
ಶಿವಮೊಗ್ಗ.	881	ಆದಿಗಾ ವುರಫ್ ಆದಿಗಾ, ಕೊರಚರ್ ಕೂಲಿ, ಷಿಕಾರಿಪುರ.	ಯದೆಯ ಮುಂದುಗಡೆಯಲ್ಲಿ 6 ಮಚ್ಚೇಗಳು, ದುರಡು ಮೊಳಕಾಲು ಮೇಲೂ ವುದ್ದನಾದ ಕಲೆಗಳು, ಮತ್ತೊಂದು ಬಲಗಡೆ ಮೊಳಕಾಲು ಮೇಲೆ, ಬಲಪಾದದ ಕಿರಿಬೆರಳು ಯೆಲ್ಲವಕ್ಕಿಂತ ಚೋರಗಾಗಿ ಇದ್ದು ಅದರ ತಲೆಯು ವುದುರಿ ಹೋಗಿಧೆ.	ಕುಂದಾಳ ರಂಗಾ, ಷಿಕಾರಿಪುರ.	ಚಿತ್ರದುರ್ಗ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್ ಕೋರ್ಟು ಸರ್ಕಲ್ 1870ನೇ ಇಸವಿ ಕೇಸ್ ನಂಬರ್ 31, 32, 33ನೇ ಮೊಕದ್ದಮೆಗಳಲ್ಲಿಅದೇ ಇಸವಿ ಡಿಸೆಂಬರ್ ತಾರೀಖು 10ರಲ್ಲು ಮನೇ ಅತಿಕ್ರಮ ಪ್ರವೇಶ ಮತ್ತು ಕಳವಿನ ಮಾಲು ತಿಳದು ತೆಗದುಕೊಂಡ ತಪ್ಪಿತಕ್ಕಾಗಿ 5 ವರುಷ ಕಠಿಣಕೈದು, 25ರೂಪಾಯಿ ಜುರುಮಾನೆ, ಕೊಡದೇ ಇದ್ದರೆ ತಿರಿಗಿ 1 ತಿಂಗಳು ಬದಸ್ತೂರ್ ಕೈದು.	30ನೇ ಡಿಸೆಂಬರ್ 1875.		ಡಿಸೆಂಬರ್ 30ರಲ್ಲು ಜರ್ಮಾನೆ ಬಾಬತು 10 ರೂಪಾಯಿ ವಸೂಲು ಬಂತು ಕೈದಿಯು ಅದೇ ದಿವಸ ಖುಲಾಸೆ ಮಾಡಲ್ಪಟ್ಟನು.	
	3842	ಶಿವಲಿಂಗಮ್ಮಾ, ಜಂಗಮು, ಕೂಲಿ, ಜಡೆ ಸೊರಬ ತಾಲ್ಲೂಕು.	ವರ್ಣ ಯಣೆಕೆಂಪು, ಮೊಖ ಅಗಲವಾಗಿಯೂ, ಮಂಗನಂತೆ ಮೂಗು ಚಪ್ಪಟೆಯಾಗಿಯೂ, ತುಟಿ ದಪ್ಪವಾಗಿಯೂ, ಮುಖ ಮೈಲಿಕಲೆಗಳಿಂದ ತುಂಬಿಯೂ ಇಧೆ, ಹುಬ್ಬುಗಳ ಮಧ್ಯ ಹಚ್ಚೇ ಗುರ್ತು, ಗಡ್ಡದ ಮೇಲೆ ಬದಸ್ತೂರ್ ಹಚ್ಚೇ ಕಲೆ, ಇನ್ನೊಂದು ಬಲದ ಗಲ್ಲದಮೇಲೆ, ಬಲದ ಮೊಳಕಾಲು ವಳಪಾರ್ಶ್ವದಲ್ಲಿ ಒಂದು ಕಲೆಯಿಧೆ, ವಯಸ್ಸು 42.	ಪುಟ್ಟಪ್ಪಾ, ಜಡೆ.	ಸಾಗರ್ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು 1875ನೇ ಇಸವಿ ಫೈಲ್ ನಂಬರ್—ನೇ ಕೇಸ್ ನಲ್ಲಿ 1875ನೇ ಅಕ್ಟೋಬರ್ ತಾರೀಖು 6ರಲ್ಲು ಕಳವಿನ ತಕಸೀರಿಗಾಗಿ 3. ತಿಂಗಳು ಕಠಿಣಕೈದು ಸಜಾ.	6ನೇ ಜನವರೀ 1876.			

4

68

3905	ರಂಗಾ, ವಡ್ಡರ, ಕೂಲಿ, ಜಕ್ಕನಹಳ್ಳೀ ಹೊನ್ನಾಳೀ ತಾಲ್ಲೂಕು.	ಶಾಮವರ್ಣ, ಕಂಣು ಶಾಮವರ್ಣ, ಕುತ್ತಿಗೆ ಬಲಪಾರ್ಶ್ವದ ಅಡ್ಡಯೆಲುವಿನ ಹೊರಪಾರ್ಶ್ವದ ತುದಿಯಲ್ಲಿ ವಂದು ಕಲೆ, ಕುತ್ತಿಗೆ ಯಡಪಾರ್ಶ್ವದಲ್ಲಿ ವಂದು ಸಂಣ ಮಚ್ಚೆ, ಇನ್ನೊಂದು ಕುತ್ತಿಗೆ ಯೆಡಪಾರ್ಶ್ವದ ಅಡ್ಡ ಎಲುವಿನಮೇಲೆ, ಯೆದೆ ಗುಂಡಿಗೆ ಮೇಲೆ ವಂದು ಕಲೆ, ಯೆಡದ ಅಂಡಿನ ಕೆಳಗೆ 2 ಅಂಗುಲ ವುದ್ದ ಅಡ್ಡವಾದ ಕಲೆ, ಈ ಮೇರಿಗೆ ಇಧೆ.	ತಿಮ್ಮಂಣಾ, ಜಕ್ಕನಹಳ್ಳಿ.	ಹೊನ್ನಾಳೀ ತಾಲ್ಲೂಕು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟು ಸರ್ 1875ನೇ ಇಸವಿ ಕೇಸ್ ನಂಬರು 108ನೇ ಮೊಕದ್ದಮೆಯಲ್ಲಿ ಸರ್ 1875ನೇ ಇಸವಿ ನವಂಬರ್ ತಾರೀಖು 30ರಲ್ಲು ಕಳವಿನ ತಕಸೀರಿಗೋಸ್ಕರ ವಂದುತಿಂಗಳು ಕಠಿಣಕೈದು.	30ನೇ ಡಿಸೆಂಬರ್ 1875.	ವಂದುಸಲಾ.
3935	ಕೆಂಚಾ, ಬೇಡರ್, ತೋಟಗರ. ಹೋಡಿಗೆರೆ, ಚನ್ನಗಿರಿ.	ಕಪ್ಪುವರ್ಣ, ಕಂಣುಪಿಂಗಳವರ್ಣ, ಮೂಗಿನ ಬಲಪಾರ್ಶ್ವದಲ್ಲಿ ವಂದು ಗಂಟಾದ ಕಲೆ, ಮತ್ತು ಆ ಮೂಗು ಚುಚ್ಚಿಯಿಧೆ, ಬಲದಕಂಣುರೆಪ್ಪೆಮೇಲೆ ವಂದು ಕಲೆ, ವಯಸ್ಸು 27, ಎತ್ತರ 5—4½.	ಹನುಮಾ, ಹೋಡಿಗೆರೆ.	ಚನ್ನಗಿರೀ ತಾಲ್ಲೂಕು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟು ಸರ್ 1875ನೇ ಇಸವಿ ಫೈಲ್ ನಂಬರು—ನೇ ಕೇಸ್‌ನಲ್ಲಿ, ಅದೇ ಇಸವಿ ಡಿಸೆಂಬರ ತಾರೀಖು 25ರಲ್ಲು ಕಳವಿನ ತಕಸೀರಿ ಗೋಸ್ಕರ 10 ದಿವಸ ಕಠಿಣಕೈದು, 1 ರೂಪಾಯಿ ಜುರುಮಾನೆ, ಕೊಡದೇ ಇದ್ದರೆ ತಿರಿಗಿ 3 ದಿವಸ ಬದಸ್ತೂರ್ ಕೈದು.	7ನೇ ಜನವರೀ 1876.	ಇಲ್ಲ.
3936	ಕೆಂಚಾ, ಬೇಡರ್, ಮನೇಚಾಕರಿ, ಡಿಟೋ ಡಿಟೋ	ಶಾಮವರ್ಣ, ಕಂಣು ಶಾಮವರ್ಣ, ಹಣೆಯ ಬಲಭಾಗದಲ್ಲಿ ವಂದು ಕಲೆ, ಯಡಪಾರ್ಶ್ವದಲ್ಲಿ 2, ಕುತ್ತಿಗೆ ಬಲಭಾಗದಲ್ಲಿ 2 ಮಚ್ಚೆಗಳು, ವಯಸ್ಸು 27, ಎತ್ತರ 5—4.	ದೊಡ್ಡ, ಡಿಟೋ.	ಡಿಟೋ.	ಡಿಟೋ.	ಡಿಟೋ.

T. J. McGann,
Supt. of Jail.

ಶಿವಮೊಗ್ಗ.

ಆ

ಯಾವ ಜಿಲ್ಲೆಯಿಂದ ಬಿಡುಗಡೆಯಾದ್ದು	ಜೈಲಿನ ರಿಜಿಸ್ಟರಿನ ನಂಬರು	ಹೆಸರು, ಜಾತಿ, ಸಾಧಾರಣ ಕಸಬ. ಮತ್ತು ವಾಸಸ್ಥಳ.	ಎತ್ತರ, ಮತ್ಯಾವದಾದರು ಮುಖ್ಯವಾದ ಗುರುತು ಇವುಗಳು ದೇಖೀಲ್ ಆಹರೆ.	ತಂದೇ ಹೆಸರು ಮತ್ತು ವಾಸಸ್ಥಳ.	ಯಾವ ವಿಸವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರ ಗೋಸ್ಕರ.	ಖುಲಾಸೇ ತಾರೀಖು.	ಇದಕೆ ಮುಂಚೆ ಎಷ್ಟು ದಫಾ ಜೈಯಿಲ್ ನಲ್ಲಿದ್ದು.	ಷರಾ.	ಜೈಲಿನ ಸುಪರಿಂಟೆಂಡಂಟರ ಸಹಿ
1	2	3.	4	5	6	7	8	9	10
ಚಿತ್ರದುರ್ಗ.	125	ಬುಳ್ಯಾ, ಕುರುಬರ ಜಾತಿ, ದಾವಣಗೆರೆ ತಾಲ್ಲೂಕು ಬೂದಿಹಾಳು, ಜಾತಿ ಕಸಬು.	ಯೆಣೆಕೆಂಪು, ವುದ್ದ ಮುಖ, ಯೆದೇ ಗುಂಡಿಗೇಲಿ 8 ಕಡೆ ಬಳೇಲಿ ಸುಟ್ಟ ಕಲೆ ಇಧೆ, ಬಲವೊಲೇ ಕಣ್ಣಿನ ಕೆಳಗೆ ಹಣದಗಲ ಸುಟ್ಟ ಕಲೆ ಇಧೆ, ಯರಡು ಕಂಣಿನ ಕಳಗೆ ಕಪ್ಪಗೆ ರೇಖೆ ಇಧೆ, ಅಡಿ 5, ಅಂಗುಲ 7.	ಈಟಂಣಾ, ದಾವಣಗೆರೆ ತಾಲ್ಲೂಕು ಬೂದಿಹಾಳು.	ಜಳ್ಳಕೆರೆ ಸಬ್ ಡಿವೀಜನ ಅ॥ ಕ॥ ಕೋರ್ಟಿನಲ್ಲಿ ಇ॥ ಪಿನಲ್ ಕೋ॥ 457ನೇಸೆಕ್ಷನ ತಪ್ಪಿತಕ್ಕೆ 1875ನೇ ಇಸವಿಆಗಸ್ಟ್ 4ರ ಲಾಗಾಯತು 4 ತಿಂಗಳ ಸಜಾ, 10 ರೂಪಾಯಿ ಜುರುಮಾನೆ, ಕೊಡದೇ ಇದ್ದರೆ, ಜಾಸ್ತೀ 15 ದಿವಸ ಸಜಾ, 1875ನೇ ಇಸವಿ ಕ್ರಿ॥ ನಂಬರ 50.	4-12-75.			
	180	ಬಸವ, ಕುರುಬಂಜಾತಿ, ದಾವಣಗೆರೆ ತಾಲ್ಲೂಕು ಹಂಪನೂರು, ಜಾತಿ ಕಸಬು.	ಕೆಂಪುವರ್ಣ, ವೃದ್ದ ಮುಖ, ಯೆದೇ ಮೇಲೆ ದುಗ್ಗಾಣಿ ಅಗಲಕ್ಕೂ ಬಲಗೈ ಮುಂಗೈಮೇಲೆ ಅಡ್ಡವಾಗಿ ಸಹಾ ಸುಟ್ಟ ಕಲೆ ಇಧೆ, ಬಲ ಭುಜದ ಮೇಲೆ ಅವರೇಕಾಳದಷ್ಟು ನರಹುಲಿ ಗಂಟು ಇಧೆ, ಅಡಿ 5, ಅಂಗುಲ 6.	ಸಂಗಪ್ಪಾ, ದಾವಣಗೆರೆ ತಾಲ್ಲೂಕು ಹಂಪನೂರು.	ಡಿಟೋ ಕೋರ್ಟಿನಲ್ಲಿ ಇ॥ ಪಿನಲ್ ಕೋ॥ 456ನೇ ಸೆಕ್ಷನ ತಪ್ಪಿತಕ್ಕೆ 6ನೇ ನವಂಬರ ಲಾಗಾಯತು 1 ತಿಂಗಳು ಸಜಾ, 10 ರೂಪಾಯಿ ಜುರ್ಮಾನೆ, ಕೊಡದೇ ಇದ್ದರೆ ಜಾಸ್ತೀ 7 ದಿವಸ ಸಜಾ 1875ನೇ ಇಸವಿ ಕ್ರಿ॥ ನಂಬರ 85.	7-12-75.		ಈ ಕೈದಿಗೆ ಮೊಕರರಾಗಿ ಇದ್ದ ಜರ ಸಜಾ ವಾಯಿದೆ ತ॥ 6ಕ್ಕೆ ಪೂರೈಸಿ, ತಾರೀಖು 7ರಲ್ಲು ಈ ಕೈದಿ ಅಂಣ ಬಸ್ಯೆಯ ಜುರುಮಾನೆ ಮೊಬಲಗು 10 ರೂಪಾಯಿ ಹಾಜರ ಮಾಡಿದ್ದರಿಂದ ಜಾಸ್ತೀ ಸಜಾ ವಜಾ ಮಾಡಿ ತಾರೀಖು 7 ರಲ್ಲಿ ಖುಲಾಸೇ ಆಗಿ ಇಧೆ.	

183	ಕಾವೇರಿ, ತಂದೇ ವೆಂಕಟಾಚಲಂ, ಕಸಬಾ ಬೆಂಗಳೂರ್ ದಂಡು, ಕೊಂಗರು, ಬಿಕ್ಷಾ, ಅಡಿ 4, ಅಂಗುಲಾ 6.	ಕೆಂಪುವರ್ಣ, ಗುಂಡಮುಖಾ, ಹಣೇಮೇಲೆ ತೊಗರೀಬ್ಯಾಳೆ ಅಗಲವೂ, ಗಡ್ಡದ ಮೇಲೂ ಯಡದ ಕೆನ್ನೆ ಮೇಲೂ ಹಚ್ಚೇಗ್ಳೂ ಇಧೆ, ಮತ್ತು ಮುಖದಮೇಲೆ ಸ್ವಲ್ಪ ದೇವಿಕಲೆ ಇಧೆ.	ವೆಂಕಟಾಚಲಂ, ಬೆಂಗಳೂರು ದಂಡು.	ಚಿತ್ರದುರ್ಗ ತಾಲ್ಲೂಕು ಮ್ಯಾಜಿಸ್ಟ್ರೇಟ್ ಕೋರ್ಟಿನ 1875ನೇ ಇಸವಿ ಕ್ರಿ॥ 114ನೇ ಮೊಕದ್ದಮೆಯಲ್ಲಿ ಇ॥ ಪೆನಲ್ ಕೊ॥ 379ನೇ ಸೆಕ್ಷನ್ ತಕಸೀರಿಗೆ 12ನೇ ನವೆಂಬರ್ ಲಾಗಾಯತು 1 ತಿಂಗಳು ಕಠಿಣ ಸಜಾ.	12-12-75.			
184	ಕೃಷ್ಣ, ಬೆಂಗಳೂರ್ ದಂಡು, ಕೊಂಗರು, ಬಿಕ್ಷಾ, 5—6.	ಕೆಂಪುವರ್ಣ, ಗುಂಡುಮುಖಾ, ಬಲಭುಜದ ಮೇಲೆ ಮೂರುಕಾಸಿನ ಅಗಲ 1, ಮಂದುಕಾಸಿನ ಅಗಲ 1, ಸಹಾ ಹುಣ್ಣಿನ ಕಲೆ ಇಧೆ, ಯರಡು ಹುಬ್ಬಿನನಡುವೆ ಒಂದು ತೊಗರೀಬ್ಯಾಳೆ ಅಗಲಾ ಒಂದು ಹುಣ್ಣಿನಕಲೆ ಇಧೆ, ಯದೇಮೇಲೆ ಬಿಳೇಚಿಬ್ಬು ಇಧೆ. ಯಡಮೊಳ ಕೈ ಗಂಟು ಕಟ್ಟಿ ಇದೆ, ಮುಖದ ಮೇಲೆ ದೇವೀಕಲೆ ಇದೆ, ಯಡದ ಕಾಲು ಕಿರಬೆರಳು ತಿರ್ಚಿ ಇದೆ.	ವೆಂಕಟಾಚಲಂ, ಬೆಂಗಳೂರ್ ದಂಡು.	ಡಿಟೋ.	12-12-75.			
97	ತಿಮ್ಮಗ, ಕಣಕುಪ್ಪಾ ತಾಲ್ಲೂಕು ಚಿಕ್ಕಮ್ಮನ ಹಟ್ಟಿ, ವಡ್ಡರ್, ಕೂಲಿ.	ಕರೇವರ್ಣ, ವೃದ್ಧಮುಖ, 5 ಅಡಿ, 3 ಅಂಗುಲ ಅಳತೆ, ಯೆಡಗಡೆ ನಡುವಿನ ಮೇಲೆ ಅರ್ಧ ಆಣೆ ಅಗಲ ಹುಣ್ಣಿನಕಲೇ ಯಿಧೆ, ಕಾಸಿನ ಅಗಲ ಬೆನ್ನು ಮೇಲೆ ಕರೀಮಚ್ಚೇ ಯಿಧೆ.	ಹನುಮ್ಮೆಯ್ಯ, ಕಣಕುಪ್ಪಾ ತಾಲ್ಲೂಕು ಚಿಕ್ಕಮ್ಮನ ಹಟ್ಟಿ.	ಚಳ್ಳಕೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು 1875ನೇ ಇಸವಿ ಕ್ರಿಮಿನಲ್ 41ನೇ ನಂಬರ್ ಮೊಕದ್ದಮಾದಲ್ಲಿ ಇಂಡಿಯನ್ ಪೇನಲ್‌ಕೋಡ್ 457ನೇ ಸೆಕ್ಷನ ತಕಸೀರಿಗೆನ 1875ನೇ ಇಸವಿ 18ನೇ ಜೂನ್ ಲಾಗಾಯತು 6 ತಿಂಗಳು ಸಜಾ.	18ನೇ ಡಿಸೆಂಬರ್ 1875ನೇ ಇಸವಿ.			

Mysore Government Press, Bangalore—1876.

ಯಾವ ಜಿಲ್ಲೆಯಿಂದ ಬಂದ ವಾಸ ಮೊದಲು ಪ್ರತಿ	ಜೈಯಿಲ್ ರಿಜಿಸ್ಟರ ನಂಬರು	ಹೆಸರು, ಜಾತಿ, ಸಾಧಾರಣ ಕಸಬು, ಮತ್ತು ವಾಸಸ್ಥಳ.	ಎತ್ತರ ಮತ್ತ್ಯಾವದಾದರು ಮುಖ್ಯ ಪಾದೆ ಗುರುತು ಇವುಗಳು ದೇಖೀಲ್ ಚಹರೆ.	ತಂದೇಹೆಸರು ಮತ್ತು ವಾಸಸ್ಥಳ.	ಯಾವ ವಿಧವಾದ ಸಜಾ, ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ.	ಖುಲಾಸೇ ತಾರೀಖು.	ಇದಕ್ಕೆ ಮುಂಚೆ ಎಷ್ಟುದಫಾ ಜೈಯಿಲ್ ನಲ್ಲಿದ್ದದ್ದು.	ಷರಾ.	ಜ್ಯೆಯಿಲ್ ಸೂಪರಿಂಟೆಂಡೆಂಟರ ದಸ್ತಕತ್ತು.
1	2	3	4	5	6	7	8	9	10
ಚಿತ್ರದುರ್ಗ.	98	ಚಿಕಟೇರಿ ಹನುಮ, ಹರಪನಹಳ್ಳೀ ತಾಲ್ಲೂಕು ಚಿಕಟೇರಿ, ವಡ್ಡರ, ಕೂಲಿ.	ಕರೇವರ್ಣ, ವೃದ್ಧಮುಖ, ಯಡಕುಂಡೀ ಮೇಲೆ ದುಗ್ಗಾಣಿ ಅಗಲ ಹುಣ್ಣಿನ ಕಲೇಯಿಧೆ, ವೃದ್ದಾ ಅಡೀ 5, ಅಂಗುಲ 2, ಬಲಮೂಗು ಸೊಳ್ಳೀ ಹರದು ಯಿಧೆ.	ಹನುಮಪ್ಪಾ, ಚಿಕಟೇರಿ ಹರಪನಹಳ್ಳೀ ತಾಲ್ಲೂಕು, ಬಳ್ಳಾರಿಜಿಲ್ಲಾ.	ಚೆಳ್ಳಕೆರೆ ಸಬ್ ಡಿವೀಜರ್ನ ಅಸಿಸ್ಟೆಂಟ ಕಮ್ಮಿಷನರ್ ಕೋರ್ಟು 1875ನೇ ಇಸವಿ ಕ್ರಿಮಿನಲ್ 41ನೇ ನಂಬರ್ ಮೊಕದ್ದಮೆದಲ್ಲಿ ಇಂಡಿಯನ್ ಪೆನಲ್ ಕೋಡ್ 457ನೇ ಸೆಕ್ಷನ್ ತಕ್ಸೀರಿಗೆ ಸನ್ 1875ನೇ ಇಸವಿ 18ನೇ ಜೂನ್ ಲಾಗಾಯತು 6 ತಿಂಗಳು ಸಜಾ, ಮತ್ತು 10 ರೂಪಾಯಿ ಜುರ್ಮಾನೆ ಕೊಡಬೇಕು, ತಪ್ಪಿದರೆ ಜಾಸ್ತೀ ಬದಸ್ತೂರು 15 ದಿವಸ ಸಜಾ ಅನುಭವಿಸಬೇಕು.	20ನೇ ಡಿಂಸೆಂಬರ 1875ನೇ ಇಸವಿ.		ಯಿವನಿಗೆ ಮೊಕರರ ಆಗಿದ್ದ ಜುರ್ಮಾನೆ 10 ರೂಪಾಯಿ ಪೈಕೀ 9-0-2 ಪೈ ವಸೂಲು ಬಂದಕಾರಣ ಜಾಸ್ತೀ ಸಜಾ ಪೈಕೀ ದಾಮೋಷಾಯಿ ವ್ಯಾರೆ 13 ದಿವಸಗಳು ಪಜಾ ಆಗಿಯಿಧೆ.	S. VENKAT VARDAIENGAR, *Officer in charge of Jail.*
	195	ದಂಡ, ಚಿತ್ರದುರ್ಗ ತಾಲ್ಲೂಕು ಹಳವುಗೋಡು, ಬ್ಯಾಡರ, ಜಿರಾಯಿತು.	ಕರೇವರ್ಣ, ವೃದ್ಧಮುಖ, 5ಅಡಿ, 4ಅಂಗುಲವೃದ್ದ, ಯಿದೇಮೇಲೂ ಕುತ್ತಿಗೆಮೇಲೂ ಸಹಾ ಬಿಳೀ ಚಿಬ್ಬುಗಳು ಯಿಧೆ, ಹಿಂಭಾಗದ ಬಲಕಾಲಿನಲ್ಲಿ ಸುಟ್ಟ ಬರೇಕಳೆ 2 ಅಂಗುಲ ವೃದ್ದಕ್ಕಿಯಿಧೆ, ಯರಡು ಕಿವಿಗಳು ಮೊಂದೊಂದಾಗಿ ಕೆಳಗೆ ಚುಚ್ಚಿ ಯಿಧೆ.	ಮಂಬಳದ ಕರಿಯ, ಚಿತ್ರದುರ್ಗ ತಾಲ್ಲೂಕು ಹಳವುಗೋಡು.	ಚಿತ್ರದುರ್ಗ ತಾಲ್ಲೂಕು ಥರಡ್ ಕ್ಲಾಸ ಮ್ಯಾಜಿಸ್ಟ್ರೇಟು ಕೋರ್ಟು 1875ನೇ ಇಸವಿ ಕ್ರಿಮಿನಲ 128ನೇ ನಂಬರ ಮೊಕದ್ದಮಾದಲ್ಲಿ ಇಂಡಿಯನ್ ಪೆನಲ್‌ಕೋಡು 379ನೇ ಸೆಕ್ಷನ್ ತಕಸೀರಿಗೆ 1875ನೇ ಇಸವಿ ಡಿಸೆಂಬರ್ 21 ನೇ ತಾರೀಖು ಲಾಗಾಯತು 5 ದಿವಸ ಕಠಿಣಸಜಾ.	25ನೇ ಡಿಸೆಂಬರ 1875ನೇ ಇಸವಿ.		ಯಿವನಿಗೆ ಸಜಾ ಪೂರೈಸುವದು 26ನೇ ತಾರೀಖು, ಆದಿವಸ ಭಾನ್ನುವಾರ ವಾದ್ದರಿಂದ 25ನೇ ತಾರೀಖು ಸಾಯಂಕಾಲ 6 ಘಂಟೆಗೆ ಖುಲಾಸೇಮಾಡಲಾಯಿತು.	

8 ೭೨

73

ಮೈಸೂರ ಗೆಜೆಟ್.

ನಂ. 6 ಸರ್ಕಾರದಿಂದ ಛಾಪಿಸಿ ಆದ್ದು. ಸೇ 1876.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ॥ 12, ಸೇ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ ನಾಮೆಗಳು.	19—26
2ನೇ ಭಾಗ—ಜುಡಿಷಲ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕಸ್ ಆಫೀಸರಗಳು, ಮಿಲಿಟರಿ ಅಸಿಸ್ಟೆಂಟರು, ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತಿ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು. ..	49—58
3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 338. ತಾರೀಖು 12ನೇ ಜನವರೀ 1876.

ಈ ಕೆಳಗೆ ಬರುವ ತಿದ್ದುಪಡಿಯಾದ ಬೈಲಾನಿಬಂಧನೆಯು ಆಫಿಷಿಯೇಟಿಂಗ ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುತ್ತೆ.

2—45 ಕಂಟೋನ್ಮೆಂಟ್ ಸರಹದ್ದಿನೊಳಗೆ 10 ಮಂದಿಗಿಂತಲೂ ಹೆಚ್ಚಾಗಿ ನೌಕರೀ ಇಟ್ಟುಕೊಂಡಿರುವ, ಕಟ್ಟಗಳನ್ನು ಕಟ್ಟುವದರಲ್ಲಿ ಪ್ರವರ್ತಿಸಿರುವ ಕಂಟ್ರಾಕ್ಟದಾರ್ರು ವ ಇತರರು ಅಥವಾ ಯಾವದಾದರೂ ಸ್ಥಳದಸ್ವಂತಗಾರ್ರು ಯಾ ಭೋಗ್ಯದಾರ್ರು ತಾವುಗಳು ಯಿಟ್ಟುಕೊಂಡಿರುವ ಕಾರೇಗಾರ್ರಾದ ವ ಕೂಲಿಯವರಾದ ಗಂಡಸರು ವ ಹೆಂಗಸರು ಯಿವರುಗಳ

ಉಪಯೋಗದ ಬಗ್ಯೆ ತಕ್ಕ ಯರಡು ಪಾಯಖಾನೆಗಳನ್ನು ಕಟ್ಟಿಸಿ ದುರಸ್ತು ಇಡತಕ್ಕದ್ದಲ್ಲದೆ ಅಂತಾ ಪಾಯಖಾನೆಗಳನ್ನು ದಿನವಹಿ ಬೆಳಿಗ್ಯೆ 7 ಘಂಟೆಗೆ ಮುಂಚಿತವಾಗಿ ಪಾಕಮಾಡಿಸಿ ಇಡತಕ್ಕದ್ದು. ಈ ಬೈಲಾನಿಬಂಧನೆಗೆ ಏನಾದರು ಉಲ್ಲಂಘನೆ ನಡದಲ್ಲಿ ಅದು ಒಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಅಂತಾ ತಪ್ಪಿತ ಮಾಡಿದ ಆಸಾಮಿಯು 20 ರೂಪಾಯಿಗೆ ಜಾಸ್ತೀಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗುವದಲ್ಲದೆ, ಅಂತಾ ತಪ್ಪಿತ ಪುನಃ ನಡಿಸಲ್ಪಡುವ ಪ್ರತಿ ದಿವಸಕ್ಕೂ 10 ರೂಪಾಯಿಗಳ ಜಾಸ್ತೀ ಜುರ್ಮಾನೆಗಳು ಸಹಾ ವಿಧಿಸಲ್ಪಡತಕ್ಕದ್ದು.

ನಂ. 357. ತಾರೀಖು 27ನೇ ಜನವರೀ 1876.

ಸ್ತ 1870ನೇ ಇಸವಿ 10ನೇ ನಂಬರ ಲ್ಯಾಂಡ್ ಅಕ್ವಿಜೇಷನ್ ಆಕ್ಟ 4ನೇ ಸೆಕ್ಷನ್ನಿನ ನಿಬಂಧನೆಗಳನುಸರಿಸಿ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ ದೊಡ್ಡೇರಿ ತಾಲ್ಲೂಕು ಬಡವಾನ ಹಳ್ಳೀಯಲ್ಲಿರುವ ಈ ಕೆಳಗೆ ವಿವರಿಸಲ್ಪಟ್ಟ ಚಕ್ಕು ಬಂದಿಗೆ ಶೇರಿದ ಜಮೀನು ಸರಕಾರ ಕೆಲಸಕ್ಕಾಗಿ ಅಂದರೆ, ಅಮೃತಮಹಲ್ ಯಿಲಾಖಾ ಪ್ರಯೋಜನಕ್ಕಾಗಿಯೂ, ಮತ್ತು ಸಾಮಾನ್ಯವಾಗಿ ಜನಗಳ ಪ್ರಯೋಜನಕೋಸ್ಕರವೂ, ಹೊಟ್ಟಿಗನೆಂಬುವನಿಂದ ಕಟ್ಟಲ್ಪಟ್ಟ ಕೆರೆನೀರನ್ನು ಜಮಾಯಿಸುವದಕ್ಕೋಸ್ಕರ ಬೇಕಾಗಿರುತ್ತೆ.

ತಾಲ್ಲೂಕು ದೊಡ್ಡೇರಿ, ಹೋಬಳಿ ಪರಶುರಾಮಪುರ, ಗ್ರಾಮ ಬಡವಾನಹಳ್ಳಿ, ಪಟ್ಟಾದಾರನ ಹೆಸರು ಮಂಗೇರಹಳ್ಳೀ ತಿಮ್ಮನಮಗ ತಿಮ್ಮ, ಸರ್ವೇ ಬೀಜವರಿ ಯ. 5 ಗುಂ. 38, ಜೇರೀಜು ರೂ. 1 ಆ. 8, ಚಕ್ಕುಬಂದಿ ಪೂರ್ವಕ್ಕೆ ಚಿಳಿಗೆರೆ ಸರಹದ್ದಿನಲ್ಲೆ, ಪಶ್ಚಿಮಕ್ಕೆ ಕಾಪರಬಲ್ಲಿ ಅಮೃತ ಮಹಲ್ ಕಾವಲ್, ಉತ್ತರಕ್ಕೆ ಡಿಟೋ ಕಾವಲ್, ದಕ್ಷಿಣಕ್ಕೆ ಡಿಟೋ ಬಡವಾನಹಳ್ಳೀ ಅಮೃತ ಮಹಲ್ ಕಾವಲ್.

ನಂ. 361. ತಾರೀಖು 8ನೇ ಫೆಬ್ರುವರೀ 1876.

ಅನಂತಪುರದ ಮುನ್ಸಿಫ್ ಮೆ|| ಲೋರೀಯವರಿಗೆ, 1875ನೇ ಇಸವಿ ಡಿಸೆಂಬರ 13ನೇ ಮರ್ಹು೦ ಲಾಗಾಯತು 10 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 362. ತಾರೀಖು 8ನೇ ಫೆಬ್ರುವರೀ 1876.

ಸ್ತ 1874ನೇ ಇಸವಿ ಜುಲೈ 18ನೇ ಮರ್ಹು೦ ಮೈಸೂರ ಗೆಜೆಟ್ 142—143ನೇ ಪುಟಗಳಲ್ಲಿ ಪ್ರಾಯಿಷ್ ಮಾಡಲ್ಪಟ್ಟ (1874ನೇ ಇಸವಿ ಜುಲೈ 10ನೇ ಮರ್ಹು೦) ಇದರಡಿ ಬರುವ ಇಸ್ತಿಹಾರ ತಿಳುವಳಿಕೆ ಬಗ್ಯೆ ಪುನಃ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ, ಮತ್ತು ಅದಕ್ಕೆ ಹಾಲಿಸೇರಿಸಿರುವ ಜಾಸ್ತೀ ಅಂಶಗಳಿಗೆ ಡಿಸ್ಟ್ರಿಕ್ಟ ಡಿಪ್ಯುಟಿ ಕಮ್ಮಿಷನರುಗಳು, ವ ಟ್ರೆಜರೀ ಆಫೀಸರ್‌ಗಳು, ನಿಗಾ ಕೊಡತಕ್ಕದ್ದೆಂದು ಕೋರೋಣಾಗಿದೆ.

ಇಂಡ್ಯ ಗವರ್ನಮೆಂಟ್ ಫಿನಾನ್ಷಿಯಲ್ ಇಲಾಖೆಯವರ ಅಪ್ಪಣೆ ಅನುಸರಿಸಿ, ಡಿಸ್ಟ್ರಿಕ್ಟುಗಳ ಡಿಪ್ಟಿ ಕಮ್ಮಿಷನರ್‌ಗಳು ವ ಟ್ರೆಜರೀ ಆಫೀಸರ್‌ಗಳು ತಮ್ಮ ಅಧಿಕಾರಕ್ಕೆ ವೊಳಪಟ್ಟ ಅಥವಾ ತಮ್ಮ ಸ್ವಂತ ಚಾರ್ಜಿನಲ್ಲಿರುವ ಟ್ರೆಜರೀಗಳ ವಿಷಯದಲ್ಲಿ ನೆರವೇರಿಸಬೇಕಾದ ತಮ್ಮ ತಮ್ಮ ಕೆಲಸ ಮತ್ತು ಜವಾಬ್‌ದಾರೀ ಈ ಅಂಶಕ್ಕೆ ಸದರೀಯವರು ನಿಗಾ ಕೊಡತಕ್ಕದ್ದೆಂತ ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೇ ಕೊಡಿಸುತ್ತಾರೆ.

ಇಂಡ್ಯ ಗವರ್ನಮೆಂಟಿನವರಿಂದ 1869ನೇ ಇಸವಿ ಸೆಪ್ಟಂಬರ 30ನೇ ಮರ್ಹು೦ನಲ್ಲಿ ಕೊಟ್ಟ ಹುಕ್ಕುಂ ಡಿಪ್ಟಿ ಅಕೌಂಟೆಂಟ್ ಜನರಲ್‌ಯವರ 1869ನೇ ಇಸವಿ ಅಕ್ಟೋಬರ 19ನೇ ಮರ್ಹು೦ 715ನೇ ನಂಬರ ಸರ್ಕ್ಯುಲರ ಮೂಲಕ ಪುನಃ ಪ್ರಸಿದ್ಧಪಡಿಸಲ್ಪಟ್ಟು ವಿಧಿಸುವದೇನಂದರೆ.

1ನೇದು. ಟ್ರೆಜರೀ ಚಾರ್ಜಿಗೇನೆ ಪ್ರತ್ಯೇಕ ತಾಬೇದಾರೀ ಆಫೀಸರನ್ನ ಮೊಕರರ ಮಾಡೋಣದರಿಂದ ಡಿಸ್ಟ್ರಿಕ್ಟ ಆಫೀಸರಾದ ಡಿಪ್ಯುಟಿ ಕಮ್ಮಿಷನರ ಯವರು ತಮ್ಮ ಜವಾಬ್‌ದಾರಿಯನ್ನ ಯಾವ ವಿಧದಲ್ಲಿಯೂ ತಪ್ಪಿಸಿಕೊಂಡಿರುವದಿಲ್ಲ; "ಈ ಜವಾಬ್‌ದಾರಿಯೂ ಕ್ಯಾಷ್ ಬ್ಯಾಲೆನ್ಸ್‌ಯಾನೇ ಸಿಲ್ಕು ಬಾಕೀ ಮೊಬಲಗ್, ಸ್ಟಾಂಪುಗಳು ಇವುಗಳ ಬಂದೋಬಸ್ತಿಗೂ ಮತ್ತು ತಾಬೇದಾರ್ರ ಅಕ್ರಮವಾದ ವಾಡಿಕೆಯನ್ನು ಕೂಡ್ಲೇ ಕಂಡು ಹಿಡಿಯುವದು ಇವುಗಳಿಗೂ ವ್ಯಾಪಿಸುವದು ಮಾತ್ರವಲ್ಲದೆ ಲೆಕ್ಕಗಳುಕ

ರಾರ್ವಾಕಾ ಇರುವದಕ್ಕೂ ಅವುಗಳು ಕ್ರಮವಾಗಿ ಕಳುಹಿಸಲ್ಪಡುವದಕ್ಕೂ ಅಕೌಂಟೆ ಇಲಾಖೆಯಿಂದ ಸಾದರಾದ ಹುಕ್ಕುಂಗಳಿಗೆ ಟ್ರೆಜರೀ ಆಫೀಸರಗಳು ಖಂಡಿತವಾಗಿ ವಿಧೇಯರಾಗಿ ನಡೆಯೋಣ ಇವುಗಳಿಗೂ ಸಹಾ ವ್ಯಾಪಿಸುತ್ತದೆ."

"ಡಿಸ್ಟ್ರಿಕ್ಟ್ ಯಾ ಸೂಪರಿಂಟೆಂಡಿಂಗ್ ಆಫೀಸರಗಳು ಈವಿಧವುಳ್ಳ ಅಥವಾ ಇತರ ವಿಧವಾದ ಅಕ್ರಮವು ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರಿಂದ ತಮ್ಮ ತಿಳುವಳಿಕೆಗೆ ತರಲ್ಪಟ್ಟಾಗ, ಅಂತಾ ಸಂಗತಿಯನ್ನು ಖುದ್ದು ವಿಚಾರಣೆ ಮಾಡಿ ಆ ವಿಷಯದಲ್ಲಿ ತಮಗೆ ತಿಳಿಯಬಂದ ಅಂಶವನ್ನು ರಿಪೋರ್ಟು ಮಾಡೋಣವೇ ತೃಪ್ತಿಕರವಾಗಿರುವದೆಂದು ಜ್ಞಾಪಕದಲ್ಲಿಡಬೇಕು, ಇಷ್ಟೇ ಹೊರತು ಒಬ್ಬ ತಾಬೇದಾರನು ತಿಳಿಸುವವಿವರವನ್ನು ಮಾತ್ರವೇ ಕಳುಹಿಸುವದು ಸಾಕಾಗಿರುವದಿಲ್ಲವು. ಈ ಪ್ರಕಾರ ತಯಾರಾದ ರಿಪೋರ್ಟುಗಳು ಅನೇಕಾವರ್ತಿ ಸಂಶಯಕ್ಕೆ ಆಸ್ಪದವಾಗಿ ಇನ್ನೂ ಜಾಸ್ತೀಯಾದ ಅಕ್ರಮಗಳನ್ನುಂಟುಮಾಡುತ್ತವೆ."

2ನೇ—ಮಾಹೆಯಾನಾ ಶಿಲ್ಕು ಬಾಕೀ ಹಣವನ್ನು ದೃಢಪಡಿಸಿ ಸರ್ಟಿಫೈ ಮಾಡತಕ್ಕದ್ದೂ ಮತ್ತು ಮಾಹೇವಾರೀ ನಗದೀಲೆಕ್ಕಗಳಿಗೆ ರುಜು ಮಾಡತಕ್ಕದ್ದೂ ಈ ಕೆಲಸವನ್ನ ಡಿಸ್ಟ್ರಿಕ್ಟ್ ಆಫೀಸರರು ಖುದ್ದಾಗಿ ನೋಡಿ ನೆರವೇರಿಸತಕ್ಕದ್ದು ಈ ಕೆಲಸವನ್ನ ನೆರವೇರಿಸಲಿಕ್ಕೆ ದೇಹದಾರಾಢ್ಯ ವಿಲ್ಲವೆಂಬಪಾಗಿ ಪೂರಾ ಸ್ಥಿರಪಡಿಸಲ್ಪಟ್ಟ ಸಂದರ್ಭಗಳೊಳಗಲ್ಲದೆ ಮತ್ಯಾವ ಸಂದರ್ಭಗಳೊಳಗೂ ಅಂತಾ ಕೆಲಸವನ್ನು ಯಾವ ತಾಬೇದಾರೀ ಆಫೀಸರರಿಗಾಗಲಿ ನೇಮಿಸತಕ್ಕದ್ದಲ್ಲ. ಸನ 1870ನೇ ಇಸವಿ ಜುಲೈ 7ನೇ ಮುಕ್ಕಾಂ 790ನೇ ನಂಬರು ಡಿಪ್ಯುಟಿ ಅಕೌಂಟೆಂಟ್ ಜನರಲ್‌ಯವರ ಸರ್ಕ್ಯುಲರನಲ್ಲಿ ತಿಳಿಸಲ್ಪಟ್ಟ ಅದೇಇಸವಿ ಜೂನ್ 22ನೇ ಮುಕ್ಕಾಂನೊಳಗೆ ಗವರ್ನಮೆಂಟನವರು ಈಚೆಗೆ ಕೊಟ್ಟ ಹುಕುಮಿನಲ್ಲಿ ಅಥವಾಪಕ್ಷ ಯರಡುತಿಂಗಳಿಗೊಂದಾವರ್ತಿಯಾಗಲಿ ಡಿಪ್ಯುಟಿ ಕಮ್ಮಿಷನರ್‌ಯವರು ಟ್ರೆಜರೀಯ ಶಿಲ್ಕು ಮೊಬಲಗ್ ಝುಡ್ತಿಮಾಡಿ ದೃಢಪಡಿಸತಕ್ಕದ್ದೆಂತಲೂ ಪ್ರತಿಂದು ತಿಂಗಳ ಮೊದಲನೇ ಕೆಲಸದ ದಿನದಲ್ಲಿ ಡಿಪ್ಯುಟಿ ಕಮ್ಮಿಷನರ್‌ಯವರು ಗೈರ್‌ಹಾಜರಾಗಿದ್ದರೆ ಟ್ರೆಜರೀ ಆಫೀಸರ್ ವಿನಾ ಮತ್ಯಾವ ಶೀನಿಯರ್ ಅಸಿಸ್ಟೆಂಟ್ ಕಮ್ಮಿಷನರಿಂದಾಗಲೀ ಸದರೀ ಮೇರೆ ಶಿಲ್ಕು ದೃಢಪಡಿಸಲ್ಪಟ್ಟು ಲೆಖ್ಖಗಳು ರುಜು ಮಾಡಲ್ಪಡತಕ್ಕದ್ದೆಂದು ಇಂಡ್ಯಾ ಗವರ್ನಮೆಂಟನವರು ಅಪ್ಪಣೆ ಕೊಡಿಸಿರುತ್ತಾರೆ. ಇಂಡ್ಯಾ ಗವರ್ನಮೆಂಟನವರು ಮತ್ತು ಅಪೇಕ್ಷಿಸುವದೇನಂದರೆ, "ಇಲಾಖಾ ಲೆಖ್ಖಗಳು ನಗದೀ ಲೆಖ್ಖಗಳು ಇವುಗಳಿಗೂ ಟ್ರೆಜರೀಯಲ್ಲಿ ಇಡಲ್ಪಟ್ಟ ರಿಜಿಸ್ಟರಿಗಳಿಗೂ ತಾಳೇಬೀಳುವ ಅಂಶದೊಳಗೆ ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸರಗಳು ಖುದ್ದು ಜವಾಬ್‌ದಾರರಾಗಿರುತ್ತಾರೆಂದು ಅವರಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು. (ಸದರೀ ಯೆರಡು ಲೆಕ್ಕಗಳು ಡಿಪ್ಯುಟಿ ಕಮ್ಮಿಷನರವರ ದಸ್ತಖತ್ತಾಗಿ ಹೋಗುತ್ತವೆ,) ಸ್ಟಾಂಪುಗಳು ಇಷ್ಟೆಂದು ದೃಢಪಡಿಸುವಾಗ್ಯೆ ಬಿಲ್ಲುಗಳ ವ ಮಣಿ ಆರ್ಡರ್‌ಗಳ ಬಾಬತು ಉಳಿದ ನಮೂನೇಗಳು ಯಿಷ್ಟೆಂದು ದೃಢಪಡಿಸುವಣವು ಡಿಸ್ಟ್ರಿಕ್ಟ್ ಆಫೀಸರರ ಕೆಲಸಗಳ ಪೈಕೀ ಒಂದಾಗಿ ಸಹ ಮಾಡತಕ್ಕದ್ದು, ತಾಲ್ಲೂಕು ಶಿಲ್ಕುಗಳು ವರುಷಕ್ಕೊಂದಾವರ್ತಿ ಒಬ್ಬ ಗೆಜೆಟೆಡ್ ಆಫೀಸರರಿಂದಲಾಗಲಿ ಸಾಧ್ಯವಾದರೆ ಒಬ್ಬ ಕವಿನೆಂಟೆಡ್ ಆಫೀಸರಿಂದಲಾಗಲಿ ದೃಢಪಡಿಸಲ್ಪಡಬೇಕು, ಸಬ್ ಡಿವೀಜನ್ ಟ್ರೆಜರೀಗಳು ಗೆಜೆಟೆಡ್ ಆಫೀಸರ್‌ಗಳ ಚಾರ್ಜಿನ್ನಲ್ಲಿರುವ ಪಕ್ಷದಲ್ಲಿ ಅಲ್ಲಿನ ಶಿಲ್ಕುಗಳನ್ನು ಡಿಪ್ಟಿ ಕಮ್ಮಿಷನ್ನರ್‌ಯವರು ತಮ್ಮ ಛಳಿಕಾಲದ ಸರ್ಕ್ಯುಟ್ ಕಾಲದಲ್ಲಿ ದೃಢಪಡಿಸತಕ್ಕದ್ದು."

3. ಇಂಡ್ಯಾ ಗವರ್ನಮೆಂಟನವರ ಸದರೀ ಹುಕುಂಗಳನ್ನ ಮತ್ತು ತಮ್ಮ ಖುದ್ದು ಮತ್ತು ಹಣದ ಜವಾಬ್‌ದಾರೀ ಇವುಗಳನ್ನು ಕುರಿತು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮ್ಮಿಷನರ್‌ಗಳಿಗೆ ಜ್ಞಾಪಕ ಮಾಡುವದರಲ್ಲಿ ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೆ ಕೊಡಿಸುವದೇನಂದರೆ, ಟ್ರೆಜರೀ ಚಾರ್ಜಿಗೆ ಮೊಕರರಾದ ಅಸಿಸ್ಟೆಂಟ್ ಕಮ್ಮಿಷನರಿಂದ ಟ್ರೆಜರೀಗೆ ಸಂಬಂಧವಾದ ಕೆಲಸವ್ಯಾವತ್ತೂ ನೆರವೇರಿಸಲ್ಪಡುತ್ತವೆಯಾಗಿ ಸದರೀ ಆಫೀಸರರು ನಡಿಸುವ ಕೆಲಸಗಳಲ್ಲಿ ಖುದ್ದು ತನಿಖೀ ಯಿಂದಲೂ ಮತ್ತು ಅಜಮಾಯಿಷೀಯಿಂದಲೂ ಕ್ರಮವಾಗಿ ಮೇಲ್ ವಿಚಾರಣೀ ತೆಗದುಕೊಳ್ಳತಕ್ಕದ್ದು ಡಿಪ್ಟಿ ಕಮ್ಮಿಷನರ್‌ಯವರ ಕೆಲಸವಾಗಿರುತ್ತೆ. ಅವರು ಮುಖ್ಯವಾಗಿ ತನಿಖೀ ಮಾಡತಕ್ಕದ್ದೇನಂದರೆ, 1ನೇ, ಕೆಲಸ ನೆರವೇರಿಸಲಿಕ್ಕೆ ಯೇರ್ಪಟ್ಟ ಸಾಧಾರಣ ನಿಬಂಧನೆಗಳು ಖಂಡಿತವಾಗಿಯೂ ಕ್ರಮವಾಗಿಯೂ ಅನುಸರಿಸಲ್ಪಟ್ಟವೆ ಯೆಂತಲೂ, ಟ್ರೆಜರೀ ಆಫೀಸರರು ಮಾಡಬೇಕಾದ ತನಿಖೆಗಳು ಅವರೇ ಖುದ್ದಾಗಿ ನಡಿಸಿರುವದಲ್ಲದೆ ಆ ಬಗ್ಯೆ ಹೆಡ್ ಅಕೌಂಟೆಂಟರನ್ನಾಗಲಿ, ಯಿತರ ತಾಬೇದಾರುಗಳನ್ನಾಗಲೀ ನೇಮಿಸಿ ಅವರ ಮೂಲಕ ತನಿಖೀ ನಡಸಿ ಇರುವದಿಲ್ಲವೆಂತಲೂ, 2ನೇ, ಡಿಪ್ಟಿ ಅಕೌಂಟೆಂಟ್ ಜನರಲ್‌ಯವರ ಯಾ ಇತರ ಅಧಿಕಾರಿಯ ಮುಖ್ಯವಾದ ಹುಕುಂಗಳು ಕೂಡ್ಲೇ ಅನುಸರಿಸಲ್ಪಟ್ಟವೆ ಯೆಂತಲೂ, 3ನೇ, ಟ್ರಾನ್ಸಿಫರ್ ರಸೀದಿಗಳು ಮಣಿ ಆರ್ಡರುಗಳು ವಗೈರೇ ದೇರ್ ಇಲ್ಲದೆ ಕೊಡಲ್ಪಟ್ಟವೆ ಯಂತಲೂ ಮತ್ತು ಡಿಸ್ಟ್ರಿಕ್ಟಾಮುಳೆ ಸ್ಟಾಂಪು ಬಿಕರೀ ಬಗ್ಯೆ ತಕ್ಕ ಯೇರ್ಪಾಡು ಮಾಡಿರುತ್ತೆಂತಲೂ ಮತ್ತು ಉತ್ಪತ್ತಿ ಯುಂಟಾದ ಮಟ್ಟಿಗೆ ಕರೆನ್ಸಿ ನೋಟಿಗಳು ಧಾರಾಳವಾಗಿ ಅಂಗೀಕರಿಸಲ್ಪಟ್ಟು ಮತ್ತು ಕೊಡಲ್ಪಡುತ್ತಿವೆ ಯೆಂತಲೂ, 4ನೇ, ಡಿಸ್ಟ್ರಿಕ್ಟ್ ಟ್ರೆಜರೀ ವ ತಾಲ್ಲೂಕು ರೋಜ್ ಲೆಖ್ಖಗಳು ದರೋಬಸ್ತು ಬುಕ್ಕುಗಳಲ್ಲಿ ದಿನವಹಿ ಬರಿಯಲ್ಪಡುತ್ತವೆ ಯೆಂತಲೂ, 5ನೇ, ನಗದು ಹಣವೂ ನಾನಾವಿಧವಾದ ಸ್ಟಾಂಪುಗಳೂ ವಾಡಿಕೇಯಾಗಿ ಟ್ರೆಜರೀ ಆಫೀಸರ್‌ಗಳ ವ ಖಜಾಂಚಿಗಳ ಬಾಬತು ಯೆರಡು ಬೀಗಗಳುನಿಳೀ ಯಿಡಲ್ಪಟ್ಟಿರುತ್ತವೆಂತಲೂ, 6ನೇ ತಾಲ್ಲೂಕು ಖಜಾನೆಗಳಲ್ಲಿ ಜರೂರಾದಾಗ ಐವಜು ಯಿಡಬೇಕೇ ಹೊರತು ಭಾರೀ ಮೊಬಲಗಗಳನ್ನು ಅನಾವಶ್ಯಕವಾಗಿ ಯಿಡಗೊಡಿಸ ಬಾರದೆಂತಲೂ, 7ನೇ, ಅವರುಗಳ ರೋಜ್ ಲೆಖ್ಖಗಳನ್ನು ಕ್ಲುಪ್ತ ಕಾಲಾ

ಕ್ಕೆ ಸರಿಯಾಗಿ ಕಳುಹಿಸುವಂತೆ ಬಲಾತ್ಕರಿಸ ತಕ್ಕದ್ದೆಂತಲೂ, 8ನೇ, ಡಿಸ್ಟ್ರಿಕ್ಟ್ ವ ತಾಲ್ಲೂಕು ಖಜಾನೇ ಪಹರೇಯು ಸಾಕಾಗಿರುತ್ತೆ ಯಂತಲೂ, 9ನೇ, ಇರಸಾಲ್ ಸಂಗಡ ಕ್ರಮವಾದ ಪಹರೇ ಯಿರುತ್ತದೆ ಯಂತಲೂ, ಮತ್ತು ಕಾಯಂ ಯಿರುವ ಹುಕ್ಕುಂಗಳಿಗೆ ವ್ಯತ್ಯಾಸವಾಗಿ ಸಾಮಾನ್ಯವಾದ ಯಾವ ಮಾಮೂಲನ್ನೂ ನಡಿಸತಕ್ಕದ್ದಲ್ಲವೆಂತಲೂ, ವಿಚಾರಿಸಿಕೊಳ್ಳತಕ್ಕದ್ದು." ಇಂಡ್ಯಗವರ್ನಮೆಂಟಿನವರು ಮತ್ತೂ ಅಪೇಕ್ಷಿಸುವದೇನಂದರೆ, ಡಿಪಾಜಿಟ ರಿಸೀಟಿಗಳ ರಿಜಿಸ್ಟರ್‌ನಲ್ಲಿ ಡಿಪ್ಯುಟಿ ಕಮ್ಮಿಷನರು ಮಾಡಬೇಕಾದ ಸರ್ಟಿಫಿಕೇಟ ಅಂದರೆ, ಸದರೀ ರಿಜಿಸ್ಟರನ್ನು ಖುದ್ದು ಜಾಗರೂಕತೆ ಯಿಂದ ತಾವು ತನಖೀ ಮಾಡಿದ್ದಾಗಿಯೂ ಅದರಲ್ಲಿ ಖತಾಯಿತಿಗಳು ಕೇವಲ ಜಾಗ್ರತೆಯಾಗಿಯೂ ಕ್ರಮವಾಗಿಯೂ ಮಾಡಲ್ಪಟ್ಟಿರುತ್ತೆಂತಲೂ ಬರೆದ ಕ್ವಾರಟರಲಿ ಸರ್ಟಿಫಿಕೇಟಗಳಿಗೆ ಮುಖ್ಯವಾದ ನಿಗೇಕೊಡತಕ್ಕದ್ದು.

4. ಡಿಪ್ಯುಟಿ ಕಮ್ಮಿಷನರವರು ನಡಿಸಬೇಕಾದ ಮೇಲ್ ವಿಚಾರಣೇಯನ್ನು ಸದರೀ ಪ್ರಕಾರ ನಡಿಸತಕ್ಕದ್ದೆಂದು ನೇಮಿಸುವದರಲ್ಲಿ ಚೀಪ್ ಕಮ್ಮಿಷನರವರು ತಿಳಿಸುವ ದೇನಂದರೆ, ಮೇಲೆ ಕಂಡ ಕ್ರಮಗಳ ದೆಸೇಯಿಂದ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರರು, ಖಜಾಂಚಿಯು ವ ಮುಖ್ಯ ವುದ್ಯೋಗಸ್ಥರು ಇವರುಗಳು ತಮ್ಮ ತಮ್ಮ ಖಜಾನೇ ಕೆಲಸಗಳನ್ನು ಕ್ರಮವಾಗಿ ನಡಿಸುವದರಲ್ಲಾಗಲೀ ಹುಕ್ಕುಂ ಅಸಡ್ಡೇ ಮಾಡುವದು ಮೇಲ್ ವಿಚಾರಣೇ ಖಂಡಿತವಾಗಿ ನಡಿಸದೇ ಯಿರೋಣ ಯಿಂತಾವುಗಳ ದೆಸೇಯಿಂದ ಉಂಟಾಗುವ ಯಾವದಾದರೂ ಹಣ, ಸ್ಟಾಂಪುಗಳು ವಗೈರೇಯ ನುಕ್ಸಾನ್ ವಿಷಯದಲ್ಲಾಗಲೀ ಗವರ್ನಮೆಂಟಿನವರ ಪ್ರಯೋಜನಗಳಿಗೆ ಯಿತರವಿಧ ಹಾನಿ ಯುಂಟಾಗುವ ಅಂಶದಲ್ಲಾಗಲಿ ಸದರೀ ಜನಗಳ ಮುಖ್ಯ ಜವಾಬ್‌ದಾರಿಯು ತಪ್ಪುವದೆಂಬ ಉದ್ದೇಶ್ಯವಿಲ್ಲವು.

5. ತಾಲ್ಲೂಕು ಕಜಾನೆಗಳ ಇರ್ಚಾರ್ಜ್ ಅಮಲ್‌ದಾರ್ರುಗಳಿಗೆ ಸಹ ಸದರೀ ಹುಕ್ಕುಂ ಲಗಾವಾಗುತ್ತದೆ, ಸದರೀ ಅಮಲ್‌ದಾರ್ರು ಟ್ರೆಜರೀ ಕೆಲಸಗಳಿಗೆ ಸಂಬಧಿಸಿದ ದರೋಬಸ್ತು ಹುಕ್ಕುಂಗಳನ್ನೂ ಖಂಡಿತವಾಗಿಯೂ ಕ್ಷಿಪ್ರವಾಗಿಯೂ ನಡಿಸುವ ಬಗ್ಯೆ, ಸದರೀ ಹುಕ್ಕುಂಗಳನ್ನು ಉಪೇಕ್ಷಿಸೋಣದರಿಂದಾಗಲೀ ಟ್ರೆಜರೀ ಕೆಲಸಗಳನ್ನು ನಡಿಸುವದರಲ್ಲಿ ಯುಕ್ತವಾದ ಅಕ್ಕರೆ ವ ಜಾಗರೂಕತೆ ಯಿಲ್ಲದ್ದರಿಂದಲಾಗಲೀ ಉಂಟಾಗತಕ್ಕ ಯಾವದಾದರೂ ಹಣ ವಗೈರೇಯ ನುಕ್ಸಾನ್ ಬಗ್ಯೆ ಖುದ್ದು ಜವಾಬ್‌ದಾರರಾಗಿರತಕ್ಕದು.

ನಂ. 363. ತಾರೀಖು 9ನೇ ಫಿಬ್ರುವರೀ 1876.

4ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರ್ ಮೇಜರ ಮೊಟ್ಟೆಟಿ ಸಾಹೆಬ್ ರವರು, ಹಾಸನ ಡಿಸ್ಟ್ರಿಕ್ಟಿಗೆ ಹಂಗಾಮೀ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ, ಕೂಡ್ಲೇಹೋಗಿ ಶೇರತಕ್ಕದು.

1ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮೇಜರ್ ಲಿಂಡಸೆ ಸಾಹೆಬರವರು, ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಬೆಂಗಳೂರು ಷಹರ್ ಮತ್ತು ಲಷ್ಕರ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 364. ತಾರೀಖು 9ನೇ ಫಿಬ್ರುವರೀ 1876.

1875ನೇ ಇಸವಿ ಜೂನ್ 21ನೇ ಮುಕ್ಕಾಂ 2438—116ನೇ ನಂಬರ್ ಉಳ್ಳ ಆಫಿಷಿಯೇಟಿಂಗ್ ಚೀಪ್ ಕಮ್ಮಿಷನರವರ ಪ್ರೊಸೀಡಿಂಗ್ಸ್ ಸಂಗಡ ಛಾಪಿಸಲ್ಪಟ್ಟ ತಖ್ತೆಯನ್ನು ರದ್ದುಪಡಿಸಿ, ನಿವೇಶನಗಳ ತರೀಕ್ ಜಮೀನ್‌ಗಳ ವಿಕ್ರಯದ ಬಾಬತು ಪ್ರತಿ ಡಿಸ್ಟ್ರಿಕ್ಟಿನೊಳಗೂ, 1875ನೇ ಮಾರ್ಚಿ 31ನೇ ಮುಕ್ಕಾಂವರೆಗೆ ಡಿಪಾಜಿಟಿನಲ್ಲಿ ನಿಲ್ಲಿಸಿಕೊಳ್ಳಲ್ಪಟ್ಟ ಮತ್ತು ಹಾಲೀ ಸದರೀ ಲೆಕ್ಕದಲ್ಲಿ ಜಮೆ ಕಟ್ಟಲ್ಪಟ್ಟಿರುವ ಮೊಬಲಗಗಳನ್ನು ಕಾಣಿಸುವ ಈ ಕೆಳಗೆ ಬರುವ ಪರಿಷ್ಕರಿಸೋಣಾದ ತಖ್ತೆಯು ಸಕಲಜನಗಳಿಗೂ ತಿಳಿಯುವಬಗ್ಯೆ ಪ್ರಕಟಿಸಲ್ಪಟ್ಟಿರುತ್ತೆ:—

ನಂ.	ಡಿಸ್ಟ್ರಿಕ್ಟು	ಮೊಬಲಗ	ನಂ.	ಡಿಸ್ಟ್ರಿಕ್ಟು	ಮೊಬಲಗ
1	ಬೆಂಗಳೂರು	3104 13 6	5	ಹಾಸನ	1016 1 6
2	ಕೋಲಾರ	1886 3 0	6	ಶಿವಮೊಗ್ಗಾ	802 8 0
3	ತುಮಕೂರು	1268 9 7	7	ಕಡೂರು	1983 12 0
4	ಮೈಸೂರು	1088 0 0	8	ಚಿತ್ರದುರ್ಗ	165 4 0
				ಜುಮ್ಲಾ	11315 3 7

ನಂ. 365. ತಾರೀಖು 9ನೇ ಫಿಬ್ರವರೀ 1876.

ತಾಲಿಂಖಾನೆಗಳನ್ನು ಕ್ರಮಪಡಿಸುವ ಬಗ್ಯೆ ಪರಿಷ್ಕರಿಸಲ್ಪಟ್ಟ ರೂಲ್ಸ್.

ಈ ಶೀಮೆಯ ಮುಖ್ಯವಾದ ಷಹರ್ ಗಳಲ್ಲಿರುವ ತಾಲಿಂಖಾನೆಗಳನ್ನು ಕ್ರಮಪಡಿಸುವ ಬಗ್ಯೆ 1874ನೇ ಇಸವಿ ದಿಶಂಬರ್ 19ನೇ ಮರ್ಕುಂ 280ನೇ ನಂಬರ್ ಚೀಫ್‌ಕಮ್ಮಿಷನ್ನರ್‌ಯವರ ಇಸ್ತಿಹಾರ್ ಕೆಳಗೆ ಫಾಯಿಷ್ ಮಾಡಲ್ಪಟ್ಟ ರೂಲ್ಸ್‌ಗಳನ್ನ ತಿದ್ದುಪಾಟು ಮಾಡಿ ಯಿದರಡಿ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್‌ಗಳನ್ನು ಫಾಯಿಷ್ ಮಾಡಲಿಕ್ಕೆ ಆಫಿಷಿಯೇಟಿಂಗ್ ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೀ ಕೊಡಿಸುತ್ತಾರೆ.

ತಾಲಿಂಖಾನೆಗಳ ಕಾನೂನುಗಳು ವ ಕ್ರಮಗಳು.

ಸನ್ 1876ನೇ ಇಸವೀ ಯಪ್ರೈಲ್ ಗುರ್ರೇ ತಾರೀಖಿನಿಂದ ವ ಆತರುವಾಯ ಪ್ರತಿ ತಾಲಿಂಖಾನಾ ಯಜಮಾನನೂ ಲೈಸೆನ್ಸ್ ಬಗ್ಯೆ ಆ ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮ್ಮಿಷನರವರಿಗೆ ಅರ್ಜೀ ಬರದು ಕ್ಕೊಳ್ಳಬೇಕೆಂದು ಅಪ್ಪಣೀ ಕೊಡಲ್ಪಡತಕ್ಕದ್ದು. ಡಿಪ್ಟಿಕಮ್ಮಿಷನ್ನರು ಲೈಸೆನ್ಸ್ ಕೊಟ್ಟಲ್ಲಿ ಯಾವ ತಾಲಿಂಖಾನಾ ಬಗ್ಯೆ ಲೈಸೆನ್ಸ್ ಕೊಡಲ್ಪಟ್ಟಿರುತ್ತೋ ಅಂತಾ ತಾಲಿಂಖಾನೆಯು ರಿಜಿಸ್ಟರ್ಮಾಡತಕ್ಕ ಬಗ್ಯೆ ಯಿಡಬೇಕಾದ ವೊಂದು ಬುಕ್ಕಿನಲ್ಲಿ ಈ ಕೆಳಗೆ ಕಂಡ ತಪಶೀಲ್‌ಗಳುನಿಸಿ ಅರ್ಜೀದಾರನಿಂದ 10 ರೂಪಾಯಿ ಫೀ ಕೊಡಲ್ಪಟ್ಟ ಬಳಿಕ ರಿಜಿಸ್ಟರ್ಮಾಡಲ್ಪಡತಕ್ಕದ್ದು.

2. ಈ ರಿಜಿಸ್ಟರಿನಲ್ಲಿ ಈ ಕೆಳಗೆ ಬರುವ ತಪಶೀಲ್‌ಗಳು ಅಡಗಿರತಕ್ಕವು.

1ನೇ ನಂಬರ್
2ನೇ ಮೊಹಲ್ಲಾ ಹೆಸರು.
3ನೇ ತಾಲಿಂಖಾನಾ ಹೆಸರು.
4ನೇ ಯಜಮಾನ ಯಾ ಖಾವಂದನ ಹೆಸರು
5ನೇ ಆತನ ಕಸಬು ಯಾ ಉದ್ಯೋಗ

3. ತನ್ನ ತಾಲಿಂಖಾನಾ ಯಾವ ಷಹರಿನಲ್ಲಿರುತ್ತೋ ಅಂತಾ ಷಹರಿಗೆ ಈ ಇಸ್ತಿಹಾರ್ ಲಗಾವಾಗಿರತಕ್ಕದ್ದೆಂದು ಡಿವಿಜನ್ ಕಮ್ಮಿಷನರ್ ಯವರು ಯಾವ ತಾರೀಖಿನಲ್ಲಿ ಪ್ರಸಿದ್ಧ ಪಡಿಸುತ್ತಾರೆಯೋ ಆ ತಾರೀಖು ಲಾಗಾಯಿತು 3 ತಿಂಗಳು ಗತಿಸುವದರೊಳಗಾಗಿ ಲೈಸೆನ್ಸ್ ಪಡೆಯದ ಯಾವ ತಾಲಿಂಖಾನಾ ಯಜಮಾನನಾಗಲಿ, ತನ್ನ ತಾಲಿಂಖಾನಾವನ್ನು ಖುಲ್ಲಾ ಯಿಡಲಿಕ್ಕೆ ಅಪ್ಪಣೆ ಕೊಡಲ್ಪಡತಕ್ಕದ್ದಲ್ಲವು.

4. ಪ್ರತಿಲೈಸೆನ್ಸ್ 12 ತಿಂಗಳವರಿಗೂ ಜಾರೀಯಲ್ಲಿರತಕ್ಕದ್ದು. ಆಕಾಲದ ಅಂತ್ಯದಲ್ಲಿ ಲೈಸೆನ್ಸ್‌ದಾರನು 10 ರೂಪಾಯಿ ಫೀ ಕೊಟ್ಟು ಹೊಸದಾಗಿ ಲೈಸೆನ್ಸ್ ಪಡಿಯತಕ್ಕದ್ದು.

5. ಈ ರೂಲಸ್‌ಗಳ ಷರತ್ತುಗಳನ್ನು ಕ್ರಮವಾಗಿ ಅನುಸರಿಸಿ ನಡಿಯುವ ಬಗ್ಯೆ ಐವತ್ತು ಐವತ್ತು ರೂಪಾಯಿಗಳಿಗೆ ಯಿಬ್ಬರು ಜಾಮೀನ್ ದಾರರನ್ನು ತಾಲಿಂಖಾನಾ ಯಜಮಾನನು ಕೊಡುವ ಪರಿಯಂತ ಲೈಸೆನ್ಸ್ ಕೊಡುವದಿಲ್ಲವು. ಸದರೀ ರೂಲಸ್‌ಗಳಿಗೆ ಉಲ್ಲಂಘನೆಯಾಗಿ ನಡದಂತೆ ವೊಬ್ಬ ಮೇಜಿಸ್ಟ್ರೇಟರ ಮುಂದೆ ಸ್ಥಾಪಿಸಲ್ಪಟ್ಟಾಗ ಐಜರ್ ಜಾಮೀನ್‌ದಾರ್ರುಗಳು ಅವರು ಜಾಮೀನಾದ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಕೊಡಲಿಕ್ಕೆ ಗುರಿಯಾಗುವರು.

6. ತಾಲಿಂಕಾನೆಗೆ ಬರತಕ್ಕ ಜನಗಳ ವೊಂದು ಪಟ್ಟೀ ಕೇಳಲ್ಪಟ್ಟಾಗ ಸದರೀ ಪಟ್ಟಿಯನ್ನು ತಾಲಿಂಖಾನಾ ಯಜಮಾನನು ಷಹರಿನ ಮುಖ್ಯ ಪೊಲೀಸ್ ಆಫಿಸರಿಗೆ ಕೊಡತಕ್ಕದ್ದು.

7. ಯಾವ ತಾಲೀಖಾನಾ ಯಜಮಾನನಾಗಲಿ ದುರ್ನಡತೆ ಉಳ್ಳ ಯಾವ ಮನುಷ್ಯನಿಗೂ ಜಾಗಾ ಕೊಡಕೂಡದು. ಅಥವಾ ತನ್ನ ತಾಲಿಂಖಾನಾ ಪ್ರದೇಶದಲ್ಲಿ ಜೂಜು ಆಡುವದಕ್ಕೂ ಆಸ್ಪದ ಕೊಡಕೂಡದು. ದುರ್ನಡತೆ ಉಳ್ಳ ಯಾವ ಮನುಷ್ಯರಾಗಲಿ, ತಾಲಿಂಖಾನಾ ವೊಳಗೆ ಸೇರಿಕೊಂಡಿದ್ದರೆ ಪೊಲೀಸಿನವರಿಗೆ ಕೂಡ್ಲೆ ಬಾತಮೀ ಕೊಡುವದು ಸದರೀ ತಾಲಿಂಖಾನಾ ಯಜಮಾನನ ಕೆಲಸವಾಗಿರತಕ್ಕದ್ದು.

8. ಪ್ರತಿ ತಾಲಿಂಖಾನಾ ಯಜಮಾನನೂ ತಾಲಿಂಖಾನೆಯ ಪ್ರಸಿದ್ಧವಾದ ಸ್ಥಳದಲ್ಲಿ ವೊಂದು ಹಲಿಗೆ ಕಟ್ಟತಕ್ಕದ್ದು. ಸದರೀ ಹಲಿಗೇ ಮೇಲೆ ತಾಲಿಂಖಾನಾ ಹೆಸರು ಅದರ ಯಜಮಾನನ ಹೆಸರು ಸಹಾ ಸ್ಪಷ್ಟವಾಗಿ ಬರಿಯಲ್ಪಡತಕ್ಕದ್ದು.

9. ಮಹಮ್ಮದೀಯರ ಯಾ ಹಿಂದೂ ಜನಗಳ ಹಬ್ಬ ದಿನಗಳಲ್ಲಿ ತಾಲಿಂಖಾನಾ ಯಜಮಾನರು ತಾಲಿಂಖಾನೆಗೆ ಬರತಕ್ಕ ಜನಗಳ ನಡತೆ ವಿಷಯದಲ್ಲಿ ಜವಾಬುದಾರ್ರಾಗಿ ಮಾಡಲ್ಪಡತಕ್ಕದ್ದು.

10. ಯಾವ ತಾಲಿಂಖಾನೆಯನ್ನಾಗಲಿ ಪೋಲೀಸಿನವರು ಯಾವ ಕಾಲದಲ್ಲಾಗಲಿ ಹೋಗಿ ನೋಡಲಿಕ್ಕೆ ಅವರಿಗೆ ಪೂರಾ ಅಪ್ಪಣೆ ಯಿರತಕ್ಕದ್ದು.

ಹರಾಜು ನಿಬಂಧನೆಗಳು, 1873ನೇ ಇಸವಿ ಜೂನ 12ನೇ ಮಾರ್ಕಿಂ 20ನೇ ನಂಬರ ಮೈಸೂರು ಗೆಜೆಟ ಇಸ್ತಿಹಾರಿನಲ್ಲಿ ಪ್ರಸಿದ್ಧ ಪಡಿಸಿರುವ ಮೇರಿಗೆ ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಮರಗಳಿಗೋಸ್ಕರ ಸಲ್ಲಬೇಕಾದ ಮೊಬಲಗಿನ ಪಾವತೀ ಬಗ್ಯೆ ವಾಯಿದೆಯು 1876ನೇ ಇಸವಿ ಮಾರ್ಚಿ 25ನೇ ತಾರೀಖಿನ ದಿನ ಪೂರೈಸುವದು. ಆ ಕಾಲದೊಳಗಾಗಿ ದರೋಬಸ್ತು ಮೊಬಲಗ ಪಾವತೀ ಮಾಡತಕ್ಕದ್ದಿದೆ, ಯಿದಕ್ಕೆ ತಪ್ಪಿದರೆ ದಂಡನೆ ಷರತ್ತುಗಳು ಜಾರೀಯಲ್ಲಿ ತರಲ್ಪಡುವವು.

ತಾರೀಖು 18ನೇ ಫಿಬ್ರವರೀ 1876.

ಕೊಡಗು ಫಾರೆಸ್ಟ ಇಲಾಖಾ ಸ್ವತ್ತಾದ 6½ ಅಡಿ ಎತ್ತರವುಳ್ಳ ಷುಮಾರು 14 ವರುಷ ಪ್ರಾಯದ ವೊಂದು ಗಂಡಾನೆಯು ಕೊಡಗು ಅಸಿಸ್ಟೆಂಟ ಕನಸರವೇಟರಯವರಿಂದ ಹುಣಸೂರಿನಲ್ಲಿ ಈ ಕೆಳಗೆ ಕಂಡ ತಾರೀಖಿನಲ್ಲಿಯೂ ಷರತ್ತುಗಳ ಮೇಲೂ ವಿಕ್ರಯಿಸಲ್ಪಡುವದು.

ಷರತ್ತುಗಳು—ನಗದು ಮೊಬಲಗು, ಮತ್ತು ಕೂಡ್ಲೇ ಸಾಗಿಸತಕ್ಕದ್ದು.

ರಿಜಿಸ್ಟರ್ಮಾಡಲ್ಪಟ್ಟ ಮತ್ತು ಅರಗು ಮೊಹರ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಟಪ್ಪಾಲ ದ್ವಾರಾ ಕಳುಹಿಸಲ್ಪಟ್ಟ ದರಖಾಸ್ತುಗಳು ಅಸಿಸ್ಟೆಂಟ ಕನಸರವೇಟರಯವರಿಂದ ಅಂಗೀಕರಿಸಲ್ಪಡುವದು. ಸದರೀಯವರು 1876ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಹರಾಜ ನಡಿಸುವರು. ಈ ಲಕ್ಕೋಟೆಗಳು ಅಸಿಸ್ಟೆಂಟ ಕನಸರವೇಟರಯವರಿಂದಲೇ ಹರಾಜು ಸ್ಥಳದಲ್ಲಿ ರೂಬರೂ ಖುಲ್ಲಾ ಮಾಡಲ್ಪಡುತ್ತೆ, ಆನೇ ಬಗ್ಯೆ ಲೆಟ್ಟರ ಮೂಲಕ ದರಖಾಸ್ತು ಮಾಡುವ ಜನಗಳಿಂದ ದರಖಾಸ್ತು ಮಾಡಲ್ಪಟ್ಟ ಪೂರಾ ಮೊಬಲಗಿಗೆ ಕರೆನ್ಸಿ ನೋಟುಗಳನ್ನು ಅಂತಾ ಲೆಟ್ಟರಗಳಲ್ಲಿ ಮುಲಫೂಫ ಮಾಡಿ ಕಳುಹಿಸತಕ್ಕದ್ದು. ಮತ್ತು ಅಂತಾ ದರೋಬಸ್ತು ಕರೆನ್ಸಿ ನೋಟುಗಳು ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಅಸಿಸ್ಟೆಂಟ ಕನಸರವೇಟರಿಂದ ರಿಜಿಸ್ಟರ್ಮಾಡಲ್ಪಟ್ಟ ಮತ್ತು ಅರಗು ಮೊಹರ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಲೆಟ್ಟರ ಮೂಲಕ ಹರಾಜಿನ ಮಾರನೇದಿನ ಟಪ್ಪಾಲಿನಲ್ಲಿ ವಾಪಸ ಕಳುಹಿಸಲ್ಪಡುವವು. ದರಖಾಸ್ತುದಾರ್ರುಗಳ ಹೆಸರು, ಮೇಲುವಿಳಾಸ, ಸ್ಪಷ್ಟವಾಗಿರುವ ಅಕ್ಷರದಲ್ಲಿ ಪೂರ್ತಿಯಾಗಿ ಬರದು ಇರತಕ್ಕದ್ದು.

ಸದರೀ ಆನೆಯು ವಿಕ್ರಯಿಸಲ್ಪಟ್ಟ ದಿನ ಸಾಯಂಕಾಲದ ತರುವಾಯ ಅದರನ್ನು ಇಟ್ಟುಕೊಳ್ಳುವದಕ್ಕಾಗಲಿ, ಮೇವು ಹಾಕುವದಕ್ಕಾಗಲಿ, ಫಾರೆಸ್ಟ ಇಲಾಖೆಯವರು ಯೆಷ್ಟು ಮಾತ್ರವೂ ಜವಾಬದಾರರಾಗಿರುವದಿಲ್ಲವು.

ತಾರೀಖು 22ನೇ ಫಿಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗಾ ಸ್ಥಳದ ನಂಜಣ್ಣನೆಂಬಾತನ ಮಾಲಾದ 50 ಕಾಡು ಮರದ ದಿಮ್ಮೀಗಳು, 9 ಕೊಂಚಗಳು ಸಹಾ, ಸದರೀ ಮರಗಳ ಬಾಬತು ಸರ್ಕಾರಕ್ಕೆ ಸಲ್ಲತಕ್ಕ ಕೋರೀ ಬಡಿಗೆಯನ್ನು ಭರ್ತೀ ಮಾಡಿಕೊಳ್ಳತಕ್ಕ ಬಗ್ಯೆ ಆಯನೂರು ಕೋರೀಯಲ್ಲಿ 1876ನೇ ಏಪ್ರಿಲ 15ನೇ ಮುಕ್ಕಾಮಿನೊಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜು ನಿಬಂಧನೆ—1873ನೇ ಇಸವಿ ಜೂನ 12ನೇ ಮಾರ್ಕಿಂ 20ನೇ ನಂಬರ ಮೈಸೂರು ಗೆಜೆಟ ಇಸ್ತಿಹಾರ ನಾಮೆ ಪ್ರಕಾರ ಯಿರತಕ್ಕದ್ದು.

G. J. van Someren, *Captain*,
Conservator of Forests, Mysore & Coorg.

KOLAR DISTRICT.

Notice regarding an application of Lingappa for a certificate under Act XXVII of 1860.

ಕೋಲಾರ ಡಿ|| ಡೆಪ್ಯುಟಿ ಕಮ್ಮಿಷನರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರ ಕಸಬಾದಲ್ಲಿ ಯಿರುವ ಮಲ್ಲಿಕಾರ್ಜುನಪ್ಪನ ಮಗ ಲಿಂಗಪ್ಪ ನೆಂಬುವನು ಫಾಶೀ ಪಟ್ಟ ತನ್ನ ಮಗ ನಂಜುಂಡಪ್ಪನ ಉದ್ರಿ ಬಾಕೀಗಳು 1000 ರೂಪಾಯಿಗಳು ವಸೂಲ ಮಾಡಿಕೊಳ್ಳತಕ್ಕ ಬಗ್ಯೆ, 1860ನೇ ಇಸವಿ 27ನೇ ಏಕ್ಟು ಪ್ರಕಾರ ವಾರಸ ಸರ್ಟಿಫಿಕೇಟ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜೀಯು ಸನ ಮಜಕೂರು ಏಪ್ರಿಲ ತಿಂಗಳು 5ನೇ ತಾರೀಖಿಗೆ ವಿಚಾರಿಸಲ್ಪಡುತ್ತಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

Notice regarding an application of Atchamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಾಲೂರು ತಾಲ್ಲೂಕು ಮಲಮಾಕನಹಳ್ಳೀ ಬಾನುಭಾಗ ಸುಬ್ಬರಾಯಪ್ಪನ ಹೆಂಡತಿ ಅಚ್ಚಮ್ಮ ನೆಂಬುವಳು ಫಾಶೀಪಟ್ಟ ತನ್ನ ಗಂಡ ಸುಬ್ಬರಾಯಪ್ಪಗೆ ಬರತಕ್ಕ ಉದ್ರೀ ಬಾಕೀಗಳು 100

ರೂಪಾಯಿ ವಸೂಲ್ ಮಾಡಿಕೊಳ್ಳಲು, 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ ಸರ್ಟಿಫಿಕೇಟ ಕೊಡಿಸಿಕೊಡ ಬೇಕೆಂದು ಗುಜರಾಯಿಸಿದ ಅರ್ಜೀ ಸ ಮಜಕೂರು ಏಪ್ರೆಲ್ 5ನೇ ತಾರೀಖಿಗೆ ವಿಚಾರಿಸಲ್ಪಡುತ್ತೆ ಯಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 21ನೇ ಫೆಬ್ರುವರೀ ಸ 1876ನೇ ಇಸವಿ, ಮೊಕ್ಕಾಂ ಕೋಲಾರ.

P. N. Purnaiya,
For Dy. Commr.

TUMKUR DISTRICT.

ತುಮಕೂರು ಡಿ|| ಡೆ|| ಕಮ್ಮಿಷನರ ಕೋರ್ಟಿನಿಂದ.

ತಾರೀಖು 5ನೇ ಫೆಬ್ರುವರೀ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1870ನೇ ಇಸವಿ ಆಖೈರ ವರಿಗೆ ಕೊರಟಗೆರೆ ಮತ್ತು ತುರ್ವೇಕೆರೆ ಮುನ್ಸಿಫ್ ಕೋರ್ಟುಗಳಲ್ಲಿ ಆರಿಜಿನಲ್, ಅಮಲ್‌ಜಾರಿ, ಮಿಸಲೇನಿಯಸ್, ವಗೈರೇ ಮೊಕದ್ದಮೆಗಳಲ್ಲಿ ಕಕ್ಷಿಗಾರ್ರಿಂದ ದಾಖಲ್ ಮಾಡಲ್ಪಟ್ಟ ಯಲ್ಲಾ ದಸ್ತಾವೇಜಗಳೂ, ಯಗ್ಜಿಬಿಟಗಳೂ, ಲೆಕ್ಕಗಳೂ, ಮತ್ತು ಇತರ ಕಾಗದಗಳೂ, ಜುಡಿಷಿಯಲ್ ಹಳೇರಿಕಾರ್ಡ್‌ಗಳನ್ನ ನಾಶ ಪಡಿಸತಕ್ಕ ವಿಷಯದಲ್ಲಿ ಇರತಕ್ಕ ರೂಲ್ಸ್ ಪ್ರಕಾರ 1876ನೇ ಇಸವಿ ಮೇ ತಾರೀಖು 1ಲ್ಲು ನಾಶಮಾಡಲ್ಪಡುವದು.

2. ಮೇಲೆ ನಮೂದಾದ ಬೆಲೆವುಳ್ಳ ದಸ್ತಾವೇಜು ವಗೈರೇಗಳನ್ನು ವಾಪಸು ಪಡೆಯಲು ಅಪೇಕ್ಷೆವುಳ್ಳ ಕಕ್ಷಿಗಾರ್ರು ಸದರೀ ಕೋರ್ಟುಗಳಿಗೆ ಮೇಲೆ ನಮೂದ್ ಮಾಡಿದ ತಾರೀಖು ಒಳಗಾಗಿ ಬರದುಕೊಳ್ಳತಕ್ಕದ್ದು.

Notice regarding an application of Sanjivamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕುಣಿಗಲ್ ತಾಲ್ಲೂಕು ಕಸಬಾ ಕೊಪ್ಪ ಗ್ರಾಮದ ವಾಸಸ್ಥನಾಗಿ ಯಿದ್ದ ಘಾತೀ ಧಾದ ನರಸೈಯನೆಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 900 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ, 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಈ ತನ ಹೆಂಡತಿ ಸಂಜೀವಮ್ಮ ಯಂಬವಳು ದಾಖಲ್ ಮಾಡಿ ಯಿರುವ ಅರ್ಜೀ ಯನ್ನು 1876ನೇ ಇಸವಿ ಮಾರ್ಚಿ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದಾ, ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 14ನೇ ಮಾಹೆ ಮಾರ್ಚಿ 1876ನೇ ಇಸವಿ, ಮೊಕ್ಕಾಂ ಕುಣಿಗಲ್.

ತಾರೀಖು 23ನೇ ಫೆಬ್ರುವರೀ 1876.

ಸ 1860ನೇ ಇಸವಿ 27ನೇ ನಂಬರ್ ಆಕ್ಟು ಪ್ರಕಾರವಾಗಿ ಯಿದರ ಮಾರ್ಜಿನ್ನಲ್ಲಿ ನಮೂದಿಸಿರುವ ಮನುಷ್ಯನಿಗೆ ಕೊ

1875ನೇ ಇಸವಿ ಶಿವಿಲ್ ಮಿಸಲೇನಿಯಸ್ 1ನೇ ನಂಬರ್ ಮೊಕದ್ದಮ, ಚಿಕ್ಕನಾಯಕನಹಳ್ಳೀ ತಾಲ್ಲೂಕು ಹುಂಗನಹಳ್ಳೀ ಬೋರೇಗೌಡ.	ಟ್ಟಿರತಕ್ಕ ಸರಟಫಿಕೇಟ ಅವನು ಗೊತ್ತಾಗಿದ್ದ ಕಾಲದಬಳಗೆ ಸದರೀ ಸರಟಫಿಕೇಟಿನ ಆಧಾರದ ಮೇಲೆ

ವಸೂಲ್ ಮಾಡಿಕೊಂಡ ಮೊಬಲಗಿನ ಲೆಕ್ಕವನ್ನು ಕೊಡದೆ ತಪ್ಪಿ ಹೋದ ಸಬಬ್ ರದ್ದು ಮಾಡಲ್ಪಟ್ಟಿರುತ್ತೆ.

ಬಾಜಾದಲ್ಲಿ ನಮೂದಾಗಿರುವ ಆಸಾಮಿಗಳಿಗೆ 1860ನೇ ಇಸವಿ 27ನೇ ನಂಬರ್ ಆಕ್ಟಿನ ಆಧಾರದಮೇಲೆ ಕೊಟ್ಟಿರುವ ಸ

ಸ 1873ನೇ ಇಸವಿ. ಶಿ. ಮಿ. 17ನೇ ನಂಬರ್, 1874ನೇ ಇಸವಿ ಫೆಬ್ರುವರೀ 11ನೇ ತಾರೀಖಿನಲ್ಲಿ ಚಿಕ್ಕನಾಯಕನಹಳ್ಳೀ ತಾಲ್ಲೂಕು ಹಾಗಲವಾಡೀ ವಾಸಸ್ಥನಾದ ಸಂಜಪ್ಪಗೆ.	ರ್ಟಿಫಿಕೇಟನ್ನು ಸದರೀ ಯವರು ವಾಯಿದೆಗೆ ಸರಿಯಾಗಿಸದ

ಸರ್ 1873ನೇ ಇಸವಿ. ಶಿ. ಮಿ. 22ನೇ ನಂಬರಲ್ಲಿ, ರೀ ಸರ್ಟಿಫಿಕೇ
2. 1874ನೇ ಇಸವಿ ಜನವರೀ 4ನೇ ತಾರೀಖಿನಲ್ಲಿ ತುಮಕೂರ್ ವಾಸಸ್ಥಳಾದ ಸಕ್ಕೂ ಬಾಯಿ ಎಂಬವಳಿಗೆ, ಟಿಗಳ ಆಧಾರ ದಮೇಲೆ ವಸೂ

ಲು ಮಾಡಿರತಕ್ಕ ಹಣಗಳ ಲೆಕ್ಕಗಳನ್ನ ಹಾಜರ್ಮಾಡದ ಸಬಬ್ ಯಿದರಿಂದಾ ರದ್ದುಮಾಡಿರುತ್ತೆ.

ತಾರೀಖು 11ನೇ ಫಿಬ್ರವರೀ 1876ನೇ ಇಸವಿ, ಮೊಕ್ಕಾಂ ಕುಣಿಗಲ್.

C. J. PEARSE,
Dy. Commr.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 11ನೇ ಫಿಬ್ರವರೀ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಸಲ್ಪಡುವದೇನಂದರೆ,—ಈ ಕೆಳಗೆ ವಿವರಿಸಲ್ಪಡುವ 4618ನೇ ನಂಬರ್ ದಾಸಾಬೋಯಿ ಯೆಂಬ ಖೈದಿ, 4558ನೇ ನಂಬರ್ ಗಿರಿಯಾಬೋಯಿ ಯಂಬ ಖೈದಿ, ಯಿವರುಗಳ ದಸ್ತಗಿರೀ ವ ತಪ್ಪು ಸ್ಥಾಪನೆ ಈ ಬಗ್ಯೆ ಸಾಧಕವಾದ ಖಾತಮೀ ತಿಳಿಸತಕ್ಕವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುವದು. ಸದರೀ ಯಿಬ್ಬರು ಖೈದೀರ ಮೇಲೂ ಅನೇಕ ಚಾರ್ಜಿಗಳು ತರಲ್ಪಟ್ಟು ಅನೇಕ ವಾಯಿದೇಗಳಿಗೆ ಸಜಾ ಆಗಿ ಮಾಹೆ ಗುಜಸ್ತಾ 24ನೇ ಮರ್ಸ್ಕಿನಲ್ಲಿ ಮೈಸೂರ್ ಡಿಸ್ಟ್ರಿಕ್ಟು ಜೈಇಲ್‌ನಿಂದ ತಪ್ಪಿಸಿಕ್ಕೊಂಡಿರುತ್ತಾರೆ.

ತಪಸೀಲ್.

ದಾಸಾಬೋಯಿ, ತಂದೇ ಹೆಸರು ಗಿರಿಯಾಬೋಯಿ, ಜಾತಿ ವಡ್ಡರು, ವಾಸಸ್ಥಳ ಹೆಗ್ಗಡದೇವನ ಕೋಟೆ ತಾಲ್ಲೂಕು, ವಯಸ್ಸು ಷುಮಾರು 35, ಎತ್ತರ 5—4¼, ಮೈಮೇಲಿನ ಗುರುತುಗಳು, ಮುಖ ಕಾಂತಿ ಯಣೆಗೆಂಪು, ಕೂದಲು ಕಪ್ಪಾಗಿದೆ, ಕಂಣುಗಳು ಕಪ್ಪಾಗಿವೆ, ಬಲತೊಡೆಯ ಹೊರಪಾರ್ಶ್ವದಲ್ಲಿ ಮೇಲ್ ಭಾಗಕ್ಕೆ ಘಾಯದ ಕಲೆ, ಕಾಲುಗಳು ಹುಣ್ಣಾಗಿವೆ, ದಾಖಲಾದಾಗ ತಲೆ ಬೋಳಿಸಿದೆ.

ಗಿರಿಯಾಬೋಯಿ, ತಂದೇ ಹೆಸರು ಚನ್ನಾಬೋಯಿ, ಜಾತಿ ವಡ್ಡರು, ವಾಸಸ್ಥಳ ಹೆಗ್ಗಡದೇವನ ಕೋಟೆ ತಾಲ್ಲೂಕು, ವಯಸ್ಸು ಷುಮಾರು 40, ಎತ್ತರ 5—3¾, ಮೈಮೇಲಿನ ಗುರುತುಗಳು, ಕೆಂಪುಬಂಣ, ಕಪ್ಪುಕೂದಲು, ಕಂಣುಗಳು ಪ್ರಕಾಶವಾಗಿವೆ, ಯರಡು ಹೆಬ್ಬೆಟ್ಟುಗಳ ಉಗುರುಗಳು ಹುಳತು ಹೋಗಿವೆ, ದಾಖಲಾದಾಗ ತಲೆ ಬೋಳಿಸಿದೆ.

MAHOMED ALI, *For Dy. Commr.*

HASSAN DISTRICT.

ಹಾಸನ ಡಿಸ್ಟ್ರಿಕ್ಟು.

ಸರ್ 1876ನೇ ಇಸವಿ ಮಾರ್ಚಿ 27ನೇ ತಾರೀಖಿನ ದಿವಸ ಹಾಸನದ ಕಸಬಾದಲ್ಲಿ ಈ ಕೆಳಗೆ ನಮೂಸಿಸಲ್ಪಡುವ ಹಳೇ ಡೇರಾಗಳು ಹರಾಜ್ ಹಾಕಲ್ಪಡುತ್ತವೆ.

2	ಡಬಲ್ ಪೋಲ್‌ಟೆಂಟುಗಳು	2	ಸಿಂಗಿಲ್ ಪೋಲ್ ಹಿಲ್ ಟೆಂಟುಗಳು
2	ರಾವುಟಿಗಳು	2	ಪ್ರಿವಿ ಟೆಂಟುಗಳು

ಪ್ರತಿ ಒಂದು ಡೇರೆಯು ಬೇರೆಬೇರೆಯಾಗಿ ಹರಾಜು ಹಾಕಲ್ಪಟ್ಟು ಜಾಸ್ತಿದರಖಾಸ್ತುದಾರನಿಗೆ ಕೊಡಲ್ಪಡುವದು, ಸದರೀ ತಾರೀಖಿನ 11 ಘಂಟೆಗೆ ಡೆಪ್ಯುಟಿ ಕಮಿಷ್ನರ ಆಫಿಸಿನಲ್ಲಿ ಹರಾಜು ಪ್ರಾರಂಭಿಸುವದು.

ನಗದು ಹಣಾ ಹಾಜರ್ ಮಾಡಬೇಕು.

ತಾರೀಖು 12ನೇ ಫಿಬ್ರವರೀ 1876ನೇ ಯಿಸವಿ, ಮೊಕ್ಕಾಂ ಹಾಸನ.

Notice regarding an application of Venkamma for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟು ಡೆ|| ಕಮಿಷ್ನರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಅರಕಲಗೂಡು ತಾಲ್ಲೂಕು ಬನವಾಪಟ್ಣದಲ್ಲಿರುವ ಫೌತೀ ಆದ ಶೇಕ್‌ದಾರ್ ಕೇಶವರಾಯನ ಹೆಂಡತಿ ವೆಂಕಮ್ಮ ನೆಂಬುವಳು ಫೌತೀಆದ ತನ್ನ ಗಂಡನ ಸಾಲ 950 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ, 1860ನೇ ಇಸವಿ 27ನೇ ಆಕ್ಟುಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟ ಅರ್ಜೀ ಫೈಸಲ್ ಬಗ್ಯೆ

ಸನ ಮಜಕೂರ ಮಾರ್ಚಿ 21ನೇ ತಾರೀಖನ್ನ ನಿಷ್ಪರ್ಷ ಮಾಡಿರುವದರಿಂದ ತಕರಾರು ಯಿರತಕ್ಕವರು ಮೇಲೆ ಕಂಡ ತಾರೀಖು ಹಗಲು 11 ಘಂಟೆಗೆ ಕೋರ್ಟುಯಿದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು ಯಿಧೆ.

ತಾರೀಖು 19—2—76.

H. E. Mottet,
Offg. Dy. Commr.

SHIMOGA DISTRICT.

Notice regarding an application of Ram Rao for a certificate under Act XXVII of 1860.

ಶಿವಮೊಗ್ಗಾ ಡಿ|| ಡೆಪ್ಯುಟಿ ಕಮ್ಮಿಷನರ್‌ಕೋರ್ಟಿನಿಂದ.

ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಘಾತೀಪಟ್ಟ ತನ್ನತಂದೆ ಸೂಲಬೆಲೆ ಕೃಷ್ಣರಾಯನಿಗೆ ಹೊರಗಿನಿಂದ ಬರತಕ್ಕ ಸಾಲ 500 ರೂಪಾಯಿ ವಸೂಲ್ ಮಾಡಿಕೊಳ್ಳುವ ಬಗ್ಯೆ ತನ್ನ ಹೆಸರಿಗೆ ಸರ್ಟಫಿಕೇಟ ಕೊಡಿಸಬೇಕಾಗಿ ಆತನಮಗ ರಾಮರಾಯನು ಅಪ್ಲಿಕೇಷನ ಕೊಟ್ಟಿದ್ದಾನೆ, ಈ ಸಂಗತಿ ಬರುವ ಮಾರ್ಚಿ ತಿಂಗಳು 20ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೆ, ತಕರಾರ್ ಉಳ್ಳವರು ಆ ದಿನ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ಬತಾರೀಖು 10ನೇ ಫಿಬ್ರುವರೀ ಸನ 1876ನೇ ಇಸವಿ, ಮೊಕ್ಕಾಂ ಶಿವಮೊಗ್ಗಾ.

ತಾರೀಖು 25ನೇ ಪಿಬ್ರುವರೀ 1876.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸುವದೇನಂದರೆ,—ಸನ 1875ನೇ ಇಸವಿ ಡಿಸೆಂಬರ 17ನೇ ಮರ್‍ತುದಿನಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್‌ನಿಂದ ತಪ್ಪಿಸಿಕೊಂಡು ಹೋದ ಈ ಕೆಳಗೆ ವಿವರಿಸಲ್ಪಟ್ಟ ದೊಡ್ಡಬುಡ್ಡೂ ಯಂಬುವನ ದಸ್ತಗಿರೀ ಬಗ್ಯೆ ತಕ್ಕ ಖಾತಮೀ ತಿಳಿಸತಕ್ಕವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುವದು.

ತ ಪ ಶೀ ಲ್ .

ಜೈಲ್ ರಿಜಿಸ್ಟರ ನಂಬರ 3890.—ಹೆಸರು ಮತ್ತು ತಂದೇ ಹೆಸರು, ದೊಡ್ಡಬುಡ್ಡೂ, ಕಾಸಿಂಖಾನ- ವಾಸಸ್ಥಳ ಹಿರೂರ್, ಶಿವಮೊಗ್ಗಾ ತಾಲ್ಲೂಕು, ಜಾತಿ ಮತ್ತು ಕಸಬು, ಮುಸಲ್ಮಾನ, ಕೂಲಿ. ತಪ್ಪಿತ, ಡಕಾಯತಿ, ತಾರೀಖು ಮತ್ತು ಸಜಾ ವಾಯಿದೆ ಮತ್ತು ಮೊಕದ್ದಮ ನಂಬರ, 25ನೇ ನವೆಂಬರ 1875, 1875ನೇ ಇಸವಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರ ಫೈಲ್ ನಂಬರು 32ನೇ ಮೊಕದ್ದಮೆಯಲ್ಲಿ ಐದುವರುಷಗಳು ಕಠಿಣ ಸಜಾ ಯಾರಿಂದ ಸಜಾ ಮೊಕರರಾದ್ದು, ಶಿವಮೊಗ್ಗಾ ಡಿ|| ಮ್ಯಾಜಿಸ್ಟ್ರೇಟರಿಂದ. ವಯಸ್ಸು 30.—ಎತ್ತರ 5 ಅಡಿ, 3½ ಅಂಗುಲ.ವರಾ, ಶಾಮಲವರ್ಣ, ಕಂಣುಗಳು ಡಿಟೋ ಕೆನ್ನೆ ಎಲುವುಗಳು ಉಬ್ಬಾಗಿವೆ. ಭುಜಗಳ ನಡುವೆ ಚಿಕ್ಕ ಮಚ್ಚೆ, ಬಲತೋಳಿನ ಮುಂದೆ ಘಾಯದ ಕಲೆ. ಇನ್ನೊಂದು ಬಲಮುಂಗೈ ಮುಂದೆ. ಯಡಕಂಕುಳ ಹಿಂದೆ ಬಂದು ಮಚ್ಚೆ. ಬಲತೊಡೆ ಮುಂದೆ ಎರಡು ಘಾಯದ ಕಲೆಗಳು. ಬಲಮೊಣಕಾಲು ಕೀಲಿನ ಹಿಂದೆ ಒಂದು ಉದ್ದವಾದ ಘಾಯದ ಕಲೆ. ಯಡತೊಡೆಯ ವಳಪಾರ್ಶ್ವ ಒಂದು ಘಾಯದ ಕಲೆ. ಯಡಗಾಲಿನ ಹೊರಪಾರ್ಶ್ವ ಎರಡು ಘಾಯದ ಕಲೆಗಳು ಇರತ್ತವೆ.

C. S. Blair,
Offg. Dy. Commr.

CHITALDROOG DISTRICT.

Notice of sale of right to sell opium and ganja in the District on the 23rd March 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಕಚ್ಚೇರಿಯಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ 1876ನೇ ಇಸವಿ ಏಪ್ರೆಲ್ ಗುರ್‍ರೇ ಲಾಗಾಯತು, ಸನ 1877ನೇ ಇಸವಿ ಮಾರ್ಚಿ ಆಖೈರ ವರಿಗೆ ವರುಷ 1ಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಗಾಂಜಾ, ಅಫೀಮು, ಮಾರಾಟಮಾಡುವ ಹಕೀಯತ್ತು, ಸನ 1876ನೇ ಇಸವಿ ಮಾರ್ಚಿ ತಾರೀಖು 23ನೇ ದಿವಿ 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಸಮಕ್ಷಮ ಹರಾಜ್ ಮಾಡಿಸಲ್ಪಡುತ್ತೆ.

2. ಹರಾಜು ಕೈದಾದ ಕೂಡ್ಲೆ ಜಡ ದರಖಾಸ್ತುದಾರನು 2 ತಿಂಗಳ ಖಿಸ್ತು ಹಣವನ್ನ ಠೇವಣಾತೀ ಯಿಡಬೇಕು. ಯಿದ್ದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಅದರಿಂದ ಆಗುವ ಲುಕಸಾನನ್ನ ಅವ್ವಲ್ ದರಖಾಸ್ತುದಾರನ ಜಿಂದಗಿ ಜಫ್ತೀ ಹರಾಜಿನಿಂದ ಭರ್ತಿ ಮಾಡಲ್ಪಡುತ್ತೆ. ದರಖಾಸ್ತುದಾರನು ತಾನು ಇಜಾರೇ ಷರತ್ತು ಪ್ರಕಾರ ನಡದುಕೊಳ್ಳತಕ್ಕ ಬಗ್ಯೆ ಯಾರನ್ನು ಜಾಮಿನ್ ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಆ ಮನುಷ್ಯನ ಲಾಯಖೀ ಮೊದಲಾದ್ದನ್ನು ಕುರಿತು ಆತ ವಾಸಮಾಡುವ ತಾಲ್ಲೂಕು ಅಮಲ್‌ದಾರರಿಂದ ಪಡದ ಸರ್ಟಿಫಿಕೇಟ ಹಾಜರ ಮಾಡಬೇಕು.

3. ಯಿಜಾರೇ ಮೊಬಲಗು ಸನ್ 1876ನೇ ಇಸವಿ ಏಪ್ರೆಲ್ 20ನೇ ತಾರೀಖಿನ ಮೊದಲು ಪ್ರತಿ ಮೂರನೇ ತಿಂಗಳ 20ನೇ ತಾರೀಖಿಗೆ ಸರಿಯಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಪಾವತೀ ಆಗುವ ತಾರೀಖಿನ ವರಿಗೂ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರಿಗೆ ಬಡ್ಡೀ ವಸೂಲ್ ಮಾಡುವದಲ್ಲದೆ ಬಾಬ್ ಪುನಹಾ ಹರಾಜ್ ಮಾಡಿಸಿ ಆ ಬಾಬತ್ ಲುಕ್‌ಸಾನ್ ಮೊದಲಿನ ಇಜಾರೇದಾರನ ಜಿಂದಗೀ ಜಫ್ತೀ ಹರಾಜಿನಿಂದ ತೆಗದುಕೊಳ್ಳಲಾಧೀತು.

4. ಜಾರೀಲಿರುವ ರೂಲ್ಸ್ ಪ್ರಕಾರ ರೂಪಾಯಿ 1ಕ್ಕೆ ಒಂದಾಣೆ ಮೇರ ಲೋಕಲ್ ಸೆಸ್ ವಸೂಲ್ ಮಾಡಲ್ಪಡುತ್ತೆ.

5. ಗಾಂಜಾ, ಅಫೀಮು, ಈ ಯೆರಡು ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದಿದ ಅಂಗಡೀ ದಾರರೇ ಈಗ ಅಂಗಡಿಗಳು ಯಿರುವ ಕ್ಲುಪ್ತವಾದ ಸ್ಥಳಗಳಲ್ಲಿಯೇ ಮಾರಾಟ ಮಾಡಲ್ಪಡಬೇಕು. ಡೆಪ್ಯುಟಿ ಕಮ್ಮಿಷನರವರ ಅಪ್ಪಣೇ ಶಿವಾಯಿ ಈಗ ಯಿರುವ ಸ್ಥಳಗಳನ್ನ ಬದಲಾಯಿಸಲೂ ಕೂಡದು, ಅಥವಾ ಹೊಸದಾಗಿ ಯಿಡಲೂ ಕೂಡದು.

6. ಈ ಕೆಳಗೆ ನಮೂದಿಸಿರುವ ದರಗಳಂತೆ ಗಾಂಜಾ ಬಾಬಿಗೆ ಲೈಸೆನ್ಸ್ ಫೀಜು ಕೊಡಬೇಕು, ರೂಪಾಯಿ 10 ಷಹರಿನಲ್ಲಿ, ರೂಪಾಯಿ 5 ಕಸಬಾ ಟವುನ್‌ಗಳಲ್ಲಿ, ರೂಪಾಯಿ 3—2—0 ಗ್ರಾಮಾಂತ್ರಗಳಲ್ಲಿ.

7. ಯಾವದಾದರೂ ಚಿಲ್ಲರೇ ಅಂಗಡಿಗಳನ್ನ ಮೌಕೂಫ್ ಮಾಡಿಸುವದು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ತೋರುವ ಪಕ್ಷಕ್ಕೆ ಅಂಥಾದ್ದನ್ನ ಮವುಕೂಫು ಮಾಡಿಸುವದಲ್ಲದೆ ಅದಕ್ಕಾಗಿ ಕಂಪೆನ್‌ಸೇಷನ್ ಯೇನೂ ಕೊಡುವದಿಲ್ಲ.

8. ಯಿಜಾರೇದಾರನು ಹರಾಜ್ ಖೈದಾದನಂತರ ಡೆಪ್ಯುಟಿ ಕಮ್ಮಿಷನರವರ ಸಮಕ್ಷಮ ನಮೂನೇ ಅನುಸರಿಸಿ ಕ್ರಮವಾದ ಛಾಪಾಕಾಗದದ ಮೇಲೆ ಯಿಜಾರೇ ಮತ್ತು ಜಾಮಿನೀ ಮುಚ್ಚಳಿಕೆಗಳನ್ನ ಬರದು ಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಅದರ ಲುಕ್‌ಸಾನ್ ಅವನಿಂದ ವಸೂಲ್ ಮಾಡಲಾಧೀತು.

Notice of sale of right to sell by retail arrack in the undermentioned shops.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರ ಬಾಜೂದಲ್ಲಿ ನಮೂದಿರುವ ಜಾಗ್ಯಾಗಳಲ್ಲಿ ಷರಾಬ ಚಿಲ್ಲರ ಅಂಗಡೀಯಲ್ಲಿ ಷರಾಬನ್ನ ಚಿಲ್ಲರೇಯಾಗಿ ಮಾರಾಟ ಮಾಡತಕ್ಕ ಹಕ್ಕೀ ಯತು ಸನ್ 1876ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯತು ಒಂದು ವರುಷಕ್ಕೆ ಡಿಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ, ಸನ್ 1876ನೇ ಇಸವಿ ಮಾರ್ಚಿ ತಾರೀಖು 22ನೇ ದಿವಿ 11 ಘಂಟೆಗೆ ಹರಾಜು ಮಾಡಲ್ಪಡುತ್ತೆ.

2. ಬಾಜೂದಲ್ಲಿ ನಮೂದಾದ ಅಂಗಡೀಗಳ ಶಿವಾಯಿ ಚಕ್ಕು ಬಂದೀ ಪಟ್ಟೀಯಲ್ಲಿ ನಮೂದಿರುವ ಯಿತರ ಕ್ಲುಪ್ತವಾದ ಅಂಗಡೀಗಳು ಸಹಾ ಜನಗಳು ಖಾಯಿಷ್ ಮಾಡಿದಲ್ಲಿ ಪೋಟಾ ಪೋಟೀ ಮಾಡಿಸಲ್ಪಡುತ್ತೆ.

ಹರಾಜ್ ಆಗತಕ್ಕ ದುಕಾನಗಳು.

4. ಚಿತ್ರದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗ ಕಸಬಾ ಅಂಗಡೀಗಳು.

15. ತಾಲ್ಲೂಕು ದಾವಣಗೆರೆ.

4. ಕಸಬಾ ದಾವಣಗೆರೆ ಅಂಗಡಿ — 1. ಹೆಬ್ಬಾಳು
5. ಹರಿಹರ ಕಸಬಾ ದುಕಾನುಗಳು — 1. ಮಾಲೆಬೆನ್ನೂರು
1. ಗುತ್ತೂರು — 1. ವಾಸನ
1. ಭರಮಸಾಗರ — 1. ಬಾಕೀ ದುಕಾನು ಪುರಿನಲ್ಲಿ ಅಲಾಹಿದಾ ಲೈಸೆನ್ಸ್ ಪಡೆದು ಪರಿಷೇಯಲ್ಲಿ ಮಾರುವಬಗ್ಯೆ ಸಹಿತ

1. ತಾಲ್ಲೂಕು ಕಣಕುಪ್ಪ, ಜಗಲೂರು ದುಕಾನು.

7. ತಾಲ್ಲೂಕು ದೊಡ್ಡೇರಿ.

2. ಮೊಳಕಾಲ್ಮುರು ಕಸಬಾ ದುಕಾನುಗಳು — 1. ಶಿರೇಕೊಳಾ
1. ರಾಮಪುರ
1. ಕೊಂಡ್ಲಹಳ್ಳಿ — 1. ನಾಯ್ಕನಹಟ್ಟೀ ಜಾತ್ರೇಯಲ್ಲಿ ಮಾರುವಬಗ್ಯೆ ಸಹಿತ
1. ಬಂಮಗೊಂಡ್ನ ಕೆರೆ

4. ಹಿರಿಯೂರು ತಾಲ್ಲೂಕು.

1. ಹಿರಿಯೂರು	1. ಬುರಜನರೊಪ್ಪ
1. ಮರಡೀಹಳ್ಳಿ	1. ಯರಬಳ್ಳಿ
1. ಪಾವಗಡ ಕಸಬಾ ದುಕಾನು.

3. ಹರಾಜು ಮೊಬಲಗು ಡೆಪ್ಯುಟಿ ಕಮಿಷನರ್ ಸಾಹೆಬರವರ ಸಮಕ್ಷಮ ಹರಾಜು ಖೈದಾದಕೂಡ್ಲೇ ಹಾಜರ್ಮಾಡಲ್ಪಡಬೇಕು, ಇದಕ್ಕೆ ತಪ್ಪಿದಲ್ಲಿ ಹಕೀಯತ್ ಪುನಹಾ ಹರಾಜು ಮಾಡಲ್ಪಟ್ಟು ಆದರಿಂದ ಸಂಭವಿಸುವ ಲುಕ್ಸಾನಿಗೆ ಷುರೂ ದರಖಾಸ್ತು ದಾರ್ರನ್ನ ಗುರೀ ಮಾಡಲಾಧೀತು.

4. ಷರಾಬ್ ಚಿಲ್ಲರೇಅಂಗಡೀ ಬಿಕ್ರೀದಾರರು ಡೆಪ್ಯುಟಿ ಕಮಿಷನರವರಿಂದ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಂತೆ, ಮತ್ತು ಆಗಿಂದಾಗ್ಯೆ ಅಮಲ್‌ದಾರ್ರಿಗೆ ಕೊಡಲ್ಪಡುವ ಸರ್ಕ್ಯುಲರ್ ಹುಕುಂಗಳ ಪ್ರಕಾರ ಖಂಡಿತವಾಗಿ ನಡೆದುಕೊಳ್ಳಬೇಕು

5. ಪ್ರತಿ ಒಂದು ಅಂಗಡಿಯಕ್ಕು ಪ್ರಸ್ತಾವಾದ ಲೈಸೆನ್ಸ್ ಫೀಜ್ ಬಾಬತು ಕ್ವಾರ್ಟರಿಲಿ ಮೊಬಲಗನ್ನು ಪ್ರತಿ ಕ್ವಾರ್ಟರಿನ 1ನೇ ತಾರೀಖಿನಲ್ಲಿ ಅಂದರೆ, ಯೇಪ್ರೈಲ್, ಜುಲೈ, ಅಕ್ಟೋಬರ್, ಜನವರೀ, ಈ ತಿಂಗಳುಗಳ ಗುರ್ರೇ ತಾರೀಖಿನಲ್ಲಿ ಮುಂಗಡವಾಗಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಸದರೀ ಮೊಬಲಗು ಪೂರಾ ವಸೂಲ್ ಬರುವ ತಾರೀಖಿನ ವರಿಗೂ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರೆ ಬಡ್ಡೀ ವಸೂಲ್ ಮಾಡಲ್ಪಡುವದಲ್ಲದೆ ಲೈಸೆನ್ಸ್ ಸಹಾ ರದ್ದು ಮಾಡಲಾಧೀತು.

6. ಸರ್ಕಾರದ ಡಿಸ್ಟಿಲೆರಿಯಿಂದ ತೆಗದುಕೊಂಡು ಹೋಗುವ ಷರಾಬಿಗೆ ಗ್ಯಾಲನ್ 1ಕ್ಕೆ ಯರಡು ರೂಪಾಯಿ ಯಂತೆ ಹೆಡ್‌ಡ್ಯೂಟಿ ಹಾಸಲ್ ಮತ್ತು ಯರಡಾಣೆ ಲೋಕಲ್‌ಫಂಡ್ ಸಹಾ ಕೊಡಬೇಕು.

ಬತಾರೀಖು 21ನೇ ಮಾಹೆ ಫಿಬ್ರವರೀ ಸರ್ 1876ನೇ ಇಸವಿ, ಮೊಕ್ಕಾಂ ಸುಂಟನೂರು.

Notice of sale of the right of collecting tolls on the Harihar bridge on the 22nd March 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1876ನೇ ಇಸವಿ ಯೇಪ್ರೈಲ್ ಗುರ್ರೇ ಲಾಗಾಯತು, ಸರ್ 1877ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ, ಒಂದು ವರುಷಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಕಸಬಾ ಹರಿಹರದಲ್ಲಿ ತುಂಗಭದ್ರಾ ಸೇತುವೆ ಮೇಲೆ ಮೈಸೂರು ಚೀಫ್ ಕಮಿಷನರ್ ಸಾಹೆಬರವರಿಂದ ಯೇರ್ಪಾಡಾಗಿರುವ ದರಗಳ ತಖ್ತೇ ಅನುಸರಿಸಿ ಟೋಲ್ ಹಾಸಲ್ ವಸೂಲಿ ಮಾಡುವ ಹಕ್ಕನ್ನ ಸರ್ 1876ನೇ ಇಸವಿ ಮಾರ್ಚಿ 22ನೇ ತಾರೀಖು 12 ಘಂಟೆಗೆ ಚಿತ್ರದುರ್ಗದ ಮೊಕ್ಕಾಮಿನಲ್ಲಿ ಯಿದರಡಿ ದಸ್ತಖತ್ ಮಾಡಿರುವವರ ಯದುರಾಗಿ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ. ಸದರೀ ಟೋಲ್ ಹಾಸಲ್‌ನಿಂದ ಹಿಂದೆ 6 ವರುಷಗಳಲ್ಲಿ ಸರಕಾರಕ್ಕೆ ಉತ್ಪತ್ತಿ ಆದ ಮೊಬಲಗು ಯಿದರ ಕೆಳಗೆ ತೋರಿಸಲ್ಪಟ್ಟು ಯಿದೆ.

ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.	ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.
70—71	3222—11—6	0—0—0	73—74	5632—8—1	0—0—0
71—72	80—8—0	4441—15—2	74—75	3593—1—6	0—0—0
72—73	0—0—0	4000—0—0	75—76	0—0—0	4760—0—0

2. ಜಡ ದರಖಾಸ್ತು ಡೆಪ್ಯುಟಿ ಕಮಿಷನರವರು ಅಂಗೀಕರಿಸಿದಲ್ಲಿ ನಗರ ಡಿವಿಜನ್ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಕಳಿಸಲ್ಪಟ್ಟದ್ದಾಗಿರುತ್ತೆ, ಮತ್ತು ಅವರ ಸಾಂಗ್‌ಷನ್ ತಲಪಿದ ನಂತರ ಬಾಬು ಯಿಜಾರೇದಾರನ ಸುಪರ್ದು ಮಾಡಲ್ಪಡುತ್ತೆ.

3. ದರಖಾಸ್ತು ಡೆಪ್ಯುಟಿ ಕಮಿಷನರವರಿಂದ ಅಂಗೀಕರಿಸಲ್ಪಟ್ಟ ಕೂಡ್ಲೇ ಯಿಜಾರೇದಾರನು 2 ತಿಂಗಳ ಖಿಸ್ತು ಮೊಬಲಗನ್ನು ಠೇವಣಾತೀ ಯಿಡಬೇಕು, ದರಖಾಸ್ತು ಸಾಂಗ್‌ಷನ್ ಆಗದೆ ಹೋಗುವ ಪಕ್ಷಕ್ಕೆ ಸದರೀ ಠೇವಣಾತೀ ಹಣವು ವಾಪಸ್ ಮಾಡಲ್ಪಡುತ್ತೆ. ಠೇವಣಾತೀ ಹಣಾ ಯಿಡುವದಕ್ಕೆ ತಪ್ಪಿದಲ್ಲಿ ಯಿಜಾರೇಯನ್ನು ಪುನಹಾ ಹರಾಜು ಮಾಡಿಸಿ ದರಖಾಸ್ತು ದಾರನನ್ನು ಲುಕ್ಸಾನಿಗೆ ಗುರಿಮಾಡುವದಾಗುತ್ತೆ.

4. ಯಿಜಾರೇ ಮೊಬಲಗು ತಾಲ್ಲೂಕು ಖಜಾನೇಯಲ್ಲಿ 12 ತಿಂಗಳ ಖಿಸ್ತುಗಳಿಂದ ಪ್ರತಿ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಪಾವತೀ ಮಾಡಲ್ಪಡಬೇಕು. ಮೊದಲನೇ ಖಿಸ್ತು ಯೆಪ್ರೈಲ್ 20ನೇ ತಾರೀಖಿಗೂ, ಬಾಕೀ ಖಿಸ್ತುಗಳು ಮಾರನೇ ತಿಂಗಳು 20ನೇ ತಾರೀಖಿಗೆ ಸರಿಯಾಗಿಯೂ ಪಾವತೀ ಮಾಡುತ್ತಾ ಬರಬೇಕು. ಇದಕ್ಕೆ ತಪ್ಪಿದಲ್ಲಿ ಇಜಾರೇ ಪುನಹಾ ಹರಾಜು ಮಾಡಲ್ಪಟ್ಟು ಆದರಿಂದ ಸಂಭವಿಸುವ ಲುಕಸಾನು ಹಿಂದಣ ಬಾಕೀ ಸಹಾ ಯಿಜಾರೇದಾರನ ಚರ ಸ್ಥಿರ ಆಸ್ತಿ ಜಫ್ತೀ ಮೂಲಕ ಭರ್ತಿ ಮಾಡಿಕ್ಕೊಳ್ಳಲ್ಪಡುವದಲ್ಲದೆ ಮೊಬಲಗು ಪೂರಾ ಪಾವತೀ ಆಗುವವರಿಗೂ ರೋಜೀನಾ ರೂಪಾಯಿ 1ಕ್ಕೆ ಅರ್ಧ ಪೈ ಪ್ರಕಾರ ಬಡ್ಡೀ ಸಹಾ ವಸೂಲ್ ಮಾಡಲ್ಪಡುವದು.

5. ಯಿಜಾರೇ ಷರತ್ತು ಪ್ರಕಾರ ಸರಿಯಾಗಿ ನಡದುಕ್ಕೊಳ್ಳುವದಕ್ಕೆ ಖಾತರೀ ಬಗ್ಯೆ ಯಿಜಾರೇದಾರನು ಯಾರನ್ನು ಜಾಮೀನು ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಅಂಥಾ ಜಾಮೀನ್ದಾರನ ಲಾಯಖೀ ವಿಷಯದಲ್ಲಿ ತಕ್ಕ ಅಧಿಕಾರಸ್ಥರಿಂದ ಪಡೆದ ಸರ್ಟಿಫಿಕೇಟ್ ಹಾಜರ ಮಾಡದೆ ಯಿದ್ದಲ್ಲಿ ದರಖಾಸ್ತು ಮಂಜೂರ್ ಮಾಡಲ್ಪಡುವದಿಲ್ಲ.

6. ಇಜಾರೇಕಾಲ ಉಪಕ್ರಮಿಸುವದಕ್ಕೆ ಮುಂಚೆಯೇ ಯಿಜಾರೇದಾರನು ಕ್ರಮವಾದ ಛಾಪಾ ಕಾಗದದ ಮೇಲೆ ನಮೂನೇ ಅನುಸರಿಸಿ ಯಿಜಾರೇ ಮತ್ತು ಜಾಮೀನು ಮುಚ್ಚಳಿಕೆಗಳನ್ನು ಬರದು ಕೊಡಬೇಕು, ಅದಕ್ಕೆ ತಪ್ಪಿದಲ್ಲಿ 4ನೇ ಕಲಮಿನಲ್ಲಿ ನಮೂದಾಗುವ ದಂಡವು ವಿಧಿಸಲ್ಪಡುತ್ತೆ.

7. ಯಿಜಾರೇ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್ ಸೆಸ್ ವಸೂಲ್ ಮಾಡಲ್ಪಡುವದು.

8. ಟೋಲ್ ಹಾಸಲ್ ಸೇತುವೆ ಮೇಲೆ ಮಾತ್ರ ವಸೂಲ್ ಮಾಡಲ್ಪಡಬೇಕೇ ಹೊರ್ತು ಕಾಲು ಹಾದಿಗಳನ್ನು ಉಪಯೋಗಿಸಿಕ್ಕೊಳ್ಳುವ ಜನಗಳಿಂದ ವಸೂಲ್ ಮಾಡಕೂಡದು, ಕಾಲುಹಾದಿಗಳು ಯಲ್ಲರಿಗೂ ಖುಲ್ಲಾ ಯಿರುತ್ತೆ.

ತಾರೀಖು 26ನೇ ಮಾಹೆ ಪಿಬ್ರವರೀ ಸ್ನ 1876ನೇ ಇಸವಿ, ಮೊಕ್ಕಾಂ ಚಿತ್ರದುರ್ಗ.

E. F H. ARMSTRONG,
Offg. Dy. Commr.

COORG.

Notice regarding an application of Madaiya for a certificate under Act XXVII of 1860.

ಕೊಡಗು ಸೂಪರಿಂಟೆಂಡೆಂಟ್ ಕೋರ್ಟಿನಿಂದ.

ಸ್ನ 1876ನೇ ಇಸವಿ ಶಿವಿಲ್ ನಾನಾವಿಧ ಮೊಕದ್ದಮಾ ನಂಬರ್ 1.

ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ,—ಮಡಿಕೇರಿ ತಾಲ್ಲೂಕು ಪೈಕೀ ಹೊರೂರು ನೂರೊಕ್ಕಲುನಾಡು ಯಿಬ್ನಿವಳವಾಡಿ ಗ್ರಾಮದ ಚೆಟ್ರಂಡ ಮಾದೈಯ್ಯನು, ತನ್ನ ಖಾಸಾಭಾವ ಕಡಿಯತ್ತುನಾಡು ಆರಪಟ್ಟು ಗ್ರಾಮದ ಪಾಲಚಂಡ ಘಾತೀ ಮಾದೈಯಗೆ ಹೊರಗಿನಿಂದ ಬರತಕ್ಕ 2000 ರೂಪಾಯಿ ಸಾಲ ಅವನ ಮಗ ಪಂಣಚ್ಚ ಸುಬ್ಬಪ್ಪನೆಂಬ ಬಾಲರಿಗೋಸ್ಕರ ವಸೂಲ್ ಮಾಡಿಕ್ಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರ್ಟಿಫಿಕೇಟ್ ಕೊಡಿಸಿಕೊಡಬೇಕೆಂಬದಾಗಿ, ದರಖಾಸ್ತು ಮಾಡಿರುವ ಮೊಕದ್ದಮಾ ಸ್ನ 1876ನೇ ಇಸವಿ ಮಾರ್ಚೀ ತಾರೀಖು 8ನೇ ದಿನ ಮಡಿಕೇರಿಲಿ ಸೆಕೆಂಡ್‌ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಕೋರ್ಟಿನಲ್ಲಿ ಹಿಯರಿಂಗ್ ಆಗುವದರಿಂದ, ಯಿದಕ್ಕೆ ಯಾರಾದರೂ ಹಕ್ಕುದಾರ್ರು ಬಾಧ್ಯಪಟ್ಟವರು ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬಹುದು.

ತಾರೀಖು 4ನೇ ಫಿಬ್ರವರೀ ಸ್ನ 1876ನೇ ಇಸವಿ, ಮೊಕ್ಕಾಂ ಮಡಿಕೇರಿ.

Notice regarding an application of Ponnappa for a certificate under Act XXVII of 1860.

ಸ್ನ 1876ನೇ ಇಸವಿ ಶಿವಿಲ್ ನಾನಾವಿಧ ಮೊಕದ್ದಮಾ ನಂಬರ್ 2.

ಇದರಿಂದ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ,—ಮಡಿಕೇರಿ ತಾಲ್ಲೂಕು ಪೈಕೀ ಹುದಿಕೇರಿ ಕಾಂತು ಮೂರುನಾಡು ಕಿಗ್ಗಟ್ಟುಗ್ರಾಮದ ತುಳುವಂಡ ಪೊನ್ನಪ್ಪನು, ಘಾತೀ ತಂದೇ ಭೀಮಯಗೆ ಹೊರಗಿನಿಂದ ಬರತಕ್ಕ 980 ರೂಪಾಯಿ ವಸೂಲ್ ಮಾಡಿಕ್ಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟುಮೇರೆ ಬಾಧ್ಯತೆಸರ್ಟಿಫಿಕೇಟ್ ಕೊಡಿಸಬೇಕೆಂಬದಾಗಿ ದರಖಾಸ್ತು ಮಾಡಿರುವ ಮೊಕದ್ದಮಾ ಸ್ನ 1876ನೇ ಇಸವಿ ಮಾರ್ಚೀ ತಾರೀಖು 8ನೇ ದಿನ ಮಡಿಕೇರಿಲಿ ಸೆಕೆಂಡ್ ಅಸಿಸ್ಟೆಂಟ್ ಸೂಪ್ರಿಂಟೆಂಡೆಂಟ್ ಕೋರ್ಟಿನಲ್ಲಿ ಹಿಯರಿಂಗ್ ಆಗುವದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರ್ರು ಬಾಧ್ಯಪಟ್ಟವರು ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬಹುದು.

Notice regarding an application of Subbakka for a certificate under Act XXVII of 1860.

ಸರ್ 1876ನೇ ಇಸವಿ ಶಿವಿಲ್ ನಾನಾವಿಧ ಮೊಕದ್ದಮು ನಂಬರ್ 3.

ಇದರಿಂದ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ,—ಮಡಿಕೇರಿ ತಾಲ್ಲೂಕು ಪೈಕೀ ಕಗ್ಗೋಡು ನಾಡು ಮೇಕೆರಿಗ್ರಾಮದ ಕಾರೇರ ಸುಬ್ಬಕ್ಕನು, ಘಾತೀ ಗಂಡ ಪೊಂಣಿನ್ನೆಯಗೆ ಹೊರಗಿನಿಂದ ಬರತಕ್ಕ 800 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರೆ ಬಾಧ್ಯತೆ ಸರ್ಟಫಿಕೇಟ ಕೊಡಬೇಕೆಂಬದಾಗಿ ದರಖಾಸ್ತು ಮಾಡಿರುವ ಮೊಕದ್ದಮು ಸರ್ 1876ನೇ ಇಸವಿ ಮಾರ್ಚಿ ತಾರೀಖು 8ನೇ ದಿನ ಮಡಿಕೇರಿಲಿ ಸೆಕೆಂಡ್ ಆಸಿಸ್ಟೆಂಟ್ ಸೂಪ್ರಿಂಟೆಂಡೆಂಟ ಕೋರ್ಟನಲ್ಲಿ ಹಿಯರಿಂಗ್ ಆಗುವದ್ದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಿಕ್ಕೊಳ್ಳಬಹುದು

Notice regarding an application of Ramamma for a certificate under Act XXVII of 1860.

ಸರ್ 1876ನೇ ಯಿಸವಿ ಸಿವಿಲ್ ನಾನಾವಿಧ ಮೊಕದ್ದಮು ನಂಬರ್ 4.

ಇದರಿಂದ ಸರ್ವ ಜನರಿಗೂ ತಿಳಿಯಪಡಿಸುದೇನಂದರೆ,—ಮಡಿಕೇರಿ ಮಹದೇವಪೇಟೆ ಲಿರುವ ವೈಶ್ಯರ ರಾಮಮ್ಮನು ಘಾತೀ ಗಂಡ ಪಿಂಚರ್ ಸಂಪಾ ರಂಗಪ್ಪನಿಗೆ, ಹೊರಗಿನಿಂದ ಬರತಕ್ಕ 1000 ರೂಪಾಯಿ ವಸೂಲ್ ಮಾಡಿಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟುಮೇರೆ ಬಾಧ್ಯತೆ ಸರ್ಟಫಿಕೇಟ್ ಕೊಡಿಸಬೇಕೆಂಬದಾಗಿ ದರಖಾಸ್ತು ಮಾಡಿರುವ ಮೊಕದ್ದಮಾ ಸರ್ 1876ನೇ ಇಸವಿ ಮಾರ್ಚಿ ತಾರೀಖು 8ನೇ ದಿನ ಮಡಿಕೇರಿಲಿ ಸೆಕೆಂಡ್ಆಸಿಸ್ಟೆಂಟ್ ಸೂಪ್ರಿಂಟೆಂಡೆಂಟ ಕೋರ್ಟನಲ್ಲಿ ಹಿಯರಿಂಗ್ ಆಗುವದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರು ಬಾಧ್ಯಪಟ್ಟವರಿದ್ದರೆ ಸದರೀ ತಾರೀಖಿನ ಹಗಲು 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಿಕೊಳ್ಳಬಹುದು.

ಬತಾರೀಖು 1ನೇ ಫಿಬ್ರವರೀ 1876ನೇ ಇಸವಿ.

A. G. D. LOGAN,
Offg. Superintendent.

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ ಆದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 11, ಸ್ತ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 10ನೇ ಮಾರ್ಚಿ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ಯಾದಿಗಳು ಮತ್ತು ಅರ್ಜೀದಾರರಹೆಸರು	ಪ್ರತಿವಾದಿಗಳ ಹೆಸರು	ಹಿಯರಿಂಗ್ ತಾರೀಖು.
ಅಪ್ಪೀಲ್ ೧	ಲಕ್ಷ್ಮಣೈಯ ..	ಶ್ರೀಧರಲಕ್ಷ್ಮೀನರಸಿಹ್ಮಶಾಸ್ತ್ರೀವಗೈರೆ	೧೪ನೇ ಮಾರ್ಚಿ
ಸ್ಪಿ. ಅ. ೧೦	ಮಿನ್ನಾಮಿಯಾ ..	ಪೊಛಾಬೀ ..	ಡಿಟೋ
ಸ್ಪಿ. ಅ. ೯	ಶೇಷಭಟ್ಟಾ ..	ವೆಂಕಟನಾರಣಪ್ಪಾ ..	ಡಿಟೋ
ಫ್ರೂಟ್ ಸ್ಪಿ. ಅ. ೩	ಶಿದ್ದಪ್ಪ, ಗಾರಡಿಯರ್ ತೋಟಂಣಾ ..	.. ..	ಡಿಟೋ
ಫ್ರೂಟ್ ಸ್ಪಿ. ಅ. ೪	ಸೂರಪ್ಪಾ ..	ರಾಮಾಭಟ್ಟಾ ..	ಡಿಟೋ
ಸ್ಪಿ. ಅ. ೪	ನಾಮಗಿರಿಯಮ್ಮ ..	ಶ್ರೀನಿವಾಸರಾಘವಾಚಾರಿ ವಗ್ಯೆರೇ ..	೧೬ನೇ ಡಿಟೋ
ಸ್ಪಿ. ಅ. ೧೧	ರಾಜಗೋಪಾಲೈಯಂಗಾರ್ .	ಮಲ್ಲಾ ..	ಡಿಟೋ
ಸ್ಪಿ. ಅ. ೧೨	ಕೃಷ್ಣಪ್ಪಾಜಿ ..	ಲಿಂಗರಾಜೈಯ ..	ಡಿಟೋ
ಸ್ಪಿ. ಅ. ಸ್ಪೆ. ರಿ. ಪಿ. ೬	ಸುಬ್ಬಣ್ಣಾಚಾರಿ ..	ವೇಣೀಮಾಧವಾಚಾರಿ ವಗ್ಯೆರೇ ..	ಡಿಟೋ
ಸ್ಪಿ. ಅ. ೧೩	ರುದ್ರಪ್ಪಾ ..	ಸ್ವಾಮಿರಾವ್ ..	೨೩ನೇ ಡಿಟೋ
ಸ್ಪಿ. ಅ. ೧೪	ದೊಡ್ಡಮ್ಮ. ಹೆಗ್ಗಡತ್ತಿ ..	ಲಕ್ಷ್ಮೀ ನಾರಣಭಟ್ಟಾ ..	ಡಿಟೋ
ಸ್ಪಿ. ಅ. ೧೫	ಷರೀಪ್ ಖಾ ..	ಖಾಶಿಂಖಾ ..	ಡಿಟೋ
ಪಿಟೀಷನ್	ಗುಂಡಪ್ಪಾ ..	.. ..	ಡಿಟೋ

ತಾರೀಖು 12ನೇ ಫೆಬ್ರುವರಿ 1876.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಮೇ ಆಖೈರ್ ವರಿವಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು, ಅಥವಾ ಹೆಡ್‌ರೈಟರ ಪ್ರತಿಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ:—

(a) ಕಕ್ಷಿಗಾರ್ರು ಹಾಜರ್ಮಾಡಲಿಛ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ;

(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸ್‌ಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆಬಗ್ಯೆ ಕಮ್ಮಿಷನರವರ ಕೋರ್ಟಿನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸೈನ್‌ಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ;

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರು, ಶಿರಸ್ತೇದಾರ್ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತುಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಮೈಸೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು ಸನ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ ಪ್ರಕಾರ ಜೈಲ್ ಸೂಪರ್ನಟೆಂಡೆಂಟರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 6ನೇ ಮಾರ್ಚಿ 1876.

ಇದರಿಂದ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಮೇ ಆಖೈರ್ ವರಿವಿಗೆ ಎರಡು ತಿಂಗಳು ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು ಪ್ರತಿ ಸೋಮವಾರ ವ ಬೃಹಸ್ಪತಿವಾರ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ:—

(a) ಕಕ್ಷಿಗಾರ್ರು ಹಾಜರ್ಮಾಡಲಿಛ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಮತ್ತು ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ;

(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸ್‌ಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆ ಬಗ್ಯೆ ಕಮ್ಮಿಷನರವರ ಕೋರ್ಟಿನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸೈನ್‌ಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರ್ರು, ಶಿರಸ್ತೇದಾರ್ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯಂಬದಾಗಿ ದಸ್ತುಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಕಡೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು, ಸನ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ ಪ್ರಕಾರ ಸಿವಿಲ್ ಜೈಲ್ ಕೀಪರಯವರಲ್ಲಿ ಪಾವತೀ ಮಾಡತಕ್ಕದ್ದು.

H. T. PRINSEP,
Offg. Judl. Commr.

ಇನಾಂ ಇಲಾಖಾ.

ನಂ. 20. ತಾರೀಖು 17ನೇ ಫಿಬ್ರುವರೀ 1876.

ಸನ್ 1876ನೇ ಇಸವಿ ಜನವರೀ ತಿಂಗಳಲ್ಲಿ ರದ್ದು ಮಾಡಲ್ಪಟ್ಟ ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತಾ.

ತಾಲ್ಲೂಕು.	ಗ್ರಾಮ.	ಇನಾಂದಾರರ ಹೆಸರು.	ತಪಸೀಲ್. ಬೀಜವರಿ. ಎಕರೆ.	ಬೀಜವರಿ. ಖ.ಕೊ.ಪ.	ಪೇರೀಜು. ರೂ. ಆ. ಪೈ.	ಜೋಡಿ. ರೂ. ಆ. ಪೈ.	ಜೋಡಿ ಸೇರಿ ಕ್ವಿಟ್‌ರೆಂಟ್. ರೂ. ಆ. ಪೈ.	ಮುಜರಾಇ ಮೊಬಲಗು ರೂ.ಆ.ಪೈ.	ಪಟ್ಟೇ ನಂಬರ.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಮುಳಬಾಗಲು.	ಉಗನಿ.	ಉಪ್ಪಾರಹಳ್ಳೀ ಸೂರನಾರಣಭಟ್ಟ.	0	0 2 0	1 5 0	0	0 2 0	0	33247	ಇನಾಂದಾರನು ಒಂದು ವರುಷದೊಳಗಾಗಿ ತನ್ನ ಟೈಟಲ್ ಡೀಡನ್ನು ಪಡೆಯಲಿಕ್ಕೆ ತಪ್ಪಿದ ಸಬಬ್.	ನಂಬರ 855, ತಾರೀಖು 4ನೇ ಜನವರೀ 1876.
ಕೋಲಾರ.	ಅರಿದ್ರಾಪೂರ ಮಹಲ್ ಜೋಡಿ.	ತ್ಯಾವನಹಳ್ಳೀ ಪೀತಾಂಬರೈಯ, 2ನೇ ಮುನೆಪ್ಪ.	0	0 1 0	0 11 8	0	0	0	32458	ಸರ್ವೇ ಇಲಾಖೆಯವರಿಂದ ವ್ಯವಸ್ಥೆ ಆಗತಕ್ಕ ಬಗ್ಯೆ ಇನಾಂಗಳು ಈಚಿಗೆ ಅನಾಮತ್ ಇಡಲ್ಪಟ್ಟಿವೆ.	ನಂಬರ 904, ತಾರೀಖು 8ನೇ ಫಿಬ್ರುವರೀ 1876.
	ಡಿಟೋ	ತತ್ಕಾಲದಲ್ಲಿ ಸರ್ವಿಸ್‌ದಾರನು.	0	0 3 0	0 14 0	0	0	0	35185	ಡಿಟೋ	ಡಿಟೋ
ಅಂಬಾಜಿ ದುರ್ಗ.	ಜೋಗಿವರಪಲ್ಲಿ.	ಸುಬ್ಬಣ್ಣ, 2ನೇ ರಾಜಪ್ಪ.	·13	0	0 11 8	0 7 10	0 8 0	0	111	ರಾಜೀನಾಮೆ ಕೊಟ್ಟದ್ದು.	ನಂ. 895, ತಾ|| 31ನೇ ಜನವರೀ 1876.
	ಗವಿಪಲ್ಲಿ.	ಡಿಟೋ, 2ನೇ ರಾಜಪ್ಪ.	·33	0	0 9 4	0 7 7	0 8 0	0	114	ಡಿಟೋ	ಡಿಟೋ
	ನಗರ್ಲಮೋಟ.	ತತ್ಕಾಲದಲ್ಲಿ ಕೆಲಸ ನೋಡತಕ್ಕವ.	0	0 3 7	6 6 5	0	3 4 0	0	36272-180	ಡಿಟೋ	ಡಿಟೋ
	ಕಾಪಲ್ಲಿ.	ಮುರುಗಮಲ್ಲ ಸದಾಶಿವಭಟ್ಟು, ರಾಮಸ್ವಾಮಿಶಾಸ್ತ್ರಿ ಮುರುಗಮಲ್ಲ.	·44	0	1 5 0	0	0 10 0	0	164	ಡಿಟೋ	ಡಿಟೋ

ತಾಲ್ಲೂಕು.	ಗ್ರಾಮ.	ಇನಾಂದಾರ್ರ ಹೆಸರು.	ತಪಸೀಲ್. ಜೀಜವರಿ. ಎಕರೆ.	ಜೀಜವರಿ. ಖು.ಕೂ.ಪ.	ಬೇರೀಜು. ರೂ. ಆ. ಪೈ.	ಜೋಡಿ. ರೂ. ಆ. ಪೈ.	ಜೋಡಿ ಶೇರಿ ಕ್ವಿಟರೆಂಟ್. ರೂ. ಆ. ಪೈ.	ಮುಜರಾ ಇ ಮೊಬಲಗು. ರೂ.ಆ.ಪೈ.	ಪಟ್ಟೇ ನಂಬರು.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು.
ಅಂಬಾಜಿ ದುರ್ಗ.	ಮರಿನಾಯನಪಲ್ಲಿ.	ರಾಮಸ್ವಾಮಿಶಾಸ್ತ್ರಿ 2ನೇ ಸದಾಶಿವಭಟ್ಟ.	2·60	0	4 8 10	0	2 4 0	0	477	ರಾಜೀನಾಮೆಕೊಟ್ಟದ್ದು.	ನಂ. 895, ತಾರೀಖು 31ನೇ ಜನವರೀ 1876.
	ಚೀಮೂವಹಳ್ಳಿ.	ಉಲವಾಡಿ ವೇಣು ಗೋಪಾಲ ಸ್ವಾಮಿ ಗುಡಿಯ ತಕ್ತಾ ಲದ ವಿಚಾರಣೇ ಕರ್ತರು.	1·40	0	2 7 7	0	1 4 0	0	266	ಡಿಟೋ	ಡಿಟೋ
ಶ್ರೀನಿವಾಸ ಪುರ.	ಇರ್ಲ ವಾರಿಪಲ್ಲಿ.	ಜೇಡಿಮೊಕಲಪಲ್ಲಿ ಚಂಗಪ್ಪ.	0	0 2 0	1 2 7	0	0 10 0	0	30380	ಡಿಟೋ	ಡಿಟೋ
	ಮುಡಿಮಾಡಗು.	ಸೂರಿ ಮತ್ತು ಇತರರು.	0	0 7 0	6 15 8	0	3 8 0	0	30427	ಡಿಟೋ	ಡಿಟೋ
	ದಿಗವಚಿಂತಪಲ್ಲಿ.	ಅಡಗಲ್ಲು ರಾಮಭಟ್ಟ, 2ನೇ ನಂಜುಂಡಭಟ್ಟ.	0	0 3 0	3 7 10	0	1 12 0	0	30710	ಇನಾಂದಾರ ಘಾತೀಯಾದ ಮೇಲೆ ಮೊಬಲಗು ಯಾವಜ್ಜೀವ ನಡೆಯತಕ್ಕದ್ದೆಂತ ಹದ್ದು ಪಡಿಸಲಾಯಿತು.	ನಂ. 906, ತಾರೀಖು 8ನೇ ಫೆಬ್ರುವರೀ 1876.
ಮಾಲೂರು	ಮುಜರಾಯಿ.	ಮಾಲೂರಿನಲ್ಲಿ ಲಕ್ಕೂರು ಪಾಪಾಭಟ್ಟ.	0	0	0	0	0	0 8 0	31328	ಡಿಟೋ	ಡಿಟೋ
ಅನಂತಪುರ.	ಹರಿತಲು.	ನಗರದಲ್ಲಿ ಹೊಸಕೊಪ್ಪ ತಿಮ್ಮಪ್ಪ ಜೋಯಿಸ.	0	2 0 0	3 12 6	1 14 2	2 0 0	0	37729-6	ರಾಜೀನಾಮೆ ಕೊಟ್ಟದ್ದು.	ನಂ. 897, ತಾ|| 31ನೇ ಜನವರೀ 1876.

R. A. COLE,
Supt. of Inam Settlements.

ಫಿನಾಂಷಿಯಲ್ ಇಲಾಖಾ.

ಸರ್ಕ್ಯುಲರ ನಂ. 1256.—ತಾರೀಖು 4ನೇ ಮಾರ್ಚಿ 1876.

ಪೊಲೀಸ್ ತಲಬ್, 1875ನೇ ಮಾರ್ಚಿ 8ನೇ ಮುರ್ಕುಂ 191ನೇ ನಂಬರ ಅಕೌಂಟ ಸರ್ಕ್ಯುಲರ 2ನೇ ಕಲಂ ತಿದ್ದುಪಡಿ.

ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಗಳಿಗೆ.

ಪೊಲೀಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ಯವರ ಸಲಹೇ ಮೇಲೆ ಈ ಕೆಳಗೆ ದಸ್ತಖತ್ ಮಾಡಿರುವವರು ಕೋರುವದೇನಂದರೆ, ಸದರೀ ಸರ್ಕ್ಯುಲರ 2ನೇ ಕಲಮಿನ 5ನೇ ಪಜ್ತಿಯಲ್ಲಿ "ಅಥವಾ 10 ಮೈಲುಗಳ ಫಾಸಲೆಯೊಳಗೆ" ಯೆಂಬ ಮಾತುಗಳನ್ನೂ ಅದೇಕಲಂ 7ನೇ ಪಜ್ತಿಯಲ್ಲಿ, "ಅದ್ಯಂತ ಹೆಚ್ಚಾದ" ಯೆಂಬ ಮಾತನ್ನೂ ಡೆಪ್ಯುಟಿ ಕಮಿಷನರಗಳು ಹೊಡದು ಹಾಕತಕ್ಕದ್ದು. ಅದೇಪ್ರಕಾರ ದಿಗರ್ ಸ್ಥಳದಲ್ಲಿ ನೌಕರೀ ಮೇಲೆ ಇರುವ ಪೊಲೀಸಿನವರ ತಲಬನ್ನು 10 ಮೈಲಿ ಫಾಸಲೆಯ ವಿಷಯ ಆಲೋಚಿಸದೇ ಯೀ ಇನ್‌ಸ್ಪೆಕ್ಟರ್‌ಗಳ ಮಾರೀಫತ್ ಯಾ ಸಬ್ ಇನ್‌ಸ್ಪೆಕ್ಟರ್‌ಗಳ ಮಾರೀಫತ್ ತಲಬ್ ಕೊಡಿಸಲ್ಪಡತಕ್ಕದ್ದು.

ಕಾಯಂ ಅಡ್ವಾನ್ಸಗಳ ಸಾಲೀಯಾನಾ ಅಕ್‌ನಾಲೆಡ್ಜಮೆಂಟಗಳು.

ಸರ್ಕ್ಯುಲರ ನಂಬರ 1255, ತಾರೀಖು 6ನೇ ಮಾರ್ಚಿ 1876.

ಕಾಯಂ ಅಡ್ವಾನ್ಸಗಳನ್ನು ಪಡೆದಿರುವ ದರೋಬಸ್ತು ಆಫಿಸರಗಳಿಗೂ ಅದಾಗಿ.

ಡೆಪ್ಯುಟಿ ಅಕೌಂಟೆಂಟ ಜನರಲ್ಲವರು ಕೋರುವದೇನಂದರೆ, ಸ್ಟಾಂಡಿಂಗ್ ಆರ್ಡರಗಳ ಪ್ರಕಾರ, ಕಾಯಂ ಅಡ್ವಾನ್ಸಗಳನ್ನು ಪಡೆದಿರುವ ದರೋಬಸ್ತು ಅಫಿಸರಗಳೂ 1875ನೇ ಇಸವಿ ಮಾರ್ಚಿ 13ನೇ ಮುರ್ಕುಂ ಮೈಸೂರು ಗೆಜೆಟ್ಟನಲ್ಲಿ ಛಾಯಿಷಾದ ಅದೇ ಸಾಲ್ ಮಾಹೇ 4ನೇ ಮುರ್ಕುಂ 1189ನೇ ನಂಬರು ಉಳ್ಳ ಈ ಆಫಿಸ್ ಸರ್ಕ್ಯುಲರನಲ್ಲಿ ವಿಧಿಸಲ್ಪಟ್ಟಿರುವ ನಮೂನೇಯಲ್ಲಿ ಅವರುಗಳ ಸಾಲೀಯಾನಾ ಸರ್ಟಿಫಿಕೇಟಗಳನ್ನು ತಯಾರ್ ಮಾಡಿ ಕಳುಹಿಸತಕ್ಕದ್ದು.

ಅಮುಲ್‌ದಾರ್ರುಗಳು ತಮ್ಮ ಸರ್ಟಿಫಿಕೇಟಗಳನ್ನು ಮಾಮೂಲ್‌ನೋರೆ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಿಗೆ ಕಳುಹಿಸತಕದ್ದು. ಸದರೀ ಆಫಿಸರು ಇದುವರಿಗೆ ಉಪಯೋಗಿಸಲ್ಪಡುತ್ತಿದ್ದ ನಮೂನೇಯಲ್ಲಿ ಡಿಸ್ಟ್ರಿಕ್ಟಿಗೆಲ್ಲ ಸದರೀ ಸರ್ಟಿಫಿಕೇಟಗಳ ಒಂದು ಪಟ್ಟಿಯನ್ನು ಕಳುಹಿಸತಕ್ಕದ್ದು.

H. Hudson,
Dy. Acctt. General in Mysore.

ಫಾರೆಸ್ಟ್ ಇಲಾಖಾ.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವಿಜನ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೀಮರ	ಜಂಗ್ಲೀಮರ	ತೇಗದ ಕೊಚಗಳು	ಜಂಗ್ಲೀ ಮರದ ಕೊಚಗಳು	ಜುಮ್ಲಾ.
ಷಿಕಾರಿಪುರ ತಾಲ್ಲೂಕಿನಲ್ಲಿರುವ ಷಿಕಾರಿಪುರದ ಡಿಪೋ	15ನೇ ಮಾರ್ಚಿ 1876.	959	633	408	265	57	2,322
ಷಿಕಾರಿಪುರ ತಾಲ್ಲೂಕಿನಲ್ಲಿರುವ ಶಿರಾಳ ಕೊಪ್ಪದ ಡಿಪೋ	25ನೇ ಮಾರ್ಚಿ 1876.	129	162	574	37	43	945
ಜುಮ್ಲಾ.		1,088	795	982	302	100	3,267

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ ಇಸ್ತಿಹಾರ್ ಪ್ರಕಾರ.

ಷಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು. ಖರೀದಿ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಪ್ರಕಾರ ಐರ್ಜ ಖಜಾನೇಯಲ್ಲಿ ಪಾವತೀಮಾಡಿ ಆಬಗ್ಗೆ ಪಡೆದ ರಶೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣಾ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯೆರಡನೇ ಹರಾಜ್ ನಡಿಸಲ್ಪಡುವದು.

ತಾರೀಖು 3ನೇ ಫೆಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಕೊಡಗು ಶೀಮೇ ಉತ್ಪತ್ತಿ ಬಾಬತು ಈ ಕೆಳಗೆ ನಮೂದಿಸಲ್ಪಡುವ ತೇಗಿನ ವ ಯಿತರ ಮರಗಳ ದಿಮ್ಮಿಗಳು, ಯಿದರಡಿ ತಿಳಿಸಲ್ಪಟ್ಟ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗಿನ ದಿಮ್ಮಿಗಳು.	ತೇಗಿನ ತುಂಡುಗಳು.	ಬಂಗೀ ಮರದ ದಿಮ್ಮಿಗಳು.	ಬೀಟೀ ದಿಮ್ಮಿಗಳು.	ಬಂಗೀ ಮರದ ತುಂಡುಗಳು. ಬೀಟೀ ಬೊಡ್ಡೆ	ಹೊನ್ನೆಮರದ ದಿಮ್ಮಿಗಳು.	ಬಂಗೀ ಮರದ ತೊಡೆಗಳು.	ಠೇವು.	
ಸೋಮವಾರ ಪೇಟೆ	11ನೇ ಮಾರ್ಚಿ 1876	..	..	267	6	..	..	96	25,000	ಹೆಚ್ಚು ಕಡಿಮೆ.
ಮಡಿಕೇರೆ	15ನೇ ಡಿಟೋ	..	..	50	..	100	..	..	25,000	

ಹರಾಜು ನಿಬಂಧನೆಗಳು, 1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ ಇಸ್ತಿಹಾರಿನಲ್ಲಿ ಪ್ರಸಿದ್ಧ ಪಡಿಸಿರುವ ಮೇರಿಗೆ ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಮರಗಳಿಗೋಸ್ಕರ ಸಲ್ಲಬೇಕಾದ ಮೊಬಲಗಿನ ಪಾವತೀ ಬಗ್ಗೆ ವಾಯಿದೆಯು 1876ನೇ ಇಸವಿ ಮಾರ್ಚಿ 25ನೇ ತಾರೀಖಿನ ದಿನ ಪೂರೈಸುವದು. ಆ ಕಾಲದೊಳಗಾಗಿ ದರೋಬಸ್ತು ಮೊಬಲಗ್ ಪಾವತೀ ಮಾಡತಕ್ಕದ್ದಿದೆ, ಯಿದಕ್ಕೆ ತಪ್ಪಿದರೆ ದಂಡನೆ ಷರತ್ತುಗಳು ಜಾರೀಯಲ್ಲಿ ತರಲ್ಪಡುವವು.

ತಾರೀಖು 18ನೇ ಫೆಬ್ರವರೀ 1876.

ಕೊಡಗು ಫಾರೆಸ್ಟ್ ಇಲಾಖಾ ಸ್ವತ್ತಾದ 6½ ಅಡಿ ಎತ್ತರವುಳ್ಳ ಷುಮಾರು 14 ವರುಷ ಪ್ರಾಯದ ವೊಂದು ಗಂಡಾನೆಯು ಕೊಡಗು ಅಸಿಸ್ಟೆಂಟ್ ಕನ್ಸರ್ವೇಟರಯವರಿಂದ ಹುಣಸೂರಿನಲ್ಲಿ ಈ ಕೆಳಗೆ ಕಂಡ ತಾರೀಖಿನಲ್ಲಿಯೂ ಷರತ್ತುಗಳ ಮೇಲೂ ವಿಕ್ರಯಿಸಲ್ಪಡುವದು.

ಷರತ್ತುಗಳು—ನಗದು ಮೊಬಲಗು, ಮತ್ತು ಕೂಡ್ಲೇ ಸಾಗಿಸತಕ್ಕದ್ದು.

ರಿಜಿಸ್ಟರ್ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಟಪ್ಪಾಲ್ ದ್ವಾರಾ ಕಳುಹಿಸಲ್ಪಟ್ಟ ದರಖಾಸ್ತುಗಳು ಅಸಿಸ್ಟೆಂಟ್ ಕನ್ಸರ್ವೇಟರಯವರಿಂದ ಅಂಗೀಕರಿಸಲ್ಪಡುವದು. ಸದ್ರೀಯವರು 1876ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಹರಾಜ್ ನಡಿಸುವರು. ಈ ಲಕ್ಕೋಟೆಗಳು ಅಸಿಸ್ಟೆಂಟ್ ಕನ್ಸರ್ವೇಟರಯವರಿಂದಲೇ ಹರಾಜು ಸ್ಥಳದಲ್ಲಿ ರೂಬರೂ ಖುಲ್ಲಾ ಮಾಡಲ್ಪಡುತ್ತೆ, ಆನೇ ಬಗ್ಗೆ ಲೆಟ್ಟರ್ ಮೂಲಕ ದರಖಾಸ್ತು ಮಾಡುವ ಜನಗಳಿಂದ ದರಖಾಸ್ತು ಮಾಡಲ್ಪಟ್ಟ ಪೂರಾ ಮೊಬಲಗಿಗೆ ಕರ್ನ್ಸಿ ನೋಟುಗಳನ್ನು ಅಂತಾ ಲೆಟ್ಟರುಗಳಲ್ಲಿ ಮಲಫೂಫೆ ಮಾಡಿ ಕಳುಹಿಸತಕ್ಕದ್ದು. ಮತ್ತು ಅಂತಾ ದರೋಬಸ್ತು ಕರ್ನ್ಸಿ ನೋಟುಗಳು ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಅಸಿಸ್ಟೆಂಟ್ ಕನ್ಸರ್ವೇಟರಿಂದ ರಿಜಿಸ್ಟರ್ಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಲೆಟ್ಟರ್ ಮೂಲಕ ಹರಾಜಿನ ಮಾರನೇದಿನ ಟಪ್ಪಾಲಿನಲ್ಲಿ ವಾಪಸ್ ಕಳುಹಿಸಲ್ಪಡುವವು. ದರಖಾಸ್ತುದಾರ್ರುಗಳ ಹೆಸರು, ಮೇಲುವಿಳಾಸ, ಸ್ಪಷ್ಟವಾಗಿರುವ ಅಕ್ಷರದಲ್ಲಿ ಪೂರ್ತಿಯಾಗಿ ಬರದು ಇರತಕ್ಕದ್ದು.

ಸದರೀ ಆನೆಯು ವಿಕ್ರಯಿಸಲ್ಪಟ್ಟ ದಿನ ಸಾಯಂಕಾಲದ ತರುವಾಯ ಅದರನ್ನು ಇಟ್ಟುಕೊಳ್ಳುವದಕ್ಕಾಗಲಿ, ಮೇವು ಹಾಕುವದಕ್ಕಾಗಲಿ, ಫಾರೆಸ್ಟು ಇಲಾಖೆಯವರು ಯಿಷ್ಟು ಮಾತ್ರವೂ ಜವಾಬ್‌ದಾರರಾಗಿರುವದಿಲ್ಲವು.

ತಾರೀಖು 22ನೇ ಫೆಬ್ರುವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗಾ ಸ್ಥಳದ ನಂಜಣ್ಣನೆಂಬಾತನ ಮಾಲಾದ 50 ಕಾಡು ಮರದ ದಿಮ್ಮೀಗಳು, 9 ಕೊಚಗಳು ಸಹಾ, ಸದರೀ ಮರಗಳ ಬಾಬತು ಸರ್ಕಾರಕ್ಕೆ ಸಲ್ಲತಕ್ಕ ಕೋರೀ ಬಾಡಿಗೆಯನ್ನು ಭರ್ತೀ ಮಾಡಿಕೊಳ್ಳತಕ್ಕ ಬಗ್ಯೆ ಆಯನೂರು ಕೋರೀಯಲ್ಲಿ 1876ನೇ ಏಪ್ರೆಲ್ 15ನೇ ಮರ್ಕುಮಿನೊಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜು ನಿಬಂಧನೆ—1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ್ ಮೈಸೂರು ಗೆಜೆಟ ಇಸ್ತಿಹಾರ್ ನಾಮೆ ಪ್ರಕಾರ ಯಿರತಕ್ಕದ್ದು.

G. J. van Someren, *Captain,*
Conservator of Forests, Mysore & Coorg.

BANGALORE DISTRICT.

Notice regarding an application of Ranga Chetti for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡೆ|| ಕಮ್ಮಿಷನರ್ ಕೋರ್ಟಿನಿಂದ.

ಸನ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 16.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಮಾಗಡೀ ಕಸಬೇಯಲ್ಲಿ ಯಿರುವ ಶಿಂಗರಿ ರಂಗಶೆಟ್ಟಿ ಯೆಂಬವನು ತನ್ನ ತಂದೆ ಪುಟ್ಟರಂಗಶೆಟ್ಟೀ ಲೇಣೆ 950 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ, ಸನ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್, 1876ನೇ ಇಸವಿ ಮಾರ್ಚಿ 20ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice regarding an application of Puttanna for a certificate under Act XXVII of 1860.

ಸನ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 17.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಲೋಸ್‌ಪೇಟೆ ತಾಲ್ಲೂಕು ಚನ್ನಪಟ್ಣ ಕಸಬೇಯಲ್ಲಿ ಯಿರುವ ಪಟ್ಣಶೆಟ್ಟಿ ಪುಟ್ಟಂಣನು ತನ್ನ ಅಂಣ ಗೋವಿಂದಶೆಟ್ಟೀ ಲೇಣೆ 500 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ, ಸನ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್, 1876ನೇ ಇಸವಿ ಮಾರ್ಚಿ 22ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

Notice regarding an application of Venkatamma for a certificate under Act XXVII of 1860.

ಸನ್ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 18.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ದೊಡ್ಡಬಳ್ಳಾಪುರ ಕಸಬೇಯಲ್ಲಿ ಯಿರುವ ವೆಂಕಟಮ್ಮನು ತನ್ನ ಗಂಡ ದೇವಾಂಗದ ಲಕ್ಷ್ಮೈಯನ ಲೇಣೆ 34 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ, ಸನ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್, 1876ನೇ ಇಸವಿ ಮಾರ್ಚಿ 17ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 25ನೇ ಮಾಹೆ ಫೆಬ್ರುವರೀ 1876ನೇ ಇಸವಿ, ಮೊಕ್ಕಾಂ ಮತ್ತೂರು.

L. Ricketts,
Offg. Dy. Commr.

TUMKUR DISTRICT.

ತುಮಕೂರು ಡಿ|| ಡೆ|| ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 5ನೇ ಫಿಬ್ರವರೀ 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1870ನೇ ಇಸವಿ ಆಖ್ಯೈರ್ ವರಿಗೆ ಕೊರಟಗೆರೆ ಮತ್ತು ತುರ್ವೇಕೆರೆ ಮುನ್ಸಿಫ್ ಕೋರ್ಟುಗಳಲ್ಲಿ ಅರಿಜಿನಲ್, ಅಮಲ್‌ಜಾರಿ, ಮಿಸಲೇನಿಯಸ್, ವಗೈರೇ ಮೊಕದ್ದಮೆಗಳಲ್ಲಿ ಕಕ್ಷಿಗಾರರಿಂದ ದಾಖಲ್ ಮಾಡಲ್ಪಟ್ಟ ಯಲ್ಲಾ ದಸ್ತಾವೇಜುಗಳೂ, ಯಗ್ಸಿಬಿಟಗಳೂ, ಲೆಕ್ಕಗಳೂ, ಮತ್ತು ಇತರ ಕಾಗದಗಳೂ, ಜುಡಿಷಿಯಲ್ ಹಳೇರಿಕಾರ್ಡುಗಳನ್ನು ನಾಶ ಪಡಿಸತಕ್ಕ ವಿಷಯದಲ್ಲಿ ಇರತಕ್ಕ ರೂಲ್ಸ್ ಪ್ರಕಾರ 1376ನೇ ಇಸವಿ ಮೇ ತಾರೀಖು 1ಲ್ಲು ನಾಶಮಾಡಲ್ಪಡುವದು.

2. ಮೇಲೆ ನಮೂದಾದ ಬೆಲೆವುಳ್ಳ ದಸ್ತಾವೇಜು ವಗೈರೇಗಳನ್ನು ವಾಪಸು ಪಡೆಯಲು ಅಪೇಕ್ಷೆವುಳ್ಳ ಕಕ್ಷಿಗಾರರು ಸದರೀ ಕೋರ್ಟುಗಳಿಗೆ ಮೇಲೆ ನಮೂದ್ ಮಾಡಿದ ತಾರೀಖು ಒಳಗಾಗಿ ಬರದುಕೊಳ್ಳತಕ್ಕದ್ದು.

Notice regarding an application of Sanjivamma for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕುಣಿಗಲ್ ತಾಲ್ಲೂಕು ಕಸಬಾ ಕೊಪ್ಪ ಗ್ರಾಮದ ವಾಸಸ್ಥನಾಗಿ ಯಿದ್ದ ಘಾತೀ ಯಾದ ನರಸೈಯನೆಂಬವನಿಗೆ ಯಿತರರಿಂದ ಬರಬೇಕಾಗಿ ಯಿರುವ 900 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ, 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಈ ತನ ಹೆಂಡತಿ ಸಂಜೀವಮ್ಮ ಯಂಬವಳು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಮಾರ್ಚೀ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದಾ, ಯಿದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 14ನೇ ಮಾಹೆ ಫಿಬ್ರವರೀ 1876ನೇ ಇಸವಿ, ಮೊಕ್ಕಾಂ ಕುಣಿಗಲ್.

Notice regarding an application of Masti Gauda for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ, ಕುಣಿಗಲ್ ತಾಲ್ಲೂಕು ಬಸವನಮತ್ತಿಕೆರೆ ಗ್ರಾಮದ ವಾಸಸ್ಥನಾಗಿ ಇದ್ದ ಘಾತೀಯಾದ ಮಾಸ್ತೀಗೌಡ ಯೆಂಬವನಿಗೆ ಇತರರಿಂದ ಬರಬೇಕಾಗಿರುವ 800 ರೂಪಾಯಿಗಳು, ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಅಪೇಕ್ಷಿಸಿ ಇವನ ಮಗ ಮಾಸ್ತೀಗೌಡ ಯೆಂಬವನು ದಾಖಲ್‌ಮಾಡಿರುವ ಅರ್ಜೀಯನ್ನು 1876ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೆವಾದ್ದರಿಂದ, ಇದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿರುತ್ತೆ.

Notice regarding an application of Venkatnarayan Puranik for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕಡಬ ತಾಲ್ಲೂಕು ಸಂಪಿಗೆ ಗ್ರಾಮದ ವಾಸಸ್ಥನಾಗಿ ಇದ್ದ ಘಾತೀಯಾದ ಶಿತಾರಾಂಪುರಾಣೀಕ ಯಂಬವನಿಗೆ ಯಿತರರಿಂದ ಬರಬೇಕಾಗಿ ಯಿರುವ 400 ರೂಪಾಯಿಗಳು, ವಸೂಲು ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರಟಫಿಕೇಟ ಅಪೇಕ್ಷಿಸಿ ವೆಂಕಟನಾರಾಯಣಪುರಾಣೀಕ ಯಂಬವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್‍ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿರುತ್ತೆ.

ತಾರೀಖು 2ನೇ ಮಾಹೆ ಮಾರ್ಚೀ 1876ನೇ ಯಿಸವಿ, ಮೊಕ್ಕಾಂ ತುಮಕೂರು.

C. J. Pearse,
Dy. Commr.

HASSAN DISTRICT.

ಹಾಸನ ಡಿಸ್ಟ್ರಿಕ್ಟು.

ಸನ್ 1876ನೇ ಇಸವಿ ಮಾರ್ಚಿ 27ನೇ ತಾರೀಖಿನ ದಿವಸ ಹಾಸನದ ಕಸಬಾದಲ್ಲಿ ಈ ಕೆಳಗೆ ನಮೂದಿಸಲ್ಪಡುವ ಹಳೇ ಡೇರಾಗಳು ಹರಾಜ್ ಹಾಕಲ್ಪಡುತ್ತವೆ

2 - ಡಬಲ್ ಪೋಲ್ ಟೆಂಟುಗಳು	2 ಸಿಂಗಲ್ ಪೋಲ್ ಹಿಲ್ ಟೆಂಟುಗಳು.
2 ರಾವುಟಿಗಳು	2 ಪ್ರಿವಿ ಟೆಂಟುಗಳು

ಪ್ರತಿ ಒಂದು ಡೇರೆಯು ಬೇರೆಬೇರೆಯಾಗಿ ಹರಾಜು ಹಾಕಲ್ಪಟ್ಟು ಜಡದರಖಾಸ್ತುದಾರನಿಗೆ ಕೊಡಲ್ಪಡುವದು, ಸದರೀ ತಾರೀಖಿನ 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಹರಾಜು ಪ್ರಾರಂಭಿಸುವದು.

ನಗದು ಹಣಾ ಹಾಜರ್ ಮಾಡಬೇಕು.

ತಾರೀಖು 12ನೇ ಫೆಬ್ರವರೀ 1876ನೇ ಯಿಸವಿ, ಮೊಕ್ಕಾಂ ಹಾಸನ.

E. Shaw,
Offg. Dy. Commr.

SHIMOGA DISTRICT.

ತಾರೀಖು 25ನೇ ಫೆಬ್ರವರೀ 1876.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸುವದೇನಂದರೆ,—ಸನ್ 1875ನೇ ಇಸವಿ ಡಿಸೆಂಬರ 17ನೇ ಮುಕ್ಕಾಮಿನಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲನಿಂದ ತಪ್ಪಿಸಿಕೊಂಡು ಹೋದ ಈ ಕೆಳಗೆ ವಿವರಿಸಲ್ಪಟ್ಟ ದೊಡ್ಡಬುಡ್ಡೂ ಯಂಬುವನ ದಸ್ತಗಿರೀ ಬಗ್ಯೆ ತಕ್ಕ ಬಾತಮೀ ತಿಳಿಸತಕ್ಕವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುವದು.

ತಪಶೀಲ್.

ಜೈಲ್ ರಿಜಿಸ್ಟರ ನಂಬರ 3890.—ಹೆಸರು ಮತ್ತು ತಂದೇ ಹೆಸರು, ದೊಡ್ಡಬುಡ್ಡೂ, ಕಾಸಿಂಖಾನ್- ವಾಸಸ್ಥಳ ಹಿರೂರ, ಶಿವಮೊಗ್ಗಾ ತಾಲ್ಲೂಕು, ಜಾತಿ ಮತ್ತು ಕಸಬು, ಮುಸಲ್ಮಾನ್, ಕೂಲಿ. ತಪ್ಪಿತ, ಡಕಾಯತಿ, ತಾರೀಖು ಮತ್ತು ಸಜಾ ವಾಯಿದೆ ಮತ್ತು ಮೊಕದ್ದಮಾ ನಂಬರ, 25ನೇ ನವಂಬರ 1875, 1875ನೇ ಇಸವಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರ ಫೈಲ್ ನಂಬರು 32ನೇ ಮೊಕದ್ದಮೆಯಲ್ಲಿ ಐದುವರುಷಗಳು ಕಠಿಣ ಸಜಾ ಯಾರಿಂದ ಸಜಾ, ಮೊಕರರಾದ್ದು, ಶಿವಮೊಗ್ಗಾ ಡಿ|| ಮ್ಯಾಜಿಸ್ಟ್ರೇಟರಿಂದ. ವಯಸ್ಸು 30.—ಎತ್ತರ 5 ಅಡಿ, $3\frac{1}{2}$ ಅಂಗುಲ. ಚಹರಾ, ಶಾಮಲವರ್ಣ, ಕಂಣುಗಳು ಡಿಟೋ, ಕೆನ್ನೆ ಎಲುವುಗಳು ಉಬ್ಬಾಗಿವೆ. ಭುಜಗಳ ನಡುವೆ ಚಿಕ್ಕ ಮಚ್ಚೆ, ಬಲತೋಳಿನ ಮುಂದೆ ಘಾಯದ ಕಲೆ. ಇನ್ನೊಂದು ಬಲಮುಂಗೈ ಮುಂದೆ. ಯಡಕಂಕುಳ ಹಿಂದೆ ಒಂದು ಮಚ್ಚೆ. ಬಲತೊಡೆ ಮುಂದೆ ಎರಡು ಘಾಯದ ಕಲೆಗಳು. ಬಲಮೊಣಕಾಲು ಕೀಲಿನ ಹಿಂದೆ ಒಂದು ಉದ್ದವಾದ ಘಾಯದ ಕಲೆ. ಯಡತೊಡೆಯು ಒಳಪಾರ್ಶ್ವ ಒಂದು ಘಾಯದ ಕಲೆ. ಯಡಗಾಲಿನ ಹೊರಪಾರ್ಶ್ವ ಎರಡು ಘಾಯದ ಕಲೆಗಳು ಇರುತ್ತವೆ.

C. S. Blair,
Offg. Dy. Commr.

CHITALDROOG DISTRICT.

Notice of sale of right to sell opium and ganja in the District on the 23rd March 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಕಚ್ಚೇರಿಯಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1876ನೇ ಇಸವಿ ಏಪ್ರೈಲ ಗುರ್‍ರೇ ಲಾಗಾಯತು, ಸನ್ 1877ನೇ ಇಸವಿ ಮಾರ್ಚಿ ಆಖೈರ ವರಿಗೆ ವರುಷ 1ಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಗಾಂಜಾ, ಅಫೀಮು, ಮಾರಾಟಮಾಡುವ ಹಕೀಯತ್ತು, ಸನ್ 1876ನೇ ಇಸವಿ ಮಾರ್ಚಿ ತಾರೀಖು 23ನೇ ದಿವಿ 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಸಮಕ್ಷಮ ಹರಾಜ್ ಮಾಡಿಸಲ್ಪಡುತ್ತೆ.

2. ಹರಾಜು ಕೈದಾದ ಕೂಡ್ಲೆ ಜಡ ದರಖಾಸ್ತುದಾರನು 2 ತಿಂಗಳ ಖಿಸ್ತು ಹಣವನ್ನ ಠೇವಣಾತೀ ಯಿಡಬೇಕು. ಯಿದ್ದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಅದರಿಂದ ಆಗುವ ಲುಕ್ಸಾನನ್ನ ಅವ್ವಲ್ ದರಖಾಸ್ತುದಾರನ ಜಿಂದಗಿ ಜಫ್ತೀ ಹರಾಜಿನಿಂದ ಭರ್ತಿ ಮಾಡಲ್ಪಡುತ್ತೆ. ದರಖಾಸ್ತುದಾರನು ತಾನು ಇಜಾರೇ ಷರತ್ತು ಪ್ರಕಾರ ನಡದುಕೊಳ್ಳತಕ್ಕ ಬಗ್ಯೆ ಯಾರನ್ನು ಜಾಮೀನ್ ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಆ ಮನುಷ್ಯನ ಲಾಯಖೀ ಮೊದಲಾದ್ದನ್ನು ಕುರಿತು ಆತ ವಾಸಮಾಡುವ ತಾಲ್ಲೂಕು ಅಮಲ್‌ದಾರರಿಂದ ಪಡೆದ ಸರ್ಟಿಫಿಕೇಟ್ ಹಾಜರ್ ಮಾಡಬೇಕು.

3. ಯಿಜಾರೇ ಮೊಬಲಗು ಸರ್ 1876ನೇ ಇಸವಿ ಏಪ್ರೆಲ್ 20ನೇ ತಾರೀಖಿನ ಮೊದಲು ಪ್ರತಿ ಮಾರನೇ ತಿಂಗಳ 20ನೇ ತಾರೀಖಿಗೆ ಸರಿಯಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಪಾವತೀ ಆಗುವ ತಾರೀಖಿನ ವರಿಗೂ ರೋಜೇನಾ ರೂಪಾಯಿ 1ಕ್ಕೆ ¼ ಪೈ ಮೇರಿಗೆ ಬಡ್ಡೀ ವಸೂಲ್ ಮಾಡುವದಲ್ಲದೆ ಬಾಬ್ ಪುನಹಾ ಹರಾಜ್ ಮಾಡಿಸಿ ಆ ಬಾಬತ್ ಲುಕ್ಸಾನ್ ಮೊದಲಿನ ಇಜಾರೇದಾರನ ಜಿಂದಗೀ ಜಫ್ತೀ ಹರಾಜಿನಿಂದ ತೆಗದುಕೊಳ್ಳಲಾಧೀತು.

4. ಜಾರೀಲಿರುವ ರೂಲ್ಸ್ ಪ್ರಕಾರ ರೂಪಾಯಿ 1ಕ್ಕೆ ಒಂದಾಣೆ ಮೇರೆ ಲೋಕಲ್ ಸೆಸ್ ವಸೂಲ್ ಮಾಡಲ್ಪಡುತ್ತೆ.

5. ಗಾಂಜಾ, ಅಫೀಮು, ಈ ಯೆರಡು ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದಿದ ಅಂಗಡೀ ದಾರರೇ ಈಗ ಅಂಗಡಿಗಳು ಯಿರುವ ಕ್ಲುಪ್ತವಾದ ಸ್ಥಳಗಳಲ್ಲಿಯೇ ಮಾರಾಟ ಮಾಡಲ್ಪಡಬೇಕು. ಡೆಪ್ಯುಟಿ ಕಮ್ಮಿಷನರವರ ಅಪ್ಪಣೇ ಶಿವಾಯಿ ಈಗ ಯಿರುವ ಸ್ಥಳಗಳನ್ನ ಬದಲಾಯಿಸಲೂ ಕೂಡದು, ಅಥವಾ ಹೊಸದಾಗಿ ಯಿಡಲೂ ಕೂಡದು.

6. ಈ ಕೆಳಗೆ ನಮೂದಿಸಿರುವ ದರಗಳಂತೆ ಗಾಂಜಾ ಬಾಬಿಗೆ ಲೈಸೆನ್ಸ್ ಫೀಜು ಕೊಡಬೇಕು, ರೂಪಾಯಿ 10 ಷಹರಿನಲ್ಲಿ, ರೂಪಾಯಿ 5 ಕಸಬಾ ಟವುನ್‌ಗಳಲ್ಲಿ, ರೂಪಾಯಿ 3—2—0 ಗ್ರಾಮಾಂತ್ರಗಳಲ್ಲಿ.

7. ಯಾವದಾದರೂ ಚಿಲ್ಲರೇ ಅಂಗಡಿಗಳನ್ನ ಮೌಕೂಫ್ ಮಾಡಿಸುವದು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ತೋರುವ ಪಕ್ಷಕ್ಕೆ ಅಂಥಾದ್ದನ್ನ ಮವುಕೂಫು ಮಾಡಿಸುವದಲ್ಲದೆ ಅದಕ್ಕಾಗಿ ಕಂಪೆನ್‌ಸೇಷನ್ ಯೇನೂ ಕೊಡುವದಿಲ್ಲ.

8. ಯಿಜಾರೇದಾರನು ಹರಾಜ್ ಖೈದಾದನಂತರ ಡೆಪ್ಯುಟಿ ಕಮ್ಮಿಷನರವರ ಸಮಕ್ಷಮ ನಮೂನೇ ಅನುಸರಿಸಿ ಕ್ರಮವಾದ ಛಾಪಾಕಾಗದದ ಮೇಲೆ ಯಿಜಾರೇ ಮತ್ತು ಜಾಮೀನೀ ಮುಚ್ಚಳಿಕೆಗಳನ್ನ ಬರದು ಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಆದರ ಲುಕ್ಸಾನ್ ಅವನಿಂದ ವಸೂಲ್ ಮಾಡಲಾಧೀತು.

Notice of sale of right to sell by retail arrack in the undermentioned shops.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರ ಬಾಜೂದಲ್ಲಿ ನಮೂದಿರುವ ಜಾಗಾಗಳಲ್ಲಿ ಷರಾಬ್ ಚಿಲ್ಲರೆ ಅಂಗಡೀಯಲ್ಲಿ ಷರಾಬನ್ನ ಚಿಲ್ಲರೇಯಾಗಿ ಮಾರಾಟ ಮಾಡತಕ್ಕ ಹಕೀಯತು ಸರ್ 1876ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯತು ಒಂದು ವರುಷಕ್ಕೆ ಡಿಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ, ಸರ್ 1876ನೇ ಇಸವಿ ಮಾರ್ಚಿ ತಾರೀಖು 22ನೇ ದಿವಿ 11 ಘಂಟೆಗೆ ಹರಾಜು ಮಾಡಲ್ಪಡುತ್ತೆ.

2. ಬಾಜೂದಲ್ಲಿ ನಮೂದಾದ ಅಂಗಡೀಗಳ ಶಿವಾಯಿ ಚಕ್ಕುಬಂದೀ ಪಟ್ಟೀಯಲ್ಲಿ ನಮೂದಿರುವ ಯಿತರ ಕ್ಲುಪ್ತವಾದ ಅಂಗಡೀಗಳು ಸಹಾ ಜನಗಳು ಖಾಯಿಷ್ ಮಾಡಿದಲ್ಲಿ ಫೋಟಾ ಫೋಟೀ ಮಾಡಲ್ಪಡುತ್ತೆ.

ಹರಾಜ್ ಆಗತಕ್ಕ ದುಕಾನಗಳು.

4. ಚಿತ್ರದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗ ಕಸಬಾ ಅಂಗಡೀಗಳು.

15. ತಾಲ್ಲೂಕು ದಾವಣಗೆರೆ.

4. ಕಸಬಾ ದಾವಣಗೆರೆ ಅಂಗಡಿ	1. ಹೆಬ್ಬಾಳು
5. ಹರಿಹರ ಕಸಬಾ ದುಕಾನುಗಳು	1. ಮಲೆಬೆನ್ನೂರು
1. ಗುತ್ತೂರು	1. ವಾಸನ
1. ಭರಮಸಾಗರ	1. ಬಾಕೀ ದುಕಾನು ಪುರೆನಲ್ಲಿ ಅಲಾಹಿದಾ ಲೈಸೆನ್ಸ್ ಪಡೆದು ಪರಿಷೇಯಲ್ಲಿ ಮಾರುವಬಗ್ಯೆ ಸಹಿತ

1. ತಾಲ್ಲೂಕು ಕಣಕುಪ್ಪ, ಜಗಲೂರು ದುಕಾನು.

7. ತಾಲ್ಲೂಕು ದೊಡ್ಡೇರಿ.

2. ಮೊಳಕಾಲ್ಮುರು ಕಸಬಾ ದುಕಾನುಗಳು	1. ಶಿರೇಕೊಳಾ
	1. ರಾಮಪುರ
1. ಕೊಂಡ್ಲಹಳ್ಳಿ	1. ನಾಯ್ಕನಹಟ್ಟೀ ಜಾತ್ರೇಯಲ್ಲಿ ಮಾರುವಬಗ್ಯೆ ಸಹಿತ
1. ಬಂಮಗೊಂಡ್ನಕೆರೆ	

4. ಹಿರಿಯೂರು ತಾಲ್ಲೂಕು.

1. ಹಿರಿಯೂರು
1. ಬುರಜನರೊಪ್ಪ
1. ಮರಡೀಹಳ್ಳಿ
1. ಯರಬಳ್ಳಿ
1. ಪಾವಗಡ ಕಸಬಾ ದುಕಾನು.

3. ಹರಾಜು ಮೊಬಲಗು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ ಹರಾಜು ಖೈದಾದಕೂಡ್ಲೇ ಹಾಜರ್ಮಾಡಲ್ಪಡಬೇಕು, ಇದಕ್ಕೆ ತಪ್ಪಿದಲ್ಲಿ ಹಕೀಯತ್ ಪುನಹಾ ಹರಾಜು ಮಾಡಲ್ಪಟ್ಟು ಅದರಿಂದ ಸಂಭವಿಸುವ ಲುಕ್ಸಾನಿಗೆ ಷುರೂ ದರಖಾಸ್ತುದಾರರನ್ನ ಗುರೀಮಾಡಲಾದೀತು.

4. ಷರಾಬ್ ಚಿಲ್ಲರೇಅಂಗಡೀ ಬಿಕ್ರೀದಾರರು ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಂತೆ, ಮತ್ತು ಆಗಿಂದಾಗ್ಯೆ ಅಮಲ್‌ದಾರರಿಗೆ ಕೊಡಲ್ಪಡುವ ಸರ್ಕ್ಯುಲರ್ ಹುಕುಂಗಳ ಪ್ರಕಾರ ಖಂಡಿತವಾಗಿ ನಡದುಕೊಳ್ಳಬೇಕು

5. ಪ್ರತಿ ಒಂದು ಅಂಗಡಿಯುಕ್ಲುಪ್ತವಾದ ಲೈಸೆನ್ಸ್ ಫೀಜ್ ಬಾಬತು ಕ್ವಾರ್ಟರ್‌ಲಿ ಮೊಬಲಗನ್ನು ಪ್ರತಿ ಕ್ವಾರ್ಟರಿನ 1ನೇ ತಾರೀಖಿನಲ್ಲಿ ಅಂದರೆ, ಯೇಪ್ರೈಲ್, ಜುಲೈ, ಅಕ್ಟೋಬರ್, ಜನವರೀ, ಈ ತಿಂಗಳುಗಳ ಗುರ್ರೇ ತಾರೀಖಿನಲ್ಲಿ ಮುಂಗಡವಾಗಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಸದರೀ ಮೊಬಲಗು ಪೂರಾ ವಸೂಲ್ ಬರುವ ತಾರೀಖಿನ ವರಿಗೂ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರೆ ಬಡ್ಡೀ ವಸೂಲ್ ಮಾಡಲ್ಪಡುವದಲ್ಲದೆ ಲೈಸೆನ್ಸ್ ಸಹಾ ರದ್ದು ಮಾಡಲಾದೀತು.

6. ಸರ್ಕಾರದ ಡಿಸ್ಟಿಲೆರಿಯಿಂದ ತೆಗದುಕೊಂಡು ಹೋಗುವ ಷರಾಬಿಗೆ ಗ್ಯಾಲನ್ 1ಕ್ಕೆ ಯರಡು ರೂಪಾಯಿ ಯಂತೆ ಹೆಡ್‌ಡ್ಯೂಟಿ ಹಾಸಲ್ ಮತ್ತು ಯರಡಾಣೆ ಲೋಕಲ್‌ಫಂಡ್ ಸಹಾ ಕೊಡಬೇಕು.

ಖತಾರೀಖು 21ನೇ ಮಾಹೆ ಫೆಬ್ರುವರೀ ಸನ್ 1876ನೇ ಇಸವಿ, ಮೊಕ್ಕಾಂ ಸುಂಟನೂರು.

Notice of sale of the right of collecting tolls on the Harihar bridge on the 22nd March 1876.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1876ನೇ ಇಸವಿ ಯೇಪ್ರೈಲ್ ಗುರ್ರೇ ಲಾಗಾಯತು, ಸನ್ 1877ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ, ಒಂದು ವರುಷಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಕಸಬಾ ಹರಿಹರದಲ್ಲಿ ತುಂಗಭದ್ರಾ ಸೇತುವೆ ಮೇಲೆ ಮೈಸೂರು ಸೀಮೆ ಚೀಫ್ ಕಮ್ಮಿಷನರ್ ಸಾಹೆಬರವರಿಂದ ಯೇರ್ಪಾಡಾಗಿರುವ ದರಗಳ ತಖ್ತೇ ಅನುಸರಿಸಿ ಟೋಲ್ ಹಾಸಲ್ ವಸೂಲಿ ಮಾಡುವ ಹಕ್ಕನ್ನ ಸನ್ 1876ನೇ ಇಸವಿ ಮಾರ್ಚಿ 22ನೇ ತಾರೀಖು 12 ಘಂಟೆಗೆ ಚಿತ್ರದುರ್ಗದ ಮೊಕ್ಕಾಮಿನಲ್ಲಿ ಯಿದರಡಿ ದಸ್ತಖತ್ ಮಾಡಿರುವವರ ಯದುರಾಗಿ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ. ಸದರೀ ಟೋಲ್ ಹಾಸಲ್‌ನಿಂದ ಹಿಂದೆ 6 ವರುಷಗಳಲ್ಲಿ ಸರಕಾರಕ್ಕೆ ಉತ್ಪತ್ತಿ ಆದ ಮೊಬಲಗು ಯಿದರ ಕೆಳಗೆ ತೋರಿಸಲ್ಪಟ್ಟಿ ಯಿದೆ.

ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.	ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.
70—71	3222–11–6	0—0–0	73—74	5632–8–1	0—0—0
71—72	80—8–0	4441–15–2	74—75	3593–1–6	0—0—0
72—73	0—0–0	4000—0–0	75—76	0–0–0	4760—0—0

2. ಜಡ ದರಖಾಸ್ತು ಡೆಪ್ಯುಟಿ ಕಮ್ಮಿಷನರವರು ಅಂಗೀಕರಿಸಿದಲ್ಲಿ ನಗರ ಡಿವಿಜನ್ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ, ಮತ್ತು ಅವರ ಸಾಂಗ್‌ಷನ್ ತಲಪಿದ ನಂತರ ಬಾಬು ಯಿಜಾರೇದಾರನ ಸುಫರ್ದು ಮಾಡಲ್ಪಡುತ್ತೆ.

3. ದರಖಾಸ್ತು ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಟ್ಟ ಕೂಡ್ಲೇ ಯಿಜಾರೇದಾರನು 2 ತಿಂಗಳ ಖಿಸ್ತು ಮೊಬಲಗನ್ನು ಶೇವಣಾತೀ ಯಿಡಬೇಕು, ದರಖಾಸ್ತು ಸಾಂಗ್‌ಷನ್ ಆಗದೆ ಹೋಗುವ ಪಕ್ಷಕ್ಕೆ ಸದರೀ ಶೇವಣಾತೀ ಹಣವು ವಾಪಸ ಮಾಡಲ್ಪಡುತ್ತೆ. ಶೇವಣಾತೀ ಹಣಾ ಯಿಡುವದಕ್ಕೆ ತಪ್ಪಿದಲ್ಲಿ ಯಿಜಾರೇಯನ್ನು ಪುನಹಾ ಹರಾಜು ಮಾಡಿಸಿ ದರಖಾಸ್ತುದಾರನನ್ನು ಲುಕ್ಸಾನಿಗೆ ಗುರಿಮಾಡುವದಾಗುತ್ತೆ.

4. ಯಿಜಾರೇ ಮೊಬಲಗು ತಾಲ್ಲೂಕು ಖಜಾನೇಯಲ್ಲಿ 12 ತಿಂಗಳ ಖಿಸ್ತುಗಳಿಂದ ಪ್ರತಿ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಪಾವತೀ ಮಾಡಲ್ಪಡಬೇಕು. ಮೊದಲನೇ ಖಿಸ್ತು ಯೆಪ್ರೈಲ್ 20ನೇ ತಾರೀಖಿಗೂ, ಬಾಕೀ ಖಿಸ್ತುಗಳು ಮಾರನೇ ತಿಂಗಳು 20ನೇ ತಾರೀಖಿಗೆ ಸರಿಯಾಗಿಯೂ ಪಾವತೀ ಮಾಡುತ್ತಾ ಬರಬೇಕು. ಇದಕ್ಕೆ ತಪ್ಪಿದಲ್ಲಿ ಇಜಾರೇ ಪುನಹಾ ಹರಾಜು ಮಾಡಲ್ಪಟ್ಟು ಅದರಿಂದ ಸಂಭವಿಸುವ ಲುಕ್‌ಸಾನು ಹಿಂದಣ ಬಾಕೀ ಸಹಾ ಯಿಜಾರೇದಾರನ ಚರ ಸ್ಥಿರ ಆಸ್ತಿ ಜಫ್ತೀ ಮೂಲಕ ಭರ್ತೀ ಮಾಡಿಕ್ಕೊಳ್ಳಲ್ಪಡುವದಲ್ಲದೆ ಮೊಬಲಗು ಪೂರಾ ಪಾವತೀ ಆಗುವವರಿಗೂ ರೋಜೀನಾ ರೂಪಾಯಿ 1ಕ್ಕೆ ಅರ್ಧ ಪೈ ಪ್ರಕಾರ ಬಡ್ಡೀ ಸಹಾ ವಸೂಲ್ ಮಾಡಲ್ಪಡುವದು.

5. ಯಿಜಾರೇ ಷರತ್ತು ಪ್ರಕಾರ ಸರಿಯಾಗಿ ನಡದುಕ್ಕೊಳ್ಳುವದಕ್ಕೆ ಖಾತರೀ ಬಗ್ಯೆ ಯಿಜಾರೇದಾರನು ಯಾರನ್ನು ಜಾಮೀನು ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಅಂಥಾ ಜಾಮೀನ್‌ದಾರನ ಲಾಯಖೀ ವಿಷಯದಲ್ಲಿ ತಕ್ಕ ಅಧಿಕಾರಸ್ಥರಿಂದ ಪಡೆದ ಸರಟಿಫಿಕೇಟ್ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತು ಮಂಜೂರ್ ಮಾಡಲ್ಪಡುವದಿಲ್ಲ.

6. ಇಜಾರೇಕಾಲ ಉಪಕ್ರಮಿಸುವದಕ್ಕೆ ಮುಂಚೆಯೇ ಯಿಜಾರೇದಾರನು ಕ್ರಮವಾದ ಛಾಪಾ ಕಾಗದದ ಮೇಲೆ ನಮೂನೇ ಅನುಸರಿಸಿ ಯಿಜಾರೇ ಮತ್ತು ಜಾಮೀನು ಮುಚ್ಚಳಿಕೆಗಳನ್ನು ಬರದು ಕೊಡಬೇಕು, ಅದಕ್ಕೆ ತಪ್ಪಿದಲ್ಲಿ 4ನೇ ಕಲಮಿನಲ್ಲಿ ನಮೂದಾಗುವ ದಂಡವು ವಿಧಿಸಲ್ಪಡುತ್ತೆ.

7. ಯಿಜಾರೇ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್ ಸೆಸ್ ವಸೂಲ್ ಮಾಡಲ್ಪಡುವದು.

8. ಟೋಲ್ ಹಾಸಲ್ ಸೇತುವೆ ಮೇಲೆ ಮಾತ್ರ ವಸೂಲ್ ಮಾಡಲ್ಪಡಬೇಕೇ ಹೊರ್ತು ಕಾಲು ಹಾದಿಗಳನ್ನು ಉಪಯೋಗಿಸಿಕ್ಕೊಳ್ಳುವ ಜನಗಳಿಂದ ವಸೂಲ್ ಮಾಡಕೂಡದು, ಕಾಲುಹಾದಿಗಳು ಯಲ್ಲರಿಗೂ ಖುಲ್ಲಾ ಯಿರುತ್ತೆ.

ತಾರೀಖು 26ನೇ ಮಾಹೆ ಫಿಬ್ರುವರೀ ಸರ್ 1876ನೇ ಇಸವಿ, ಮೊಕ್ಕಾಂ ಚಿತ್ರದುರ್ಗ.

E. F. H. ARMSTRONG,
Dy. Commr.

Notice regarding the sale by public auction, of the right of collecting the octroi duties within the Municipal limits of Chitaldroog, Davangere and Harihar.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಸಬಾ ಚಿತ್ರದುರ್ಗ, ದಾವಣಗೆರೆ, ಹರಿಹರ, ಈ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಿಳ್ಳೆದೆಲೆ, ಅಡಿಕೆ, ತಂಬಾಕು, ಬೆಲ್ಲ, ಸಕ್ಕರೆ, ಬೆಣ್ಣೆ, ತುಪ್ಪ, ಯಣ್ಣೆ, ಈ ಜಿನಿಸಿಗಳ ಮೇಲೆ ವಸೂಲ್ ಆಗುವ ಆಕ್ಟ್ರಾಯಿ ಯಾನೆ ಕರಗು ಹಾಸಲ್ ವಸೂಲೀ ಮಾಡುವ ಹಕ್ಕನ್ನು ಸರ್ 1876ನೇ ಇಸವಿ ಏಪ್ರೆಲ್ ಗುರ್ರೇ ತಾರೀಖು ಲಾಗಾಯತು 1877ನೇ ಇಸವಿ ಮಾರ್ಚೀ ಆಖೈರ್ ವರಿಗೂ ಆಗುವ ಒಂದು ವರುಷಕ್ಕೆ ಸರ್ 1876ನೇ ಇಸವಿ ಮಾರ್ಚೀ ತಾರೀಖು 29ನೇ ಹಗಲು 11 ಘಂಟೆಗೆ ಚಿತ್ರದುರ್ಗ ಮೊಕ್ಕಾಮಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಕಚ್ಚೇರಿಯಲ್ಲಿ ಹರಾಜು ಮಾಡಲ್ಪಡುತ್ತೆ.

ಈ ಬಾಬತು ಇಜಾರೇಯನ್ನು ಪಡೆಯಲು ಯಿರಾದೇ ವುಳ್ಳವರು ಮೇಲೆ ಕಂಡ ತಾರೀಖಿನಲ್ಲಿ ಹಾಜರಾಗಿ ಪೋಟಾ ಪೋಟೀ ನಡಿಸಬಹುದು. ಹರಾಜು ಖೈದ್ ಆದ ಕೂಡ್ಲೇ ಜಹ ದರಖಾಸ್ತುದಾರನು ಒಂದು ತಿಂಗಳ ಖಿಸ್ತನ್ನು ಶೇವಣಾತಿ ಯಿಡಬೇಕು. ಬಾಕೀ ಹಣಕ್ಕೆ 3 ದಿವಸಗಳ ವಾಯಿದೆಯಲ್ಲಿ ಖಾತರ್ ಜಾಮೀನ್ ಹಾಜರ್ ಮಾಡಬೇಕು, ಯಿದಕ್ಕೆ ತಪ್ಪಿದರೆ ಬಾಬ್ ಪುನಹಾ ಹರಾಜು ಮಾಡಿ ಇದರಿಂದ ನಷ್ಟವಾದ ಹಣವನ್ನು ಶೇವಣಾತಿ ಮತ್ತು ಜಾಮೀನ್ ಹಾಜರ್ ಮಾಡದೆ ಯಿದ್ದವನಿಂದ ವಸೂಲ್ ಮಾಡಲಾಧೀತು.

ಆಯಾ ತಿಂಗಳ ಖಿಸ್ತನ್ನು ಆಯಾ ತಿಂಗಳ 25ನೇ ತಾರೀಖು ಒಳಗಾಗಿ ತಾಲ್ಲೂಕು ಖಜಾನೇಗಳಲ್ಲಿ ಪಾರಖಾವಣೀ ಮಾಡಿಸಿ ರಸೀದ್ ಪಡೆಯಬೇಕು ಆ ರೀತಿ ಪಡೆಯದೇ ತಪ್ಪಿದಲ್ಲಿ ಖಿಸ್ತು ಮೊಬಲಗ್ಯೆ ರೆವಿನ್ಯೂ ರೂಲ್ಸ್ ಅನುಸರಿಸಿ ನಿಲ್ಲಿಸಿಕ್ಕೊಳ್ಳುವ ದಿವಸಗಳಿಗೆ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರಿಗೆ ವಸೂಲ್ ಮಾಡುವದಲ್ಲದೆ ಕೂಡ್ಲೇ ಬಾಬ್ ಜಫ್ತೀಯಿಂದ ಪುನಹಾ ಹರಾಜ್ ಮಾಡಿಸಿ ಕಮ್ಮೀ ಆಗುವ ಮೊಬಲಗ್ ಇಜಾರೇದಾರ ಮತ್ತು ಜಾಮೀನ್‌ದಾರರುಗಳಿಂದ ವಸೂಲ್ ಮಾಡಲ್ಪಟ್ಟೀತು.

ಮೇಲೆಕಂಡ ಕರಗುಪಡಿಹಾಸಲು ಕ್ರಮವಾಗಿ ಕೊಡಬೇಕಾಗಿರುವ ಬಾಧ್ಯತೆಯಿಂದ ಯಾವ ಮನುಷ್ಯನೇ ಆಗಲಿ ನಿವರ್ತಿಸಲ್ಪಟ್ಟಿಲ್ಲವೆಂಬ ಸಂಗತಿ ಚನ್ನಾಗಿ ತಿಳಿಯತಕ್ಕದ್ದು.

ಬತಾರೀಖು 1ನೇ ಮಾರ್ಚೀ ಸರ್ 1876ನೇ ಇಸವಿ, ಮೊಕ್ಕಾಂ ಚಿತ್ರದುರ್ಗ.

S. VENKAT VARDAIENGAR,
For Dy. Commr.

MYSORE GOVERNMENT PRESS, BANGALORE—1876.

ಮೈಸೂರ ಗೆಜೆಟ್.

ನಂ. 10 ಸರ್ಕಾರದಿಂದ ಪ್ರಾಯಿಷ್ ಆದ್ದು. ಸಕ 1876.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 11, ಸಕ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ–ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	37—40
2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್ಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರವೇಟರು, ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್ಗಳು. ..	99—110
3ನೇ ಭಾಗ–ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ–ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 383. ತಾರೀಖು 1ನೇ ಮಾರ್ಚಿ 1876.

ಅರಮನೆ ಇಲಾಖಾ ಪೆನ್ಷನ್‌ದಾರರುಳಿಗೆ ಪೆನ್ಷನ್ ಬಟವಾಡೇ ಬಗ್ಯೆ ಯೇರ್ಪಡಿಸೋಣಾದ ರೂಲ್ಸ್.

1. ಇದರಡಿ ಬರುವ 3ನೇ ನಿಬಂಧನೆಯು ಷರತ್‌ಗಳನುಸರಿಸಿ ಖುದ್ ಹಾಜರಾಗಬೇಕಾದ್ದಿಲ್ಲವೆಂದು ವಿನಾಯಿಸಲ್ಪಡ ಬಹುದಾದ ಜನಗಳು ಸಿವಾಯಿ ಮೈಸೂರಲ್ಲಿ ವಾಸಮಾಡುವ ಇತರ ದರೋಬಸ್ತು ಪೆನ್ಷನ್‌ದಾರರುಗಳೂ ಮೈಸೂರಲ್ಲಿ ಸಿವಿಲ್ ಪೆನ್ಷನ್ ಪೇ

153

ಮಾಸ್ತರ್ ಆಫೀಸಿನಲ್ಲಿ ಹಾಜರಾಗಿ ಖುದು ಪೆನ್ಷನ ತೆಗದುಕೊಳ್ಳತಕ್ಕದ್ದು. ಸದರೀ ಸಿವಿಲ್ ಪೆನ್ಷನ ಪೇ ಮಾಸ್ತರವರು ಪ್ರತಿ ಸಂವತ್ಸರ ಷುಮಾರಿ ಏಪ್ರೈಲ್ ಗ.ರ್ನೇ ತಾರೀಖಿಗೆ, ತಾವು ಪೆನ್ಷನ ಕೊಟ್ಟ ದರೋಬಸ್ತು ಪೆನ್ಷನದಾರರುಗಳನ್ನೂ ತನಖೀ ನೋಡತಕ್ಕದ್ದು.

2. ಮೈಸೂರ ಷಹರಿನಿಂದ ಆಚೆಗೆ ವಾಸಮಾಡುತ್ತಿರುವ ಪೆನ್ಷನದಾರರುಗಳಿಗೆ ಆ ಸಮೀಪದ ತಾಲ್ಲೂಕು ಅಮಲ್ದಾರರು ಮೊಬಲಗು ಕೊಡತಕ್ಕದ್ದು. ಅಂತಾ ಅಮಲ್ದಾರರಿಗೆ ಸಿವಿಲ್ ಪೆನ್ಷನ ಪೇ ಮಾಸ್ತರಿಂದಾಗಲಿ, ಡಿಸ್ಟ್ರಿಕ್ಟ ಟ್ರೆಜರೀ ಆಫೀಸರಿಂದಾಗಲಿ, ಮೊಬಲಗ್ ಕೊಡತಕ್ಕ ವಿಷಯದಲ್ಲಿ ಬಂದ ಹುಕ್ಕುಂ ಅನುಸರಿಸಿಯೂ, ಪ್ರತಿ ಪೆನ್ಷನದಾರನೂ ಪಡೆದಿರುವ ಸರ್ಟಿಫಿಕೇಟ್ ಅನುಸರಿಸಿಯೂ, ಮೊಬಲಗ್ ಕೊಟ್ಟಿರುತ್ತೆಂತಲೂ, ಮೋಸಕರವಾಗಿ ವ್ಯಕ್ತಿಭೇದ ಉಂಟಾಗದಂತೆ ಆವಶ್ಯಕವಾದ ಎಲ್ಲ ವಿಧ ನಿಗೇವಾನೀ ಮಾಡಲ್ಪಡುತ್ತೆಂತಲೂ, ನೋಡಿಕೊಳ್ಳುವದು ಅವರ ಕೆಲಸವಾಗಿರುತ್ತೆ. ಪ್ರತಿ ತಾಲ್ಲೂಕು ಅಮಲ್ದಾರ್ರು ಪ್ರತಿ ಸಂವತ್ಸರ ಏಪ್ರೈಲ್ ಗುರ್ನೇ ತಾರೀಖಿಗೆ ಪೆನ್ಷನರಗಳನ್ನು ತನಿಖೀ ಮಾಡಿ ವ್ಯಕ್ತಿ ನಿರ್ಣಯಪಡಿಸಿ ಆ ಮೇಲೆ ತಾವು ತನಿಖೀ ಮಾಡಿದ ಪೆನ್ಷನದಾರರುಗಳ ಒಂದು ಹೆಸರು ಜಂತ್ರಿಯನ್ನು ಸಿವಿಲ್ ಪೆನ್ಷನ ಪೇ ಮಾಸ್ತರಿಗೆ ಕಳುಹಿಸತಕ್ಕದ್ದು. ಹಾಂಗೆ ಕಳುಹಿಸುವಲ್ಲಿ ಪ್ರತಿ ಪೆನ್ಷನದಾರ್ರುಬಗ್ಯೆ ಲೈಫ್ ಸರ್ಟಿಫಿಕೇಟ್ ಯಂಬ ಜೀವನಿಶ್ಚಯದ ಸರ್ಟಿಫಿಕೇಟನ್ನು ಸಹಾ ಲಗ್ಗತ್ತು ಮಾಡತಕ್ಕದ್ದು.

3. ಯಾರ ದರ್ಜೇ ಯಾ ಜಾತಿ ಮರ್ಯಾದೆ ಇಂತಾದ್ದರಿಂದ ಬಹಿರಂಗವಾಗಿ ಹಾಜರಾಗಲಿಕ್ಕೆ ಬಾಧಕವಾಗುತ್ತದೋ ಅಂತಾ ಹೆಂಗಸರಾದ ಪೆನ್ಷನದಾರರು ಮತ್ತು ತಮ್ಮ ದರ್ಜೇ ಅಥವಾ ಇತರ ವಿದ್ಯಮಾನಗಳ ದೆಸೆಯಿಂದ ಖುದ್ದು ಹಾಜರಾಗಬೇಕಾದ್ದಿಲ್ಲವೆಂದು ಚೀಫ್ ಕಮ್ಮಿಷನರ್ ಯವರಿಂದ ಮುಖ್ಯವಾಗಿ ವಿನಾಯಿಸಲ್ಪಡ ಬಹುದಾಗಿರುತ್ತೋ ಅಂತಾ ಪೆನ್ಷನದಾರರು ಕ್ರಮ ಪ್ರಕಾರ ನೇಮಿಸಲ್ಪಟ್ಟ ಮುಖತಾಲೀಕನ ಮೂಲಕ ಮೊಬಲಗ್ ತೆಗದುಕೊಳ್ಳತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಪೆನ್ಷನದಾರ್ ಖಜಾನೇ ಯಿರತಕ್ಕ ಸ್ಥಳದಿಂದ ಅನಾನುಕೂಲವಾವಷ್ಟು ದೂರದಲ್ಲಿ ವಾಸ ಮಾಡುತ್ತಿರುವ ಪಕ್ಷಕ್ಕೆ ಅಮಲ್ದಾರರು ಶೇಕದಾರ್ ವ ಪಟೇಲರ ಮೂಲಕ ಪೆನ್ಷನ ಮೊಬಲಗು ಪಾವತೀ ಮಾಡಿಸ ಬಹುದು. ಹಾಂಗೆ ಮಾಡಿಸುವಲ್ಲಿ ಅಂತಾ ಶೇಕದಾರ್ ಯಾ ಪಟೇಲರು ಮೊಬಲಗು ಸಂದದಕ್ಕೆ ಪೆನ್ಷನದಾರ್ರಿಂದ ತೆಗದುಕೊಳ್ಳುವ ರಸೀದಿಯ ಮೇಲೆ ಪೆನ್ಷನದಾರನಿಗೆ ತಮ್ಮ ರೂಬರೂ ಮೊಬಲಗು ಸಂದಾಯ ಮಾಡಿದೆ ಯಂಬದಾಗಿ ಷರಾ ಬರೆದು ಅಮಲ್ದಾರರಲ್ಲಿ ಹಾಜರ್ ಮಾಡತಕ್ಕದ್ದು. ಅಂತಾ ಸಂದರ್ಭಗಳೊಳಗೆ ಅಮಲ್ದಾರರಾಗಲಿ, ಡಿಸ್‌ಬರ್ಸಿಂಗ್ ಯಾನೆ ಬಟವಾಡಿ ಮಾಡತಕ್ಕ ಆಫೀಸರಾಗಲಿ, ಸರ್ಕಾರಕ್ಕೆ ದುಬಾರೀ ಖರ್ಚು ತಗಲದಂತೆ ಸಾಧ್ಯವಾದ ಎಲ್ಲ ವಿಧ ಜಾಗರೂಕತೆಯನ್ನೂ ವಹಿಸತಕ್ಕದ್ದು. ಮತ್ತು ಪ್ರತಿ ಸಂವತ್ಸರ ಮೊದಲನೇ ತಿಂಗಳ ಪೆನ್ಷನ ಸಲ್ಲುವದಕ್ಕೆ ಪೂರ್ವವೇ ಆ ಪೆನ್ಷನದಾರನು ಜೀವಿಸಿ ಯಿದ್ದಾನೆಂಬದಕ್ಕೆ ಮಾತ್ರವಲ್ಲದೆ ಅವನು ಖುದ್ದು ಹಾಜರಾಗಲಿಕ್ಕೆ ಕಾಹಿಲೆ ವಗೈರೇ ಸಬಬಿನಿಂದ ವಿನಾಯಿತಿ ಖಾಯಿಷ್ ಮಾಡಲ್ಪಟ್ಟ ಪಕ್ಷಕ್ಕೆ ಹಾಗೆ ಅವನು ಹಾಜರಾಗುವದಕ್ಕೆ ಅಶಕ್ತನಾಗಿರುವ ಅಂಶದೊಳಗೆ ಸಹಾ ರುಜುವಾತನ್ನು ಅಪೇಕ್ಷಿಸತಕ್ಕದ್ದು. ಸಂದೇಹ ಯಾ ಗುಮಾನೀ ಉಂಟಾದ ದರೋಬಸ್ತು ಸಂಗತಿಗಳನ್ನೂ ಅಮಲ್ದಾರ್ರು ಮೈಸೂರಲ್ಲಿರುವ ಸಿವಿಲ್ ಪೆನ್ಷನ ಪೇ ಮಾಸ್ತರಿಗೆ ಅವರ ಹುಕ್ಕುಂ ಬಗ್ಯೆ ರಿಪೋರ್ಟು ಮಾಡತಕ್ಕದ್ದು.

4. ಪೆನ್ಷನ ಬಟವಾಡೇ ಮಾಡತಕ್ಕ ಆಫೀಸರರು ದೊಡ್ಡ ದರ್ಜೇಯಲ್ಲಿರುವ ಪೆನ್ಷನದಾರರನ್ನು ರಹಸ್ಯದಲ್ಲಿ ವ್ಯಕ್ತಿ ನಿರ್ಣಯ ಪಡಿಸಿಕೊಳ್ಳಬಹುದು. ಮತ್ತು ಸದರೀ ಪೆನ್ಷನದಾರ್ರು ರೂಬರೂ ಹಾಜರಾಗಬೇಕಾದ ಜರೂರಿಲ್ಲ.

5. ಒಂದು ಪೆನ್ಷನ ಆರುತಿಂಗಳಿಗೆ ಜಾಸ್ತಿಯಾಗಿ ತೆಗದುಕೊಳ್ಳದೆ ನಿಂತರೆ ಆ ಬಾಬತು ಪೆನ್ಷನ ರೋಲನ್ನು ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರಿಗೆ ವಾಪಸ್ ಮಾಡತಕ್ಕದ್ದಲ್ಲದೆ ಸದರೀ ಪೆನ್ಷನ ಸಲ್ಲದೆ ನಿಲ್ಲುತ್ತದೆ. ಪೆನ್ಷನದಾರನು ತರುವಾಯ ಹಾಜರಾದಲ್ಲಿ ಸಿವಿಲ್ ಪೆನ್ಷನ ಪೇ ಮಾಸ್ತರು ಪೆನ್ಷನ ರೋಲನ್ನು ವಾಪಸ್ ತರಸಿಕೊಂಡು ಮೊಬಲಗು ಯಥಾಪ್ರಕಾರ ಪಾವತೀ ಮಾಡುತ್ತ ಬರಬಹುದು, ಆದರೆ ಗೈರಾದೇ ಮೊಬಲಗ್ ಮಾತ್ರ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರ ಮಾರಿಫತ್ತು ಚೀಫ್ ಕಮ್ಮಿಷನರವರ ಸಾಂಗ್ಷನ ಪಡೆದ ಹೊರ್ತು ಮೊಬಲಗು ಕೊಡಲ್ಪಡಲಾರದು.

6. ಮೇಲ್ಕಂಡ 5ನೇ ರೂಲ್‌ನಲ್ಲಿ ನಮೂದಿಸುವ ಕಾಲದವರಿಗೆ ಮೊಬಲಗ್ ಕೊಡದೆ ನಿಲ್ಲಿಸಿ ಇದ್ದದ್ದು ಯಾವ ಸರ್ಕಾರ ಉದ್ಯೋಗಸ್ಥರ ಗಲ್ಲತ್ ಯಾ ಅಶ್ರದ್ಧೆ ಮೂಲಕ ಉಂಟಾಗಿದ್ದ ಪಕ್ಷಕ್ಕೆ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರು ಚೀಫ್ ಕಮ್ಮಿಷನರವರ ಮಂಜೂರಾತಿಯನ್ನು ಪಡೆಯದೆಯೇ ಪೆನ್ಷನ ಗೈರಾದೇ ಕೊಡುವಂತೆ ಹುಕುಂ ಮಾಡಬಹುದು.

7. ಒಬ್ಬ ಪೆನ್ಷನ ದಾರನು ಪೆನ್ಷನ ಗೈರಾದೇಯನ್ನು ಹೊಂದಲಿಕ್ಕೆ ಅರ್ಹನಾಗಿದ್ದು, ಮೊಬಲಗು ಸಲ್ಲುವ ಬಗ್ಯೆ ಸಾಂಗ್ಷನ ಆಗುವದಕ್ಕೆ ಮುಂಚಿತವಾಗಿಯೇ ಮೃತಪಟ್ಟ ಪಕ್ಷಕ್ಕೆ, ಅವನ ಮರಣಾ ನಂತರ ಆರು ತಿಂಗಳೊಳಗಾಗಿ ಅವನ ವಾರಸ್‌ದಾರ್ರು ಕೇಳಿಕೊಂಡರೆ ಅವರಿಗೆ ಮೊಬಲಗ್ ಪಾವತೀ ಮಾಡಬಹುದು. ಪರಂತು ಆ ಕಾಲದ ತರುವಾಯ ಚೀಫ್ ಕಮ್ಮಿಷನರವರ ಸಾಂಗ್ಷನ ಇಲ್ಲದೆ ಕೊಡಲ್ಪಡಲಾರದು.

8. ಸರ್ಕಾರಕ್ಕೆ ಸೇರಿಹೋದ ಬಾಬತು ಅರಮನೆ ಇಲಾಖಾ ಪೆನ್ಷನಗಳ ಒಂದು ಪಟ್ಟೀಯನ್ನು ಕಳೆದ ಹನ್ನೆರಡು ತಿಂಗಳೊಳಗೆ ಮಂಜೂರಾದ ಹೊಸ ಪೆನ್ಷನಗಳ ಬಾಬತು ಮತ್ತೊಂದು ಪಟ್ಟೀಯನ್ನು ಸಹ ಸಿವಿಲ್ ಪೆನ್ಷನ ಪೇ ಮಾಸ್ತರು, ಚೀಫ್ ಕ

ಮ್ಮಿಷನರವರ ಆಫಿಸಿಗೆ ಸಾಲೀಯಾನಾ ಕಳುಹಿಸತಕ್ಕದ್ದು. ಸದರೀ ಎರಡು ಪಟ್ಟೀಗಳೂ ಏಪ್ರೆಲ್ ಗುರ್ರೇ ವರಿಗೆ ತಯಾರಾಗತಕ್ಕದ್ದು, ಮತ್ತು ಅವುಗಳ ಬಾಬತು ಒಂದು ನಕ್ಕಲನ್ನು ಅದೇ ಕಾಲದಲ್ಲಿ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ರವರಿಗೂ ಕಳುಹಿಸತಕ್ಕದ್ದು.

ನಂ. 384.　　ತಾರೀಖು 6ನೇ ಮಾರ್ಚೀ 1876.

ಮೇಜರ್ ಹಿಲ್ ಸಾಹೇಬರನ್ನು ನಗರ್ ಡಿವಿಜನ್ ಆಕ್ಟಿಂಗ್ ಕಮ್ಮಿಷನರ್ ಕೆಲಸಕ್ಕೆ ನೇಮಿಸಿದ್ದರಿಂದ ಇದರಡಿ ಬರುವ ಆಫೀಸರ್‌ಗಳು ಈ ಕೆಳಗೆ ತಿಳಿಸಲ್ಪಡುವ ಹೈಯರ್ ಗ್ರೇಡ್‌ಗಳಲ್ಲಿ ಇದರಡಿ ನಮೂದಿಸಲ್ಪಡುವ ತಾರೀಖುಗಳ ಲಾಗಾಯಿತು ಆಕ್ಟಿಂಗ್ ತರೀಕ್ ಕೆಲಸ ನೋಡಿದಂತೆ ಯೆಣಿಸಲ್ಪಡತಕ್ಕದ್ದು;—

1875ನೇ ಇಸವಿ ಜನವರೀ 20ನೇ ಮುಕ್ಕಾಂ ಲಾಗಾಯತು 26ನೇ ಫೆಬ್ರವರೀ ತಾರೀಖು ವರಿಗೆ.

3ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರ್ ವ 2ನೇ ಕ್ಲಾಸ್ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಮಿಸ್ಟರ್ ರಿಕ್ಕೆಟ್ಸ್ ಸಾಹೇಬರು 1ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರಾಗಿ,

3ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರ್ ಮೇಜರ್ ಪರಸ್ ಸಾಹೇಬರು 2ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರಾಗಿ,

4ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರ್ ಮೇಜರ್ ಮೋಟಿಟ್ ಸಾಹೇಬರು 3ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರಾಗಿ ಮೊಕರರ್.

1875ನೇ ಇಸವಿ ಜನವರೀ 19ರ ಲಾಗಾಯತು ಮಾರ್ಚೀ 7ರ ವರಿಗೆ.

3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ವ 2ನೇ ಕ್ಲಾಸ್ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿನರ್ ಕೆಪ್ಟನ್ ಲಡ್ಲೋ ಸಾಹೇಬರು 1ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ,

4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ವ 3ನೇ ಕ್ಲಾಸ್ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ವೆಂಕಟವರದೈಯ್ಯಂಗಾರು 2ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ,

4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಷಣ್ಮುಗವೇಲು ಪಿಳ್ಳೆಯವರು 3ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್.

ನಂ. 385.　　ತಾರೀಖು 10ನೇ ಮಾರ್ಚೀ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕೃಷ್ಣೈಯನವರು ತಾವು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 386.　　ತಾರೀಖು 10ನೇ ಮಾರ್ಚೀ 1876.

ಅಸಿಸ್ಟೆಂಟ್ ಕಮ್ಮಿಷನರ್‌ಗಳ ಯಿದರಡಿ ಬರುವ ವರ್ಗಾವರ್ಗಿಗಳು ಮಂಜೂರಾಗಿರುತ್ತವೆ:—

ಶಿವಮೊಗ್ಗ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕೃಷ್ಣಸ್ವಾಮೈಯ್ಯಂಗಾರ್ ಹಂಗಾಮೀ ತರೀಕ್ ಬೆಂಗಳೂರ ಡಿಸ್ಟ್ರಿಕ್ಟಿಗೆ ವರ್ಗ.

ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಅಬ್ದುಲ್‌ಖಾದರ್ ಯವರು ಕೋಲಾರ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಚಾರ್ಜ್ ತೆಗದುಕೊಳ್ಳುವಂತೆ ಮೊಕರರ್.

ಇನಾಂ ಡಿಪಾರ್ಟ್ಮೆಂಟ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ನರಸಿಂಹ್ಮಯ್ಯಂಗಾರವರು ಹಾಸನ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟು ಮಂಜರಾಬಾದ್ ಸಬ್ ಡಿವಿಜನ್ ಚಾರ್ಜ್ ತೆಗದುಕೊಳ್ಳುವಂತೆ ಮೊಕರರ್.

ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ನಾರಣಪ್ಪನವರು, ಹಂಗಾಮೀ ತರೀಕ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ.

ಹಾಸನ ಡಿಸ್ಟ್ರಿಕ್ಟು ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ಸುಬ್ಬರಾಯರವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗ.

ಅಷ್ಟ್ರಾಗ್ರಾಮ ಮತ್ತು ತುಮಕೂರು ಡಿಸ್ಟ್ರಿಕ್ಟು ಆಫಿಷಿಯೇಟಿಂಗ ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ಬಿ. ವೆಂಕಟವರದೈಯ್ಯಂಗಾರ್ರು ಹಂಗಾಮಿ ತರೀಕ ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ ಅಸಿಸ್ಟೆಂಟ ಕಮ್ಮಿಷನರ ಕೆಲಸವನ್ನು ಆಕ್ಟಿಂಗಾಗಿ ನೋಡುವಂತೆ ಮೊಕರರ.

ನಂ. 387. ತಾರೀಖು 10ನೇ ಮಾರ್ಚಿ 1876.

ಇದರಿಂದ ಸಕಲರಿಗೂ ತಿಳಿಯುವ ಬಗ್ಯೆ ಫಾಯಿಷ ಮಾಡುವದೇನಂದರೆ, ತಾಲ್ಲೂಕು ಹೆಡ ಕ್ವಾರ್ಟರಗಳಲ್ಲಿ ಇದರಡಿ ನಮೂದಿಸಲ್ಪಡುವ ಷಹರಗಳಲ್ಲಿ ಇಡಲ್ಪಟ್ಟ ಮುನಿಸಿಫಗಳಿಗೂ ವ ಪೇಷ್ಕಾರಗಳಿಗೂ ಸದರೀ ಷಹರಗಳೊಳಗೆ ಮ್ಯುನಿಸಿಪೆಲ ರೂಲಸಿಗೆ ವಿರುದ್ಧವಾಗಿ ನಡಿಸಲ್ಪಡುವ ತಕಸೀರಗಳಿಗೆ ಜುರ್ಮಾನೆ ವಿಧಿಸತಕ್ಕ ವಿಷಯದಲ್ಲಿ 1869ನೇ ಇಸವಿ ಆಗಸ್ಟು 16ನೇ ಮರ್ಕುಂ 94ನೇ ನಂಬರ ಇಸ್ತಿಹಾರ ದೆಶೆಯಿಂದ ಅಮಲ್ದಾರ್ರುಗಳಿಗೆ ಕೊಡಲ್ಪಟ್ಟ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ಬೆಂಗಳೂರು ಡಿಸ್ಟ್ರಿಕ್ಟು.	ಯಲಹಂಕ	..	ಮುನಸಿಫ.
	ಕೆಂಗೇರಿ	..	ಪೇಷ್ಕಾರ.
	ಶುಕ್ರವಾರಪೇಟೆ ದೇಖಿಲ ಚನ್ನಪಟ್ಣ		ಪೇಷ್ಕಾರ.
ಕೋಲಾರ ಡಿಸ್ಟ್ರಿಕ್ಟು.	ಚಿಂತಾಮಣಿ	..	ಮುನಸಿಫ.
ತುಮಕೂರು ಡಿಸ್ಟ್ರಿಕ್ಟು.	ತುರುವೆಕೆರೆ	..	ಮುನಸಿಫ
	ಹುಲಿಯೂರುದುರ್ಗ	..	ಪೇಷ್ಕಾರ
ಮೈಸೂರು ಡಿಸ್ಟ್ರಿಕ್ಟು	ಮದ್ದೂರು	..	ಪೇಷ್ಕಾರ.
	ಪೆರಿಯಾಪಟ್ಣ	..	ಡಿಟೋ.
ಹಾಸನ ಡಿಸ್ಟ್ರಿಕ್ಟು	ಆಲೂರು	..	ಮುನಸಿಫ
ಕಡೂರು ಡಿಸ್ಟ್ರಿಕ್ಟು	ಕಡೂರು		ಮುನಸಿಫ
	ಬೀರೂರು		

"ಬಮೋಜೀಬ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಫ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ.

ಇಸ್ತಿಹಾರ ನಾಮೆಗಳು.

ನಂ. 35. ತಾರೀಖು 8ನೇ ಮಾರ್ಚಿ 1876.

ಕೊಡಗು 2ನೇ ಅಸಿಸ್ಟೆಂಟ ಸೂಪರಿಂಟೆಂಡೆಂಟ ಮೆ॥ C. ಸುಬ್ಬೈಯ್ಯನವರಿಗೆ ಸ್ನ 1876ನೇ ಇಸವಿ ಫಿಬ್ರವರೀ 3ನೇ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತ್ತದೆ.

"ಬಮೋಜೀಬ ಹುಕ್ಕುಂ,"

T. CLARKE,
Offg. Secretary.

156

ಮೈಸೂರ ಗೆಜೆಟ್.

ನಂ. 11 ಸರ್ಕಾರದಿಂದ ಛಾಯಿಷ್ಟ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 18, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯಾ ಗವರ್ನಮೆಂಟಿನವರ ಇಸ್ತಿಹಾರ್ ನಾಮೆಗಳು.	41—44
2ನೇ ಭಾಗ—ಜುಡಿಷಲ್ ಕಮ್ಮಿಷನರು; ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು; ಇನಾಂ ಸೂಪರ್ರಿಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕಸ್ ಆಫೀಸರಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜ್ಯಾತಿ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡಲ್ಪಟ್ಟಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು. ..	111—128
3ನೇ ಭಾಗ—ಇಂಡ್ಯಾ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಜಾಹರೇ ಪಟ್ಟಿ.	

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 383. ತಾರೀಖು 1ನೇ ಮಾರ್ಚಿ 1876.

ಅರಮನೆ ಇಲಾಖಾ ಪೆನ್ಷನದಾರರುಗಳಿಗೆ ಪೆನ್ಷನ್ ಬಟವಾಡೇ ಬಗ್ಯೆ ಯೇರ್ಪಡಿಸೋಣಾದ ರೂಲ್ಸ್.

1. ಇದರಡಿ ಬರುವ 3ನೇ ನಿಬಂಧನೆಯ ಷರತ್ತಿಗಳನುಸರಿಸಿ ಖುದ್ ಹಾಜರಾಗಬೇಕಾದ್ದಿಲ್ಲವೆಂದು ವಿನಾಯಿಸಲ್ಪಡ ಬಹುದಾದ ಜನಗಳು ಸಿವಾಯಿ ಮೈಸೂರಲ್ಲಿ ವಾಸಮಾಡುವ ಇತರ ದರೋಬಸ್ತು ಪೆನ್ಷನದಾರರುಗಳೂ ಮೈಸೂರಲ್ಲಿ ಸಿವಿಲ್ ಪೆನ್ಷನ್ ಪೇ

ಮಾಸ್ಟರ್ ಆಫಿಸ್‌ನಲ್ಲಿ ಹಾಜರಾಗಿ ಖುದ್ದು ಪೆನ್ಷನ್ ತೆಗದುಕೊಳ್ಳತಕ್ಕದ್ದು. ಸದರೀ ಸಿವಿಲ್ ಪೆನ್ಷನ್ ಪೇ ಮಾಸ್ಟರವರು ಪ್ರತಿ ಸಂವತ್ಸರ ಷುಮಾರ್ ಏಪ್ರಿಲ್ ಗುರ್ರೇ ತಾರೀಖಿಗೆ, ತಾವು ಪೆನ್ಷನ್ ಕೊಟ್ಟ ದರೋಬಸ್ತು ಪೆನ್ಷನ್‌ದಾರರುಗಳನ್ನೂ ತನಖೀನೋಡತಕ್ಕದ್ದು.

2. ಮೈಸೂರ ಷಹರಿನಿಂದ ಆಚೆಗೆ ವಾಸಮಾಡುತ್ತಿರುವ ಪೆನ್ಷನ್‌ದಾರರುಗಳಿಗೆ ಆ ಸಮೀಪದ ತಾಲ್ಲೂಕು ಅಮಲ್‌ದಾರರು ಮೊಬಲಗು ಕೊಡತಕ್ಕದ್ದು. ಅಂತಾ ಅಮಲ್‌ದಾರರಿಗೆ ಸಿವಿಲ್ ಪೆನ್ಷನ್ ಪೇ ಮಾಸ್ಟರಿಂದಾಗಲಿ, ಡಿಸ್ಟ್ರಿಕ್ಟು ಟ್ರೆಜರೀ ಆಫಿಸಿನಿಂದಾಗಲಿ, ಮೊಬಲಗ್ ಕೊಡತಕ್ಕ ವಿಷಯದಲ್ಲಿ ಬಂದ ಹುಕ್ಕುಂ ಅನುಸರಿಸಿಯೂ, ಪ್ರತಿ ಪೆನ್ಷನ್‌ದಾರನೂ ಪಡೆದಿರುವ ಸರ್ಟಿಫಿಕೇಟ್ ಅನುಸರಿಸಿಯೂ, ಮೊಬಲಗ್ ಕೊಟ್ಟಿರುತ್ತೇಂತಲೂ, ಮೋಸಕರವಾಗಿ ವ್ಯಕ್ತಿಭೇದ ಉಂಟಾಗದಂತೆ ಆವಶ್ಯಕವಾದ ಎಲ್ಲ ವಿಧ ನಿಗೇವಾನೀ ಮಾಡಲ್ಪಡುತ್ತೇಂತಲೂ, ನೋಡಿಕೊಳ್ಳುವದು ಅವರ ಕೆಲಸವಾಗಿರುತ್ತೆ. ಪ್ರತಿ ತಾಲ್ಲೂಕು ಅಮಲ್‌ದಾರು ಪ್ರತಿ ಸಂವತ್ಸರ ಏಪ್ರಿಲ್ ಗುರ್ರೇ ತಾರೀಖಿಗೆ ಪೆನ್ಷನರ್‌ಗಳನ್ನು ತನಿಖೀ ಮಾಡಿ ವ್ಯಕ್ತಿ ನಿರ್ಣಯಪಡಿಸಿ ಆ ಮೇಲೆ ತಾವು ತನಿಖೀ ಮಾಡಿದ ಪೆನ್ಷನ್‌ದಾರರುಗಳ ಒಂದು ಹೆಸರು ಜಂತ್ರಿಯನ್ನು ಸಿವಿಲ್ ಪೆನ್ಷನ್ ಪೇ ಮಾಸ್ಟರಿಗೆ ಕಳುಹಿಸತಕ್ಕದ್ದು. ಹಾಂಗೆ ಕಳುಹಿಸುವಲ್ಲಿ ಪ್ರತಿ ಪೆನ್ಷನ್‌ದಾರುಬಗ್ಯೆ ಲೈಫ್ ಸರ್ಟಿಫಿಕೇಟ್ ಯಂಬ ಜೀವನಿಶ್ಚಯದ ಸರ್ಟಿಫಿಕೇಟನ್ನು ಸಹಾ ಲಗ್ಗತ್ ಮಾಡತಕ್ಕದ್ದು.

3. ಯಾರ ದರ್ಜೇ ಯಾ ಜಾತಿ ಮರ್ಯಾದೆ ಇಂತಾದ್ದರಿಂದ ಬಹಿರಂಗವಾಗಿ ಹಾಜರಾಗಲಿಕ್ಕೆ ಬಾಧಕವಾಗುತ್ತದೋ ಅಂತಾ ಹೆಂಗಸರಾದ ಪೆನ್ಷನ್‌ದಾರರು ಮತ್ತು ತಮ್ಮ ದರ್ಜೇ ಅಥವಾ ಇತರ ವಿದ್ಯಮಾನಗಳ ದೆಸೇಯಿಂದ ಖುದ್ದು ಹಾಜರಾಗಬೇಕಾದ್ದಿಲ್ಲವೆಂದು ಚೀಫ್ ಕಮ್ಮಿಷನರ್ ಯವರಿಂದ ಮುಖ್ಯವಾಗಿ ವಿನಾಯಿಸಲ್ಪಡ ಬಹುದಾಗಿರುತ್ತೋ ಅಂತಾ ಪೆನ್ಷನ್‌ದಾರರು ಕ್ರಮಪ್ರಕಾರ ನೇಮಿಸಲ್ಪಟ್ಟ ಮುಖತಾಲೀಕನ ಮೂಲಕ ಮೊಬಲಗ್ ತೆಗದುಕೊಳ್ಳತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಪೆನ್ಷನ್‌ದಾರ್ ಖಜಾನೇ ಯಿರತಕ್ಕ ಸ್ಥಳದಿಂದ ಅನಾನುಕೂಲವಾದಷ್ಟು ದೂರದಲ್ಲಿ ವಾಸ ಮಾಡುತ್ತಿರುವ ಪಕ್ಷಕ್ಕೆ ಅಮಲ್‌ದಾರರು ಶೇಕದಾರ್ ವ ಪಟೇಲರ ಮೂಲಕ ಪೆನ್ಷನ್ ಮೊಬಲಗು ಪಾವತೀ ಮಾಡಿಸ ಬಹುದು. ಹಾಂಗೆ ಮಾಡಿಸುವಲ್ಲಿ ಅಂತಾ ಶೇಕದಾರ್ ಯಾ ಪಟೇಲರು ಮೊಬಲಗು ಸಂದದ್ದಕ್ಕೆ ಪೆನ್ಷನ್‌ದಾರ್ರಿಂದ ತೆಗದುಕೊಳ್ಳುವ ರಸೀದಿಯ ಮೇಲೆ ಪೆನ್ಷನ್‌ದಾರರಿಗೆ ತಮ್ಮ ರೂಬರೂ ಮೊಬಲಗು ಸಂದಾಯ ಮಾಡಿದೆ ಯಂಬದಾಗಿ ಷರಾ ಬರೆದು ಅಮಲ್‌ದಾರರಲ್ಲಿ ಹಾಜರ್ ಮಾಡತಕ್ಕದ್ದು. ಅಂತಾ ಸಂದರ್ಭಗಳೊಳಗೆ ಅಮಲ್‌ದಾರರಾಗಲಿ, ಡಿಸ್‌ಬರ್ಸಿಂಗ್ ಯಾನೆ ಬಟವಾಡೆ ಮಾಡತಕ್ಕ ಆಫಿಸರಾಗಲಿ, ಸರ್ಕಾರಕ್ಕೆ ದುಬಾರೀ ಖರ್ಚು ತಗಲದಂತೆ ಸಾಧ್ಯವಾದ ಯೆಲ್ಲ ವಿಧ, ಜಾಗರೂಕತೆಯನ್ನೂ ವಹಿಸತಕ್ಕದ್ದು. ಮತ್ತು ಪ್ರತಿ ಸಂವತ್ಸರ ಮೊದಲನೇ ತಿಂಗಳ ಪೆನ್ಷನ್ ಸಲ್ಲುವದಕ್ಕೆ ಪೂರ್ವವೇ ಆ ಪೆನ್ಷನ್‌ದಾರನು ಜೀವಿಸಿ ಯಿದ್ದಾನೆಂಬದಕ್ಕೆ ಮಾತ್ರವಲ್ಲದೆ ಅವನು ಖುದ್ದು ಹಾಜರಾಗಲಿಕ್ಕೆ ಕಾಹಿಲೆ ವಗೈರೇ ಸಬಬ್‌ನಿಂದ ವಿನಾಯಿತಿ ಖಾಯಿಷ್ ಮಾಡಲ್ಪಟ್ಟ ಪಕ್ಷಕ್ಕೆ ಹಾಗೆ ಅವನು ಹಾಜರಾಗುವದಕ್ಕೆ ಅಶಕ್ತನಾಗಿರುವ ಅಂಶದೊಳಗೆ ಸಹಾ ರುಜುವಾತನ್ನು ಅಪೇಕ್ಷಿಸತಕ್ಕದ್ದು. ಸಂದೇಹ ಯಾ ಗುಮಾನೀ ಉಂಟಾದ ದರೋಬಸ್ತು ಸಂಗತಿಗಳನ್ನೂ ಅಮಲ್‌ದಾರು ಮೈಸೂರಲ್ಲಿರುವ ಸಿವಿಲ್ ಪೆನ್ಷನ್ ಪೇ ಮಾಸ್ಟರಿಗೆ ಅವರ ಹುಕ್ಕುಂ ಬಗ್ಯೆ ರಿಪೋರ್ಟು ಮಾಡತಕ್ಕದ್ದು.

4. ಪೆನ್ಷನ್ ಬಟವಾಡೇ ಮಾಡತಕ್ಕ ಆಫಿಸರರು ದೊಡ್ಡ ದರ್ಜೇಯಲ್ಲಿರುವ ಪೆನ್ಷನ್‌ದಾರರನ್ನು ರಹಸ್ಯದಲ್ಲಿ ವ್ಯಕ್ತಿ ನಿರ್ಣಯ ಪಡಿಸಿಕೊಳ್ಳಬಹುದು. ಮತ್ತು ಸದರೀ ಪೆನ್ಷನ್‌ದಾರು ರೂಬರೂ ಹಾಜರಾಗಬೇಕಾದ ಜರೂರಿಲ್ಲ.

5. ಒಂದು ಪೆನ್ಷನ್ ಆರುತಿಂಗಳಿಗೆ ಜಾಸ್ತೀಯಾಗಿ ತೆಗದುಕೊಳ್ಳದೆ ನಿಂತರೆ ಆ ಬಾಬತು ಪೆನ್ಷನ್ ರೋಲನ್ನು ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರಿಗೆ ವಾಪಸ್ ಮಾಡತಕ್ಕದ್ದಲ್ಲದೆ ಸದರೀ ಪೆನ್ಷನ್ ಸಲ್ಲದೆ ನಿಲ್ಲುತ್ತದೆ. ಪೆನ್ಷನ್‌ದಾರನು ತರುವಾಯ ಹಾಜರಾದಲ್ಲಿ ಸಿವಿಲ್ ಪೆನ್ಷನ್ ಪೇ ಮಾಸ್ಟರು ಪೆನ್ಷನ್ ರೋಲನ್ನು ವಾಪಸ್ ತರಸಿಕೊಂಡು ಮೊಬಲಗು ಯಥಾಪ್ರಕಾರ ಪಾವತೀ ಮಾಡುತ್ತ ಬರಬಹುದು, ಆದರೆ ಗೈರಾದೇ ಮೊಬಲಗ್ ಮಾತ್ರ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರ ಮಾರಿಫತು ಚೀಫ್ ಕಮ್ಮಿಷನರವರ ಸಾಂಕ್ಷನ್ ಪಡೆದ ಹೊರ್ತು ಮೊಬಲಗು ಕೊಡಲ್ಪಡಲಾರದು.

6. ಮೇಲ್ಕಂಡ 5ನೇ ರೂಲ್‌ನಲ್ಲಿ ನಮೂದಿಸುವ ಕಾಲದವರಿಗೆ ಮೊಬಲಗ್ ಕೊಡದೆ ನಿಲ್ಲಿಸಿ ಇದ್ದದ್ದು ಯಾವ ಸರ್ಕಾರ ಉದ್ಯೋಗಸ್ಥರ ಗಲ್ಲತ್ ಯಾ ಅಶ್ರದ್ಧೆ ಮೂಲಕ ಉಂಟಾಗಿದ್ದ ಪಕ್ಷಕ್ಕೆ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರು ಚೀಫ್ ಕಮ್ಮಿಷನರವರ ಮಂಜೂರಾತಿಯನ್ನು ಪಡೆಯದೆಯೇ ಪೆನ್ಷನ್ ಗೈರಾದೇ ಕೊಡುವಂತೆ ಹುಕುಂ ಮಾಡಬಹುದು.

7. ಒಬ್ಬ ಪೆನ್ಷನ್‌ದಾರನು ಪೆನ್ಷನ್ ಗೈರಾದೇಯನ್ನು ಹೊಂದಲಿಕ್ಕೆ ಅರ್ಹನಾಗಿದ್ದು, ಮೊಬಲಗು ಸಲ್ಲುವ ಬಗ್ಯೆ ಸಾಂಕ್ಷನ್ ಆಗುವದಕ್ಕೆ ಮುಂಚಿತವಾಗಿಯೇ ಮೃತಪಟ್ಟ ಪಕ್ಷಕ್ಕೆ, ಅವನ ಮರಣಾ ನಂತರ ಆರು ತಿಂಗಳೊಳಗಾಗಿ ಅವನ ವಾರಸ್ದಾರು ಕೇಳಿಕೊಂಡರೆ ಅವರಿಗೆ ಮೊಬಲಗ್ ಪಾವತೀ ಮಾಡಬಹುದು. ಪರಂತು ಆಕಾಲದ ತರುವಾಯ ಚೀಫ್ ಕಮ್ಮಿಷನರ ಸಾಂಕ್ಷನ್ ಇಲ್ಲದೆ ಕೊಡಲ್ಪಡಲಾರದು.

8. ಸರ್ಕಾರಕ್ಕೆ ಶೇರಿಹೋದ ಬಾಬತು ಅರಮನೇ ಇಲಾಖಾ ಪೆನ್ಷನ್‌ಗಳ ಒಂದು ಪಟ್ಟೀಯನ್ನು ಕಳೆದ ಹನ್ನೆರಡು ತಿಂಗಳೊಳಗೆ ಮಂಜೂರಾದ ಹೊಸ ಪೆನ್ಷನ್‌ಗಳ ಬಾಬತು ಮತ್ತೊಂದು ಪಟ್ಟೀಯನ್ನು ಸಹ ಸಿವಿಲ್ ಪೆನ್ಷನ್ ಪೇ ಮಾಸ್ಟರು, ಚೀಫ್ ಕ

ಮಿಷನರವರ ಆಫಿಸಿಗೆ ಸಾಲೀಯಾನಾ ಕಳುಹಿಸತಕ್ಕದ್ದು. ಸದರೀ ಎರಡು ಪಟ್ಟೀಗಳೂ ಏಪ್ರೈಲ್ ಗುರ್ರೇ ವರಿಗೆ ತಯಾರಾಗತಕ್ಕದ್ದು, ಮತ್ತು ಅವುಗಳ ಬಾಬತು ಒಂದು ನಕ್ಕಲನ್ನು ಅದೇ ಕಾಲದಲ್ಲಿ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ರವರಿಗೂ ಕಳುಹಿಸತಕ್ಕದ್ದು.

ನಂ. 388. ತಾರೀಖು 9ನೇ ಮಾರ್ಚೀ 1876.

ಫಾರೆಸ್ಟ್ಸ್ ಅಸಿಸ್ಟೆಂಟ್ ಕನ್‌ಸರ್ವೇಟರ್ ಮಿಸ್ಟರ್ ಡಾಲಿಯವರು ಸ್ನ 1876ನೇ ಇಸವಿ ಮಾರ್ಚೀ ಗುರ್ರೇ ತಾರೀಖು ಮಧ್ಯಾಹ್ನಕ್ಕೆ ಪೂರ್ವವೆ ಸಬ್ ಅಸಿಸ್ಟೆಂಟ್ ಕನ್‌ಸರ್ವೇಟರ ಮಿಸ್ಟರ್ ಕಿಂಗ್ ಸಾಹೆಬರವರಿಂದ ತಮ್ಮ ಆಫೀಸ್ ಚಾರ್ಜನ್ನು ತೆಗದುಕೊಂಡರು.

ನಂ. 389. ತಾರೀಖು 13ನೇ ಮಾರ್ಚೀ 1876.

ಬಳ್ಳಾರೀ ಡಿಸ್ಟ್ರಿಕ್ಟು ಪೈಕಿ ಹಂಪೆ ಯೆಂಬ ಸ್ಥಳದಲ್ಲಿ ಅಥವಾ ಅದರ ಆಸ್ ಪಾಸ ಪ್ರದೇಶಗಳಲ್ಲಿ ಉಬಾಲ್ ಜುಲಾಬ್ ಉಪದ್ರವ ವ್ಯಾಪಿಸಿ ಯಿರುವದಾಗಿ ವರ್ತಮಾನ ಬಂದಿರುವದರಿಂದ, 1876ನೇ ಇಸವಿ ಏಪ್ರೈಲ್ 8ನೇ ತಾರೀಖಿನಲ್ಲಿ ನಡಿಯುವ ಜಾತ್ರೆಗೆ ಹೋಗಬೇಕೆಂದು ಉದ್ದೇಶಿಸುವ ದರೋಬಸ್ತು ಜನಗಳೂ, ಆ ಸ್ಥಳಕ್ಕೆ ಹೋಗೋಣದರಿಂದ ಅವರಿಗೆ ಸಂಭವಿಸತಕ್ಕ ಅಪಾಯವನ್ನು ಕುರಿತು ಇದರ ದೆಸೆಯಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

ನಂ. 390. ತಾರೀಖು 13ನೇ ಮಾರ್ಚೀ 1876.

ಕೊಪ್ಪ ತಾಲ್ಲೂಕು ಅಮಲ್ದಾರರಾದ ಮತ್ತು ಕುಣಿಗಲ್ ತಾಲ್ಲೂಕಿಗೆ ಹಂಗಾಮಿ ತರೀಕ ಮೊಕರರ್ ಮಾಡಲ್ಪಟ್ಟ ಕ್ರಿಷ್ಣಯ್ಯಂಗಾರ್ರು 1876ನೇ ಜನವರಿ 11ನೇ ಮುಕ್ಕಾಂನಲ್ಲಿ ಕೆಲಸಕ್ಕೆ ವಾಪಸ ಬಂದ ಸಬಬ್, 1875ನೇ ಜ್ಯಾಲೈ 3ನೇ ಮುಕ್ಕಾಂ 144ನೇ ನಂಬರ್ ಬಾಬತು ಈ ಆಫಿಸ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟ ರಜಾ ಪೈಕಿ ಉಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 391. ತಾರೀಖು 14ನೇ ಮಾರ್ಚೀ 1876.

ಹಿರಿಯೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ ಮೇಜಸ್ಟ್ರೇಟ್ ಅಣ್ಣಾಜೈಯಂಗಾರ್ರು ಅವರ ಅಧಿಕಾರಕ್ಕೆ ಮೊಳಪಟ್ಟ ಫಾರೆಸ್ಟು ರೂಲ್ಸ್‌ಗೆ ವಿರೋಧವಾಗಿ ನಡಿಸಲ್ಪಡುವ ತಕಸೀರುಗಳನ್ನು ದರಿಯಾಫ್ತಿ ಮಾಡತಕ್ಕ ಬಗ್ಯೆ ಫಾರೆಸ್ಟು ರೂಲ್ಸ 37ನೇ ಸೆಕ್ಷನ್ ಅನುಸರಿಸಿ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 392. ತಾರೀಖು 13ನೇ ಮಾರ್ಚಿ 1876

ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೇಜರ್ ಹಿಲ್ ಸಾಹೆಬರು, 1876ನೇ ಏಪ್ರೈಲ್ ಗುರ್ರೇ ಲಾಗಾಯತು ವಿಲಾಯಿತಿಗೆ ಫರಲೋ ರಜಾದ ಮೇಲೆ ಹೋಗತಕ್ಕ ಬಗ್ಯೆ ಸನ್ನಾಹ ಮಾಡಿಕ್ಕೊಳ್ಳುವದಕ್ಕೋಸ್ಕರ 10 ದಿನಗಳ ಸಬ್ ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 393. ತಾರೀಖು 16ನೇ ಮಾರ್ಚೀ 1876.

ಇದರಡಿ ಬರುವ ಮದ್ರಾಸ್ ಗವರ್ನಮೆಂಟ್ ಜನರಲ್ ಆರ್ಡರ್ ಪುನಃ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

ಫೋರ್ಟ್ ಸೆಂಟ್‌ಜಾರ್ಜ ತಾರೀಖು 14ನೇ ಮಾರ್ಚಿ 1876.

1876ನೇ ಇಸವಿ 150ನೇ ನಂಬರ್;—ಇದರಡಿ ನಮೂದಿಸಲ್ಪಡುವ ಆಫಿಸರಗಳು ವಿಲಾಯಿತಿಗೆ ಹೋಗುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ಸ್ಟಾಫ್ ಕೋರ್ ವ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೇಜರ್ ಹಿಲ್‌ಸಾಹೆಬರು, 1868ನೇ ಇಸವಿ ರೆಗ್ಯುಲೇಷನ್‌ಗಳ ಪ್ರಕಾರ ಸ್ವಂತ ಕೆಲಸದ ಮೇಲೆ ಹೋಗತಕ್ಕ ಬಗ್ಯೆ 2 ವರುಷಗಳ ಫರಲೋ ರಜಾ ಕೊಡಲ್ಪಟ್ಟಿರುತ್ತಾರೆ. ಮದ್ರಾಸ್‌ನಲ್ಲಿ ಜಹಜ್ ಹತ್ತತಕ್ಕದ್ದು.

ನಂ. 394. ತಾರೀಖು 14ನೇ ಮಾರ್ಚಿ 1876.

ಫರಲೋ ರಜಾದ ಮೇಲೆ ಮೇಜರ್ ಹಿಲ್‌ಸಾಹೆಬರು ವಿಲಾಯಿತಿಗೆ ಹೋಗುವದ್ದರಿಂದ ಇದರಡಿ ಬರುವ ವರ್ಗಾವರ್ಗಿಯು ಮುಂಜೂರಾಗಿರುತ್ತೆ.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೇಜರ್ ಫರಸ್‌ಸಾಹೆಬರು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗ.

ನಂ. 395. ತಾರೀಖು 15ನೇ ಮಾರ್ಚಿ 1876.

ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಕೃಷ್ಣಯ್ಯನವರು ಚಿತ್ರದುರ್ಗ ಡಿಸ್ಟ್ರಿಕ್ಟು ವ ಟ್ರೆಜರಿ ಚಾರ್ಜನ್ನು ಮೇಜರ್ ಆರಂಸ್ಟ್ರಾಂಗ್ ಸಾಹೆಬರಿಂದ 1876ನೇ ಇಸವಿ ಮಾರ್ಚಿ 3ನೇ ಮಿಸ್ತಿ ಮಧ್ಯಾಹ್ನತ್ಪರ ತೆಗದುಕೊಂಡರು.

ನಂ. 396. ತಾರೀಖು 16ನೇ ಮಾರ್ಚಿ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ವ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಬಿದರಿನ ಮೇಲೆ ವಸೂಲಾಗುವ ಸೀನೀಯರೇಜ್ ತೀರ್ವೆಯು ಭಂಡಿ ಬೋಜೆ 1ಕ್ಕೆ 2½ ರೂಪಾಯಿ ಇದ್ದದ್ದನ್ನು 1¼ ರೂಪಾಯಿಗೆ ಕಮ್ಮಿ ಮಾಡಲ್ಪಟ್ಟಿದೆ.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಮಿಲಟೇರಿ.

ನಂ. 397. ತಾರೀಖು 14ನೇ ಮಾರ್ಚಿ 1876.

ಬೆಂಗಳೂರು ರೈಫಲ್ ವಾಲಂಟಿಯರ್ ಲೆಫ್ಟಿನೆಂಟ್ ಲೆನಾರ್ಡ್ ಸಾಹೆಬರಿಗೆ ಅವರು ಸ್ವಂತ ಕೆಲಸದ ಮೇಲೆ ಹೋಗತಕ್ಕ ಬಗ್ಗೆ ಸನ 1876ನೇ ಇಸವಿ ಜನವರೀ 15ನೇ ಮಿಸ್ತಿ ಲಾಗಾಯಿತು 2 ವರುಷಗಳ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. Clarke,
Offg. Secretary.

ಪಬ್ಲಿಕ್ ವರ್ಕ್ಸ.

ನಂ. 127. ತಾರೀಖು 13ನೇ ಮಾಚೀ 1876.

ಮೈಸೂರು ವ ಕೊಡಗು ಚೀಫ್ ಇಂಜಿನೀಯರ್ ಮತ್ತು ಚೀಫ್ ಕಮಿಷನರವರ ಪಬ್ಲಿಕವರ್ಕ್ಸ ಇಲಾಖ ಸಿಕ್ರಟೇರಿ ಕರ್ನಲ್ ಸ್ಯಾಂಕಿ ಸಾಹೆಬರಿಗೆ ಮಾಹೇ ಮಜಕೂರ್ 14ನೇ ಮಿಸ್ತಿ ಲಾಗಾಯಿತು 5 ದಿನಗಳ ಸಬ್‌ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತೆ.

R. H. Sankey, *Lieut.-Col., R. E.,*
Secretary, P. W. D.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 18, ಸ್ನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮಿಷ್ನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

—

ಜುಡಿಷಿಯಲ್ ಇಲಾಖಾ.

—

ಇಸ್ತಿಹಾರ್‌ಗಳು.

ತಾರೀಖು 17ನೇ ಮಾರ್ಚಿ 1876.

ಮೈಸೂರು ಧೊರೆಗಳ ಶ್ರೀಮೆಯು ಜುಡಿಷಿಯಲ್ ಕಮಿಷ್ನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫ್ರೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರಹೆಸರು	ಪ್ರತಿವಾದಿಗಳ ಹೆಸರು	ಹಿಯರಿಂಗ್ ತಾರೀಖು
ಸ್ಪೆ. ಅ. ೧೩	ರುದ್ರಪ್ಪಾ ..	ಸ್ವಾಮಿರಾವ್ ..	೨೩ನೇ ಮಾರ್ಚಿ
ಸ್ಪೆ. ಅ. ೧೪	ದೊಡ್ಡಮ್ಮಾ ಹೆಗ್ಗಡತ್ತಿ ..	ಲಕ್ಷ್ಮೀ ನಾರಣಭಟ್ಟು ..	ಡಿಟೋ
ಸ್ಪೆ. ಅ. ೧೫	ಷರೀಪ್ ಖಾ ..	ಖಾಸಿಂಖಾ ..	ಡಿಟೋ
ಪಿಟೀಷನ್	ಗುಂಡಪ್ಪಾ ..	.. ..	ಡಿಟೋ
ಡಿಟೋ	ಚಿಕ್ಕ ತಿಂಮೈಯ ..	.. ..	ಡಿಟೋ
ಡಿಟೋ	ಮೊ|| ವ್ಯಾನಿಂಗನ್ ..	.. ..	ಡಿಟೋ
ಸ್ಪೆ. ಅ. ೯	ಶೇಷಭಟ್ಟು ..	ಕೃಷ್ಣಪ್ಪಾ ವಗೈರೇ ..	೨೦ನೇ ಡಿಟೋ
ಸ್ಪೆ. ಅ. ೧೬	ವೀರಭದ್ರೈಯ ..	ರಂಗಶೆಟ್ಟಿ ..	ಡಿಟೋ

ತಾರೀಖು 1ನೇ ಫೆಬ್ರವರೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಮೇ ಆಖೈರ್ ವರಿವಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರು, ಅಥವಾ ಹೆಡ್ರೈಟರ ಪ್ರತಿಸೋಮವಾರ ವ ಬೃಹಸ್ಪತಿ ವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ:—

(a) ಕಕ್ಷಿಗಾರರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ;
(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮರ್ಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;
(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ ರವಾನೆಬಗ್ಯೆ ಕಮಿಷನರವರ ಕೋರ್ಟನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು
(d) ಕಕ್ಷಿಗಾರರು ಕೇಳಿಕೊಳ್ಳುವ ಜಡ್ಜಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸೈಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ;

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರರು ಶಿರಸ್ತೇದಾರ್‌ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಮೈಸೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರರು ಸರ್ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಜೈಲ್ ಸೂಪ್ರಿಂಟೆಂಡೆಂಟರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 6ನೇ ಮಾರ್ಚಿ 1876.

ಇದರಿಂದ ತಿಳಿಯಪಡಿಸುವದೇನಂಧರೆ, ಕಡೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು, 1876ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಮೇ ಆಖೈರ್ ವರಿವಿಗೆ ಎರಡು ತಿಂಗಳು ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರು ಪ್ರತಿ ಸೋಮವಾರ ವ ಬೃಹಸ್ಪತಿವಾರ ಆಫೀಸಿಗೆ ಬರುತ್ತಾರ, ಯಾವ ಬಗ್ಯೆ ಅಂದರೆ:—

(a) ಕಕ್ಷಿಗಾರರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಮತ್ತು ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ;
(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮರ್ಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ;
(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ ರವಾನೆ ಬಗ್ಯೆ ಕಮಿಷನರವರ ಕೋರ್ಟನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು
(d) ಕಕ್ಷಿಗಾರರು ಕೇಳಿಕೊಳ್ಳುವ ಜಡ್ಜಮೆಂಟ್, ಡಿಕ್ರೀ, ವ ಹುಕ್ಕುಂ, ಇವುಗಳ ಸೈಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರರು, ಶಿರಸ್ತೇದಾರ್‌ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಮಿನಿಂದ ಕಡೂರು ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರರು, ಸರ್ 1859ನೇ ಇಸವಿ VIIIನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಸಿವಿಲ್ ಜೈಲ್ ಕೀಪರಯವರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 8ನೇ ಮಾರ್ಚಿ 1876.

ಇದರಿಂದ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು 1876ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯತು ಮೇ ಆಖೈರ್ ವರೆವಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು ಅಥವಾ ಹೆಡ್ ಕ್ಲರ್ಕ್ ಪ್ರತಿಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ:—

(*a*) ಕಕ್ಷಿಗಾರ್ರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕೊಳ್ಳಲಿಕ್ಕೂ,

(*b*) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೋಸೆಸುಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ,

(*c*) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡು ರವಾನೆ ಬಗ್ಯೆ ಕಮಿಷನರವರ ಕೋರ್ಟಿನಿಂದ ಬರುವ ಹುಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ; ಮತ್ತು

(*d*) ಕಕ್ಷಿಗಾರ್ರು ಕೇಳಿಕೊಳ್ಳುವ ಜಡ್ಜ್‌ಮೆಂಟು, ಡಿಕ್ರೀ, ವ ಹುಕುಂ, ಇವುಗಳ ಸೈ ಮೊಹರ್ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರ್ರು ಶಿರಸ್ತೇದಾರ್ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತುಖತ್ ಮಾಡತಕ್ಕದ್ದು.

4. ಕೋರ್ಟು ಹುಕುಮಿನಿಂದ ಹಾಸನ ಡಿಸ್ಟ್ರಿಕ್ಟು ಸಿವಿಲ್ ಜೈಲಿನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ ಕಟ್ಟತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು ಸ 1859ನೇ ಇಸವಿ 8ನೇ ನಂಬರ ಆಕ್ಟಿನ 276ನೇ ಸೆಕ್ಷನ ಪ್ರಕಾರ ಹಾಸನ ಡಿಸ್ಟ್ರಿಕ್ಟು ಸಿವಿಲ್ ಜೈಲ್ ಕೀಪರಲ್ಲಿ ಪಾವತೀ ಮಾಡತಕ್ಕದ್ದು.

ತಾರೀಖು 16ನೇ ಮಾರ್ಚಿ 1876.

ಸರ್ಕ್ಯುಲರ್ ಹುಕುಂ ನಂಬರ್ 17.

ಕೆಲವು ಮೇಜಸ್ಟ್ರೇಟರುಗಳು, ಮುಖ್ಯವಾಗಿ ತಾಲ್ಲೂಕು ಮೇಜಸ್ಟ್ರೇಟರುಗಳು, ಅನೇಕ ಜನಗಳಿಗೆ ವೊಂದು ಪ್ರೋಸೆಸ್ ಕೊಡುವ ಪದ್ಧತಿ ಅನುಸರಿಸಿರುತ್ತಾರೆಂತಲೂ, ಆಗಾಗ್ಯೆ ವೊಂದು ಸಮ್ಮನ್ಸಿನಲ್ಲಿ 9 ಜನಗಳ ವರಿಗೂ ದಾಖಲ್ಮಾಡುತ್ತಾರೆಂತಲೂ, ಜಾಹೀರಾತಿಗೆ ಬಂದಿರುತ್ತೆ.

2. ಯಿದು ಅಕ್ರಮ ಪ್ರತಿಸಮ್ಮನ್ಸ 2 ಪ್ರತಿ ಮೇರಿಗೂ, ಮತ್ತು ಆಕ್ಟಿನ 2ನೇ ಷೆಡ್ಯೂಲಿನಲ್ಲಿ ಕೊಡಲ್ಪಟ್ಟಿರುವ A. ನಮೂನೆ ಮೇರಿಗೂ, ಕೊಡಲ್ಪಡತಕ್ಕದ್ದೆಂದು ಕ್ರಿಮಿನಲ್ ಪ್ರೋಸಿಡ್ಯೂರ್ ಕೋಡ್ 152ನೇ ಸೆಕ್ಷನ ದೆಶೆಯಿಂದ ಕಂಠೋಕ್ತವಾಗಿ ವಿಧಿಸಲ್ಪಟ್ಟಿರುತ್ತೆ.

ನಮೂನೆ ಪ್ರಕಾರ ಸಮ್ಮನ್ಸಿನಲ್ಲಿ ವೊಬ್ಬನ ಹೆಸರು ಮಾತ್ರವೇ ದಾಖಲ್ಮಾಡಲ್ಪಡತಕ್ಕದ್ದಾಗಿರುತ್ತೆ. ಈ ಕ್ರಮವನ್ನು ಐಂದಾ ಖಂಡಿತವಾಗಿ ಆಚರಿಸತಕ್ಕದ್ದು.

H. T. Prinsep,
Offg. Judl. Commr.

ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ತಾರೀಖು 13ನೇ ಮಾರ್ಚಿ 1876. ನಂ. 216.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ತಾಲ್ಲೂಕು ಸರ್ವೇ ಸೆಟಲ್‌ಮೆಂಟ್ ಫೈಸಲಾತಿಯು, 1876ನೇ ಇಸವಿ ಮಾರ್ಚಿ 15ನೇ ತಾರೀಖು ಷುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

J. P. Grant, *Major*,
Supt., Rev. Survey & Assessment,
Mysore.

163

ಇನಾಂ ಇಲಾಖೆ.

ನಂ. 21.

ತಾರೀಖು 6ನೇ ಮಾರ್ಚಿ 1876.

ಸನ್ 1876ನೇ ಇಸವಿ ಫೆಬ್ರುವರೀ ಮಾಹೇಯಲ್ಲಿ ರದ್ದಾದ ಬಾಬತು ಟೈಟಲ್ ಡೀಡ್‌ಗಳ ಸಂಖ್ಯೆಯನ್ನು ತೋರಿಸುವ ತಖ್ತೆ.

ತಾಲ್ಲೂಕು.	ಗ್ರಾಮ.	ಇನಾಂದಾರನ ಹೆಸರು.	ಇನಾಮಿನ ತರಹಾ.	ತಪಸೀಲ್. ಬೀಜವರಿ. ಖ.	ಕೊ.	ಪ.	ಜೇರೀಜು. ರೂ.	ಆ.	ಪೈ.	ಜೋಡಿ. ರೂ.	ಆ.	ಪೈ.	ಜೋಡಿ ಕ್ವಿಟ್‌ರೆಂಟ್. ರೂ.	ಆ.	ಪೈ.	ಮುಜರಾಯಿ ಮೊಬಲಗ್ ರೂ.	ಆ.	ಪೈ.	ಪಟ್ಟೇ ನಂಬರ್.	ಯಾತಕ್ಕೆ ರದ್ದು ಮಾಡಲ್ಪಟ್ಟಿತು.	ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟ ಆರ್ಡರ್ ತಾರೀಖು
ಮುಳಬಾಗಲು.	ಮುಜರಾಯಿ.	ಭೈರಕೂರ್ ಯೆಂಬ ಸ್ಥಳದಲ್ಲಿ ರಾಮಸ್ವಾಮಿ ದೇವಸ್ಥಾನದ ತತ್ಕಾಲದ ವಿಚಾರಣೆಕರ್ತರು	ದೇವಾದಾಯ	0	0	0	0	0	0	0			0	0	0	1	0	0	33170	ಸದರೀ ದೇವಸ್ಥಾನದ ವಿಚಾರಣೆಕರ್ತನು ವಂದು ವರುಷ ದೊಳಗಾಗಿ ಟೈಟಲ್‌ಡೀಡನ್ನು ಪಡೆಯಲಿಕ್ಕೆ ತಪ್ಪಿದ ಸಬಬ್.	ನಂಬರ್ 953 ತಾರೀಖು 12ನೇ ಫೆಬ್ರುವರೀ 1876.
ಲಕ್ಕವಳ್ಳಿ.	ಮದವತ್ತಿ.	ತತ್ಕಾಲದಲ್ಲಿ ಮದವತ್ತಿ ವಿನಾಯಕ ದೇವಸ್ಥಾನದ ವಿಚಾರಣೆಕರ್ತರು.	ಡಿಟ್ಟೋ	3	0	0	2	4	4	0			1	4	0	0			37735—56	ಜಮೀನ್ ಪಾಳು ಬಿದ್ದದರಿಂದ ಸರ್ಕಾರಕ್ಕೆ ದಾಖಲ್ ಮಾಡಿಕೊಳ್ಳಲ್ಪಟ್ಟಿತು.	ನಂಬರ್ 975 ತಾರೀಖು 18ನೇ ಫೆಬ್ರುವರೀ 1876.
”	”	ಮದವತ್ತಿ ದುರ್ಗಮ್ಮನ ದೇವಸ್ಥಾನದ ತಾತ್ಕಾಲಿಕ ವಿಚಾರಣೆಕರ್ತರು.	ಡಿಟ್ಟೋ	6	0	0	4	8	7	0			2	4	0	0			37734—55	ಡಿಟ್ಟೋ	ಡಿಟ್ಟೋ
ಹೊಸಕೋಟೆ.	ಆವಣಿ ದೊಡ್ಡಕೆರೆ.	ಹೊಸಕೋಟೆ ಚಿಕ್ಕಮುದ್ದ ಜೇರೆ ಮುನ್ಯಾರು.	ಕೆರೆಬಂಡಿ ನೌಕರೀ ಮಾಕೂಲ್	13	13	1	162	14	8	0			81	0	0	0			34187	ರಾಜೀನಾಮೆ ಕೊಟ್ಟದ್ದು.	ನಂಬರ್ 1007 ತಾರೀಖು 25ನೇ ಫೆಬ್ರುವರೀ 1876.
ದೇವನಹಳ್ಳಿ.	ಅದ್ದಿಗಾನಹಳ್ಳಿ.	ಸೋಲೂರು ವೀರರಾಘವಭಟ್ಟ, 2 ಸುಬ್ಬಾಶಾಸ್ತ್ರಿ.	ಬ್ರಹ್ಮಾದಾಯ	0	1	12	1	0	4	0			0	8	0	0			34354	ಇನಾಂದಾರರು ವೊಂದುವರುಷ ದೊಳಗಾಗಿ ಟೈಟಲ್ ಡೀಡ್ ಗಳನ್ನು ಪಡೆಯಲಿಕ್ಕೆ ತಪ್ಪಿದ ಸಬಬ್.	ನಂಬರ್ 1018 ತಾರೀಖು 28ನೇ ಫೆಬ್ರುವರೀ 1876.
..	ಚೀಮಾಚನಹಳ್ಳಿ.	ತಿಮ್ಮಸಂದ್ರ ನರಸಿಹ್ಮಭಟ್ಟ ಮತ್ತಿಬ್ಬರು.	ಡಿಟ್ಟೋ	0	1	0	1	2	8	0			0	10	0	0			34236	ಡಿಟ್ಟೋ	ಡಿಟ್ಟೋ
..	ದಂಡಿಗಾನಹಳ್ಳಿ.	ದಂಡಿಗಾನಹಳ್ಳಿ ಈರೋಬಾ 2 ಮೂಸ.	ಡಿಟ್ಟೋ	0	10	0	8	11	7	0			4	4	0	0			34376	ಡಿಟ್ಟೋ	ಡಿಟ್ಟೋ

R. A. Cole,
Supt. of Inam Settlements.

ಫಾರೆಸ್ಟ್ ಇಲಾಖಾ.

ತಾರೀಖು 18ನೇ ಫೆಬ್ರುವರೀ 1876.

ಕೊಡಗು ಫಾರೆಸ್ಟ್ ಇಲಾಖಾ ಸ್ವತ್ತಾದ 6½ ಅಡಿ ಎತ್ತರ ವುಳ್ಳ ಷುಮಾರು 14 ವರುಷ ಪ್ರಾಯದ ವೊಂದು ಗಂಡಾನೆಯು ಕೊಡಗು ಅಸಿಸ್ಟೆಂಟ್ ಕನ್ಸರವೇಟರ್‌ಯವರಿಂದ ಹುಣಸೂರಿನಲ್ಲಿ ಈ ಕೆಳಗೆ ಕಂಡ ತಾರೀಖಿನಲ್ಲಿಯೂ ಷರತ್ತುಗಳ ಮೇಲೂ ವಿಕ್ರಯಿಸಲ್ಪಡುವದು.

ಷರತ್ತುಗಳು—ನಗದು ಮೊಬಲಗು, ಮತ್ತು ಕೂಡ್ಲೇ ಸಾಗಿಸತಕ್ಕದ್ದು.

ರಿಜಿಸ್ಟರಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಟಪ್ಪಾಲ್ ದ್ವಾರಾ ಕಳುಹಿಸಲ್ಪಟ್ಟ ದರಖಾಸ್ತುಗಳು ಆಸಿಸ್ಟೆಂಟ್ ಕನ್ಸರವೇಟರ್‌ಯವರಿಂದ ಅಂಗೀಕರಿಸಲ್ಪಡುವದು. ಸದರೀಯವರು 1876ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಹರಾಜ್ ನಡಿಸುವರು. ಈ ಲಕ್ಕೋಟೆಗಳು ಅಸಿಸ್ಟೆಂಟ್ ಕನ್ಸರವೇಟರ್‌ಯವರಿಂದಲೇ ಹರಾಜು ಸ್ಥಳದಲ್ಲಿ ರೂಬರೂ ಖುಲ್ಲಾ ಮಾಡಲ್ಪಡುತ್ತೆ, ಆನೇ ಬಗ್ಯೆ ಲೆಟ್ಟರ್ ಮೂಲಕ ದರಖಾಸ್ತು ಮಾಡುವ ಜನಗಳಿಂದ ದರಖಾಸ್ತು ಮಾಡಲ್ಪಟ್ಟ ಪೂರಾಮೊಬಲಗಿಗೆ ಕರೆನ್ಸಿ ನೋಟ್‌ಗಳನ್ನು ಅಂತಾ ಲೆಟ್ಟರಿಗಳಲ್ಲಿ ಮಲಫೂಫೆ ಮಾಡಿ ಕಳುಹಿಸತಕ್ಕದ್ದು. ಮತ್ತು ಅಂತಾ ದರೋಬಸ್ತು ಕರೆನ್ಸಿ ನೋಟುಗಳು ಮಂಜೂರಾಗದ ದರಖಾಸ್ತುದಾರ್ರುಗಳಿಗೆ ಆಸಿಸ್ಟೆಂಟ್ ಕನ್ಸರವೇಟರಿಂದ ರಿಜಿಸ್ಟರಾಮಾಡಲ್ಪಟ್ಟ ಮತ್ತು ಅರಗು ಮೊಹರ್ ಮಾಡಲ್ಪಟ್ಟ ಲಕ್ಕೋಟೆಗಳಲ್ಲಿ ಲೆಟ್ಟರ್ ಮೂಲಕ ಹರಾಜಿನ ಮಾರನೇದಿನ ಟಪ್ಪಾಲ್‌ನಲ್ಲಿ ವಾಪಸ್ ಕಳುಹಿಸಲ್ಪಡುವವು. ದರಖಾಸ್ತುದಾರ್ರುಗಳ ಹೆಸರು, ಮೇಲುವಿಳಾಸ, ಸ್ಪಷ್ಟವಾಗಿರುವ ಅಕ್ಷರದಲ್ಲಿ ಪೂರ್ತಿಯಾಗಿ ಬರದು ಇರತಕ್ಕದ್ದು.

ಸದರೀ ಆನೆಯು ವಿಕ್ರಯಿಸಲ್ಪಟ್ಟ ದಿನ ಸಾಯಂಕಾಲದ ತರುವಾಯ ಅದರನ್ನು ಇಟ್ಟುಕೊಳ್ಳುವದಕ್ಕಾಗಲಿ, ಮೇವು ಹಾಕುವದಕ್ಕಾಗಲಿ, ಫಾರೆಸ್ಟ್ ಇಲಾಖೆಯವರು ಯೆಷ್ಟು ಮಾತ್ರವೂ ಜವಾಬ್‌ದಾರರಾಗಿರುವದಿಲ್ಲವು.

ತಾರೀಖು 22ನೇ ಫೆಬ್ರುವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮೊಗ್ಗಾ ಸ್ಥಳದ ನಂಜಣ್ಣನೆಂಬಾತನ ಮಾಲಾದ 50 ಕಾಡು ಮರದ ದಿಮ್ಮಿಗಳು, 9 ಕೊಜಗಳು ಸಹಾ, ಸದರೀ ಮರಗಳ ಬಾಬತು ಸರ್ಕಾರಕ್ಕೆ ಸಲ್ಲತಕ್ಕ ಕೋಶೀ ಬಾಡಿಗೆಯನ್ನು ಭರ್ತಿ ಮಾಡಿಕೊಳ್ಳತಕ್ಕ ಬಗ್ಯೆ ಆಯನೂರು ಕೋಶೀಯಲ್ಲಿ 1876ನೇ ಏಪ್ರೆಲ್ 15ನೇ ಮರ್ಕು ಮಿನೊಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜು ನಿಬಂಧನೆ—1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ನಾಮೆ ಪ್ರಕಾರ ಯಿರತಕ್ಕದ್ದು.

G. J. van Someren, *Captain,*
Conservator of Forests, Mysore & Coorg.

NUNDYDROOG DIVISION.

ತಾರೀಖು 10ನೇ ಮಾರ್ಚಿ 1876.

ಇದರಿಂದ ಸರ್ವರಿಗೂ ತಿಳಿಯುವಬಗ್ಯೆ ಪ್ರಕಟಸುವ ದೇನಂದರೆ, ಈಕೆಳಗೆ ವಿವರಿಸುವ ಜಮೀನ್ ಸರ್ಕಾರ್ ಹುಕುಂ ಮೂಲಕ ಮಾಹೇ ಮಜಕೂರು 20ನೇ ತಾರೀಖು ಬೆಳಿಗ್ಯೆ 7 ಘಂಟೆಯ ಮೊದಲು 10 ಘಂಟೆಯ ವರಿಗೆ ಮೂರು ತುಂಡುಗಳಾಗಿ ವಿಕ್ರಯಿಸಲ್ಪಡುತ್ತೆ.

2. ಸದರೀ ತುಂಡುಗಳು ಸದರೀ ಸ್ಥಳದಲ್ಲಿಯೇ ಪ್ರತ್ಯೇಕ ಪ್ರತ್ಯೇಕವಾಗಿ, ಬೆಂಗಳೂರು ತಾಲ್ಲೂಕು ಅಮಲ್‌ದಾರ್ರಿಂದ ಹರಾಜ್ ಹಾಕಲ್ಪಡುತ್ತೆ. ಯಾರ ದರಖಾಸ್ತು ಮಂಜೂರಾಗುತ್ತೋ ಆ ಮನುಷ್ಯನು ಆಯಾ ತುಂಡು ಹರಾಜ್ ಆದಕೂಡ್ಲೇ ದರಖಾಸ್ತು ಮೊಬಲಗು ಪೈಕೀ ಸೇಕಡಾ 25 ರೂಪಾಯಿ ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ಮೊಬಲಗಿಗೆ ಮಾತಬರ್ ಜಾಮೀನ್ ಕೊಟ್ಟು, ಅದನ್ನು ಮಾಹೇ ಮಜಕೂರು 24ನೇ ಮರ್ಕುಂ ಬೆಳಿಗ್ಯೆ 11 ಘಂಟೆಗೆ ಮುಂದಾಗಿಯೇ ಪೂರಾ ಸಂಧಾಯ ಮಾಡಬೇಕು. ಹಾಗೆಮಾಡದೆ ಹೋದರೆ ಸದರೀ ಜಮೀನ್ ಪುನಹ ವಿಕ್ರಯಿಸಲ್ಪಟ್ಟು ಅದರಿಂದ ಬರುವ ನಷ್ಟಕ್ಕೆ ಅವ್ವಲ್ ದರಖಾಸ್ತುದಾರನೂ ಅವನ ಜಾಮೀನ್‌ದಾರನೂ ಗುರಿ ಮಾಡಲ್ಪಟ್ಟಾರು. ಹಾಗೆ ಪುನಹ ಹರಾಜ್ ಹಾಕುವದರಿಂದ ಬರುವ ಯಾವ ನುಕ್ಸಾನಾಗಲಿ ಅವರು ಕೊಡಬೇಕಾಗುವದು.

ಜಮೀನ್ ಚಕ್ಕುಬಂದಿ.

ಪೂರ್ವಕ್ಕೆ—ಲಾಲ್‌ಬಾಗಿಗೆ ಹೋಗುವ ರಸ್ತೆ.

ಪಶ್ಚಿಮಕ್ಕೆ—ಶಿವರಾಮ ನಾಯಕ ನೆಂಬುವಗೆ ಸಂಬಂಧಪಟ್ಟ 57ನೇ ನಂಬರ್ ಜಮೀನ್.

ಉತ್ತರಕ್ಕೆ—ಹೂತೋಟವಾಗಿ ಉಪಯೋಗಿಸಲ್ಪಡುವ, ಬಿ. ನಾಗಪ್ಪ ನೆಂಬವಗೆ ಸೇರಿದ 63—64 ಮತ್ತು 65ನೇ ಸರ್ವೇ ನಂಬರ್‌ಗಳುಳ್ಳ ಜಮೀನ್.

ದಕ್ಷಿಣಕ್ಕೆ—ಚಿನ್ನಿಗ ನೆಂಬವಗೆ ಸೇರಿದ 136ನೇ ಮತ್ತು 104ನೇ ನಂಬರ್‌ಗಳುಳ್ಳ ಇನಾಮಿನ ಜಮೀನ್.

ಪ್ರತಿ ತುಂಡು ಜಮೀನಿನ ಬೀಜವರೀ.

1.	ಪೂರ್ವ ಪಶ್ಚಿಮ	110 ಗಜಗಳು,	ಉತ್ತರ ದಕ್ಷಿಣ	103 ಗಜಗಳು.
2.	ಡಿಟ್ಟೋ	119 ಡಿಟ್ಟೋ	ಡಿಟ್ಟೋ	103 ಡಿಟ್ಟೋ.
	(ಯಿದು ಮೊದಲನೇ ತುಂಡು ಜಮೀನಿಗೆ ದಕ್ಷಿಣದಲ್ಲಿಥೆ).			
3.	ಡಿಟ್ಟೋ	110 ಡಿಟ್ಟೋ	ಡಿಟ್ಟೋ	103 ಗಜಗಳು.
	(ಯಿದು 2ನೇ ತುಂಡು ಜಮೀನಿಗೆ ದಕ್ಷಿಣದಲ್ಲಿಥೆ).			

J. L. Pearse,
Commissioner.

BANGALORE DISTRICT.

Notice regarding an application of Mudkrishna Naidu for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆ॥ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಹಾಲೀ ಚಿಕ್ಕಬಳ್ಳಾಪುರದ ಕಸಬೇಲಿ ಯಿರುವ ಮುದ್ದುಕೃಷ್ಣಮ್ಮ ನಾಯಿಕರು ತನ್ನ ಅಂಣ ಕೊಮಾರುಸ್ವಾಮಿ ನಾಯಿಕರ ಲೇಣಿ 500 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸರ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಏಪ್ರೈಲ್ ತಿಂಗಳು 4ನೇ ತಾರೀಖು ದಿವಿ 12 ಘಂಟೆಗೆ, ಈ ಕೋರ್ಟಿನಲ್ಲಿ ವಿಮರ್ಶೆ ಮಾಡಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 2ನೇ ಮಾಹೆ ಮಾರ್ಚಿ 1876ನೇ ಇಸವಿ, ಮೊಕ್ಕಾಂ ಜಾಲಾ.

L. Ricketts,
Offg. Dy. Commr.

KOLAR DISTRICT.

Notice regarding an application of Muneppa for a certificate under Act XXVII of 1860.

ಕೋಲಾರ ಡಿ॥ ಡೆಪ್ಯುಟಿ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮುಳಬಾಗಲ್ ತಾಲ್ಲೂಕು ನಂಗಲೀ ಹೋಬಳಿ ಹಳೇಕುಪ್ಪದಲ್ಲಿರುವ ರೊಖಂ ಮುನೆಪ್ಪನೆಂಬವನು ಘಾತೀಪಟ್ಟ ತನ್ನ ತಮ್ಮ ಸುಬ್ಬಯ್ಯಗೆ ಬರತಕ್ಕ ಉದ್ರೀ ಬಾಕೀಗಳು 800 ರೂಪಾಯಿಗಳು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರೈಲ್ 15ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾಗಿ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

Notice regarding an application of Papaiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗುಡಿಬಂಡೇ ತಾಲ್ಲೂಕು ಮಂಡಿಕಲ್ಲು ಹೋಬಳಿ ಪೈಕೀ ವರ್ಲಕೊಂಡೆಯಲ್ಲಿರುವ ಮಠದ ಪಾಪೈಯನೆಂಬನು ಪಾತೀಪಟ್ಟ ತನ್ನ ಮಾವ ಮುದ್ದೀರೈಯನೆಂಬವನಿಗೆ ಬರತಕ್ಕ ಉದ್ರೀ ಬಾಕೀಗಳು 1000 ರೂಪಾಯಿಗಳು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ತನ್ನ ಹೆಸರಿಗೆ ವಾರಸ ಸರ್ಟಿ

ಫಿಕೇಟ್ ಕೊಡಿಸಿಕ್ಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರೀಲ್ 20ನೇ ತಾರೀಖಿಗೆ ವಿಚಾರಿಸಲ್ಪಡುತ್ತಾಗಿ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

Notice regarding an application of Khadrappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ, ಗುಡಿಬಂಡೆ ತಾಲ್ಲೂಕು ಮಂಡಿಕಲ್ಲು ಹೋಬಳಿ ಪೋಲಂಹಳ್ಳಿ ಪೆಟ್ಟು ಶಾನುಭೋಗ ನರಶಿಂಗಪ್ಪನ ದತ್ತುಮಗ ಖಾದ್ರಪ್ಪನೆಂಬವನು ಫಾತೀಪಟ್ಟ ತನ್ನ ದತ್ತು ತಂದೆಗೆ ಬರತಕ್ಕ ಲೇವಾದೇವಿ ಬಾಬತು ವಗೈರೇ ಬಾಕೀಗಳು 500 ರೂಪಾಯಿಗಳ ವರಿಗೂ ವಸೂಲ್ ಮಾಡಿಕ್ಕೊಳ್ಳಲು 18 60ನೇ ಇಸವಿ 27ನೇ ಆಕ್ಟ ಪ್ರಕಾರ ತನ್ನ ಹೆಸರಿಗೆ ವಾರಸ್ ಸರ್ಟಿಫಿಕೇಟ್ ಕೊಡಿಸಿಕ್ಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರಿಲ್ 17ನೇ ತಾರೀಖಿನಲ್ಲಿ ವಿಚಾರಿಸಲ್ಪಡುತಾದ್ದರಿಂದ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 6ನೇ ಮಾರ್ಚಿ 1876ನೇ ಇಸವಿ, ಮೊಕ್ಕಾಂ ಕೋಲಾರ.

Notice regarding an application of Venktappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗುಮ್ಮನಾಯ್ಕನಪಾಳ್ಯ ತಾಲ್ಲೂಕು ಚೇಳೂರು ಕಸಬೇಯಲ್ಲಿರುವ ತಲಂ ಕ್ರಿಷ್ಣಪ್ಪನ ಮಗ ವೆಂಕಟಪ್ಪನೆಂಬವನು ಪಾತೀಪಟ್ಟ ತನ್ನ ತಮ್ಮ ಅಂಣೈಯನೆಂಬವನ ಹೆಸರಿನಲ್ಲಿರುವ 950 ರೂಪಾಯಿಗಳ ಲೇವಾದೇವೀ ಬಾಬತು ಮೊಬಲಗು ವಸೂಲು ಮಾಡಿಕ್ಕೊಳ್ಳಲು 60ನೇ ಇಸವಿ 27ನೇ ಆಕ್ಟ ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರೈಲ್ 20ಕ್ಕೆ ವಿಚಾರಿಸಲ್ಪಡುತ್ತಾಗಿ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ ಅಂತಾವರೆಲ್ಲಾ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಸ್ಥಿರಪಡಿಸಿಕ್ಕೊಳ್ಳತಕ್ಕದ್ದಾಗಿರುತ್ತೆ.

Notice regarding an application of Annaiya for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗುಮ್ಮನಾಯಕನ ಪಾಳ್ಯ ತಾಲ್ಲೂಕು ಚೇಳೂರಿನಲ್ಲಿರುವ ಕಲಂ ಸೂರೈಯನಮಗ ಅಂಣೈಯನೆಂಬವನು ಪಾತೀಪಟ್ಟ ತನ್ನ ಅಂಣ ವೆಂಕಟಶಾಮಿ ಹೆಸರಿನ ಲೇವಾದೇವೀ ಬಾಬತು 900 ರೂಪಾಯಿಗಳನ್ನ ವಸೂಲ್ ಮಾಡಿಕ್ಕೊಳ್ಳತಕ್ಕ ಬಗ್ಯೆ 1860ನೇ ಇಸವಿ 27ನೇ ಆಕ್ಟ ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಿಕ್ಕೊಡಬೇಕೆಂದು ಗುಜರಾಯಿಸಿದ ಅರ್ಜಿಯು ಏಪ್ರೈಲ್ 20ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾದ್ದರಿಂದ ಇದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಇದ್ದಾಗ್ಯೂ, ಅಂತವರೆಲ್ಲ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಸ್ಥಿರಪಡಿಸಿಕ್ಕೊಳ್ಳತಕ್ಕದ್ದಾಗಿರುತ್ತೆ.

ತಾರೀಖು 11ನೇ ಮಾರ್ಚಿ ಸ್ 1876ನೇ ಇಸವಿ, ಮೊಕ್ಕಾಂ ಕೋಲಾರ.

Notice inviting claimants to the undermentioned property found in the houses of certain prisoners concerned in a high-way robbery at the time of search.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ, ಶಿಡ್ಲಘಟ್ಟ ತಾಲ್ಲೂಕು ಕಂನಂಪಲ್ಲಿ ಬಳಿಯ ತೋಟಬೈರಿ ಚಿನ್ನಪ್ಪರಡ್ಡಿ ವೆಂಕಟರಮಣೈಯ, ಪೋತಲೈಯ ಇವರುಗಳಮೇಲೆ ರಹಜನೀ ನಡೆದ ಮೊಕದ್ದಮೆಯಲ್ಲಿ ಖೈದೀಗಳಾದ ವೆಂಕಟರಮಣಾ ವಗೈರೇರ ವಾಸಸ್ಥಾನದ ಝಡತೀಯಲ್ಲಿ ದೊರೆತ ಮಾಲುಗಳ ತಪಶೀಲ್.

ಬೆಳ್ಳಿ ಮಡಧಾರ ಸುಮಾರು ತೊಲೇದ ಬಾಬತು		12	0	0	ಚಲ್ಲಣ 1ಕ್ಕೆ ..	..	0	0 3
ನಡಕಟ್ಟುಗಳು 2ಕ್ಕೆ	..	0	3	0	ನಗದುರೂಪಾಯಿಗಳು	..	20	8 9
ಹಿಂಮಣಿ ಚೀಲ 1ಕ್ಕೆ	..	0	0	4				

ಈ ಬಾಬತು ಮೊಬಲಗಿನ ಮಾಲುಗಳು ಈ ಕೋರ್ಟಿನಲ್ಲಿ ಅಮಾನತ್ತು ಯಿರುತ್ತೆ ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಈ ಲಾಗಾಯಿತು 6 ತಿಂಗಳ ವಳಗಾಗಿ ಈ ಕೋರ್ಟಿಗೆ ಹಾಜರಾಗಿ ತಮ್ಮ ಹಕ್ಕುದಾರಿಯನ್ನು ಸ್ಥಿರಪಡಿಸಿಕೊಳ್ಳಬೇಕಾಗಿ ರುತ್ತೆ ಹಾಗೆ ಹಾಜರಾಗದೆ ತಪ್ಪಿದರೆ ಅನಂತರ ಸರಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆಯೆಂದು ತಿಳಿಯುವದು.

ತಾರೀಖು 14ನೇ ಮಾಹೆ ಮಾರ್ಚಿ ಸನ್ 1876ನೇ ಇಸವಿ ಮೊಕ್ಕಾಂ ಕೋಲಾರ.

P. N. Purnaiya,
For Dy. Commr.

TUMKUR DISTRICT.

Notice regarding an application of Sanjivamma for a certificate under Act XXVII of 1860.

ತುಮಕೂರು ಡಿ|| ಡೆ|| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕುಣಿಗಲ್ ತಾಲ್ಲೂಕು ಕಸಬಾ ಕೊಪ್ಪ ಗ್ರಾಮದ ವಾಸ ಸ್ಥನಾಗಿ ಯಿದ್ದ ಘಾತೀ ಯಾದ ನರಸೈಯನೆಂಬವನಿಗೆ ಯಿತರರಿಂದ ಬರಬೇಕಾಗಿ ಯಿರುವ 900 ರೂಪಾಯಿಗಳು ವಸೂಲು ಮಾಡಿ ಕೊಳ್ಳುವದಕ್ಕೆ, 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಈ ತನ ಹೆಂಡತಿ ಸಂಜೀವಮ್ಮ ಯಂಬವಳು ದಾಖಲ್ ಮಾಡಿ ಯಿರುವ ಅರ್ಜೀ ಯನ್ನು 1876ನೇ ಇಸವಿ ಮಾರ್ಚಿ ತಿಂಗಳು 10ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದಾ, ಯಿದಕ್ಕೆ ತಕರಾರ್ ಮಾಡುವರ್ಯ್ಯಾರಾದರೂ ಯಿದ್ದರೆ, ಈ ಕೋರ್ಟಿಗೆ ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 14ನೇ ಮಾಹೆ ಫಿಬ್ರವರೀ 1876ನೇ ಇಸವಿ, ಮೊಕ್ಕಾಂ ಕುಣಿಗಲ್.

Notice regarding an application of Masti Gauda for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ, ಕುಣಿಗಲ್ ತಾಲ್ಲೂಕು ಬಸವನಮತ್ತಿಕೆರೆ ಗ್ರಾಮದ ವಾಸ ಸ್ಥನಾಗಿ ಇದ್ದ ಘಾತೀಯಾದ ಮಾಸ್ತಿಗೌಡ ಯೆಂಬವನಿಗೆ ಇತರರಿಂದ ಬರಬೇಕಾಗಿಇರುವ 800 ರೂಪಾಯಿಗಳು, ವಸೂಲ್ಮಾ ಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ ಅಪೇಕ್ಷಿಸಿ ಇವನ ಮಗ ಮಾಸ್ತಿಗೌಡ ಯೆಂಬವನು ದಾಖಲ್ಮಾಡಿರುವ ಅರ್ಜೀಯನ್ನು 1876ನೇ ಇಸವಿ ಏಪ್ರಿಲ್ ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೆವಾದ್ದರಿಂದ, ಇದಕ್ಕೆ ತಕರಾರ್‌ಮಾಡುವರ್ಯ್ಯಾರಾದರೂ ಯಿದ್ದರೆ, ಈ ಕೋರ್ಟಿಗೆ ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇ ಕಾಗಿರುತ್ತೆ.

Notice regarding an application of Venkatnarayan Puranik for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕಡಬ ತಾಲ್ಲೂಕು ಸಂಪಿಗೆ ಗ್ರಾಮದ ವಾಸಸ್ಥನಾಗಿ ಇದ್ದ ಘಾತೀಯಾದ ಸೀತಾರಾಂಪುರಾಣೀಕ ಯಂಬವನಿಗೆ ಯಿತರರಿಂದ ಬರಬೇಕಾಗಿ ಯಿರುವ 400 ರೂಪಾಯಿಗಳು, ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರಟಫಿಕೇಟ್ ಅಪೇಕ್ಷಿಸಿ ವೆಂಕಟನಾರಾಯಣಪುರಾಣೀಕ ಯಂಬವನು ದಾಖಲ್ ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಏಪ್ರಿಲ್ ತಿಂಗಳು 11ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರ್ ಮಾಡುವರ್ಯ್ಯಾರಾದರೂ ಯಿದ್ದರೆ ಈ ಕೋರ್ಟಿಗೆ ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿರುತ್ತೆ.

ತಾರೀಖು 2ನೇ ಮಾಹೆ ಮಾರ್ಚಿ 1876ನೇ ಯಿಸವಿ, ಮೊಕ್ಕಾಂ ತುಮಕೂರು.

Notice regarding an application of Nanjamma for a certificate under Act XXVII of 1860.

ಅದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಕಸಬಾ ತುಮಕೂರು ಗ್ರಾಮ ದ ವಾಸಸ್ಥನಾಗಿ ಯಿದ್ದ ಘಾತೀ ಯಾದ ತಂಬೂರೀಗುರು ಚೆನ್ನಪ್ಪ ಯಂಬುವನಿಗೆ ಯಿತರರ ಯಿಂದಾ ಬರಬೇಕಾಗಿ ಯಿರುವ 900 ರೂಪಾಯಿಗಳು, ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಪ್ರಕಾರ ಸರ್ಟಿಫಿಕೇಟ ಅಪೇಕ್ಷಿಸಿ, ಯಿವನ ದ

ತ್ತು ಮಗ ಚನ್ನಪ್ಪ ಮೈನರಿಗೋಸ್ಕರ ಗಾರ್ಡಿಯನ್ ಸಂಜಮ್ಮ ಯಂಬವಳು ದಾಖಲ್ ಮಾಡಿರುವ ಅರ್ಜೀಯನ್ನು 1876ನೇ ಇಸವಿ ಏಪ್ರೈಲ್ ತಿಂಗಳು 21ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟಿನ ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

Notice regarding an application of Basettappa for a certificate under Act XXVII of 1860.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಕಸಬಾ ಪುರಡಿಗೆರೆ ಗ್ರಾಮದ ವಾಸಸ್ಥನಾಗಿ ಯಿದ್ದ ಫೌತೀ ಯಾದ ಚನ್ನಪ್ಪ ಯಂಬವನಿಗೆ ಯಿತರರಿಂದಾ ಬರಬೇಕಾಗಿರುವ 1000 ರೂಪಾಯಿಗಳು, ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಯಿಸವಿ 27ನೇ ಆಕ್ಟು ಪ್ರಕಾರ ಸರಟಫಿಕೇಟ ಅಪೇಕ್ಷಿಸಿ, ಯಿವನ ಮಗ ಬಸೆಟ್ಟಪ್ಪಾ ಯಂಬವನು ದಾಖಲ್‌ಮಾಡಿ ಯಿರುವ ಅರ್ಜೀಯನ್ನು 1876ನೇ ಇಸವಿ ಏಪ್ರೈಲ್ ತಿಂಗಳು 21ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇ ವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವರ್ಯಾರಾದರೂಯಿದ್ದರೆ, ಈ ಕೋರ್ಟಿನ ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 7ನೇ ಮಾಹೇ ಮಾರ್ಚಿ 1876ನೇ ಇಸವಿ, ಮೊಕ್ಕಾಂ ತುಮಕೂರು.

ತಾರೀಖು 8ನೇ ಮಾರ್ಚಿ 1876.

ತುಮಕೂರು ಕಸಬಾದಲ್ಲಿ 1876ನೇ ಏಪ್ರೈಲ್ 1ನೇ ತಾರೀಖು ಲಾಗಾಯತು 1877ನೇ ಮಾರ್ಚಿ 31ನೇ ಮುಕ್ಕಾಂ ವರಿಗೆ 4 ದುಕಾನಗಳಲ್ಲಿ ಲೈಸೆನ್ಸ್ ಮೂಲಕ ಷರಾಬ್ ಬಿಕ್ರೀ ಮಾಡತಕ್ಕದ್ದಕ್ಕೆ ಅಪ್ಪಣೆಯು ಮಾಹೇ ಮಜಕೂರು 28ನೇ ಮುಕ್ಕಾಂ ಮಂಗಳವಾರ ಮಧ್ಯಾಹ್ನಾತ್ಪರ 2 ಘಂಟೆಗೆ ಡೆಪ್ಯುಟ ಕಮ್ಮಿಷನರಿಂದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

C. J. PEARSE,
Dy. Commr.

MYSORE DISTRICT.

Notice of sale of contract for the supply of the requisite provisions for the use of Chatrams and temples in the Mysore District.

ಮೈಸೂರು ಡಿಸ್ಟ್ರಿಕ್ಟು ಡಿ॥ ಕಮ್ಮಿಷನರವರ ಆಫೀಸಿನಿಂದಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು 1 ಚಾಮರಾಜನಗರ 1 ನಂಜನಗೂಡು 1 ಯಡತೊರೆ 1 ತಲ್ಕಾಡು 1 ಅಷ್ಟಗ್ರಾಮ 1 ಮಂಡ್ಯ 1 ಮತ್ತು ಗುಂಡ್ಲು 1 ಈ ಯೆಂಟು ತಾಲ್ಲೂಕುಗಳಿಗೆ ಸಂಬಂಧಪಟ್ಟ ಛತ್ರ ದೇವಸ್ಥಾನಗಳಿಗೆ ಮುಂದಣ ಧಾತು ಸಂವತ್ಸರಕ್ಕೆ ಅಂದರೆ, ಸನ್ 1876ನೇ ಏಪ್ರೈಲ್ ಗುರ್ರೇ ಲಾಗಾಯತು 1877ನೇ ಮಾರ್ಚಿ ಆಖೈರ್ ವರಿವಿಗೆ ಆಗುವ 12 ತಿಂಗಳುಗಳಿಗೆ ಅವಶ್ಯಕವಾದ ಜಿನೀಸುಗಳ ಸರಬರಾಯಿಗೋಸ್ಕರ ಕಂಟ್ರಾಕ್ಟು ಮೊಕರರ್ ಆಗಲು ಮಾಹೆ ಮು॥ ತಾ॥ 20ರ ಲಾಗಾಯತು 25ನೇ ಸಾಯಂಕಾಲದ ವರಿವಿಗೆ ಆಯಾ ತಾಲ್ಲೂಕು ಅಮಲ್‌ದಾರರುಗಳ ಸಮಕ್ಷಮ ಪೋಟಾಪೋಟಿ ಮಾಡಿಸಲ್ಪಡುತ್ತೆ.

1 ಪೋಟಾಪೋಟಿ ಕಾಲದಲ್ಲಿ ಯಾವ್ಯಾವ ಜಿನೀಸುಗಳು ಯಾವ್ಯಾವ ತರಹದ್ದು ಸರಬರಾಯಿ ಮೊಕರರ್ ಆಗುತ್ತೋ ಅದೇ ಜಿನೀಸುಯನ್ನು ಸರಬರಾಯಿ ಮಾಡಬೇಕು. ಅದು ದೊರಿಯಲಿಲ್ಲ ಅದಕ್ಕೆ ಸರಿಯಾದ ಬೇರೇ ಜಿನೀಸು ಕೊಡುತ್ತೇನೆಂದರೆ ಮಂಜೂರ್ ಮಾಡುವದಿಲ್ಲ.

2 ಕಂಟ್ರಾಕ್ಟಿಗೆ ಒಳಪಟ್ಟ ಜಿನೀಸುಗಳು ಆಯಾ ಛತ್ರ ದೇವಸ್ಥಾನಗಳಿಗೆ ಸಂಬಂಧಪಟ್ಟ ಕಂಟ್ರಾಕ್ಟು ದಾರನೇ ತೆಗದುಕೊಂಡು ಹೋಗಿ ಕೊಟ್ಟು ರಶೀತಿ ಪಡೆಯಬೇಕು. ಇದರ ಬಾಡಿಗೆಯಾಗಲಿ ಮಜೂರೀಯಾಗಲಿ ಸರ್ಕಾರದಿಂದ ಕೊಡುವದಿಲ್ಲವಾದ್ದೇ ಕಂಟ್ರಾಕ್ಟುದಾರನಿಗೆ ಲಗಾವಾಗಿರುತ್ತೆ.

3 ಮುಂದಣ ಮಾಹೆಗೆ ಬೇಕಾಗುವ ಜಿನೀಸುಗಳನ್ನು ಮೂರು ದಿನಗಳಿಗೆ ಮುಂಚಿತವಾಗಿ ಅಂದರೆ, ಚಾಲತೀ ತಿಂಗಳು 28 ಯಾ 29ಕ್ಕೇನೇ ಆಯಾ ಸ್ಥಳಕ್ಕೆ ತಲಪಿಸ ಬೇಕು. ಮಾರನೇ ತಿಂಗಳು ಗುರ್ರೇ ಲಾಗಾಯತು ಬೇಕಾಗುವ ಜಿನೀಸುಗಳಿಗೆ ಲೇಶವೂ ಕುಂದಕವಾಗ ಕೂಡದು.

4 ಹುವ್ವು ವೀಳ್ಯೇದೆಲೆ ತರಕಾರಿ ಹಾಲು ಮತ್ತು ಮೊಸರು ಮೊದಲಾದ ಇಂಥಾ ಜಿನಸೀಗಳು ಆಯಾ ದಿವಸವೇ ಬಂದು ಖರ್ಚಾಗತಕ್ಕವುಗಳಾದ ಕಾರಣ ಇಂಥಾ ವಸ್ತುಗಳು ಕಂಟ್ರಾಕ್ಟಿಗೆ ವಳಪಡುವದಿಲ್ಲ. ತಾಲ್ಲೂಕಿನಲ್ಲಿ ಅಲಾಹಿದಾ ಕಿಫಾಯತ್ತಾಗುವ ರೀತ್ಯಾ ಪೋಟಾಪೋಟೀ ನಡಿಸಿ ಮೇಲ್ಕಂಡ ಮಾಯಿದೇ ವಳಗೆ ಮಂಜೂರ್ ಬಗ್ಯೆ ಡಿಸ್ಟ್ರಿಕ್ಟಿಗೆ ಕಳುಹಿಸಬೇಕು.

5 ಒಂದು ತಾಲ್ಲೂಕಿಗೆ ಒಬ್ಬನೇ ಯೆಲ್ಲಾ ಜಿನಸೀಗಳನ್ನೂ ಕಂಟ್ರಾಕ್ಟು ಮಾಡಬೇಕು, ಇವ ಒಂದು ವೇಳೆ ಸರಿಯಾಗಿ ಸರಬರಾಯಿ ಮಾಡದೆ ಕಾಲಕಾಲಕ್ಕೆ ಒದಗದ ಹಾಗೆ ಸಾವಕಾಶ ಮಾಡಿದಾಗ್ಯೂ ಯಾ ನಮೂನೆಗೆ ಸರಿಯಾದ ಜಿನಸೀಗಳು ಕೊಡದೆ ತಪ್ಪಿದಾಗ್ಯೂ ಬೇರೇ ಬಾಜಾರಿನಲ್ಲಿ ಆದ ಕ್ರಯಕ್ಕೆ ತೆಗದುಕೊಂಡು ಕೆಲಸ ನಡಿಸಿಕೊಳ್ಳತಕ್ಕದ್ದಕ್ಕಾಗಿ ಒಂದು ಮಾಹೇ ಮೊಬಲಗನ್ನು ಕಂಟ್ರಾಕ್ಟುದಾರನು ಕಂಟ್ರಾಕ್ಟು ಮುಂಜೂರಾದ ನಂತರ ತಾಲ್ಲೂಕಿನಲ್ಲಿ ಡಿಪಾಜಿಟ ಇಡಬೇಕು.

6 ಠೇವಣೀ ಇಡುವ ಮೊಬಲಗಿನಲ್ಲಿ ಚಾಲತೀ ಕೆಲಸಕ್ಕೆ ಜಿನಸೀ ತೆಗದುಕೊಳ್ಳುವ ಸಂದರ್ಭದಲ್ಲಿ ಇದ್ದ ಜಿನಸೀ ಕಿಮ್ಮತು ಕಂಟ್ರಾಕ್ಟು ದರಕ್ಕಿಂತ ಜಾಸ್ತೀಯಾದಲ್ಲಿ ಅಂತಾ ಲುಕ್ಸಾನಿಗೆ ಕಂಟ್ರಾಕ್ಟುದಾರನೇ ಬದ್ಧನಾಗಿರುತ್ತಾನೆ.

7 ಠೇವಣೀ ಮೊಬಲಗು ಸಾಲಾಖೈರಾದ ಹೊರ್ತು ಮಧ್ಯಕಾಲದಲ್ಲಿ ವಾಪಸ ಅಪೇಕ್ಷಿಸಿದರೆ ದೊರಿಯಲಾರದು.

8 ಆ ಮೇರೆ ಲುಕ್ಸಾನ ಆಗುವ ಮೊಬಲಗು ಕಂಟ್ರಾಕ್ಟುದಾರನಿಗೆ ಪಾವತೀಯಾಗುವ ಆಯಾ ಮಾಹೇ ಮೊಬಲಗು ಪೈಕೀ ಕಟಾಯಿಸಿ ಡಿಪಾಜಿಟ್ಟಿಗೆ ಭರ್ತಿ ಮಾಡಿಕೊಳ್ಳಬೇಕು.

9 ಆಖೈರಿಗೆ ನಿಲ್ಲುವ ದರಖಾಸ್ತು ಡಿವಿಜನ ಕಮಿಷನರವರ ಸಾಂಕ್ಷನ್ನಿಗೆ ವಿಷಯವಾಗಿರುತ್ತೆ.

10 ಗದಸ್ತೆ ಸಾಲಿನಲ್ಲಿ ಯಲ್ಲರಂತೆಯೇ ತಾನು ಕಂಟ್ರಾಕ್ಟು ಮಾಡುತ್ತೇನೆಂದು ಹಾಜರಾಗಿ ಪೋಟಾಪೋಟೀ ನಡಿಸಿ ಮಂಜೂರಾದ ನಂತರ ಸರಬರಾಯಿ ಮಾಡದೇ ತಪ್ಪಿಸಿಕೊಂಡು ಇರತಕ್ಕ ಜನಗಳು ಖಂಡಿತವಾಗಿ ಯಾವ ಸಂವತ್ಸರದ ದರಖಾಸ್ತಿಗೂ ಕಚ್ಚೇರಿ ಒಳೀ ಬರಕೂಡದು. ಒಂದು ವೇಳೆ ಮರಮಾಚಿ ಪೋಟಾಪೋಟೀ ಮಾಡಿದನಂತರ ತಿಳಿದಾಗ್ಯೂ ಅವನಿಗೆ ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ.

11 ಆ ಮೇರೆ ಕಂಟ್ರಾಕ್ಟು ಮಾಡಿ ಸರಬರಾಯಿ ಮಾಡಲು ಶಕ್ತನಾಗಿಯೂ ನಂಬಿಕೆಯುಳ್ಳವನಾಗಿಯೂ ಇರತಕ್ಕವನೇ ಹಾಜರಾಗಿ ಪೋಟಾಪೋಟೀ ನಡಿಸಬೇಕು.

12 ಒಬ್ಬನ ಕಂಟ್ರಾಕ್ಟು ಮುಂಜೂರಾದ ನಂತರ ಇತರರಿಗೆ ನಫೆಗೆ ಕೊಟ್ಟು ಅವನಿಂದಾ ಷಿಕ್ಮೀಯಾಗಿ ಸರಬರಾಯಿ ಮಾಡಿಸಿಕೊಳ್ಳಬೇಕೆಂದು ಖಾಯಿಷ್ ಮಾಡಿದರೆ ಮುಂಜೂರಾಗಲಾರದು.

13 ಆ ಮೇರಿಗೆ ಕಂಟ್ರಾಕ್ಟು ಒಪ್ಪಿಕೊಂಡ ಮನುಷ್ಯ ದರ ಜಾಸ್ತೀಯಾದ್ದರಿಂದ ತಾನು ಸರಬರಾಯಿ ಮಾಡಲಾರೆನೆಂದು ಬಯಾನ ಮಾಡಿದರೆ ಅದಕ್ಕಾಗಿ ಸಂಭವಿಸುವ ಲುಕ್ಸಾನಿಗೆ ಅವನನ್ನೇ ಬಾಧ್ಯನಾಗಿ ಮಾಡಲ್ಪಡುವದು.

14 ಕಂಟ್ರಾಕ್ಟು ಆಖೈರಾದ ಒಡನೆ ಯಾವ್ಯಾವ ತಾಲ್ಲೂಕಿಗೆ ಯಾವ್ಯಾವನು ಆಖೈರ್ ದರಕ್ಕೆ ಒಪ್ಪಿಕೊಳ್ಳುತ್ತಾನೋ ಆ ಕೂಡ್ಲೇ ಆಯಾ ತಾಲ್ಲೂಕು ದರದ ಮೇರಿಗೆ ಠೇವಣೀ ಮೊಬಲಗನ್ನು ಮೈಸೂರು ಡಿ|| ಖಜಾನೆಗೆ ಕೊಡಬೇಕೆಂದು ಹೇಳಿದರೆ ಅದರಂತೆ ಸಿದ್ಧ ಪಡಿಸಲಿಕ್ಕೆ ಬದ್ಧನಾಗಿರಬೇಕು, ಆ ಮೇರೆ ಮಾಡದೆ ತಪ್ಪಿದರೆ ಒಡನೆ ಅವನ ಕಂಟ್ರಾಕ್ಟು ರದ್ದುಮಾಡಿ ಇತರರಿಗೆ ಕೊಡಲ್ಪಡುವದಲ್ಲದೆ ಅದರಿಂದ ಸಂಭವಿಸುವ ಲುಕ್ಸಾನಿಗೂ ಅವನನ್ನೇ ಬದ್ಧನನ್ನಾಗಿ ಮಾಡಲ್ಪಡುತ್ತೆ.

15 ಸರಬರಾಯಿ ಬಗ್ಯೆ ಆಖೈರ್ ದರಖಾಸ್ತುದಾರನು ಠೇವಣೀ ಇಟ್ಟು ಮುಚ್ಚಳಿಕೆ ಬರದುಕೊಟ್ಟ ನಂತರ ಸರಿಯಾಗಿ ಸರಬರಾಯಿ ಮಾಡದೆ ಸುಸ್ತೀಯಾಗಿ ಫುಕಾರೇ ಬಂದಾಗ್ಯೂ ಕೊಟ್ಟಂತಾ ಜಿನಸೀನಮೂನೇ ಮೇರೆ ಒಳ್ಳೇದಲ್ಲದೆ ಕಂತರಹಾವಾಗಿ ಇದ್ದಾಗ್ಯೂ ಆ ಒಡನೆ ಅವನ ಕಂಟ್ರಾಕ್ಟು ತಪ್ಪಿಸಿ ಬೇರೇ ಲಾಯಕ್ ಇಸಂಗಳಿಗೆ ಕೊಡುವದು ವಿನಾ ಅವನು ಇಟ್ಟ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

16 ತಾಲ್ಲೂಕಿನಲ್ಲಿ ಮಾಹೇ ಮ|| ತಾ|| 20ರ ಲಾಗಾಯತು 25ರ ವರಿಗೆ ಪೋಟಾಪೋಟಿ ನಡಿಯುವದರಿಂದ ಇಚ್ಛೆಯುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಪೋಟಾಪೋಟೀ ನಡಿಸಬಹುದು· ಮಾಯಿದೆ ತಪ್ಪಿದರೆ ಮಾರನೇ ದಿವಸ ತರಲ್ಪಡುವ ಪೋಟಾಪೋಟೀಯನ್ನು ಅಂಗೀಕರಿಸಲ್ಪಡುವದಿಲ್ಲ.

17 ಈ ತಿಂಗಳು 28ನೇ ದಿವಿ 10 ಘಂಟೆಗೆ ಸರಿಯಾಗಿ ತಲ್ಲೂಕು ಪೋಟೂಪೋಟ ಮೇಲೆ ಕಮ್ಮೀ ಮಾಡತಕ್ಕ ಇಚ್ಛೆಯುಳ್ಳವರು ಹಾಜರಾಗಿಕಮ್ಮೀ ಮಾಡತಕ್ಕ ವಿಷಯ ಯೇನಾದರೂ ಹೇಳಿಕೊಂಡಲ್ಲಿ ಅಂತಾವರ ಯೋಗ್ಯತೆ ಮುಂತಾದ್ದರ ತನಿಖೀಯಿಂದ ಮುನಾಸಬ್ ನಡಿಸುವದರಲ್ಲಿ ಬರುತ್ತೆ, ಕಮ್ಮೀ ಮಾಡಬೇಕಾದ ಸಂದರ್ಭಬಿದ್ದಲ್ಲಿ ಅಂದರೆ, ಕಮ್ಮೀಮಾಡಿ ಕೊಡಲ್ಪಡುತ್ತೆ, ಮುನಾಸಬ್ ಅಲ್ಲವೆಂದು ತೋರಿದರೆ ಅಂತಾ ವಿಷಯದಲ್ಲೂ ಸಂರ್ಭಾನುಸಾರ ಹುಕ್ಕುಂ ಮಾಡುವದರಲ್ಲಿ ಬರುತ್ತೆ.

ತಾರೀಖು 6ನೇ ಮಾಹೆ ಮಾರ್ಚಿ ಸನ 1876ನೆ ಇಸವಿ, ಮೊಕ್ಕಾಂ ಹುಣಸೂರು.

M. SRINIVAS RAO,
Muzrayi Officer.

HASSAN DISTRICT.

ಹಾಸನ ಡಿಸ್ಟ್ರಿಕ್ಟ.

ಸನ 1876ನೇ ಇಸವಿ ಮಾರ್ಚಿ 27ನೇ ತಾರೀಖಿನ ದಿವಸ ಹಾಸನದ ಕಸಬಾದಲ್ಲಿ ಈ ಕೆಳಗೆ ನಮೂದಿಸಲ್ಪಡುವ ಹಳೇ ಡೇರಾಗಳು ಹರಾಜ್ ಹಾಕಲ್ಪಡುತ್ತವೆ.

2 ಡಬ್ಬಿಲ್ ಪೋಲ್‌ಟೆಂಟುಗಳು	2 ಸಿಂಗಿಲ್ ಪೋಲ್ ಹಿಲ್ ಟೆಂಟುಗಳು
2 ರಾವುಟಿಗಳು	2 ಸ್ರಾವಿ ಟೆಂಟುಗಳು

ಪ್ರತಿ ಒಂದು ಡೇರೇಯೂ ಬೇರೆಬೇರೆಯಾಗಿ ಹರಾಜು ಹಾಕಲ್ಪಟ್ಟು ಜಾಡದರಖಾಸ್ತುದಾರನಿಗೆ ಕೊಡಲ್ಪಡುವದು. ಸದರೀ ತಾರೀಖಿನ 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ ಆಫೀಸನಲ್ಲಿ ಹರಾಜು ಪ್ರಾರಂಭಿಸುವದು.

ನಗದು ಹಣಾ ಹಾಜರ್ ಮಾಡಬೇಕು.

ತಾರೀಖು 12ನೇ ಫೆಬ್ರವರೀ 1876ನೇ ಯಿಸವಿ, ಮೊಕ್ಕಾಂ ಹಾಸನ.

E. SHAW,
Offg. Dy. Commr.

SHIMOGA DISTRICT.

ತಾರೀಖು 25ನೇ ಫೆಬ್ರವರೀ 1876.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸುವದೇನಂದರೆ,—ಸನ 1875ನೇ ಇಸವಿ ಡಿಸೆಂಬರ 17ನೇ ಮುಕ್ಕಾಮಿನಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್‌ನಿಂದ ತಪ್ಪಿಸಿಕೊಂಡು ಹೋದ ಈ ಕೆಳಗೆ ವಿವರಿಸಲ್ಪಟ್ಟ ದೊಡ್ಡಬುಡ್ಡ ಯಂಬುವನ ದಸ್ತಗಿರೀ ಬಗ್ಯೆ ತಕ್ಕ ಖಾತಮೀ ತಿಳಿಸತಕ್ಕವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುವದು.

ತ ಪ ಶೀ ಲ್.

ಜೈಲ್ ರಿಜಿಸ್ಟರ ನಂಬರ 3890.—ಹೆಸರು ಮತ್ತು ತಂದೇ ಹೆಸರು, ದೊಡ್ಡಬುಡ್ಡ, ಕಾಶಿಂಖಾ- ವಾಸಸ್ಥಳ ಹಿರೂರ ಶಿವಮೊಗ್ಗಾ ತಾಲ್ಲೂಕು, ಜಾತಿ ಮತ್ತು ಕಸಬು, ಮುಸಲ್ಮಾನ, ಕೂಲಿ. ತಪ್ಪಿತ, ಡಕಾಯತಿ, ತಾರೀಖು ಮತ್ತು ಸಜಾ ವಾಯಿದೆ ಮತ್ತು ಮೊಕದ್ದಮಾ ನಂಬರ, 25ನೇ ನವಂಬರ 1875, 1875ನೇ ಇಸವಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರ ಫೈಲ್ ನಂಬರು 32ನೇ ಮೊಕದ್ದಮೆಯಲ್ಲಿ ಐದುವರುಷಗಳು ಕಠಿಣ ಸಜಾ ಯಾರಿಂದ ಸಜಾ, ಮೊಕರರಾದ್ದು, ಶಿವಮೊಗ್ಗಾ ಡಿ॥ ಮ್ಯಾಜಿಸ್ಟ್ರೇಟರಿಂದ. ವಯಸ್ಸು 30.—ಎತ್ತರ 5 ಅಡಿ, 3½ ಅಂಗುಲ.ವರಾ, ಶಾಮುಲವರ್ಣ, ಕಂಣುಗಳು ಡಿಟ್ಟೋ, ಕೆನ್ನೆ ಎಲುವುಗಳು ಉಬ್ಬಾಗಿವೆ. ಭುಜಗಳ ನಡುವೆ ಚಿಕ್ಕ ಮಚ್ಚೆ, ಬಲತೋಳಿನ ಮುಂದೆ ಘಾಯದ ಕಲೆ. ಇನ್ನೊಂದು ಬಲಮುಂಗೈ ಮುಂದೆ. ಯಡಕಂಕುಳ ಹಿಂದೆ ಒಂದು ಮಚ್ಚೆ. ಬಲತೊಡೆ ಮುಂದೆ ಎರಡು ಘಾಯದ ಕಲೆಗಳು. ಬಲಮೊಣಕಾಲು ಕೀಲಿನ ಹಿಂದೆ ಒಂದು ಉದ್ದವಾದ ಘಾಯದ ಕಲೆ. ಯಡತೊಡೆಯ ಒಳಪಾರ್ಶ್ವ ಒಂದು ಘಾಯದ ಕಲೆ. ಯಡಗಾಲಿನ ಹೊರಪಾರ್ಶ್ವ ಎರಡು ಘಾಯದ ಕಲೆಗಳು ಇರುತ್ತವೆ.

C. S. BLAIR,
Offg. Dy. Commr.

KADUR DISTRICT.

Notice regarding an application of Mallappaetti for a certificate under Act XXVII of 1860.

ಕಡೂರು ಡಿಸ್ಟ್ರಿಕ್ಟ್ ಡೆ|. ಕ|| ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬಾಣಾವಾರ ತಾಲ್ಲೂಕು ಬಾಣಾವಾರ ಕಸಬೇಯಲ್ಲಿರುವ ಮಲ್ಲಪ್ಪಶೆಟ್ಟಿಯು ಬಾಣಾವಾರ ಕಸಬಾದಲ್ಲಿ ಇದ್ದು ಫೌತೀಪಟ್ಟ ತನ್ನ ಚಿಕ್ಕಪ್ಪನಾದ ತಮ್ಮಣ್ಣಶೆಟ್ಟಿಗೆ ಇತರರಿಂದ ಬರಬೇಕಾಗಿರುವ ಸಾಲ 500 ರೂಪಾಯಿ ವರಿಪಿಗೂ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನಗೆ ಸರ್ಟಿಫಿಕೇಟ ಕೊಡಿಸಬೇಕೆಂತ ಕೊಟ್ಟ ಅರ್ಜೀಯು ಫೈಸಲ್ ಬಗ್ಗೆ ಬರುವ ಸನ್ ಮಜಕೂರ ಏಪ್ರೈಲ್ 5ನೇ ತಾರೀಖಿನ್ನ ನಿಷ್ಕರ್ಷೆ ಮಾಡಿ ಇರುವದರಿಂದ ತಕರಾರ್ ಇರತಕ್ಕವರೆಲ್ಲಾ ಮೇಲಿಕಂಡ ತಾರೀಖು ಹಗಲು 11 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂ ಈ ಕೋರ್ಟುಮುಂದೆ ಹಾಜರಾಗಿ ವ್ಯವಹರಿಸಬೇಕಾಗಿ ಇದೆ.

ಬತಾರೀಖು 2ನೇ ಮಾರ್ಚಿ ಸನ್ 1876ನೇ ಇಸವಿ ಮೊಕ್ಕಾಂ ಹ್ಯಾರಂದೂರು.

P. Krishna Rao,
Dy. Commr.

CHITALIROOG DISTRICT.

Notice of sale of right to sell opium and ganja in the District on the 23rd March 1876.

ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1876ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು, ಸನ್ 1877ನೇ ಇಸವಿ ಮಾರ್ಚೀ ಆಖೈರ ವರಿಗೆ ವರುಷ 1ಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಗಾಂಜಾ, ಅಫೀಮು, ಮಾರಾಟಮಾಡುವ ಹಕ್ಕೀಯತ್ತು, ಸನ್ 1876ನೇ ಇಸವಿ ಮಾರ್ಚೀ ತಾರೀಖು 23ನೇ ದಿವಿ 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ ಹರಾಜ್ ಮಾಡಿಸಲ್ಪಡುತ್ತೆ.

2. ಹರಾಜು ಕೈದಾದ ಕೂಡ್ಲೆ ಚಡ ದರಖಾಸ್ತುದಾರನು 2 ತಿಂಗಳ ಖಿಸ್ತು ಹಣವನ್ನ ಠೇವಣಾತೀ ಯಿಡಬೇಕು. ಯಿದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಅದರಿಂದ ಆಗುವ ಲುಕಸಾನನ್ನ ಅವ್ವಲ್ ದರಖಾಸ್ತುದಾರನ ಜಿಂದಗಿ ಜಫ್ತೀ ಹರಾಜಿನಿಂದ ಭರ್ತೀ ಮಾಡಲ್ಪಡುತ್ತೆ. ದರಖಾಸ್ತುದಾರನು ತಾನು ಇಜಾರೇ ಷರತ್ತು ಪ್ರಕಾರ ನಡದುಕೊಳ್ಳತಕ್ಕ ಬಗ್ಯೆ ಯಾರನ್ನು ಜಾಮೀನ್ ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಆ ಮನುಷ್ಯನ ಲಾಯಖೀ ಮೊದಲಾದ್ದನ್ನು ಕುರಿತು ಆತ ವಾಸಮಾಡುವ ತಾಲ್ಲೂಕು ಅಮಲ್‌ದಾರರಿಂದ ಪಡೆದ ಸರ್ಟಿಫಿಕೇಟ ಹಾಜರ್ ಮಾಡಬೇಕು.

3. ಯಿಜಾರೇ ಮೊಬಲಗು ಸನ್ 1876ನೇ ಇಸವಿ ಏಪ್ರೈಲ್ 20ನೇ ತಾರೀಖಿನ ಮೊದಲು ಪ್ರತಿ ಮಾರನೇ ತಿಂಗಳ 20ನೇ ತಾರೀಖಿಗೆ ಸರಿಯಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಪಾವತೀ ಆಗುವ ತಾರೀಖಿನ ವರಿಗೂ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರಿಗೆ ಬಡ್ಡೀ ವಸೂಲ್ ಮಾಡುವದಲ್ಲದೆ ಬಾಬ್ ಪುನಹಾ ಹರಾಜ್ ಮಾಡಿಸಿ ಆ ಬಾಬತ್ ಲುಕಸಾನ್ ಮೊದಲಿನ ಇಜಾರೇದಾರನ ಜಿಂದಗೀ ಜಫ್ತೀ ಹರಾಜಿನಿಂದ ತೆಗದುಕೊಳ್ಳಲಾಧೀತು.

4. ಜಾರೀಲಿರುವ ರೂಲ್ಸ್ ಪ್ರಕಾರ ರೂಪಾಯಿ 1ಕ್ಕೆ ಒಂದಾಣೆ ಮೇರೆ ಲೋಕಲ್ ಸೆಸ್ ವಸೂಲ್ ಮಾಡಲ್ಪಡುತ್ತೆ.

5. ಗಾಂಜಾ, ಅಫೀಮು, ಈ ಯರಡು ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದಿದ ಅಂಗಡೀ ದಾರರೇ ಈಗ ಅಂಗಡಿಗಳು ಯಿರುವ ಕ್ಲುಪ್ತವಾದ ಸ್ಥಳಗಳಲ್ಲಿಯೇ ಮಾರಾಟ ಮಾಡಲ್ಪಡಬೇಕು. ಡೆಪ್ಯುಟಿ ಕಮ್ಮಿಷನರವರ ಅಪ್ಪಣೇ ಶಿವಾಯಿ ಈಗ ಯಿರುವ ಸ್ಥಳಗಳನ್ನ ಬದಲಾಯಿಸಲೂ ಕೂಡದು, ಅಥವಾ ಹೊಸದಾಗಿ ಯಿಡಲೂ ಕೂಡದು.

6. ಈ ಕೆಳಗೆ ನಮೂದಿಸಿರುವ ದರಗಳಂತೆ ಗಾಂಜಾ ಬಾಬಿಗೆ ಲೈಸೆನ್ಸ್ ಫೀಜು ಕೊಡಬೇಕು, ರೂಪಾಯಿ 10 ಷಹರಿನಲ್ಲಿ, ರೂಪಾಯಿ 5 ಕಸಬಾ ಟವುನ್‌ಗಳಲ್ಲಿ, ರೂಪಾಯಿ 3—2—0 ಗ್ರಾಮಾಂತ್ರಗಳಲ್ಲಿ.

7. ಯಾವದಾದರೂ ಚಿಲ್ಲರೇ ಅಂಗಡಿಗಳನ್ನ ಮೌಕೂಫ್ ಮಾಡಿಸುವದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತೋರುವ ಪಕ್ಷಕ್ಕೆ ಅಂಥಾದ್ದನ್ನ ಮವುಕೂಫು ಮಾಡಿಸುವದಲ್ಲದೆ ಅದಕ್ಕಾಗಿ ಕಂಪೆನ್‌ಸೇಷನ್ ಯೇನೂ ಕೊಡುವದಿಲ್ಲ.

8. ಯಿಜಾರೇದಾರನು ಹರಾಜ್ ಖೈದಾದನಂತರ ಡೆಪ್ಯುಟಿ ಕಮ್ಮಿಷನರವರ ಸಮಕ್ಷಮ ನಮೂನೇ ಅನುಸರಿಸಿ ಕ್ರಮವಾದ ಛಾಪಾಕಾಗದದ ಮೇಲೆ ಯಿಜಾರೇ ಮತ್ತು ಜಾಮೀನೀ ಮುಚ್ಚಳಿಕೆಗಳನ್ನ ಬರದು ಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಬಾಬ್ ಪುನಹಾ ಹರಾಜ್ ಮಾಡಿಸಿ ಅದರ ಲುಕಸಾನ್ ಅವನಿಂದ ವಸೂಲ್ ಮಾಡಲಾಧೀತು.

Notice of sale of right to sell by retail arrack in the undermentioned shops.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರ ಬಾಜೂದಲ್ಲಿ ನಮೂದಿರುವ ಜಾಗಗಳಲ್ಲಿ ಷರಾಬ್ ಚಿಲ್ಲರೆ ಅಂಗಡೀಯಲ್ಲಿ ಷರಾಬನ್ನ ಚಿಲ್ಲರೇಯಾಗಿ ಮಾರಾಟ ಮಾಡತಕ್ಕ ಹಕ್ಕೀಯತು ಸನ್ 1876ನೇ ಇಸವಿ ಏಪ್ರೈಲ್ ಗುರ್ರೆ ಲಾಗಾಯತು ಒಂದು ವರುಷಕ್ಕೆ ಡಿಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ, ಸನ್ 1876ನೇ ಇಸವಿ ಮಾರ್ಚಿ ತಾರೀಖು 22ನೇ ದಿವಿ 11 ಘಂಟೆಗೆ ಹರಾಜು ಮಾಡಲ್ಪಡುತ್ತೆ.

ಹರಾಜ್ ಆಗತಕ್ಕ ದುಕಾನಗಳು.

4. ಚಿತ್ರದುರ್ಗ ತಾಲ್ಲೂಕಿನಲ್ಲಿ ಚಿತ್ರದುರ್ಗ ಕಸಬಾ ಅಂಗಡೀಗಳು.

15. ತಾಲ್ಲೂಕು ದಾವಣಗೆರೆ.

4. ಕಸಬಾ ದಾವಣಗೆರೆ ಅಂಗಡಿ	1. ಹೆಬ್ಬಾಳು
5. ಹರಿಹರ ಕಸಬಾ ದುಕಾನುಗಳು	1. ಮಲೆಬೆನ್ನೂರು
1. ಗುತ್ತೂರು	1. ವಾಸನ
1. ಭರಮಸಾಗರ	1. ಬಾಕೀ ದುಕಾನು ವುರಿನಲ್ಲಿ ಅಲಾಹಿದಾ ಲೈಸೆನ್ಸ್ ಪಡೆದು ಪರಿಷೇಯಲ್ಲಿ ಮಾರುವಬಗ್ಯೆ ಸಹಿತ

1. ತಾಲ್ಲೂಕು ಕಣಕುಪ್ಪ, ಜಗಲೂರು ದುಕಾನು.

7. ತಾಲ್ಲೂಕು ದೊಡ್ಡೇರಿ.

2. ಮೊಳಕಾಲ್ಮೂರು ಕಸಬಾ	1. ಶಿರೇಕೊಳಾ
ದುಕಾನುಗಳು	1. ರಾಮಪುರ
1. ಕೊಂಡ್ಲಹಳ್ಳಿ	1. ನಾಯ್ಕನಹಟ್ಟೀ ಜಾತ್ರೆಯಲ್ಲಿ ಮಾರುವಬಗ್ಯೆ ಸಹಿತ
1. ಬಂಮಗೊಂಡ್ನಕೆರೆ	

4. ಹಿರಿಯೂರು ತಾಲ್ಲೂಕು.

1. ಹಿರಿಯೂರು	1. ಬುರಜನರೊಪ್ಪ
1. ಮರಡೀಹಳ್ಳಿ	1. ಯರಬಳ್ಳಿ

1. ಪಾವಗಡ ಕಸಬಾ ದುಕಾನು.

2. ಬಾಜೂದಲ್ಲಿ ನಮೂದಾದ ಅಂಗಡೀಗಳ ಶಿವಾಯಿ ಚಕ್ಕುಬಂದೀ ಪಟ್ಟೀಯಲ್ಲಿ ನಮೂದಿರುವ ಯಿತರ ಕ್ಲುಪ್ತವಾದ ಅಂಗಡೀಗಳು ಸಹಾ ಜನಗಳು ಖಾಯಿಷ್ ಮಾಡಿದಲ್ಲಿ ಫೋಟಾ ಫೋಟೀ ಮಾಡಿಸಲ್ಪಡುತ್ತೆ.

3. ಹರಾಜು ಮೊಬಲಗು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಸಮಕ್ಷಮ ಹರಾಜು ಖೈದಾದಕೂಡ್ಲೇ ಹಾಜರ್ಮಾಡಲ್ಪಡಬೇಕು, ಇದಕ್ಕೆ ತಪ್ಪಿದಲ್ಲಿ ಹಕೀಯತ್ ಪುನಹಾ ಹರಾಜು ಮಾಡಲ್ಪಟ್ಟು ಆದಂಣ ಸಂಭವಿಸುವ ಲುಕ್ಸಾನಿಗೆ ಷುರೂ ದರಖಾಸ್ತು ದಾರ್ರನ್ನ ಗುರೀ ಮಾಡಲಾಧೀತು.

4. ಷರಾಬ್ ಚಿಲ್ಲರೇಅಂಗಡೀ ಬಿಕ್ರೀದಾರು ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಂತೆ, ಮತ್ತು ಆಗಿಂದಾಗ್ಯೆ ಅಮಲ್‌ದಾರ್ರಿಗೆ ಕೊಡಲ್ಪಡುವ ಸರ್ಕ್ಯುಲರ್ ಹುಕುಂಗಳ ಪ್ರಕಾರ ಖಂಡಿತವಾಗಿ ನಡದುಕೊಳ್ಳಬೇಕು

5. ಪ್ರತಿ ಒಂದು ಅಂಗಡಿಯಕ್ಲುಪ್ತವಾದ ಲೈಸೆನ್ಸ್ ಫೀಜ್ ಬಾಬತು ಕ್ವಾರ್ಟರ್‌ಲಿ ಮೊಬಲಗನ್ನು ಪ್ರತಿ ಕ್ವಾರ್ಟರಿನ 1ನೇ ತಾರೀಖಿನಲ್ಲಿ ಅಂದರೆ, ಯೇಪ್ರೈಲ, ಜುಲೈ, ಅಕ್ಟೋಬರ್, ಜನವರೀ, ಈ ತಿಂಗಳುಗಳ ಗುರ್ರೇ ತಾರೀಖಿನಲ್ಲಿ ಮುಂಗಡವಾಗಿ ಪಾವತೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಸದರೀ ಮೊಬಲಗು ಪೂರಾ ವಸೂಲ್ ಬರುವ ತಾರೀಖಿನ ವರಿಗೂ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರೆ ಬಡ್ಡೀ ವಸೂಲ್ ಮಾಡಲ್ಪಡುವದಲ್ಲದೆ ಲೈಸೆನ್ಸ್ ಸಹಾ ರದ್ದು ಮಾಡಲಾಧೀತು.

6. ಸರ್ಕಾರದ ಡಿಸ್ಟಿಲೆರಿಯಿಂದ ತೆಗದುಕೊಂಡು ಹೋಗುವ ಷರಾಬಿಗೆ ಗ್ಯಾಲನ್ 1ಕ್ಕೆ ಯರಡು ರೂಪಾಯಿ ಯಂತೆ ಹೆಡ್‌ಡ್ಯೂಟಿ ಹಾಸಲ್ ಮತ್ತು ಯರಡಾಣೆ ಲೋಕಲ್‌ಫಂಡ್ ಸಹಾ ಕೊಡಬೇಕು.

ಖತಾರೀಖು 21ನೇ ಮಾಹೆ ಫಿಬ್ರವರೀ ಸನ್ 1876ನೇ ಇಸವಿ, ಮೊಕ್ಕಾಂ ಸುಂಟನೂರು.

Notice of sale of the right of collecting tolls on the Harihar bridge on the 22nd March 1876.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1876ನೇ ಇಸವಿ ಯೇಪ್ರೈಲ್ ಗುರ್ರೇ ಲಾಗಾಯತು, ಸನ್ 1877ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ, ಒಂದು ವರುಷಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಕಸಬಾ ಹರಿಹರದಲ್ಲಿ ತುಂಗಭದ್ರಾ ಸೇತುವೆ ಮೇಲೆ ಮೈಸೂರು ಚೀಫ್ ಕಮ್ಮಿಷನರ್ ಸಾಹೆಬರವರಿಂದ ಯೇರ್ಪಾಡಾಗಿರುವ ದರಗಳ ತಖ್ತೇ ಅನುಸರಿಸಿ ಟೋಲ್ ಹಾಸಲ್ ವಸೂಲಿ ಮಾಡುವ ಹಕ್ಕನ್ನ ಸನ್ 1876ನೇ ಇಸವಿ ಮಾರ್ಚಿ 22ನೇ ತಾರೀಖು 12 ಘಂಟೆಗೆ ಚಿತ್ರದುರ್ಗದ ಮೊಕ್ಕಾಮಿನಲ್ಲಿ ಯಿದರಡಿ ದಸ್ತಖತ್ ಮಾಡಿರುವವರ ಯದುರಾಗಿ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ. ಸದರೀ ಟೋಲ್ ಹಾಸಲ್‌ನಿಂದ ಹಿಂದೆ 6 ವರುಷಗಳಲ್ಲಿ ಸರಕಾರಕ್ಕೆ ಉತ್ಪತ್ತಿ ಆದ ಮೊಬಲಗು ಯಿದರ ಕೆಳಗೆ ತ್ತೋರಿಸಲ್ಪಟ್ಟು ಯಿದೆ.

ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.	ಸಾಲ್‌ವಾರ್.	ಅಮಾನಿಯಲ್ಲಿ.	ಇಜಾರೇಯಲ್ಲಿ.
70—71	3222–11–6	0—0–0	73—74	5632–8–1	0—0—0
71—72	80—8–0	4441–15–2	74—75	3593–1–6	0—0—0
72—73	0—0–0	4000—0–0	75—76	0–0–0	4760—0—0

2. ಚಡ ದರಖಾಸ್ತು ಡೆಪ್ಯುಟಿ ಕಮಿಷನರವರು ಅಂಗೀಕರಿಸಿದಲ್ಲಿ ನಗರ ಡಿವಿಜನ ಕಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ, ಮತ್ತು ಅವರ ಸಾಂಗ್‌ಷನ ತಲಪಿದ ನಂತರ ಬಾಬು ಯಿಜಾರೇದಾರನ ಸುಫರ್ದು ಮಾಡಲ್ಪಡುತ್ತೆ.

3. ದರಖಾಸ್ತು ಡೆಪ್ಯುಟಿ ಕಮಿಷನರವರಿಂದ ಅಂಗೀಕರಿಸಲ್ಪಟ್ಟ ಕೂಡ್ಲೇ ಯಿಜಾರೇದಾರನು 2 ತಿಂಗಳ ಖಿಸ್ತು ಮೊಬಲಗನ್ನು ಶೇವಣಾತೀ ಯಿಡಬೇಕು, ದರಖಾಸ್ತು ಸಾಂಗ್‌ಷನ ಆಗದೆ ಹೋಗುವ ಪಕ್ಷಕ್ಕೆ ಸದರೀ ಶೇವಣಾತೀ ಹಣವು ವಾಪಸ್ ಮಾಡಲ್ಪಡುತ್ತೆ. ಶೇವಣಾತೀ ಹಣಾ ಯಿಡುವದಕ್ಕೆ ತಪ್ಪಿದಲ್ಲಿ ಯಿಜಾರೇಯನ್ನು ಪುನಹಾ ಹರಾಜು ಮಾಡಿಸಿ ದರಖಾಸ್ತುದಾರನನ್ನು ಲುಕ್ಸಾನಿಗೆ ಗುರಿಮಾಡುವದಾಗುತ್ತೆ.

4. ಯಿಜಾರೇ ಮೊಬಲಗು ತಾಲ್ಲೂಕು ಖಜಾನೇಯಲ್ಲಿ 12 ತಿಂಗಳ ಖಿಸ್ತುಗಳಿಂದ ಪ್ರತಿ ತಿಂಗಳ 20ನೇ ತಾರೀಖಿಗೆ ಸರಿಯಾಗಿ ಪಾವತೀ ಮಾಡಲ್ಪಡಬೇಕು. ಮೊದಲನೇ ಖಿಸ್ತು ಯೆಪ್ರೈಲ್ 20ನೇ ತಾರೀಖಿಗೂ, ಬಾಕೀ ಖಿಸ್ತುಗಳು ಮಾರನೇ ತಿಂಗಳು 20ನೇ ತಾರೀಖಿಗೆ ಸರಿಯಾಗಿಯೂ ಪಾವತೀ ಮಾಡುತ್ತಾ ಬರಬೇಕು. ಇದಕ್ಕೆ ತಪ್ಪಿದಲ್ಲಿ ಇಜಾರೇ ಪುನಹಾ ಹರಾಜು ಮಾಡಲ್ಪಟ್ಟು ಅದರಿಂದ ಸಂಭವಿಸುವ ಲುಕ್‌ಸಾನು ಹಿಂದಣ ಬಾಕೀ ಸಹಾ ಯಿಜಾರೇದಾರನ ಚರ ಸ್ಥಿರ ಆಸ್ತಿ ಜಫ್ತೀ ಮೂಲಕ ಭರ್ತೀ ಮಾಡಿಕ್ಕೊಳ್ಳಲ್ಪಡುವದಲ್ಲದೆ ಮೊಬಲಗು ಪೂರಾ ಪಾವತೀ ಆಗುವವರೆಗೂ ರೋಜೀನಾ ರೂಪಾಯಿ 1ಕ್ಕೆ ಅರ್ಧ ಪೈ ಪ್ರಕಾರ ಬಡ್ಡೀ ಸಹಾ ವಸೂಲ್ ಮಾಡಲ್ಪಡುವದು.

5. ಯಿಜಾರೇ ಷರತ್ತು ಪ್ರಕಾರ ಸರಿಯಾಗಿ ನಡದುಕ್ಕೊಳ್ಳುವದಕ್ಕೆ ಖಾತರೀ ಬಗ್ಯೆ ಯಿಜಾರೇದಾರನು ಯಾರನ್ನು ಜಾಮೀನು ಕೊಡಬೇಕೆಂತಾ ಅಪೇಕ್ಷಿಸುತ್ತಾನೋ ಅಂಥಾ ಜಾಮೀನ್‌ದಾರನ ಲಾಯಖೀ ವಿಷಯದಲ್ಲಿ ತಕ್ಕ ಅಧಿಕಾರಸ್ಥರಿಂದ ಪಡೆದ ಸರ್ಟಿಫಿಕೇಟ್ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತು ಮಂಜೂರ್ ಮಾಡಲ್ಪಡುವದಿಲ್ಲ.

6. ಇಜಾರೇಕಾಲ ಉಪಕ್ರಮಿಸುವದಕ್ಕೆ ಮುಂಚೆಯೇ ಯಿಜಾರೇದಾರನು ಕ್ರಮವಾದ ಛಾಪಾ ಕಾಗದದ ಮೇಲೆ ನಮೂನೇ ಅನುಸರಿಸಿ ಯಿಜಾರೇ ಮತ್ತು ಜಾಮೀನು ಮುಚ್ಚಳಿಕೆಗಳನ್ನು ಬರದು ಕೊಡಬೇಕು, ಅದಕ್ಕೆ ತಪ್ಪಿದಲ್ಲಿ 4ನೇ ಕಲಮಿನಲ್ಲಿ ನಮೂದಾಗುವ ದಂಡವು ವಿಧಿಸಲ್ಪಡುತ್ತೆ.

7. ಯಿಜಾರೇ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್ ಸೆಸ್ ವಸೂಲ್ ಮಾಡಲ್ಪಡುವದು.

8. ಟೋಲ್ ಹಾಸಲ್ ಸೇತುವೆ ಮೇಲೆ ಮಾತ್ರ ವಸೂಲ್ ಮಾಡಲ್ಪಡಬೇಕೇ ಹೊರ್ತು ಕಾಲು ಹಾದಿಗಳನ್ನು ಉಪಯೋಗಿಸಿಕ್ಕೊಳ್ಳುವ ಜನಗಳಿಂದ ವಸೂಲ್ ಮಾಡಕೂಡದು, ಕಾಲುಹಾದಿಗಳು ಯಲ್ಲರಿಗೂ ಖುಲ್ಲಾ ಯಿರುತ್ತೆ.

ತಾರೀಖು 26ನೇ ಮಾಹೆ ಫಿಬ್ರುವರೀ ಸನ 1876ನೇ ಇಸವಿ, ಮೊಕ್ಕಾಂ ಚಿತ್ರದುರ್ಗ.

E. F. H. ARMSTRONG,
Dy. Commr.

Notice regarding the sale by public auction, of the right of collecting the octroi duties within the Municipal limits of Chitaldroog, Davangere and Harihar.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಸಬಾ ಚಿತ್ರದುರ್ಗ, ದಾವಣಗೆರೆ, ಹರಿಹರ, ಈ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಿಳ್ಳೆದೆಲೆ, ಅಡಿಕೆ, ತಂಬಾಕು, ಬೆಲ್ಲ, ಸಕ್ಕರ, ಬೆಂಣೆ, ತುಪ್ಪ, ಯಣ್ಣೆ, ಈ ಜಿನಿಸಿಗಳ ಮೇಲೆ ವಸೂಲ್ ಆಗುವ ಆಕ್ಟ್ರಾಯಿ ಯಾನೆ ಕರಗು ಹಾಸಲ್ ವಸೂಲೀ ಮಾಡುವ ಹಕ್ಕನ್ನು ಸನ 1876ನೇ ಇಸವಿ ಯೆಪ್ರೈಲ್ ಗುರ್‍ರೇ ತಾರೀಖು ಲಾಗಾಯತು 1877ನೇ ಇಸವಿ ಮಾರ್ಚಿ ಆಖೈರ್ ವರಿಗೂ ಆಗುವ ಒಂದು ವರುಷಕ್ಕೆ ಸನ 1876ನೇ ಇಸವಿ ಮಾರ್ಚಿ ತಾರೀಖು 29ನೇ ಹಗಲು 11 ಘಂಟೆಗೆ ಚಿತ್ರದುರ್ಗ ಮೊಕ್ಕಾಮಿನಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಕಚ್ಚೇರಿಯಲ್ಲಿ ಹರಾಜು ಮಾಡಲ್ಪಡುತ್ತೆ.

ಈ ಬಾಬತು ಇಜಾರೇಯನ್ನ ಪಡೆಯಲು ಯಿರಾದೇ ವುಳ್ಳವರು ಮೇಲೆ ಕಂಡ ತಾರೀಖಿನಲ್ಲಿ ಹಾಜರಾಗಿ ಪೋಟಾ ಪೋಟೀ ನಡಿಸಬಹುದು. ಹರಾಜು ಖೈದ್ ಆದ ಕೂಡ್ಲೇ ಚಡ ದರಖಾಸ್ತುದಾರನು ಒಂದು ತಿಂಗಳ ಖಿಸ್ತನ್ನು ಶೇವಣಾತಿ ಯಿಡಬೇಕು. ಬಾ

ಕೀ ಹಣಕ್ಕೆ 3 ದಿವಸಗಳ ವಾಯಿದೆಯಲ್ಲಿ ಖಾತರ್ ಜಾಮೀನ್ ಹಾಜರ್ ಮಾಡಬೇಕು, ಯಿದಕ್ಕೆ ತಪ್ಪಿದರೆ ಬಾಬ್ ಪುನಹಾ ಹರಾಜು ಮಾಡಿ ಇದರಿಂದ ನಷ್ಟವಾದ ಹಣವನ್ನ ಲೇವಣಾತಿ ಮತ್ತು ಜಾಮೀನ್ ಹಾಜರ್ ಮಾಡದೆ ಯಿದ್ದವನಿಂದ ವಸೂಲ್ ಮಾಡಲಾಧೀತು

ಆಯಾ ತಿಂಗಳ ಖಿಸ್ತನ್ನು ಆಯಾ ತಿಂಗಳ 25ನೇ ತಾರೀಖು ಒಳಗಾಗಿ ತಾಲ್ಲೂಕು ಖಜಾನೇಗಳಲ್ಲಿ ಪಾರಖಾವಣೀ ಮಾಡಿಸಿ ರಸೀದ್ ಪಡೆಯಬೇಕು ಆ ರೀತಿ ಪಡೆಯದೇ ತಪ್ಪಿದಲ್ಲಿ ಖಿಸ್ತು ಮೊಬಲಗ್ಯೆ ರೆವಿನ್ಯೂ ರೂಲ್ಸ್ ಅನುಸರಿಸಿ ನಿಲ್ಲಿಸಿಕ್ಕೊಳ್ಳುವ ದಿವಸಗಳಿಗೆ ರೋಜೀನಾ ರೂಪಾಯಿ 1ಕ್ಕೆ ½ ಪೈ ಮೇರಿಗೆ ವಸೂಲ್ ಮಾಡುವದಲ್ಲದೆ ಕೂಡ್ಲೇ ಬಾಬ್ ಜಫ್ತೀಯಿಂದ ಪುನಹಾ ಹರಾಜ್ ಮಾಡಿಸಿ ಕಮ್ಮೀ ಆಗುವ ಮೊಬಲಗ್ ಇಜಾರೇದಾರ ಮತ್ತು ಜಾಮೀನ್‌ದಾರರುಗಳಿಂದ ವಸೂಲ್ ಮಾಡಲ್ಪಟ್ಟೀತು.

ಮೇಲೆಕಂಡ ಕರಗುಪಡಿಹಾಸಲು ಕ್ರಮವಾಗಿ ಕೊಡಬೇಕಾಗಿರುವ ಬಾಧ್ಯತೆಯಿಂದ ಯಾವ ಮನುಷ್ಯನೇ ಆಗಲಿ ನಿವರ್ತಿಸಲ್ಪಟ್ಟಿಲ್ಲವೆಂಬ ಸಂಗತಿ ಚನ್ನಾಗಿ ತಿಳಿಯತಕ್ಕದ್ದು.

ಬತಾರೀಖು 1ನೇ ಮಾರ್ಚಿ ಸರ್ 1876ನೇ ಇಸವಿ, ಮೊಕ್ಕಾಂ ಚಿತ್ರದುರ್ಗ.

S. VENKAT VARDAIENGAR,
For Dy. Commr.

COORG.

Notice regarding an application of Iyappa for a certificate under Act XXVII of 1860.

ಕೊಡಗು ಸೂಪರ್ರಿಂಟೆಂಡೆಂಟ್ ಕೋರ್ಟಿನಿಂದ.

ಸರ್ 1876ನೇ ಇಸವಿ ಕಿ॥ ನಾ॥ ಮೊ॥ ನಂಬರ್ 5.

ಸರ್ವಜನರಿಗೂ ತಿಳಿಯಪಡಿಸುವದೇನಂದರೆ.—ಬೆಟ್ಟತ್‌ನಾಡು ಈಚೂರು ಗ್ರಾಮದ ಕೊಡಗರ ತಿತ್ತಿಮಕ್ಕಳ ಐಯಪ್ಪನು ಪಾಲೀ ತನ್ನ ತಂದೆ ಸುಬ್ಬೈಯನಿಗೆ ಹೊರಗಿನಿಂದ ಬರತಕ್ಕ ಸಾಲ 300 ರೂಪಾಯಿ ವಸೂಲ್ ಮಾಡಿ ಕೊಳ್ಳುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟಿನ ಪ್ರಕಾರ ಬಾಧ್ಯತೆ ಸರಟಿಫಿಕೇಟ್ ಕೊಡಿಸಬೇಕಾಗಿ ದರಖಾಸ್ತು ಮಾಡಿರುವ ಮೊಕದ್ದಮೆ 1876ನೇ ಇಸವಿ ಏಪ್ರೆಲ ತಾರೀಖು 3ನೇ ದಿನ ಫಸ್ಟ್ ಅ॥ ಸೂ॥ ಕೋರ್ಟಿನಲ್ಲಿ ಹಿಯರಿಂಗ್ ಆಗುವದರಿಂದ ಯಿದಕ್ಕೆ ಯಾರಾದರೂ ಹಕ್ಕುದಾರು ಯಿದ್ದರೆ ಸದರೀ ತಾರೀಖಿನ ದಿನ ಹಗಲು 11 ಘಂಟೆಗೆ ಸರಿಯಾಗಿ ಸದರೀ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸ ಬಹುದು.

ತಾರೀಖು 2ನೇ ಮಾರ್ಚಿ ಸರ್ 1876ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಸಂಸ್ಥಾನಕ್ಕೆ ಸಂಬಂಧಪಟ್ಟ ಭೂಮಿಗಳನ್ನು ವರ್ಗಮಾಡುವ ವಿಷಯದಲ್ಲಿ ವುಂಟಾದ ನಿಬಂಧನೆಗಳ ಕುರಿತು ಸರ್ 1872ನೇ ಇಸವಿ ಫಿಬ್ರವರೀ ತಾರೀಖು 6ರಲ್ಲು ನಂಬರ್ 1—149ರ ಬಾಬತು ಯಿಂಡ್ಯ ಗವರ್ನಮೆಂಟಿನವರ ರೆವಿನ್ಯೂ ಇಲಾಖೇಯಿಂದ ಬಂದ ಹುಕ್ಕುಂನಲ್ಲಿ ಅಪ್ಪಣೆಯಾಗಿ ಇರುವ ಮೇರೆ ಈ ಕೆಳಗೆ ನಮೂದಿರುವ ಮನೆ ದಳವನ್ನು ಬಹಿರಂಗವಾದ ಹರಾಜ್ ಮೂಲಕ ಸೆಕೆಂಡ್ ಅಸಿಸ್ಟೆಂಟ್ ಸೂಪರ್ರಿಂಟೆಂಡೆಂಟ್ ಆಫಿಸಿನಲ್ಲಿ ಸರ್ 1876ನೇ ಇಸವಿ ಮಾರ್ಚಿ ತಾರೀಖು 24ರಲ್ಲು ಮಡಿಕೇರಿಯಲ್ಲು ಹಗಲು ಚಡದರಖಾಸ್ತುದಾರರಿಗೆ ಸೆಕ್ರೆಟೇರಿ ಸಾಹೇಬರವರ ಸರ್ 1876ನೇ ಇಸವಿ 6ನೇ ಜನವರೀ ತಾರೀಖಿನ ನಂಬರ್ 542—3ರ ಡಾಕ್ಕೆಟ್‌ನಲ್ಲಿ ಚೀಪ್ ಕಮ್ಮಿಷನರ್ ಸಾಹೇಬರು ಮಂಜೂರು ಮಾಡಿರುವದನ್ನು ಅಖೈರ್ ಖರೀದಿಗೆ ಮಾರಲ್ಪಡುತ್ತದೆ.

ದರಖಾಸ್ತುದಾರ್ರ ಹೆಸರು, ಜೆ. ಡಬ್ಲಿಯು. ಫ಼ಿಲೀಸರ್—ಗ್ರಾಮ ನಾಡು ಮತ್ತು ತಾಲ್ಲೂಕು, ಕುಂದಚೇರಿ ಬೆಂಗುನಾಡು ಪಡಿನಾಲ್ಕುನಾಡು ತಾಲ್ಲೂಕು—ಭೂಮಿ ಹೆಸರು, ಪೈಸಾರಿ ನಿಡುವಂಡ್ರು ಕುಂದುಮೊಟ್ಟೆ ಬಳಿ ಆನೆಕಂಡಿಯಲ್ಲಿ ಜಾಗ—ವಿಸ್ತೀರ್ಣ, ಎಕರೆ 2.—ಮರಗಳ ಕ್ರಯ 0—ಅಖೈರ್ ದರ 4—ವೃತ್ತರಕ್ಕೆ ಮ॥ ಫ಼ಿಲೀಸರ್ ಸಾಹೆಬರ ಅಮ್ಮಿ ಮಲೆ ಕಾಫೀ ತೋಟದ ಸಮೀಪ ಅರಮನೆ ಕಡಂಗು—ದಕ್ಷಿಣಕ್ಕೆ ಆನೆಕಂಡಿ ಪೈಸಾರಿ ಮತ್ತು ಆಕಪಾಡು ಪೈಸಾರಿ—ಪೂರ್ವಕ್ಕೆ ಮುಕ್ಕಟ್ಟಿ ದೇಬ್ಬೂ ಪೈಸಾರಿ—ಬಟ್ಟೆ ಕಾಡುಪೈಸಾರಿ—ಕಾಫೀತೋಟ ಮತ್ತು ಪೈಸಾರಿ ಹುಲ್ಲುಭೂಮಿ—ಪಶ್ಚಿಮಕ್ಕೆ ನಿಡಿಯಾಂಡ ಮೋಳುಬೆಟ್ಟದ ಅಡಿವಾರದಲ್ಲಿ ಕಡಂಗು.

ತಾರೀಖು 14ನೇ ಮಾರ್ಚಿ 1876.

E. SHAW,
Offg. Superintendent.

ಸರ್ ೧೮೭೬ನೇ ಇಸವಿ ಫೆಬ್ರುವರೀ ತಿಂಗಳ ಕಾಲಸ್ಥಿತಿ ರಿಪೋರ್ಟು,

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಮಳೆ ಇಲ್ಲ, ಸಾಧಾರಣವಾಗಿ ನೀರಿಗೆ ದುರ್ಬಿಕ್ಷವಾಗಿಧೆ.

ಬೆಳೆ—ಮಳೆ ಇಲ್ಲದೆ ಬೆಳೆಗಳಿಗೆ ಬಹಳ ಕೇಡು ವುಂಟಾಯಿತು, ಗನ್ನಾ ಪೇರಾವಾಯಿತು. ಭತ್ತ, ಗನ್ನಾ, ಕಡ್ಲೆ, ಗೋಧಿ, ಯಿವು ಕಟಾವಾಯಿತು.

ಆರೋಗ್ಯ—ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಛಳಿಜ್ವರ ವ್ಯಾಪಿಸಿ ಯಿಧೆ, ಯಿತರಾಂಶದಲ್ಲಿ ಜನಗಳಿಗೆ ಆರೋಗ್ಯ ಚನ್ನಾಗಿಯಿತ್ತು.

ಜನಸಾವು—359 ಮಂದಿ ಸತ್ತರು, ಜನವರೀ ತಿಂಗಳಲ್ಲಿ 567 ಮಂದಿ ಮೃತಪಟ್ಟರು.

ಜಾನವರ—ಮರ್ರಿಯಂಬ ದೊಡ್ಡ ರೋಗದಿಂದ ಬೆಂಗಳೂರು ತಾಲ್ಲೂಕಿನಲ್ಲಿ ಸತ್ತ ಜಾನವರಗಳು 153, ಯಿತರರೋಗಗಳಿಂದ 920, ಅಡವಿ ಮೃಗಗಳಿಂದ ಕೊಲ್ಲಲ್ಪಟ್ಟವು 14, ಕುಲ್ 1087.

ಹಿಂದಿನ ತಿಂಗಳಲ್ಲಿ 772, ಕಾಲ್ನಡೆಗಳು ಸತ್ತವು.

ಜಮೀನ—ಈ ತಿಂಗಳಲ್ಲಿ 5—15—2 ಕಂದಾಯವುಳ್ಳ ಜಮೀನ ಸಾಗುವಳೀ ಬಗ್ಗೆ ತೆಗದು ಕೊಳ್ಳಲ್ಪಟ್ಟಿತು.

L. RICKETTS,
Offg. Dy. Commr.

ತುಮಕೂರು ಡಿಸ್ಟ್ರಿಕ್ಟು.

ಮಳೆ—ಈ ತಿಂಗಳೊಳಗೆ ಮಳೆ ಬೀಳಲಿಲ್ಲವು.

ಬೆಳೆ—ಬಹಳ ಕೆರೆಗಳ ಕೆಳಗೆ ಬೆಳೆಗಳು ಮಳೆಯಿಲ್ಲದೆ ಒಣಗುತ್ತಿರುವದಾಗಿ ರಿಪೋರ್ಟಾಗಿರುತ್ತವೆ. ಈ ತಿಂಗಳೊಳಗೆ ಗನ್ನಾ, ನೆಲ್ಲು, ಬಿತ್ತಲ್ಪಟ್ಟವು; ಮತ್ತು ಗನ್ನಾ, ಕಡ್ಲೆ, ಗೋಧಿ, ಜವರೆ, ಕಟಾವಾದವು.

ಆರೋಗ್ಯ—ಜನಾರೋಗ್ಯ ಚನ್ನಾಗಿತ್ತು. ಕುಣಿಗಲ್ ಮತ್ತು ಕಡಬ ಹೊರ್ತು ಕಡಮೆ ಎಲ್ಲ ತಾಲ್ಲೂಕುಗಳಲ್ಲಿಯೂ 288 ಮಂದಿ ಮೃತಪಟ್ಟಿರುತ್ತಾರೆ. ಈ ಪೈಕೀ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಖೈಜುಲಾಬಿನಿಂದ ಇಬ್ಬರು ಮೃತಪಟ್ಟರು.

ಕಾಲ್ನಡೆ—ತುಮಕೂರು, ಸೀರ, ಹೊನ್ನವಳ್ಳಿ ತಾಲ್ಲೂಕುಗಳಲ್ಲಿ ಗೋಮಾರೀ ರೋಗವು ವ್ಯಾಪಿಸಿತ್ತು ಕಾಲ್ನಡೆಗಳ ಪೈಕೀ 1216 ಹೋದವು. 1876ನೇ ಜನವರೀ ತಿಂಗಳಲ್ಲಿ 1025 ಹೋದವು.

C. J. PEARSE,
Dy. Commr.

ಮೈಸೂರು ಡಿಸ್ಟ್ರಿಕ್ಟು.

ಮಳೆ,—ಡಿಸ್ಟ್ರಿಕ್ಟಾ ಮಳೆ ಕೊಂಚ ವಿನಾ ಕಡಿಮೆ ಯಿಲ್ಲಾ ಕೆರೆಗಳೂ ಪೂರ್ತಿಯಾಗಿ ಒಣಗಿರುತ್ತವೆ. ವಳಗೆರೆಗಳಲ್ಲಿ ಭಾವಿಗಳು ತೆಗದು ಅವುಗಳಿಂದ ರೈತರು ತಮಗೂ ತಮ್ಮ ಕಾಲ್ನಡೆಗೂ ನೀರು ತಂದುಕೊಳ್ಳುತ್ತಾರೆ.

ಫಸಲು,—ರೈತರು ಫಸಲನ್ನು ತುಳಿಸುತ್ತಾ ಇಧಾರೆ, ಕೆಲವು ತಾಲ್ಲೂಕುಗಳಲ್ಲಿ ಫಲ ಬಹಳ ಕಮ್ಮಿ. ಬಸರಾಲ್ ಹೋಬಳಿಯಲ್ಲಿ 20 ರೂಪಾಯಿಗಳ ಲಾಗಾಯತು 25 ರೂಪಾಯಿಗಳ ವರಿವಿಗೂ ಕಂದಾಯ ಕೊಡುವಂತ ಕೆಲವು ರೈತರುಗಳ ಫಸಲು ತುಳಿಸುವದನ್ನು ಅಮಲ್‍ದಾರ್ರು ನೋಡಿರುತ್ತಾರೆ, 5 ಕೊಳಗಗಳ ಲಾಗಾಯತು 2 ಖಂಡಿಗಳ ವರಿವಿಗೂ ಫಲಿಸಿರುತ್ತೆ, ಖಂಡಿ1ಕ್ಕೆ 8 ರೂಪಾಯಿ ಖರೀದಿ ಆಇತು.

ಆರೋಗ್ಯ,—ಖೈಜುಲಾಬೇನು ಕಾಣಲಿಲ್ಲಾ, ಆದರೆ ಇತರ ಸಾಧಾರಣವಾದ ಕಾರಣಗಳಿಂದ ಯೇಕೋನು 523 ಮಂದಿ ಸತ್ತರು.

ಕಾಲ್ನಡೆ,—ಮೈಸೂರು, ಗುಂಡ್ಲುಪೇಟೆ, ನಂಜನಗೂಡು, ತಲಕಾಡು ಮಂಡ್ಯ ಮಳವಳ್ಳಿ, ಈ ತಾಲ್ಲೂಕುಗಳಲ್ಲಿ ಗೋಮಾರಿರೋಗ ಪುನಃ ಕಾಣಿಸಿ ಕೊಂಡಿತು, ಈ ಕಾರಣದಿಂದಲೂ ಮತ್ತು ಇತರ ಕಾರಣಗಳಿಂದಲೂ, ಅಡವಿ ಮೃಗಗಳಿಂದ ಕೊಲ್ಲಲ್ಪಟ್ಟ 34 ಶೇರಿ 1280 ಕಾಲ್ನಡೆ ಸತ್ತವು.

ನಿರಖು,—ಜಿನಸೀಗಳ ದಾರಣೆವಾಸಿಯೂ ಬಹಳ ಚಡಾವಾಗಿದ್ದಾಗ್ಯೂ, ಕಳೆದ ತಿಂಗಳಲ್ಲಿದ್ದ ದಾರಣೆವಾಸಿಗೆ ತಾಳೆನೋಡಿದರೆ ಕೊಂಚ ತಗ್ಗಿರುತ್ತೆ. ಈಗ ಮೈಸೂರಲ್ಲಿ ರೂಪಾಯಿ 1ಕ್ಕೆ ಅವ್ವಲ್‍ತರಹ ಅಕ್ಕೀ 9½ ಶೇರು, ದುಯ್ಯಂ ತರಹ 10 ಶೇರು, ರಾಗಿ 17 ಶೇರು, ಹುರಳಿ 20 ಶೇರು, ಹೆಸರು 16½ ಶೇರು, ಕಡ್ಲೆ 11 ಶೇರು, ಅವರೆ 11¾ ಈ ಮೇರೆ ಮಾರಿತು.

W. HILL,
Dy. Commr.

ಹಾಸನ ಡಿಸ್ಟ್ರಿಕ್ಟ್.

ಹವಾ—ಬೆಳಿಗ್ಗೆ, ಸಾಯಂಕಾಲ, ರಾತ್ರಿ ಕಾಲಗಳಲ್ಲಿ ತಣ್ಣಗೆ ಯಿತ್ತು. ಕೆಲವು ವೇಳೆ ಮಂಜು ಮುಸುಕುತ್ತಿತ್ತು, ಹಗಲು ಹೊತ್ತು ಪ್ರಕಾಶವಾಗಿಯೂ ಶಖೆಯಾಗಿಯೂ ಇತ್ತು. ಸದರೀ ತಿಂಗಳೊಳಗಾಗಿ ಮಳೆ ಇಲ್ಲವು.

ನೀರು—ಕೆಲವು ದೊಡ್ಡ ಕೆರೆಗಳಲ್ಲಿ ಒಂದೆರಡು ತಿಂಗಳ ನೀರು ಇದೆ, ಸಂಣ ಕೆರೆಗಳಲ್ಲಿ 15 ದಿನಗಳ ಒಂದು ತಿಂಗಳ ನೀರು ಯಿರುತ್ತೆ. ಕೆಲವು ದೊಡ್ಡ ಸಂಣ ಕೆರೆಗಳು ನಿಶ್ಶೇಷವಾಗಿ ಒಣಗಿ ಹೋದವು.

ಜಮೀನ್—ಹಾಸನ ತಾಲ್ಲೂಕಿನಲ್ಲಿ ಮಾತ್ರ 10 ರೂಪಾಯಿಗಳ ಕಂದಾಯವುಳ್ಳ ಜಮೀನ್ ಜಾಸ್ತೀಯಾಗಿ ಸಾಗುವಳಿಗೆ ತೆಗೆದುಕೊಳ್ಳಲ್ಪಟ್ಟಿತು.

ಫಸಲ್—ಮಂಜರಾಬಾದ್ ತಾಲ್ಲೂಕು ಮಲನಾಡು ತಾಲ್ಲೂಕಿನಲ್ಲಿ ಕೋಡೆಭತ್ತದ ಫಸಲು ಚನ್ನಾಗಿದ್ದಂತೆ ತಿಳಿಯಬರುತ್ತೆ, ಹಾಸನ, ಚನ್ನರಾಯಪಟ್ಣ, ಅತ್ತಿಗುಪ್ಪೆ, ನಾಗಮಂಗಲ, ಈ ತಾಲ್ಲೂಕುಗಳಲ್ಲಿ ವೈಶಾಖೀ ಫಸಲು ಅಷ್ಟೇನು ಚನ್ನಾಗಿ ಇಲ್ಲವು, ಸದರೀ ನಾಲ್ಕು ತಾಲ್ಲೂಕುಗಳಲ್ಲಿ ಫಸಲು ಮಳೆ ಇಲ್ಲದೆ ಬಹಳ ಕೆಟ್ಟು ಹೋಯಿತು, ಹಾರನಹಳ್ಳಿ ತಾಲ್ಲೂಕಿನಲ್ಲಿ ಹುರಳಿ, ಕಡಲೆ ಈ ಫಸಲುಗಳು ಮಾತ್ರ ಸಾಧಾರಣ ಸ್ಥಿತಿಯಲ್ಲಿತ್ತು, ಚನ್ನರಾಯಪಟ್ಣ, ಅರಕಲಗೂಡು, ನಾಗಮಂಗಲ, ಹಾರನಹಳ್ಳಿ, ಈ ತಾಲ್ಲೂಕುಗಳೊಳಗೆ ಸದರೀ ಫಸಲ್ ಕಟಾವಾಗಿರುತ್ತವೆ.

ಧಾರಣೆವಾಸಿ—ಆಲೂರು ಸಂತೆಯಲ್ಲಿ ಇದ್ದ ಜಿನಸೀ ಧಾರಣೆ ತಪಶೀಲ್ ಹ್ಯಾಗೆಂದರೆ.—

ಧಾರಣೆ		1876ನೇ ಇಸವಿ ಫಿಬ್ರವರೀ.	1876ನೇ ಜನವರಿ.	1875ನೇ ಫಿಬ್ರವರಿ.
ಅಕ್ಕಿ ಅವ್ವಲ್ ತರಹ	ರೂಪಾಯಿ 1ಕ್ಕೆ	12 ಶೇರು.	ರೂ॥ 1ಕೆ $12\frac{1}{3}$ ಶೇರು	17 ಶೇರು.
ದುಯ್ಯಂ ತರಹ	,, ,,	$13\frac{1}{4}$ ಶೇರು.	,, $17\frac{3}{4}$ ಶೇರು	19 ಶೇರು.
ರಾಗಿ ಡಿಟೋ	,, ,,	20 ಶೇರು.	$22\frac{3}{4}$ ಶೇರು	36 ಡಿ॥
ಹುರಳಿ ಡಿಟೋ	,, ,,	$16\frac{1}{2}$ ಶೇರು.	23 ಶೇರು	20 ಡಿ॥

ಸದರೀ ನಿರಖು ಪಟ್ಟೀಯನ್ನು ನೋಡಿದ್ದರಿಂದ 1876ನೇ ಫಿಬ್ರವರೀಗೂ 1875ನೇ ಫಿಬ್ರವರೀ ತಿಂಗಳಿಗೂ ಇದ್ದ ಧಾರಣೆಯ ವ್ಯತ್ಯಾಸ ಕಾಣಬರುತ್ತೆ.

ಜನಾರೋಗ್ಯ—ಈ ಡಿಸ್ಟ್ರಿಕ್ಟಿನ 9 ತಾಲ್ಲೂಕುಗಳ ಪೈಕೀ 6 ತಾಲ್ಲೂಕುಗಳಲ್ಲಿ ಅಂದರೆ ಬೇಲೂರು, ಮಂಜರಾಬಾದ್, ಅರಕಲಗೂಡು, ನರಸೀಪುರ, ಚನ್ನರಾಯಪಟ್ಣ, ಹಾರನಹಳ್ಳಿ, ಈ ತಾಲ್ಲೂಕುಗಳೊಳಗೆ ಚಳಿಜ್ವರ ವ್ಯಾಪಿಸಿ ಇತ್ತು, ಸದರೀ ಡಿಸ್ಟ್ರಿಕ್ಟಿನಲ್ಲಿ ಉಖಾಲ್‌ಜುಲಾಬ್ ಉಪದ್ರವವೇನು ಇರಲಿಲ್ಲವು.

ಜನಮರಣ—ಕುಲ್ ಸದರೀ ತಿಂಗಳಲ್ಲಿ 344 ಮಂದಿ ಹೋಗಿರುತ್ತಾರೆ, ಜನವರೀ ತಿಂಗಳಲ್ಲಿ 304 ಮಂದಿ ಹೋದರು, 1875ನೇ ಫಿಬ್ರವರಿಯಲ್ಲಿ 277 ಮಂದಿ ಹೋದರು, ಸದರೀ 344 ಮರಣ ಕಾರಣಗಳ ತಪಸೀಲ್,

ಜ್ವರದಿಂದ	217	ಹೊಟ್ಟೇ ಸುಗ್ಗಿನಿಂದ	38
ಸಿಡುಬಿನಿಂದ	1	ಇತರ ಕಾರಣಗಳಿಂದ	88
		ಜುಮ್ಲಾ	344

ಜನನಗಳು—ಸದರೀ ತಿಂಗಳಲ್ಲಿ 134 ಜನನಗಳು ರಿಜಿಸ್ಟರ್ ಮಾಡಲ್ಪಟ್ಟವು, ಆ ಹಿಂದಿನ ತಿಂಗಳಲ್ಲಿ 131 ಜನನಗಳಾದವು.

ದನಗಳು—ಈ ಡಿಸ್ಟ್ರಿಕ್ಟಿನ 9 ತಾಲ್ಲೂಕುಗಳ ಪೈಕಿ ಹಾಸನ, ಬೇಲೂರು, ಮಂಜರಾಬಾದ್, ಅರಕಲಗೂಡು, ನರಸೀಪುರ, ಹಾರನಹಳ್ಳಿ, ಈ ಮೇರೆ 6 ತಾಲ್ಲೂಕುಗಳೊಳಗೆ ದನಗಳಿಗೆ ಕಾಲುಬಾಯಿ ಜ್ವರ ವ್ಯಾಪಿಸಿ ಇತ್ತು, ದರೋಬಸ್ತು ಕಾರಣಗಳಿಂದಲೂ, 1654 ಕಾಲ್ನಡೆ ಹೋಗಿರುತ್ತವೆ, ಜನವರೀ ತಿಂಗಳಲ್ಲಿ 1656 ಕಾಲ್ನಡೆಯೂ, 1875ನೇ ಫಿಬ್ರವರೀ ಮಾಹೇಯಲ್ಲಿ 2532 ಕಾಲ್ನಡೆಯೂ, ಹೋಗಿರುತ್ತವೆ.

R. VIJAYENDRA RAO,
For Offg. Dy. Commr.

ಕೊಡಗು ಡಿಸ್ಟ್ರಿಕ್ಟ್.

ತರೀಜಮೀನ್—ಭತ್ತಾ ತುಳಿಸುವ ಕೆಲಸ ಇನ್ನೂ ನಡಿಯುತ್ತಿದೆ, ಕಾರ್ತೀಕದ ಬೆಳೆಯು ಒಳ್ಳೆ ಸ್ಥಿತಿಯಲ್ಲಿದೆ, ಕಳೇ ಕೀಳುವ ಕೆಲಸ ಪೂರೈಸಿರುತ್ತೆ.

ಕಾಪೀ—ಕಾಫೀಕಾಇಗಳು ಕೀಳುವ ಕೆಲಸ ಪೂರೈಸಿರುತ್ತೆ, ಹಡಗು ಭರ್ತೀ ಮಾಡುವ ಬಗ್ಯೆ ಕಾಫೀ ಫಸಲು ರಪ್ತು ಆಗುತ್ತಾ ಇದೆ, ಮಜೂರೀ ದಾರು ಮತ್ತು ರಪ್ತು ಮಾಡತಕ್ಕ ಬಗ್ಯೆ ಸಾಧನಗಳು ಸಹಾ ಮೈಸೂರಿಂದಲೂ, ಮಲೆಬಾರ್ ಪ್ರಾಂತದಿಂದಲೂ, ಬರುತ್ತಿದ್ದಾರೆ.

ಖುಷ್ಕಿ ಜಮೀನ್—ಕಡ್ಲೆ ಕಟಾವಾಗಿರುತ್ತೆ.

ಮರಣ—ಈ ಶೀಮೆಯ ಜನಗಳ ಪೈಕೀ 218 ಮಂದಿ ಮೃತಪಟ್ಟಿರುತ್ತಾರೆ. ಕಳೆದ ವರುಷ ಇದೇ ತಿಂಗಳಲ್ಲಿ 304 ಮಂದಿ ಮೃತಪಟ್ಟಿರುತ್ತಾರೆ, ಹ್ಯಾಗಂದರೆ.

ಅತಿಸಾರದಿಂದ	12
ಜ್ವರದಿಂದ	184
ಅಕಸ್ಮಿಕ	3
ಇತರ ರೋಗಗಳಿಂದ	17
ಸಿಡುಬಿನಿಂದ	2
ಕುಲ್	218

ಮಡಿಕೆರೆ ತಾಲ್ಲೂಕು	34
ಪಡಿನಾಲ್ಕು ನಾಡು	27
ಯಡೆನಾಲ್ಕು ನಾಡು	22
ಕಿಗ್ಗಟ್ಟುನಾಡು	12
ನಂಜರಾಜಪಟ್ಣ	53
ಏಳುಸಾವಿರ ಶೀಮೆ	47
ಷಹರ್‌ಗಳು	
ಮಹದೇವಪೇಟೆ	14
ವೀರರಾಜೇಂದ್ರಪೇಟೆ	9
ಕುಲ್	218

ಈ ಪೈಕೀ 119 ಗಂಡಸರು 60, ಹೆಂಗಸರು ಮತ್ತು 39 ಹುಡುಗರು, ಅವರುಗಳ ಜಾತಿಗಳ್ಯಾವವಂದರೆ.

ಕೊಡಗರು 28, ಕ್ರಿಸ್ತರು 4, ಹಿಂದೂಗಳು 170, ಮಹಂಮದರು 13, ಇತರ ಜಾತಿಗಳು 3, ಜುಮ್ಲಾ 218.

ಕಾಲ್ನಡೆ;—ಕಾಲ್ನಡೆಗಳ ಪೈಕೀ 458 ಹೋದವು, ಕಳೆದ ವರುಷ ಇದೇತಿಂಗಳಲ್ಲಿ 1216 ಹೋದವು. ಹ್ಯಾಗಂದರೆ.

ಕಾಲ್ವೆಯ ತಳವು ಈಗಲಿರುವದಕ್ಕಿಂತ ನಿಜವಾಗಿ ಯಾವಾಗಲೂ ತಗ್ಗಾಗಿ ಯಿರಲಿಲ್ಲವಾದ್ದರಿಂದಲೂ, ಮಟ್ಟವು
21ನೇ ಮೈಲನಲ್ಲಿರುವದಕ್ಕಿಂತ 9 ಅಡಿಗಳ ಎತ್ತರ ಯಿರುವಂತೆ ಕಾಣಬಂದದರಿಂದ ಕಾಲ್ವೆಯ ಈ ಭಾಗದಲ್ಲಿ ಹ
ರಿದ ನೀರು ಮೈಸೂರಕಡೆ ಹರಿಯುವದಕ್ಕೆ ಬದಲಾಗಿ ಲಕ್ಷ್ಮಣ ತೀರ್ಥಕ್ಕೆ ವಾಪಸ ಹರಿಯಬೇಕಾಗುತ್ತೆ.

24. ಈ ಕಾರಣದಿಂದಲೂ ಸನ್ 1806ನೇ ಇಸವೀಯೊಳಗೆ, ಆನಂದೂರ್ ಅತ್ತರಾಫ್ ಕಾಲ್ವೆಯ ಭಾಗದ
ಲ್ಲಿ ನೌಕರೀ ಇದ್ದ ತುಕಡಿಯ ಮುತ್ಸದ್ದಿಯ ಮಗನು, ತಾನು 1809ನೇ ಇಸವಿಯಲ್ಲಿ ಮೈಸೂರಿಗೆ ಹೋಗಿದ್ದ
ಹಾಗೆ ಜ್ಞಾಪಕವಿದೆಯೆಂತಲೂ ಆಗ ಸಾಯರ್ ಕಟ್ಟೇ ಶೇತುವೆವರಿಗೆ ನೀರು ಬಂದದಕ್ಕಾಗಿ ಮೈಸೂರು ಜನಗಳಿಗೆ
ಕ ವುಂಟಾಗಿರಲು, ಬೆಳಗೊಳದ ಬಳಿ ಕಾಲ್ವೆ ತೆಗೆಯುವ ಕೆಲಸ ಪೂರೈಸಿ ಇರಲಿಲ್ಲವಾಗಿ ಅದು
ಳ ಬಲವಾದ ಮಳೆಯಿಂದ ಹರಿದ ಮೇಲಿನ ನೀರಾಗಿರಬಹುದೆಂದು ತಾನು ಎಣಿಸಿದ್ದಾಗಿಯೂ ನನ
ದಲೂ ಸಹಾ ಯಿದೇ ತೀರುಮಾನವಾದ ಅಭಿಪ್ರಾಯವೆಂದು ಎಣಿಸುವವನಾಗಿ ಯಿದ್ದೆನು,
ನ್ನ ಅಜಮಾಯಿಷೀ ಮಾಡಿ ಗ್ರಾಮಸ್ಥರನ್ನು ತನಖೀ ಮಾಡಿ ಅವರ ಹೇಳಿಕೆಗೆ ಹಳೇ
ಡುವಲ್ಲಿ ನನ್ನ ತಾತ್ಪರ್ಯಗಳನ್ನು ಬದಲಾಯಿಸಲಿಕ್ಕೆ ಯುಕ್ತಗಳಾದ ಕಾರಣಗಳು
ಲೆ ಕಂಡ ಸ್ಥಾನವು, ಅಣಕಟ್ಟೆಯಿಂದ 28 ವ 29ನೇ ಮೈಲ್‌ಗಳ ಮಧ್ಯೆಯಿರು
ಲ್ಲಿ ಯಿದಕ್ಕೆ "ಅಕರ" ಎಂಬ ಹೆಸರಿನಿಂದ ಗೊತ್ತಾಗಿದೆ. ಆಳವಾದ ಕಾಲ್ವೆ

ಯೆಂದರ್ಥವುಳ್ಳ ಬಂಡೆ ಒಡೆದ ಹೆಚ್ಚಾದ ಆಳವು ಷುಮಾರ್ 64 ಅಡಿಗಳು ಯಿದೆ. ಆ ಯಾಳದಲ್ಲಿ ಮೈಸೂರ ರಾಜಪೂತ್ ವಗ್ಯೆರೇ ಘಾಟೀಗಳಲ್ಲಿರುವಂತೆ ಅನೇಕ ವಳ್ಳೀ ಜಲೆಗಳಿದ್ದು ಅವುಗಳಲ್ಲಿ ವಿಸ್ತಾರವಾಗಿ ನೀರು ಬರುತ್ತೆ.

25. ಸರ್ 1865ನೇ ಯಿಸವೀಯಲ್ಲಿ ಮೆಸ್ಟರ್ ಜೋಹರ್ ಯೆಂಬುವರಿಂದ ತಯಾರ್ ಮಾಡಲ್ಪಟ್ಟ ಪೂರ್ಣಯ್ಯನವರ ಕಾಲ್ವೆಯ ಸರ್ವೇದೆಸೆಯಿಂದ ಆ್ಯ ನೀರಾವರಿಯು 17ನೇ ವ 18ನೇ ಮೈಲುಗಳ ಮಧ್ಯೆ ನಿಂತುಹೋದಂತೆಯೂ ಆದರೆ ತತ್ಪೂರ್ವವೇ ಕೆಪ್ಟನ್ ಜಾರ್ಸರ್ಯವರು 21ನೇ ಮೈಲಿಗೆ ಆಚೆಗೂ ತೆಗದುಕೊಂಡು ಹೋಗಿದ್ದಂತೆಯೂ ತಿಳಿಯುಬರುತ್ತೆ. ಹೊಂಗಹಳ್ಳಿ ಗ್ರಾಮದ ಜಮೀನುಗಳು 21ನೇ ಮೈಲಿಗೂ 24ನೇ ಮೈಲಿಗೂ ಮಧ್ಯೆ ಯಿರುವದರಿಂದ ಆ ಗ್ರಾಮದ ರೈತರು ನಾಲೇ ಕೆಳಗಣ ತರೀ ಜಮೀನುಗಳನ್ನು ಸಾಬಕು ಸಾಗುವಳೀ ಮಾಡಿದಂತೆ ತಿಳಿಸುತ್ತಾರೆ. ಕೆಲವರು 15 ವರುಷಗಳ ಹಿಂದಿನವರಿಗೇತಲೂ, ಹೆಚ್ಚು ಸಂಖ್ಯೆಯುಳ್ಳ ಜನರು, ನೀರಿಲ್ಲದ ಸಬಬ್ ಈಚೆಗೆ 40 ಯಾ 45 ವರುಷಗಳಿಂದಲೂ ಸಾಗುವಳೀ ಯಿಲ್ಲವೆಂತಲೂ ಹೇಳುತ್ತಾರೆ.

26. ಕಾಲ್ವೆಯ ನೀರು ಮೈಸೂರುವರಿಗೆ ಸಮಗ್ರವಾಗಿ ಹರಿಯುತ್ತಲಿದ್ದಂತೆ ಯಿವರುಗಳ ಪೈಕಿ * ಬಬ್ಬ ಮುದುಕನಿಗೆ ಜ್ಞಾಪಕವಿರುತ್ತೆ. 26 ವ 36ನೇ ಮೈಲುಗಳ ಮಧ್ಯೆ ಇರುವ ಬೆಳಗೊಳ, ಹೊಸಹಳ್ಳಿ, ನಾಗನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳೊಳಗೆ ವಾಸಮಾಡುವ ಇತರ ಜನಗಳು † ನೀರು ಬರುತ್ತಿದ್ದ ಮತ್ತು ತಾವು ಕಾಲ್ವೆ ನೀರು ಜಮೀನುಗಳಿಗೆ ಬಿಟ್ಟುಕೊಳ್ಳಲಿಕ್ಕೆ ಉಪಯೋಗಿಸುತ್ತಿದ್ದ ತೂಬುಗಳನ್ನು ತೋರಿಸುವದಲ್ಲದೆ, ಸರ್ಕಾರದ ಬಟಾಯಿ ಧಾನ್ಯವು ಶ್ರೀರಂಗಪಟ್ಟಣದ ಸರ್ಕಾರ್ ಕಣಜಕ್ಕೆ ಸಾಗಿಸಲ್ಪಟ್ಟಂತೆಯೂ ತೋರಿಸುತ್ತಾರೆ. ಮತ್ತು ಒಂದೆರಡು ಸಂಗತಿಗಳಲ್ಲಿ ಪಟ್ಟೆಗಳನ್ನೂ ಲೆಕ್ಕದಾಖಲೆಗಳನ್ನೂ ತೋರಿಸಿದ್ದರಿಂಗ ಅವರ ಹೇಳಿಕೆಗಳು ಸಿ... ಟ್ಟಿರುತ್ತವೆ.

1. * ಚಲುವೇಗೌಡ ಲಿಂಗಣ್ಣ.
1. † ಬೆಳಗೊಳದ ಬೋರ.
2. ಬೆಳಗೊಳದ ನಂಜೇಗೌಡ.
3. ಹೊಸಹಳ್ಳಿ ನಿಂಗೇಗೌಡ.
4. ನಾಗನಹಳ್ಳಿ ಕೆಂಪೇಗೌಡ.
5. „ ತಿಮ್ಮೇಗೌಡ.
6. „ ನಂಜೈಯ.
7. „ ಹುಚ್ಚೇಗೌಡ.
8. „ ಕನ್ನಮನೇ ಗೌಡ.
9. „ ಜೋಗಿ ಚಿಕ್ಕ.
10. „ ಕೆಮ್ಮಣ್ಣ.
11. ಲಕ್ಷ್ಮೀಪುರದ ತಿಮ್ಮೇಗೌಡ.

27. ಮೈಸೂರಿಗೆ, ಮೊಣಕಾಲು... ಳ ನೀರು ಹರಿದದ್ದನ್ನು ನೋಡಿದಂತೆ ಕೆಲವರಿಗೆ ಜ್ಞಾಪಕವಿದೆ, ಇತರರು, ತಾವು ಸೋಮವಾರ ಸೋಮವಾರ ಸಾಗರಕಟ್ಟೇ ಸಂತೆಗೆ ಹೋಗುತ್ತಿದ್ದಾಗ ದಾರೀಯಲ್ಲಿ ಆ ನೀರು ನಿರ್ಮಲವಾಗಿಯೂ, ಮಧುರವಾಗಿಯೂ ಇದ್ದದ್ದರಿಂದ ಅದನ್ನು ಸಾಮಾನ್ಯವಾಗಿ ಕುಡಿಯುತ್ತಿದ್ದರು. ಮತ್ತು ಕಾಲ್ವೆಯಲ್ಲಿ ಜೂನ್ ತಿಂಗಳು ಮೊದಲು ಆ... ಕ್ಟೋಬರ್ ಯಾ ನವಂಬರ್ ತಿಂಗಳವರಿಗೆ ಕ್ರಮವಾಗಿ 5 ತಿಂಗಳು ನೀರು ಹರಿಯುತಿದ್ದದರಿಂದ ಇದು ಹೊಳೇನೀ... ರೇ ಹೊರತು ಮೇಲಿನ ಭೂಮಿಗಳಲ್ಲಿ ಹರಿದ ನೀರಲ್ಲವೆಂದು ಸರ್ವರೂ ಅಂಗೀಕರಿಸುತ್ತಾರೆ.

28. ಮು... ಯ ನಾಲೆಯಿಂದ ನಾಗನಹಳ್ಳಿಯಲ್ಲಿ 500ಗಜಗಳ ಫಾಸಲೇಯುಳ್ಳ ಒಂದು ಸಣ್ಣಕಾಲ್ವೆ ತೆಗಿಸಲ್ಪಟ್ಟು ಅದರ... ಕೆಳಗೆ ಇರುವ ಜಮೀನುಗಳಿಗೆ ನೀರಾವರಿ ಯಾಗುತಿತ್ತು.

29. ಮೈಸೂರಿಗೆ ಇನ್ನೂ ಸಮೀಪದಲ್ಲಿಯೂ ಮತ್ತು 40—41ನೇ ಮೈಲುಗಳ ಮಧ್ಯದಲ್ಲಿ ಮೈಟಿಗಳ್ಳಿ ಬಳೀಲಿ ಕಾವೇರೀ ನೀರಿನಿಂದ ನೀರಾವರಿ ಮಾಡಲ್ಪಟ್ಟ ದಳವಾಯಿ ತೋಟದಲ್ಲಿಯೂ ತರೀ ಫಸಲು ಇಡಲ್ಪಟ್ಟಂತೆ ಸಹ ರುಜುವಾಗಿದೆ. ಕಾಲ್ವೆಯಲ್ಲಿ ಸಂತತವಾಗಿ ಸೊಂಟಕ್ಕೂ ಆದಕ್ಕೂ ಹೆಚ್ಚಾದ ಆಳಕ್ಕಿಂತ ಅಧಿಕವಾಗಿಯೇ ನೀರು ಹರಿಯು ತಿದದ್ದರಿಂದ ಬಾಳೇ ಕಂಭಗಳ ತೆಪ್ಪದಮೇಲೆ ಪ್ರತಿದಿನವೂ ಯಾವಸ್ಥಳದಲ್ಲಿ ಕಾಲ್ವೆಯನ್ನ ದಾಟುತಿದ್ದರೋ ಆಸ್ಥಳವನ್ನು ಆತೋಟದಲ್ಲಿ ಕೆಲಸಮಾಡುತಿದ್ದ ರೈತರ ಪೈಕಿ ಕೆಲವರು ನನಿಗೆ ತೋರಿಸಿದರು.

30. ಮೈಸೂರಿಗೆ ಹೋಗುವ ಯೆರಡು ರಸ್ತೆಗಳು ಯಾವ ಸ್ಥಾನದಲ್ಲಿ ಕವುಲು ಒಡೆಯುತ್ತ ಮತ್ತು ಯಾವ ಸ್ಥಾನದೊಳಗೆ ಪೂರ್ವದಲ್ಲಿ ಚಾವ-ರಾಜ ಪೇಟೆಯೆಂಬ ಒಂದು ಪೇಟೆ ಯಿತ್ತೋ, ಆಸ್ಥಳಕ್ಕೆ ಪದಲ್ಲಿ ಜೆಯಿಲಿನ ಕೆಳಭಾಗಕ್ಕೆ ಸುತ್ತಿಕೊಂಡು ಹೋಗುತ್ತಿರುವ ಕೇಸರಾಯಿ ಕಾಲ್ವೆಯ ಕೆಳಗೆ

ಬಟಾಯಿಗೆ ಯಾ ವಾರಕ್ಕೆ ಭತ್ತ ಸಾಗುವಳೀ ಯಾಗುತ್ತಿತ್ತು. ಈ ಜನಗಳೊಳಗೆ ಹೆಚ್ಚು ಸಂಖ್ಯೆಯ ಜನರು ಸಾಗುವಳೀ ಮಾಡಿದಕಾಲ ಪ್ರಮಾಣವು ಯೆರಡು ವರುಷಗಳೆಂತಲೂ ಮೂರನೇ ವರುಷದಲ್ಲಿ ಫಸಲ್‌ಗಳು ಫೈಲಿಕ್ಕೆ ಬರುವದಕ್ಕೆ ಮುಂಚಿತವಾಗಿಯೇ ನೀರುಬರುವದು ನಿಂತು ಹೋಯಿತೆಂತಲೂ ಹೇಳುತ್ತಾರೆ. ಹಾಗೆನಿಂತು ಹೋದದ್ದಕ್ಕೆ 28—29ನೇ ಮೈಲುಗಳ ಮಧ್ಯೆ ಇರುವ ಆಳವಾದ ಕಾಲಿವೆಯೊಳಗೆ ಬಾರ್‌ಬಾರ್ ಬಂಡೇ ಪಡೆಯುವದರಿಂದ ಭೂಮಿ ನಡುಗಿ ಕಾಲ್ವೆಯ ಪಕ್ಕೆಗಳಲ್ಲಿನ ಕಲ್ಲು ಮಂಣು ಕಳಚಿ ಬೀಳುವದರಿಂದ ಕವಿತು ಕೊಳ್ಳುವ ಬೆಟ್ಟ ಗುಂಡುಗಳ ದೆಸೆಯಿಂದ ನೀರು ಅಟಕಾವ್ ಆದಂತೆ ಬೆಳಗೊಳ ಪ್ರಾಂತ್ಯದ ಜನಗಳು ಹೇಳುತ್ತಾರೆ.

31. ಷುಮಾರ್ ಅದೇಕಾಲದಲ್ಲಿ ನಾಗನಹಳ್ಳಿ ಯೆಂಬ ಸ್ಥಳದಲ್ಲಿ ಕಾಲ್ವೆ ಒಡದು ಹೋಯಿತು; ಮತ್ತು ಆ ಭಾಗದುರಸ್ತಾಗದ ಸಬಬ್ ನೀರು ಆದುವರಿಗೆ ಬಂದಿದ್ದ ಪಕ್ಷಕ್ಕೆ ಮುಂದಕ್ಕೆ ಹರಿಯುವದಕ್ಕಿಲ್ಲದೆ ಅಟಕಾವಾಗಿ ಹೋಗಿಯಿರುವದು.

32. ಈ ಯಂಶಗಳು ನಿಜವೇಯೋ ಯೆಂದು ನಿಶ್ಚಯಿಸುವ ಉದ್ದೇಶದಿಂದ 1800ನೇ ಇಸಿವೀ ಮೊದಲುಗೊಂಡು ಉಂಟಾದ ಲೆಕ್ಕಗಳನ್ನು ಆಜಮಾಯಿಷಿ ಮಾಡಿದ್ದಾಯಿತು. 1809—10ನೇ ಶುಕ್ಲ ಸಂವತ್ಸರದ ಲೆಕ್ಕಗಳಲ್ಲಿ ಕೆಲವು ದಾಖಲೆಗಳವೆ ಅವುಗಳಂದ, ಸದರೀ ಸಾಲ್‌ನಲ್ಲಿ 21 ವ 47 ಈ ಮೈಲುಗಳ ಮಧ್ಯೆ ಯಿರುವ ಕೆಲವು ಗ್ರಾಮುಗಳೊಳಗೆ 243 ಖಂಡೀ 15 ಕೊಡೊ 2 ಪಡಿಗಳ ಬೀಜವರೀಯುಳ್ಳ ಜಮೀನ್‌ನಲ್ಲಿ ತರೀ ಸಾಗುವಳೀ ಯಾದಂತೆ ದಾಖಲೇಗಳವೆ. ಅಷ್ಟಗ್ರಾಮ ತಾಲ್ಲೂಕಿನಲ್ಲಿ ನೀರಾವರೀಯಾದ 144 ಖಂಡೀ ಜಮೀನಿನಲ್ಲಿ ಕಂದಾಯಕ್ಕೆ ಬದಲಾಗಿ 921 ಖಂಡೀ ಭತ್ತ ರಾಜಪಾಲ್ ಬಾಬತು ಸರಕಾರಕ್ಕೆ ಬಂದಿರುತ್ತೆ. ಇದರ ತಪಶೀಲ್ ಹ್ಯಾಗಂದರೆ.:—

		ಸಾಗುವಳಿಯಾದ ಬೀಜವರಿ. ಖಂ.	ಕೊ.	ಪ.	ಸರ್ಕಾರಕ್ಕೆ ಬಂದ ಭತ್ತ. ಖಂ.	ಕೊ.	ಪ
	ಅಷ್ಟಗ್ರಾಮ ತಾಲ್ಲೂಕು.						
20 ವ 21ನೇ ಮೈಲ್	ಹೊಂಗಹಳ್ಳಿ	60	15	1	506	5	0
24 ವ 25ನೇ ಮೈಲ್	ಬಲಮುರಿ	47	14	10	193	14	2
26 ವ 27ನೇ ಮೈಲ್	ಹುಲಿಕೆರೆ	5	5	4	39	18	12
ಡಿಟೋ	ಬೆಳಗೊಳ	4	2	1	58	17	4
34 ವ 35ನೇ ಮೈಲ್	ಪುರ	6	17	11	31	7	8
	ಅಂಣಿಗನಹಳ್ಳಿ	13	8	0	42	19	8
	ಮಗಕೇನಹಳ್ಳಿ	5	3	10	38	8	0
	ಜಕ್ಕನಕುಪ್ಪೆ	6	15	2	9	9	4
	ಜುಂಲಾ....	144	16	4	921	0	0
	ಮೈಸೂರು ತಾಲ್ಲೂಕು.						
30 ವ 36ನೇ ಮೈಲ್	ಲಕ್ಷ್ಮೀಪುರ	6	13	0	0	0	0
	ನಾಗನಹಳ್ಳಿ	54	2	8	0	0	0
	ಸಾದೇನಹಳ್ಳಿ	9	16	3	0	0	0
	ಸಿದ್ದಲಿಂಗಾಪುರ	0	0	0	ಗೊತ್ತಿಲ್ಲ.		
	ಮೈಟಗಳ್ಳಿ	28	7	3			
	ಬೆಳವಟ್ಟ	0	0	0			
	ಜುಂಲಾ....	98	18	14	0	0	0
	ಒಟ್ಟು ಜುಂಲಾ..	243	15	2	0	0	0

33. ಸರ್ 1810—11ನೇ ಪ್ರಮೋದೂತ ಸಂವತ್ಸರದ ಬಾಬತು ಬದಸ್ತೂರ್ ತಖ್ತೆಯಲ್ಲಿ 21ನೇ ಮೈಲಿ
ಗೂ 35ನೇ ಮೈಲಿಗೂ ಮಧ್ಯೆ ಇರುವ ಕೆಲವು ಗ್ರಾಮಗಳೊಳಗೆ ಆದ ಉತ್ಪತ್ತಿ ಪೈಕಿ ರಾಜಪಾಲ್ ಬಾಬತು ಸ
ರ್ಕಾರಕ್ಕೆ 413 ಖಂಡೀಗಳ ಭತ್ತ ಬಂದಿರುತ್ತೆ, ಇದರ ತಪಶೀಲ್ ಹ್ಯಾಗಂದರೆ:—

	ಅಷ್ಟಗ್ರಾಮ ತಾಲ್ಲೂಕು	ಸರ್ಕಾರಕ್ಕೆ ಬಂದ ಭತ್ತ ಖಂ.	ಕೊ.	ಪ.
21ನೇ ವ 22ನೇ ಮೈಲ್	ಹೊಂಗಹಳ್ಳಿ	306	14	12
24ನೇ ವ 25ನೇ ಮೈಲ್	ಬಲಮುರಿ	41	12	0
26ನೇ ವ 27ನೇ ಮೈಲ್	ಹುಲಿಕೆರೆ	4	0	0
ಡಿಟೋ	ಬೆಳಗೊಳ	3	2	12
	ಪುರ	14	4	1
	ಅಣ್ಣಿಗಾನಹಳ್ಳಿ	0	0	0
	ಮೆಗರೇನಹಳ್ಳಿ	44	4	4
34ನೇ ವ 35ನೇ ಮೈಲ್	ಜಕ್ಕನಕುಪ್ಪೆ	0	0	0
	ಜುಮ್ಲಾ.	413	18	12

34. ಮೈಸೂರು ತಾಲ್ಲೂಕಿನಲ್ಲಿ 35ನೇ ಮೈಲಿಗೆ ಚಿಗೆ ನೀರಾವರಿಯಾದ ಜಮೀನ್ಗಳು 86 ಖಂಡುಗ
1 ಕೊಡೋ, 3 ಪಡಿ ಇದ್ದವು, ಹ್ಯಾಗಂದರೆ.

	ಲಕ್ಷ್ಮೀಪುರ	24	7	8
	ನಾಗನಹಳ್ಳಿ	30	15	0
35ನೇ ವ 36ನೇ ಮೈಲ್	ಸಾದೇನಹಳ್ಳಿ	9	15	0
	ಸಿದ್ದಲಿಂಗಾಪುರ	0	0	0
37ನೇ ವ 38ನೇ ಮೈಲ್	ಮೈಟಗಳ್ಳಿ	0	0	10
40ನೇ ವ 41ನೇ ಮೈಲ್	ಬೆಳವಟ್ಟ	20	3	11
42ನೇ ವ 44ನೇ ಮೈಲ್	ಸುಂದಹಳ್ಳಿ	0	0	0
	ಜುಮ್ಲಾ....	86	1	3

35. ಸರ್ 1809—10ನೇ ಇಸವಿಯಲ್ಲಿ ಕೇಸರಾಯಿ ಕಾಲ್ವೆ ಕೆಳಗೆ ಸಾಗುವಳೀಯಾದ ತರೀ ಜಮೀನಿನ
ಬೀಜವರಿಯು, ರೆಕಾರ್ಡ್ ನಾಶವಾದ್ದರಿಂದ ಇಷ್ಟೆಂತ ಗೊತ್ತಾಗಿರುವದಿಲ್ಲವು. ಪರಂತು ಕೆಲವರು ತಮ್ಮಿಂದ ಸಾ
ಗುವಳಿಯಾದ ಜಮೀನ್ಗಳನ್ನು ತೋರಿಸುತ್ತಾರೆ, ಮತ್ತು 15 ಮೈಲ್‌ಗಳ ಕಾಲ್ವೆ ಕೆಳಗೆ ಇರುವ ನೀರಾವರೀಯಾ,
ಗತಕ್ಕ ಜಮೀನ್ ಪೈಕಿ ಪ್ರಾಯಶಃ ಅರವಾಸಿ ಮಟ್ಟಿಗೆ ಬಟಾಯಿ ಸಾಗುವಳೀಯಾದಂತೆ ಮುದುಕರಾದ ಗ್ರಾಮಸ್ಥ
ರ ಪೈಕಿ ಕೆಲವರು ಹೇಳುತ್ತಾರೆ.

36. ಸದರೀ ಕಡೇ ತಖ್ತೆ ಸಂದೇಹಾಸ್ಪದವೆಂತ ಎಣಿಸುತ್ತೇನೆ. ಆದರೆ, ಸರ್ 1808—9ನೇ ವಿಭವ ಸಂವತ್ಸ
ರದ ಲೆಖ್ಖದಿಂದ ದಾಖಲೆ ಬಂದಿರುವ ಪ್ರಕಾರ ಕೆಲವು ಮಟ್ಟಿಗೆ ಹಾಗೆ ಸಾಗುವಳೀಯಾದಂತೆ ವ್ಯಕ್ತವಾಗುತ್ತೆ.
ಲಕ್ಷ್ಮಣತೀರ್ಥ ಹೊಸಕಟ್ಟೆಗೂ, ಕೇಸರಾಯಿಕಾಲ್ವೆ ಮೇಲಣ ದೇವನೂರು ಕೆರೆಗೂ, ಮಧ್ಯೆ 84 ಫರ
ಗಳ ಕಂದಾಯವುಳ್ಳ 278 ಖಂಡೀಗಳಿಗಿಂತ ಜಾಸ್ತೀಯಾದ ಖುಷ್ಕೀ ಜಮೀನು ತರೀ ಸಾಗುವಳೀ ಕೆಳಗೆ ತರ

ಟ್ಸಂತೆಯೂ, ಹೊಸದಾಗಿ ತರೀ ಸಾಗುವಳೀ ಕೆಳಗೆ ಬಂದ ‹‹ಬೆಂಗಾಡು'' ಯೂ ಬಂಜರ್ ಜಮೀನ್ನಲ್ಲಿ ಆದ ಫಸಲ್ ಪೈಕಿ ಮೂರರಲ್ಲೊಂದಂಶ ಅಂದರೆ 1390 ಖಂಡೀ 4 ಕೊಡೊ, 8 ಪಡಿ, ಶಿವಾಯಿ ಸದರೀ ಜಮೀನಿಂದ 713 ಚಿಲ್ಲರ್ ಖಂಡೀಗಳ ಭತ್ತ ಬಂದಿರುವದಾಗಿಯೂ ಸದರೀ ಲೆಕ್ಕದಲ್ಲಿ ನಮೂದಿದೆ.

37. ಸನ್ 1810ನೇ ಇಸವಿ ಫಿಬ್ರವರೀ ಮಾಹೇಯಲ್ಲಿ ಹೂಳು ತೆಗೆಯಿಸುವದು, ಜರೂರಾದ ಕಡೆಯಲ್ಲಿ ತೂಬುಗಳೂ, ಕಲ್ಲುಗಳೂ, ಇಟ್ಟು ಹೊಲಗಳಿಗೆ ನೀರು ಬಿಡುವದಕ್ಕೆ ಹುಕ್ಕುಂ ಆಯಿತು. ಈ ಕಾಮಗಾರೀಗಳಿಗೂ ದೇವನೂರು ಕಾಲ್ವೆಗೂ 1293 ವರಹಾಗಳು ವೆಚ್ಚವಾಗಿದೆ. ಆನಂದೂರಿಗೂ, ದೇವನೂರಿಗೂ, ಮಧ್ಯೆ ಚಾನೆಲ್ ಕನ್ಸರ್ವಾನ್ಸಿ ಯಾನೇ ನಾಲಾ ಸಂರಕ್ಷಣೇ ಬಗ್ಯೆ ಒಂದು ವಿಶೇಷ ಶಿಬ್ಬಂದಿಯೂ ಇದರ ಪಕ್ಕದಲ್ಲಿ ಕಂಡ ಪ್ರಕಾರ ಪೂರ್ವವೇ ಯೇರ್ಪಾಡಾಗಿತ್ತು.

	ವ.—ಹ.	
1 ಶೇಕದಾರ್	3—0	ಆನಂದೂರು ಭಾಗಕ್ಕೆ.
1 ಮಣೇಗಾರ್	1—5	
1 ಮಣೇಗಾರ್	1—0	
1 ಶಾನಭಾಗ	2—0	
1 ಅದ್ದಿಕ	1—0	
1 ಅದ್ದಿಕ	1—0	
8 ಸವಾದಿಗಳು ದರ ಇಸಂ 3 ಹಣ ಪ್ರಕಾರ ..	2—4	
ಜುಮ್ಲಾ ..	11—9	

1 ಶೇಕದಾರ್	1—0	ಬೆಳವಟ್ಟದಿಂದ ದೇವನೂರು ಕಾಲಿವೆ ಅಥವಾ ಕೇಸರಾಯಿ ಕಾಲಿವೆಯ ವರೆಗೆ.
1 ಶಾನಭಾಗ	1—5	
1 ಅದ್ದಿಕ	1—0	
1 ಅದ್ದಿಕ	1—0	
4 ನೀರುಗಂಟಿ ದರ ಇಸಂ 3 ಹಣ ಪ್ರಕಾರ ..	1—2	
ಜುಮ್ಲಾ ..	5—9	

38. ಆನಂದೂರು ಶಿಬ್ಬಂದಿ ಇಟ್ಟುಕೊಳ್ಳಲ್ಪಟ್ಟಿತು, ಪರಂತು ಕೇಸರಾಯಿ ಭಾಗದ ಶಿಬ್ಬಂದಿಯು ಅನಾವಶ್ಯಕವಾದ್ದರಿಂದ 1814ನೇ ಇಸವಿಯಲ್ಲಿ ಮೌಕೂಫ್ ಮಾಡಲ್ಪಟ್ಟಿತು.

39. ಕಾಲ್ವೆಯಿಂದ ನೀರು ಮೈಸೂರಿಗೆ ಬಂತೆಂಬ ವಿಷಯವು ನಾನು ತಿಳಿಸಿದ್ದರ ಮೇಲೆ ಇನ್ನೂ ಆಕ್ಷೇಪಿಸಲ್ಪಡುವದೆಂದು ನಾನು ಭಾವಿಸಲಾರೆನು. ನೀರು ಜಮಾಯಿಸಲಿಕ್ಕೋಸ್ಕರ ದೊಡ್ಡಕೆರೆ ಉದ್ದೇಶಿಸಲ್ಪಟ್ಟಿತೆಂದು ಭಾವಿಸಿದ್ದರಿಂದಲೂ, ಬೆಳಗೊಳದಲ್ಲಿ ಬಂಡೇ ಕತ್ತರಿಸಿದ ಹಳ್ಳದಲ್ಲಿ ಯ ಕಾಲ್ವೆಯ ತಳವನ್ನು ಕುರಿತು ತಿಳಿಯಬಂದ ಸಂಗತಿ ನ್ಯೂನವಾಗಿ ಇದ್ದದರಿಂದಲೂ, ಸದರೀ ತಪ್ಪು ಉಂಟಾಗಿರುತ್ತೆ.

40. ಈ ಬಂಡೆಯು ದೆಸೆಯಿಂದ ಉಂಟಾದ ನಿರೋಧವು ಬಹಳ ಪ್ರಬಲವಾಗಿದ್ದಂತೆ ತಿಳಿಯ ಬರುತ್ತೆ. ಹ್ಯಾಗೆಂದರೆ, ಸದರೀ ಕಾಮಗಾರೀ ನಿಂತು ಹೋಗುವದೆಂದು ಹೆದರಿದ ತಿಪ್ಪಯ್ಯ ವಗೈರೇರು ಆ ಸಂಗತಿಯನ್ನು ಪೂರ್ಣಯ್ಯನವರಿಗೆ ತಿಳಿಸಲು ಅವರು ಆಕರವೆಂಬ ಸ್ಥಳದಲ್ಲಿ ಗುಡಾರ ಹೊಯಿಸಿ ಸದರೀ ಸ್ಥಳವನ್ನು ಹೋಗಿ ನೋಡಿ ಯೆಷ್ಟು ಲಾಗವಡು ತಗಲಿದಾಗ್ಯೂ ಕಾಮಗಾರೀ ನಡೆಯತಕ್ಕದ್ದೇ ಸರಿಯೆಂದು ಗೊತ್ತು ಮಾಡಿ ಆ ಮೇರೆ ನಡೆಯುವ ಬಗ್ಯೆ ಕೆಲವು ಕಾಲ ಅಲ್ಲಿಯೇ ತಾವು ಖುದ್ದು ಇದ್ದರು.

41. ಈ ಕಾಮಗಾರೀಯನ್ನು ಪೂರ್ಣಯ್ಯನವರು ನೆರವೇರಿಸಿದರೆಂಬ ಅಂಶದಲ್ಲೂ, ಕಾಲ್ವೆಯಲ್ಲಿ ಮೇಲಿಂದ ಬಿದ್ದ ಕಲ್ಲುಗಳನ್ನೂ, ಗುಂಡುಗಳನ್ನೂ, ತೆಗೆಸಿ ಹಾಕುವದಕ್ಕಿಂತ ಹೆಚ್ಚಾಗಿ ಅಗಿಸಬೇಕಾದ ಜರುರಿಲ್ಲವೆಂತ ಮೇ॥ ಕೊ ಹರ್ಡಿಯವರು 1865ನೇ ಇಸವಿಯಲ್ಲಿ ರಿಪೋರ್ಟು ಮಾಡಿದ್ದು ಸರಿಯಾಗಿತ್ತೆಂಬ ಅಂಶದಲ್ಲೂ, ನನಗೆ ಸಂದೇಹವಿಲ್ಲವು. ವಿಸ್ತಾರವಾಗಿ ಕಲ್ಲುಗಳು ಗುಂಡುಗಳು ಜರಿಗಿ ಬಿದ್ದಂತೆ ಗ್ರಾಮಸ್ಥರು ಹೇಳುವ ಅಂಶಗಳಿಗೆ ಸದರೀ ಅಭಿಪ್ರಾಯವು ತಾಳೇ ಬೀಳುವದಲ್ಲದೆ ಕಾಲ್ವೆಯ ತಳದಲ್ಲಿ ಅಗಿಯಿಸಿ ಅಜಮಾಯಿಷೀ ಮಾಡಿದ್ದರಿಂದ ಸ್ಥಿರಪಡಿಸಲ್ಪಟ್ಟಿತು. ತುಂಬಿ ಯಿರತಕ್ಕ ಹೂಳೆಂಬದು ಪಕ್ಕಗಳಿಂದ ಕಳಚಿ ಬಿದ್ದ ನುರಿಗಲ್ಲು ಪೆಳ್ಳೆಗಳೇ ಹೊರತು ಇನ್ನು ತೆಗೆದು ಹಾಕಬೇಕಾಗಿ ಬಾಕೀಯಿರುವ ಘಟ್ಟಿ ಕಲ್ಲುಗಳಲ್ಲವೆಂದು ವ್ಯಕ್ತವಾಗುತ್ತದೆ.

42. ಕಾಲ್ವೆಗಳಿಗೆ ಸಂಬಂಧಿಸಿದ ಯಾವ ಕಾಮಗಾರೀಯನ್ನಾಗಲಿ ವಹಿಸಲಿಕ್ಕೆ ಪ್ರಬಲಗಳಾದ ಯೆರಡು ಆಕ್ಷೇಪಗಳು ಮಾಡಲ್ಪಟ್ಟವೇನಂದರೆ,—ಒಂದನೇದು, ಕಾಲ್ವೆಯಲ್ಲಿ ಹೂಳುತೆಗೆಸಿ ಇಳಿಸಿದರೆ ಕಾವೇರೀ ನದಿ

ಯಿಂದ ನೀರು ಬಂದರೂ ಇಲ್ಲದಷ್ಟು ಅತ್ಯಲ್ಪವಾಗಿರುವದು. ಯಾತಕ್ಕಂದರೆ—ತಿಪ್ಪೂರು ಅಣಕಟ್ಟೆ ಬಳಿ ಕಾಲ್ವೆಯ ಮೊದಲು ಭಾಗ 20 ಅಡಿ ಅಗಲ ಮಾತ್ರ ಯಿರುವದರಿಂದಲೂ ಹೆಚ್ಚು ಪ್ರವಾಹ ಬಂದಲ್ಲಿ 3 ಅಡಿಗಳ ಪ್ರಮಾಣ ಮಾತ್ರವೇ ನೀರು ಬರುವದರಿಂದಲ್ಲೂ, ಲಕ್ಷ್ಮಣ ತೀರ್ಥದ ನೀರು ಸಹಾಯದಿಂದ ಸಹ ಕಟ್ಟೆಯಿಂದ 21ನೇ ಮೈಲಿಗೆ ಆಚೆಗೆ ಸಾಗುವಳೀ ಮಾಡಲಿಕ್ಕೆ ಆಗುವದಿಲ್ಲವು.

43. ಕಾಲ್ವೆಯು, ನಾನು ಮೇಲೆ ತಿಳಿಸಿದ ಪ್ರಕಾರ ಪ್ರಥಮತಃ ನೀರಾವರೀ ಕೆಲಸಕ್ಕಾಗಿ ಉದ್ದೇಶಿಸಲ್ಪಟ್ಟದ್ದಲವು. ಕರ್ನಲ್ ವಿಲ್ಕ್ಸ್ ಯವರು ಬರದ್ದೇನಂದರೆ ಮೈಸೂರಿಗೆ ಮೇಲ್ಗಡೆ ಹೊಸದಾಗಿ ಯೇನೂ ಸಾಗುವಳೀ ಉದ್ದೇಶಿಲ್ಪಡಲಿಲ್ಲವು. ಸದರೀ ಪಟ್ಟಣದ ಮೊದಲು, ನಂಜನಗೂಡಿಗೆ ಮೇಲ್ಭಾಗಕ್ಕೆ ಬಟ್ಟು ನದಿಯಲ್ಲಿ ಸೇರುವದಕ್ಕಾಗಿ ಯೆಲ್ಲಿ ಕಾಲ್ವೆಯು ಹರಿಯುತದೋ ಅಂತಾ ಕಪಿಲಾ ನದಿಯ ವರಿಗೆ 12 ಮೈಲ್‌ಗಳ ಫಾಸಲೆಯಿರುತ್ತೆ. ಆ ಪ್ರಾಂತದಲ್ಲಿ ಇದ್ದ ಮಟ್ಟಿಗೆ ವಿಶೇಷ ಜನ ಸಂಖ್ಯೆಯುಳ್ಳ ಕೆಲವು ಗ್ರಾಮಗಳ ಸಮೀಪಕ್ಕೆ ಹೋಗುವಾಗ್ಯೆ ಜಾಸ್ತೀ ನೀರಿನ ಪೈಕಿ ಅನುಭವತಃ ಯುಕ್ತವಾದಷ್ಟು ನೀರನ್ನು ಉಪಯೋಗಿಸುವಂತೆ ತಿಳಿಸಲ್ಪಟ್ಟಿತು.

ಫೋರ್ಟ್ ಸೆಂಟ್ ಜಾರ್ಜ್ ಗವರ್ನಮೆಂಟ್ ಚೀಫ್ ಸೆಕರಟರಿಯವರಿಗೆ ಬರೆದ 1807ನೇ ಮಾರ್ಚಿ 27ನೇ ಮುರ್ಕುಂ ಲೆಟ್ಟರಿನ 9ನೇ ಕಲಂ.

44. ಪರಂತು ಈಚಿಗೆ ಸ್ವಲ್ಪ ಕಾಲದ ಕೆಳಗೆ ಪೂರ್ಣಯ್ಯನವರು ಸದರೀ ಕಾಲ್ವೆಯ ಕಡೆಗೂ ತೂಬುಗಳು ವಗೈರೇ ಸಾಧನಗಳನ್ನು ಕಲ್ಪಿಸಲಿಕ್ಕೂ, ಜಮೀನುಗಳಿಗೆ ನೀರು ಬಿಡುವಂತೆ ಹುಕುಂ ಮಾಡಲಿಕ್ಕೂ, ತಕ್ಕಂತೆ ಈ ಕಾಮಗಾರೀ ವಿಷಯದಲ್ಲಿ ನಂಬಿಕೆಯನ್ನು ಪಡದಿದ್ದರು. ಇದರ ಕಾರಣ ಮಾತ್ರ ವಿವರಿಸಲ್ಪಡ ಬೇಕಾಗಿದೆ.

45. ತಿಪ್ಪೂರ್ ಅಣಕಟ್ಟೆ ಯೆಂಬದು ಪ್ರಾಚೀನವಾದ ಒಂದು ಕಟ್ಟಣವಾಗಿರುತ್ತೆ. ಪೂರ್ಣಯ್ಯನವರು ಮಾಡಿಸಿದ ಕಾಮಗಾರಿಯು, ಕಾಲ್ವೆಯನ್ನು ಲಕ್ಷ್ಮಣತೀರ್ಥದವರಿಗೆ ಬಡಾಯಿಸುವದರಲ್ಲಿ ಮಾತ್ರ ನಡೆದದ್ದಾಗಿದೆ. ಇದಕ್ಕೆ ಪೂರ್ವ ಅಂದರೆ 1804—5ನೇ ಇಸವೀ ಯ ಳಗೆ ಕರ್ನಲ್ ವಿಲ್ಕ್ಸ ಯವರು ತಿಳಿಸಿದ ಪ್ರಕಾರ ಕಾಲ್ವೆ ಕೆಳಗೆ 131 ಖಂಡೀಗಳು ಸಾಗವಳೀ ಮಾಡಲ ಟ್ಟಿತು.

46. ಪರಂತು ಯಡತೊರೇ ಅಮು ದಾರು, ಅದಕ್ಕಿಂತ ಹೆಚ್ಚಾಗಿ ಸಾಗುವಳೀಯಾದಂತೆ ತೋರಿಸತಕ್ಕ ಯಿಾಕೆಳಗೆ ಬರುವ ತಖ್ತೆಯನ್ನು ಕೊಟ್ಟಿ ದ್ದಾರೆ. ಆದರೆ ಖಂಡಗದ ಅಳತೆಯು ವ್ಯತ್ಯಾಸವಾಗಿ ಇದ್ದೀತು.

ನಂ.	ಗ್ರಾಮಗಳ ಹೆಸರು	1804—5ನೇ ಇಸವಿಯಲ್ಲಿ ಸಾಗುವಳಿಯಲ್ಲಿದ್ದ ಬೀಜವರಿ.			1804—5ನೇ ಇಸವಿಯಲ್ಲಿ ಬಂದ ಕಂದಾಯ.		
		ಖಂ.	ಕೊ.	ಪ.	ರೂ.	ಆ.	ಪೈ.
1	ತಿಪ್ಪೂರು ..	93	0	0	922	5	10
2	ಗೋರಗುಂಡಿ ..	6	17	0	63	13	8
3	ಕನಕನಹಳ್ಳಿ	17	10	0	139	7	4
4	ಸಾಳಿಗ್ರಾಮ	6	0	0	65	0	5
5	ನಾರಾಯಣಪುರ	6	19	4	91	12	0
6	ಕಾಮಯ್ಯನ ಹಳ್ಳಿ	20	13	0	117	6	10
7	ಕೆಗ್ಗೆರೆ ..	20	17	0	255	8	11
8	ಸಾವತಹಳ್ಳಿ	1	7	8	19	13	6
9	ದಗ್ಗನಹಳ್ಳಿ	10	11	12	108	5	3
10	ಕುಂದೂರು ..	11	15	8	185	0	0
11	ಕಲ್ಲಹಳ್ಳಿ ..	20	10	0	315	6	[illegible]
12	ವಡ್ಡರಹಳ್ಳಿ	7	12	8	117	10	[illegible]
	ಜುಂಲಾ.. ..	223	13	8	2401	1[illegible]	[illegible]

47. ತಿಪ್ಪೂರ್ ಕಾಲ್ವೆ ಕೆಳಗೆ ಹಾಲೀ ನೀರಾವರೀಯಲ್ಲಿರುವ ಜಮೀನಿನ ಕುಲ್ ಬೀಜವರಿಯು 521 ಖಂಡಿ, 7 ಕೂಡೊ, 13¾ ಪಡಿಯಾಗಿರುತ್ತೆ. ಇದರ ಕಂದಾಯವು ರೂ. 5,748—11—7, ಅಥವಾ 1804—5ನೇ ಇಸವಿಯಲ್ಲಿ ಆದ್ದಕ್ಕೆ ಜಾಸ್ತೀಯಾಗಿ 3077 ರೂಪಾಯಿಗಳು ಕಂಡು ಬಂದಿರುತ್ತೆ. ಯಾವ ಗ್ರಾಮಗಳಲ್ಲಿ ಈಗ ತರೀ ಸಾಗುವಳೀ ಯಾಗುತ್ತೋ ಮತ್ತು ಯಾವ ಗ್ರಾಮಗಳಲ್ಲಿ ಕಂದಾಯ ಜಾಸ್ತೀಯಾಗಿರುತ್ತೋ ಪ್ರತಿ ವೊಂದು ಗ್ರಾಮಗಳ ಹೆಸರುಗಳು ಈ ಕೆಳಗೆ ಬರುವ ತಖ್ತೆಯಲ್ಲಿ ತೋರಿಸಲ್ಪಟ್ಟಿರುತ್ತವೆ.

ನಂ.	ಗ್ರಾಮಗಳ ಹೆಸರು.	1873—74ನೇ ಇಸವಿಯಲ್ಲಿದ್ದ ಬೀಜವರಿ.			1873—74ನೇ ಇಸವಿಯಲ್ಲಿ ವಸೂಲಾದ ಕಂದಾಯ.		
		ಖಂ.	ಕೂ.	ಪ.	ರೂ.	ಆ.	ಪೈ.
1	ತಿಪ್ಪೂರು						
2	ಗೋರಗುಂಡಿ	247	16	10¾	2644	14	6
3	ಕನಕನಹಳ್ಳಿ	6	2	10	21	6	11
4	ಸಾಳಿಗ್ರಾಮ	17	2	0	200	14	5
5	ನಾರಾಯಣಪುರ	9	14	8½	115	14	8
6	ಕೋಮ್ಮೈನಹಳ್ಳಿ	2	12	8	40	1	7
7	ಕೆಗ್ಗೆರೆ	19	3	6¾	210	7	8
8	ಸಾವತಹಳ್ಳಿ	15	17	5	176	13	7
9	ದಗ್ಗನಹಳ್ಳಿ	7	0	1¾	75	11	3
10	ಕುಂದೂರು	10	11	12	108	5	3
11	ಕಲ್ಲಹಳ್ಳಿ	73	14	0	729	15	2
12	ವಡ್ಡರಹಳ್ಳಿ	88	16	14	826	4	4
		25	7	4	327	14	3
	ಜುಂಲಾ	523	19	0¾	5478	11	7

48. ಲಕ್ಷ್ಮಣತೀರ್ಥ ಅಣಕಟ್ಟೆಯಿಂದ 17ನೇ ಮೈಲ್ ವರಿಗೆ ಹಾಲೀ ತರೀ ಸಾಗುವಳೀಯಲ್ಲಿರುವ ಜಮೀನ್ ಬೀಜವರಿಯು 337 ಖಂಡೀ, ಇದರ ಕಂದಾಯವು 4952 ರೂಪಾಯಿ 5 ಆಣೆ 2 ಪೈ, ಇದಕ್ಕೆ, 1864ನೇ ಇಸವಿಯಲ್ಲಿ ಬಡೆದು ಹೋದ ಚೋಳೇನಹಳ್ಳಿ ಅಣಕಟ್ಟೆಯಿಂದ ನೀರಾವರಿಯಾಗುತಿದ್ದು ಹಾಲೀ ಆನಂದೂರು ಕಾಲ್ವೆಯಿಂದ ನೀರು ಹರಿಯುವ ಜಮೀನ್ಗಳು * ಸೇರಿಸಲ್ಪಡತಕ್ಕವು.

* 101 ಖಂಡಿ, 19 ಕೂಡೊ 4 ಪಡಿ, ಕಂದಾಯ 1567 ರೂ. 13 ಆಣೆ. 0 ಪೈ.

49. ಆದ್ದರಿಂದ ಹಾಲೀ ಸಾಗುವಳೀಯಲ್ಲಿರುವ ಜಮೀನಿನ ಕುಲ್ ಬೀಜವರೀ 439 ಖಂಡಿ, 11 ಕೂಡೊ, 10½ ಪಡಿ; ಕಂದಾಯ, 6520 ರೂಪಾಯಿ 2 ಆಣೆ 2 ಪೈ. ತಿಪ್ಪೂರಿಂದ ಮೈಸೂರು ವರಿಗೆ ಇರುವ ವಿಶಿಷ್ಟ ಕಾಲ್ವೆಯ ಕೆಳಗೂ ಇರತಕ್ಕ ಬೀಜವರಿಯನ್ನು ಮೊಕ್ತಾಬಿಲೆ ಮಾಡುವಲ್ಲಿ, ಮೈಸೂರಿಗೆ ನೀರು ಬಂತೆಂಬ 1808—9ನೇ ಯಿಸವೀಯಲ್ಲಿದ್ದದಕ್ಕಿಂತ ಈಗ ಪ್ರಾಯಶಃ 555 ಖಂಡೀಗಳು ಜಾಸ್ತೀಯಾಗಿ ಸಾಗುವಳೀಯಲ್ಲಿರುತ್ತೆ. ಪ್ರಾಯಶಃ ಇದರಿಂದಲೇ 21ನೇ ಮೈಲಿಗಿಂತ ಆಚೆಗೆ ನೀರು ತೆಗದುಕೊಂಡು ಹೋಗುವ ಅಂಶ ಕಷ್ಟವಾಗಿ ಇದೆ.

ನಂ.		1808–9ನೇ ಇಸವಿಯಲ್ಲಿ ಸಾಗುವಳೀಯಾದ ಬೀಜವರಿ.						ಹಾಲೀ ಸಾಗುವಳೀಯಲ್ಲಿರುವ ಬೀಜವರಿ.						ವ್ಯತ್ಯಾಸ.											
		ಬೀಜವರೀ.			ಕಂದಾಯ.			ಬೀಜವರೀ.			ಕಂದಾಯ.			ಜಾಸ್ತೀ.						ಕಮ್ಮಿ.					
														ಬೀಜವರೀ.			ಕಂದಾಯ.			ಬೀಜವರೀ.			ಕಂದಾಯ.		
		ಖಂ.	ಕೊ.	ಪ.	ರೂ.	ಆ.	ಪೈ.	ಖಂ.	ಕೊ.	ಪ.	ರೂ.	ಆ.	ಪೈ.												
1	ತಿಪ್ಪೂರಿಂದ ಲಕ್ಷ್ಮಣ ತೀರ್ಥದ ವರಿಗೆ	129	13	8	1709	4	11	523	19	$\frac{3}{4}$	5478	11	7	407	0	$3\frac{3}{4}$	3962	14	0	12	14	11	194	7	4
2	ಲಕ್ಷ್ಮಣ ತೀರ್ಥದಿಂದ ದೇವನೂರು ಕೆರೆ ವರಿಗೆ ..	278	19	6	0	0	0	439	11	$10\frac{1}{2}$	0	0	0	160	12	$4\frac{1}{2}$	0	0	0	0	0	0	0	0	0
	ಜುಂಲಾ....	408	12	14	6709	4	11	963	11	$11\frac{1}{4}$	5478	11	7	567	12	$8\frac{1}{4}$	3962	14	0	12	14	11	194	7	4
											ನಿವಳ			554	17	$13\frac{1}{4}$	0	0	0	0	0	0	0	0	0

50. ಎರಡನೇ ಆಕ್ಷೇಪಣೆ ಯೇನಂದರೆ ಹಾಲೀ ನೀರಾವರೀ ಬಗ್ಯೆ ಬಿಡಲ್ಪಡುವ ವಿಶಿಷ್ಟ ನೀರೂ ಆಟಕಾಯಿಸಲ್ಪಟ್ಟು ಪೂರ್ಣಯ್ಯನವರ ಕಾಲ್ವೆ ಕೆಲಸ ಪೂರೈಸಲ್ಪಟ್ಟರೆ ಅತ್ಯಂತ ಅಧಿಕವಾದ ಪ್ರವಾಹದಲ್ಲಿ ತೊಟ್ಟು ತೊಟ್ಟಾಗಿ ನೀರು ಬಂದಾಗ್ಯೂ ಅನ್ಯಥಾ ಕಾವೇರೀಯಿಂದ ಮೈಸೂರಿಗೆ ಪ್ರಾಯಶಃ ಬಂದು ಬಿಂದು ನೀರು ಕೂಡಾ ಬರಲಾರದು, ಯಾಕಂದರೆ ಮೈಲಿಗೆ ಕೊಂಚವಾಗಿ ಅಂದರೆ 3 ಅಂಗುಲ ಮಾತ್ರವೇ ನೀರು ವಾಟವಿರುವದರಿಂದಲೂ; ನೀರು ಹೋಗುವ ಮಾರ್ಗದಲ್ಲಿರುವ ಬಂಡೆಗಳು ಬಿರುಕಲಾಗಿರುವದರಿಂದಲೂ, ನೀರು ಹಬೆಯಾಗಿ ಯೆದ್ದು ಹೋಗುವಣ, ಹೀರಿಹೋಗುವಣ, ಇವುಗಳಿಂದ ಪ್ರಾಯಶಃ ನೀರೆಲ್ಲ ನಷ್ಟವಾಗಿ ಹೋಗುವದು.

51. ಮೈಸೂರು ವರಿಗೆ ನೀರು ಬಂತೆಂದು ಮೇಲೆಯೇ ಸೂಚಿಸಲ್ಪಟ್ಟದೆಯಷ್ಟೆ, ಇಲ್ಲಿ ಕೊಂಚ ವಾಟವೆಂಬದು ದೊಡ್ಡ ಕೆರೆಯ ಕೋಡೀಯನ್ನು ಕುರಿತದ್ದಾಗಿರುತ್ತದೆಂತಲೂ ಕಾಲ್ವೆಯಲ್ಲಿ ತರಲ್ಪಟ್ಟ ನೀರು ಅನ್ಯಥಾಜಮಾಯಿಸಲ್ಪಡುವದೊ ಯಾ ಉಪಯೋಗಿಸಲ್ಪಡುವದೋ ಪರಂತು ಸದರೀ ಕೆರೆಗೆ ನೀರು ತರುವದು ಅಸಾಧ್ಯವಾಗಿರುವ ಸಂಗತಿ ಈ ವಿಷಯವನ್ನು ವ್ಯವಸ್ಥೆ ಪಡಿಸುವದಿಲ್ಲವೆಂತಲೂ ಮಾತ್ರ ಪುನಶ್ಚ ನಾನು ತಿಳಿಸಬೇಕಾಗಿದೆ.

52. ಕೆಲವು ತಿಂಗಳ ಕೆಳಗೆ ರಾಜಪೂತ್ ಘಾಟೀಯಲ್ಲಿ ನಿಂತಿದ್ದ ನೀರಿನ ಮಟ್ಟವು ದೊಡ್ಡ ಕೆರೆ ಕೋಡಿಯ ಮಟ್ಟಕ್ಕೆ ಮೇಲ್ಗಡೆ 15 ಅಡಿಗಳಿದ್ದವು. ಅಯ್ಯರ್ಘಟೀಯಲ್ಲಿ 17 ಅಡಿಗಳ ನೀರು ನಿಂತಿತ್ತು.

504

53. ಪರಂತು ನೀರು ತರುವ ಅಂಶದಲ್ಲಿ ಯುಂಟಾದ ಸಾಧ್ಯತೆ ಸಾಲದೆ ಇರುವದನ್ನು ಪೂರ್ಣಯ್ಯನವರೂ, ಅವರ ಸಲಹೇದಾರರೂ ಆಲೋಚಿಸಿ, ತಿಪ್ಪೂರ್ ವ ಸಾಗರಕಟ್ಟೆ ಅಣೆಕಟ್ಟೆಗಳ ಬಾಬತು ಸೇರಿಕೆಯಾದ ಕಾಲ್ವೆಗಳನ್ನು ವಿಶೇಷವಾಗಿ ಹೆಚ್ಚು ಪಡಿಸಬೇಕೆಂದು ಯೆಣಿಸಿದಂತೆ ಚನ್ನಾಗಿ ವ್ಯಕ್ತವಾಗುತ್ತೆ. ಈ ವಿಶಿಷ್ಟ ಪ್ರಯತ್ನವೂ ಎತ್ತರವಾಗಿರುವ ಚುಂಚನ ಕಟ್ಟೆ ಅಣೆಕಟ್ಟೆಯಿಂದ ರಾಮಸಮುದ್ರದ ಕಾಲ್ವೆಯನ್ನು ಯಡತೊರೆಯ ಆಚೆಗೆ ಬಡಾಯಿಸತಕ್ಕ ಕೆಲಸವಾಗಿರುತ್ತದೆ. ಸದರೀ ಅಣೆಕಟ್ಟೆಯು ದೊಡ್ಡಕೆರೇ ಕೋಡಿಗೆ ಮೇಲೆ 140 ಅಡಿಗಳಿರುತ್ತದೆ, ಮತ್ತು ಚುಂಚನಕಟ್ಟೆ ಅಣೆಕಟ್ಟೆಗೂ ಲಕ್ಷ್ಮಣತೀರ್ಥ ಪಾತ್ರಕ್ಕೂ ಮಧ್ಯೇ ಇರುವ ಕಲ್ಲುಗುಟ್ಟದ ಮಾರ್ಗವಾಗಿ ಭೇದಿಸಿಕೊಂಡು ಸದರೀ ಹೊಳೆಗೆ ಪ್ರಾಯಶಃ ಅಡ್ಡವಾಗಿ ನೀರು ಹೋಗುತ್ತದೆ.

54. ಸರ್ 1801ನೇ ಇಸಿವಿಗೂ 1803ನೇ ಇಸವಿಗೂ ಮಧ್ಯೆ ರಾಮಸಮುದ್ರ ಕಾಲ್ವೆ ಚಂದಗಾಲ್‌ವರಿಗೆ ಬಡಾಯಿಸಲ್ಪಟ್ಟಿತು, ಮತ್ತು ಚುಂಚನಕಟ್ಟೆಯಿಂದ 24 ನೇ ಮೈಲು ಮೊದಲು ಲಕ್ಷ್ಮಣತೀರ್ಥ ಕಿಬ್ಬಿಯಲ್ಲಿರುವ ಲಾಲನಹಳ್ಳಿ ಕೆರೆಗೆ ಸೇರುವ ಕಾಲ್ವೆಯು ಕೊನೆವರಿಗೆ ಈ ಕಾಲ್ವೆ ಹೋಗತಕ್ಕದ್ದನ್ನು ಅಜಮಾಹಿಷಿ ಮಾಡುವಲ್ಲಿ ಗುಟ್ಟಗಳು ಭೇದಿಸಿಕೊಂಡು ಹೋಗುವ ಮಾರ್ಗದಲ್ಲಿ ನಡೆದ ಕಾಮಗಾರೀಯನ್ನು ನಿಶ್ಚಯಿಸಬಹುದಾಗಿರುತ್ತೆ. ಈ ಕಾಮಗಾರಿಯು ಶುದ್ಧಾಂಗನಿಗೇಯಿಂದ ತಪ್ಪಿಸಿಕೊಂಡಂತೆ ಕಾಣಬರುತ್ತೆ.

55. ಕಾಂತೇನಹಳ್ಳಿ ಯೆಂಬ ಗ್ರಾಮವು ಒಂದು ತುಕಡಿಯ ಹೆಡ್‌ಕ್ವಾರ್ಟರಾಗಿತ್ತು. ಅಲ್ಲಿ ಜನಗಳು ಹೆಚ್ಚಾಗಿ ವಾಸಮಾಡುತಿದ್ದದರಿಂದ ದಾರಣೆವಾಸಿ ಬಹಳ ಚಡಾವಾಗಿದ್ದಂತೆ ಜನಗಳು ಅದ್ಯಾ ಪಿಜ್ಞಾಪಕ ವಿಟ್ಟುಕೊಂಡಿದ್ದಾರೆ. ಬಂಡೆ ಒಡೆಯುವ ಕೆಲಸವು ಆನ್ಯತ್ರ ನಡದಂತೆಯೇ ಅಲ್ಲಿಯೂ ವಿಸ್ತಾರವಾಗಿ ನಡೆದಿರುತ್ತೆ. ಅಂದರೆ ಕೆಲವು ಕಡೆ 30 ಅಡಿಗಳ ಆಳ ಇಳದದೆ, ಮತ್ತು ಜಲಕಾಣುವ ಪರ್ಯಂತ ಇಳಿದದರಿಂದ ಕೆಲವು ಸ್ಥಳಗಳಲ್ಲಿ ಬೇಸಿಗೆ ಯೊಳಗೆ ಸಹ 6 ಅಥವಾ 9 ಅಡಿಗಳ ನೀರು ಕಾಯಮಾಗಿನಿಂತಿರುತ್ತೆ.

56. ಲಾಲನಹಳ್ಳಿಗೆ ಆಚೆಗೆ ಕಾಮಗಾರಿಯು ಎಕಾಏಕ್ ನಿಂತು ಹೋದಂತೆ ಕಾಣಬರುತ್ತೆ, ಯಾತಕ್ಕಂದರೆ ಸದರೀ ಸ್ಥಳದಿಂದ ಸ್ವಲ್ಪ ಮುಂದಕ್ಕೆ ಯಿರುವ ಲಾಲದೇವನಹಳ್ಳಿ ಯೆಂಬ ಗ್ರಾಮದವರಿಗೆ ಕೇವಲ ನಿಷಾನೇ ಮಾತ್ರ ಇದೆ, ಆದರೆ, ಯಿದಕ್ಕೆ ಅಂತರಾಯ ಸಂಭವಿಸದೆ ಯಿದ್ದರೆ ಈ ಕಾಲ್ವೆಯನ್ನು ಯಿತರ ಕಾಲ್ವೆಗಳೊಂದಿಗೆ ಸೇರಿಸುವ ಪ್ರಯತ್ನವು ಸಂಪೂರ್ಣವಾಗಿ ನೇರವೇರಿಸಲ್ಪಟ್ಟಿರುವದೆಂಬ ಅಂಶವನ್ನು ಸಂದೇಹಿಸಲಿಕ್ಕೆ ನನಗೇನೂ ನಿಮಿತ್ತ ತೋರಲಿಲ್ಲವು. ಹೆಚ್ಚಾಗಿ ನೀರೇನಾದರೂ ಬೇಕಾಗಿಯಿದ್ದರೆ ಸಾಲಿ ಗ್ರಾಮ ಕೃಷ್ಣರಾಜ ಕಟ್ಟೆ ಅಣೆಕಟ್ಟೆಗಳಲ್ಲಿ ನೀರು ಸಿದ್ಧವಾಗಿಯಿತ್ತು, ಸದರೀ ಸ್ಥಳದಿಂದ ಕಾಲ್ವೆ ತರತಕ್ಕದ್ದಕ್ಕೆ ನಿರೋಧಕವಾಗಿ ಚುಂಚನಕಟ್ಟೆಯಲ್ಲಿ ಕಲ್ಲಿನ ಗುಟ್ಟೆ ಯಿದೆ ಯೆಂದೂಹಿಸುವದು ಶುದ್ಧ ತಪ್ಪಾಗಿರುತ್ತೆ, ಮತ್ತು ಈ ಯೆರಡು ಅಣೆಕಟ್ಟೆಗಳ ಕಾಲ್ವೆಗಳನ್ನು ಬಡಾಯಿ ಸೋಣದರಿಂದ, ಜರೂರಿದ್ದ ಪಕ್ಷಕ್ಕೆ, ರಾಮಸಮುದ್ರದ ಕಾಲ್ವೆಯಲ್ಲಿ ವಿಸ್ತಾರವಾಗಿ ನೀರುಬರಬಹುದಾಗಿತ್ತು ಈ ಸಂಗತಿಗಳನ್ನೆಲ್ಲ ತಿಳಿದಿದ್ದದರಿಂದ ಪೂರ್ಣಯ್ಯನವರು, ಸದರೀ ಕಾಲ್ವೆಯನ್ನು ಕರ್ನಲ್ ಮೆಕ್ಕಂಜೀಯವರಿಂದ ವಿವರಿಸಲ್ಪಟ್ಟ ಮೇರೆ ನೀರು ಹರಿಯತಕ್ಕ ಕೇವಲ ನಲ್ಲಿಯನ್ನಾಗಿ ಮಾಡುವದಕ್ಕೆ ಬದಲಾಗಿ ನೀರಾವರಿಯ ಬಾಬತು ನಾಲೇಯನ್ನಾಗಿ ಕಟ್ಟಿಸುವಂತೆ ಪ್ರೇರಿಸಿತೆಂಬ ಅಂಶದಲ್ಲಿ ಸಂದೇಹವಿಲ್ಲವು. ಸದರೀ ಪ್ರಯತ್ನ ಭಂಗವಾದಂತೆ ಹೇಳಬೇಕಾದರೆ ಅದು, ಇದುವರಿಗೆ ತಿಳಿಸಿದ ಕಾರಣಗಳಲ್ಲದೆ ನಿಶ್ಚಯಿಸಲ್ಪಟ್ಟ ಅಂಶಗಳಿಗೆ ತಾಳೇ ಬೀಳದ ಬೇರೆಕಾರಣಗಳಿಂದಾಗಿರಬೇಕು.

57. ಪ್ರಥಮತಃ ಮಾಡಲ್ಪಟ್ಟ ಪ್ರಯತ್ನದಿಂದ ಮೈಸೂರು ಮಾರ್ಗವಾಗಿ ಹರಿಯುವ ನೀರು ಕಾಲ್ವೆಯನ್ನು ತರುವ ವಿಷಯದಲ್ಲಿ ಇವನ್ನು ಪ್ರೋತ್ಸಾಹ ಪಡಿಸಿದವರ ಉದ್ದೇಶ್ಯವೆಲ್ಲವೂ ಫಲಿಸಿ ಇರಬಹುದೆಂತಲೂ, ಪರಂತು ತಿಪ್ಪೂರು ಅಣೆಕಟ್ಟೆ ಸಾಕಾದಷ್ಟು ಯೆತ್ತರವಿರುವದಿಲ್ಲವಾಗಿ ಪಟ್ಟಣದಲ್ಲಾಗಲಿ ಅದರ ಸಮೀಪದಲ್ಲಾಗಲಿ ವಿಶೇಷವಾಗಿ ಯೇನೂ ನೀರು ಜಮಾಯಿಸುವದು ಕಷ್ಟವಾಗುವದೆಂತಲೂ ನನಗೆ ತೋರುತ್ತದೆ.

58. ಚುಂಚನಕಟ್ಟೆ ಕಾಲ್ವೆಯ ಬಡಾವಣೆಯು ಸ್ಪಷ್ಟವಾಗಿ ಪಶ್ಚಾದಾಲೋಚಿತ ವಿಷಯವಾಗಿತ್ತು. ಸಾಗರಕಟ್ಟೆಯ ಮೇಲ್ಭಾಗಕ್ಕೆ ಒಂದು ಪ್ರದೇಶದಲ್ಲಿ ಲಕ್ಷ್ಮಣತೀರ್ಥಕ್ಕೆ ಅಡ್ಡವಾಗಿ ಯೆಡತೊರೇ ಬಳಿಯ ಬಂಡೇ ಕಡಿದ ಮಾರ್ಗವಾಗಿಯೂ, ಅಂತಾ ಇನ್ನೊಂದು ಮಾರ್ಗವಾಗಿ, ಚೀಫ್ ಇಂಜನಿಯರವರು ತಿಳಿಸಿದ ಕುಂಟೆಯ ಭರ್ತೀ ಬಗ್ಗೆ ಚೆನ್ನ ಹರಧನಹಳ್ಳಿ ಕಿಬ್ಬೆಯಲ್ಲಿಯೂ ನೀರು ತೆಗದುಕೊಂಡು ಹೋಗುವದಕ್ಕೆ ಆಗುವದಿಲ್ಲವೋ ಹ್ಯಾಗೋ ಆ ಸಂಗತಿಯನ್ನು ಎಚ್ಚರದಿಂದ ಅಜಮಾಯಿಷೀ ಮಾಡುವದರಿಂದಲೇ ನಿಶ್ಚಯಿಸಲ್ಪಡಬಹುದಾಗಿರುತ್ತೆ.

59. ಪೂರ್ಣಯ್ಯನವರು ಉದ್ದೇಶಿಸಿದ ಉಪಾಯವನ್ನು ಬಿಟ್ಟು [illegible] ಮಾಡುವದು ಸಾಧ್ಯವೋ ಅಲ್ಲವೋ ಪರಂತು ಸಂಯುಕ್ತವಾದ ಜಲವಸತಿಯ ಸಾಧನವಾಗಿಯೂ ನೀರಾವರೀ [illegible] ಯಾಗಿಯೂ ಇರುವ ಸದರೀ ಕಾಲ್ವೆಯ ಪ್ರಯೋಜನವನ್ನು ಆ ಮೂಲವಾಗಿ ವಿಚಾರಿಸ ಬೇಕಾಗಿದೆ.

60. ಈ ಸಂಗತಿಯನ್ನು ನಾನು ಚನ್ನಾಗಿ ಆಲೋಚಿಸಿ ಇರುತ್ತೇನೆ, ಮತ್ತು ಮೈಸೂರು ಪ್ರಜೆಗಳು ಕೇಳಿಕೊಂಡ ಮೇರೆ ಚೀಫ್ ಕಮಿಷ್ನರವರಿಗೆ ಶ್ರುತ ಪಡಿಸುವದರಲ್ಲಿ, ಸದರೀ ಕೆಲಸವನ್ನು, ಮೈಸೂರಿಗೆ ಜಲ ವಸತಿ ಕಲ್ಪಿಸುವ ವಿಷಯಕ್ಕೆ ಸಂಬಂಧಿಸಿದ ಪ್ರಯೋಜನಕರವಾದ ಯಾವ ಬಗ್ಯಾಗಲಿ ಉಪಯೋಗಿಸುವದು ಸಾಧ್ಯವೆಂಬ ಅಂಶವನ್ನು ಪುನಃ ಪರ್ಯಾಲೋಚಿಸ ಬೇಕಾಗಿರುವದೆಂತಲೂ ನಂಬುತ್ತೇನೆ.

ಹೀಗೆ ತಮ್ಮ ಅತ್ಯಂತ ವಿಧೇಯನಾದ

A. C. HAY,

Commissioner, Ashtagram Division,

ಅಷ್ಟಗ್ರಾಮ ಡಿವಿಜನ ಕಮಿಷ್ನರವರಿಂದ 1875ನೇ ಇಸವಿ ಏಪ್ರೆಲ್ 5ನೇ ತಾರೀಖಿನಲ್ಲಿ

ಬಂದ ಮರಮ್ಮತ್ ಇಲಾಖಾ.

7ನೇ ನಂಬರು ಲೆಟರ್ ವಿಷಯದ ಮಿಮೋರಾಂಡಂ.

ಸರ್ವೇಗಳು ಮತ್ತು ಸೆಕ್ಷನ್‌ಗಳು ಇವುಗಳನ್ನು ಕುರಿತ ಕೆಲವು ಹೊಸ ಸಂಗತಿಗಳನ್ನ ತಿಳಿಯುವದು ಜರೂರಾಗಿದ್ದದ್ದರಿಂದ ಅಷ್ಟಗ್ರಾಮ ಡಿವಿಜನ ಕಮಿಷ್ನರವರು ಬರೆದ ಸದರೀ ಲೆಟರ್‌ನಲ್ಲಿ ಕಂಡಿರುವಂಥ ಸರ್ವರಿಗೂ ಅಷ್ಟು ಪ್ರಯೋಜನಕರವಾದ ಅಂಶವನ್ನು ಕುರಿತು ವಿಚಾರ ಮಾಡುವದರಲ್ಲಿ ನಿರ್ವಾಹವಿಲ್ಲದೆ ಸಾವಕಾಶವಾದದ್ದಕ್ಕೋಸ್ಕರ ವಿಷಾದಿಸ ಬೇಕಾಗಿದೆ.

2. ಬೆಳಗೊಳದ ಸಮೀಪದಲ್ಲಿ "ಆಕರ" ಎಂಬ ಸ್ಥಳದ ಪಕ್ಕದೊಳಗೆ ಪೂರ್ಣಯ್ಯನವರ ನಾಲೆಯ ಹಾಲೀ ಇರುವ ಪಾತ್ರವು 21ನೇ ಮೈಲ್‌ನಲ್ಲಿ ಇರುವದಕ್ಕಿಂತಲೂ ಒಂಬತ್ತು ಅಡಿ ಎತ್ತರವಾಗಿದ್ದಾಗ್ಯೂ ಇದು ಪೂರ್ವದಲ್ಲಿ ಕ್ರಮ ಕ್ರಮವಾದ ಮಟ್ಟಕ್ಕೆ ಅಥವಾ ಮೆಲ್ಲಗೆಯಿಂದ ನೀರು ಹರಿದು ಹೋಗುವದಕ್ಕೆ ತಕ್ಕಷ್ಟು ಆಳ ಆಗಿಯಲ್ಪಟ್ಟಿತೆಂದು ಸಂಶಯಿಸುವದಕ್ಕೆ ಕಾರಣಗಳಾಗಿ ಇದ್ದ ಸಂದರ್ಭಗಳನ್ನು ಮೇಜರ್ ಹೇ ಸಾಹೇಬರು ಇದರಲ್ಲಿ ತೋರಿಸುವದಲ್ಲದೆ 1809—10 ಮತ್ತು 1810—11ನೇ ಇಸವಿಗಳಲ್ಲಿ ಕೆಲವು ಜಮೀನಿನ ನೀರಾರಂಬದ ಬಗ್ಗೆ ಸಾಕಾದಷ್ಟು ನೀರು ನಿಜವಾಗಿ ಹರಿದು ಇರಬೇಕೆಂತಲೂ ಸದರೀ ಲೆಟರ್‌ನೊಳಗೆ ಇಲ್ಲಿ ಅಲ್ಲಿ ನಮೂದಿಸಿ ಇರುವ ಮೇರೆಗೆ ಮೈಸೂರು ಷಹರು ವರಿವಿಗೆ ಬಾರದೆ ಹೋದಾಗ್ಯೂ ಕ್ರಮೇಣ ದೊಡ್ಡ ಕೆರೆಯಿಂದ ಒಂದು ಮೈಲ್‌ಗಿಂತಲೂ ಹೆಚ್ಚಿಲ್ಲದಷ್ಟು ದೂರ ಬಂದಂತೆ ನಿದರ್ಶನ ಮಾಡಿಕೊಡುವ ಬಗ್ಗೆ ಸಾಕ್ಷ್ಯವನ್ನೂ ಉದಹರಿಸುತ್ತಾರೆ.

3. ಅವರು ಸೂಚಿಸಿ ಇರುವ ಅಂಶಗಳು ಪ್ರಾಯಶಃ ನಿರಾಕ್ಷೇಪಣೀಯಗಳೆಂದು ನನಗೆ ತೋರುತ್ತವೆ. ಸದರೀ ಕಾಲ್ವೆಯ ಈಗಿನ ಪಾತ್ರದ ಮಟ್ಟಗಳ ದೆಸೆಯಿಂದ ಪೂರ್ವದಲ್ಲಿ ನಾನು ಊಹಿಸಿ ಇದ್ದ ಅಂಶಗಳನ್ನು ತಿ

ದ್ದಿ ಕೊಳ್ಳುವದರ ದ್ವಾರಾ ನೀರು ಎಲ್ಲಿಂದಲಾದರೂ ಬಂದಿರಲಿ ಪರಂತು ಆಕರವಾರ್ಗವಾಗಿ ಮೈಸೂರು ಕಡೆಗೆ ನೀರು ಹರಿದು ಬಂದಂತೆ ಜನಗಳೆಲ್ಲಾ ಅಭಿಪ್ರಾಯ ಪಟ್ಟಿರುವದು ನಿಜವೆಂದು ಸೂಚಿಸುವದು ನ್ಯಾಯವಾಗಿರುತ್ತೆ ದೆಂದು ಯೋಚಿಸುತ್ತೇನೆ.

4. ಮೈಸೂರು ಷಹರಿಗೆ ಜಲವಸತಿಯನ್ನು ಕಲ್ಪಿಸುವ ವಿಷಯದಲ್ಲಿ ಇದುವರಿವಿಗೆ ಬಹು ವಿಸ್ತಾರವಾದ ಮೂರು ಮಿವೋರಾಂಡಂಗಳಿಗೆ ಕ[illegible]ಲಗ್ನಂತೆ ಛಾಪಿಸಲ್ಪಟ್ಟಿರುವದರಿಂದ ಈ ವಿಷಯಕ್ಕಾಗಿ ಹಾಲೀ ನಡೆದಿರುವ ಕಾಗದ ಪತ್ರಗಳನ್ನು ಇ[illegible]ಪಡಿಸುವದಕ್ಕೆ ನಾನು ಬಹಳ ಅಸಮ್ಮತ ಪಡುತ್ತೇನೆ. ಆದ್ದರಿಂದ ಈಗ ಜವಾಬ್ ಕೊಡಲ್ಪಡುವ[illegible]ದರೀ ಲೆಟ್ಟರು ಪೂರ್ಣಯ್ಯನವರ ಕಾಲ್ವೆಯ ಮೂಲ, ಅಭಿವೃದ್ಧಿ, ಉದ್ದೇಶ್ಯಗಳು, ಇವುಗಳನ್ನು ಕ[illegible]ಮವರಿವಿಗೆ ಹುಟ್ಟಿದ ಲೆಟ್ಟರುಗಳಿಗಿಂತ ಪೂರ್ವ ವೃತ್ತಾಂತ ವಿಚಾರದಲ್ಲಿ ಅತ್ಯಂತ ಶ್ಲಾಘ್ಯವಾಗಿದ್ದಾಗ್ಯೂ ಇದಕ್ಕೆ ಸಂಬಂಧಿಸಿದ ಮುಖ್ಯಾಂಶಗಳನ್ನು ಮಾತ್ರ ಈಗ ಅವಧಾನಕ್ಕೆ ತರುತ್ತೇನೆ.

5. ಈ ಕೆಳಗೆ ಕಂಡ ರೀತಿಯಾಗಿ ಇರುವ 5ನೇ ಕಲಂನಲ್ಲಿ ಈಗ ಉದಹರಿಸಲ್ಪಟ್ಟ ಸಂಗತಿಗಳ ದೆಸೆಯಿಂದ ಅನುಮೇಯಿಸಲ್ಪಟ್ಟ ಅಂಶಗಳು ಸಂಗ್ರಹಿಸಲ್ಪಡುತ್ತವೆ. ಹ್ಯಾಗೆಂದರೆ" ಹರಿಯುವ ನೀರನ್ನು ಮೈಸೂರಿಗೆ ತರುವದರಲ್ಲಿ ಮೊದಲು ಸಂಕಲ್ಪಿಸಿದ ಉಪಾಯದ ದೆಸೆಯಿಂದ ಈ ಕಾರ್ಯ ಪ್ರವರ್ತಕರಾದವರು ನಿರೀಕ್ಷಿಸಿದ್ದೆಲ್ಲವೂ ಸಿದ್ಧಿಸಿಯೇ ಇರುವದು, ಆದರೆ ತಿಪ್ಪೂರು ಅಣಕಟ್ಟಿನ ಕಮ್ಮಿತ್ತಿಯಾದ ಎತ್ತರದಿಂದ ಷಹರ್‌ನಲ್ಲಾಗಲಿ ಅದರ ಸಮೀಪದಲ್ಲಾಗಲಿ ವಿಶೇಷವಾಗಿ ನೀರನ್ನು ಜಮಾಯಿಸುವದು ಕಷ್ಟವಾಗಿರುವದು.

6. ಈ ವಿಷಯದಲ್ಲಿ ಪ್ರಥಮತಃ "ಸಂಕಲ್ಪಿಸಲ್ಪಟ್ಟ ಉಪಾಯವೆಂಬದೇನೆಂದು ಮೊದಲು ಕೇಳಬಹುದು. 20ನೇ ಕಲಂನಿಂದ ನಮಗೆ ತಿಳಿಯಬರುವದೇನಂದರೆ ಈ ಕಾಲ್ವೆಯು ಅಗಿಸಲ್ಪಟ್ಟಾಗ ದೊಡ್ಡ ಕೆರೆಗೆ ನೀರನ್ನು ತರುವ ಉದ್ದೇಶ್ಯವೇನಾದರೂ ಇತ್ತೊ ಎಂದು ತೋರಿಸುವದಕ್ಕೆ ರಿಕಾರ್ಡಿನಲ್ಲಿ ಯಾವ ದಾಖಲೆಯೂ ಇಲ್ಲವೆಂತಲೂ ಜನರಾಗಲಿ ಪರಂಪರೆಯ ವೃತ್ತಾಂತವಾಗಲಿ ಆ ವಿಷಯದಲ್ಲಿ ಯೇನೂ ಇಲ್ಲವೆಂತಲೂ ತಿಳಿಯ ಬರುತ್ತದೆ. ಆದರೆ ಈ ಕೆಳಗೆ ಬರುವ ಕಲಂನಿಂದ ಸದರೀ ಮೇರಿಗೆ ನೀರನ್ನು ತರುವಂತೆ ಉದ್ದೇಶಿಸಲ್ಪಟ್ಟ ಯೇರ್ಪಡಿಸಲ್ಪಟ್ಟ ಮಟ್ಟಗಳಿಂದ ಆ ಕೆಲಸವು ಅಸಾಧ್ಯವೆಂದು ಎಣಿಸಿ ಅದರ ಪ್ರಯತ್ನವು ಬಿಡಲ್ಪಟ್ಟಂತೆ ನಿಜವಾಗಿ ಕಾಣಬರುತ್ತದೆ. ಮತ್ತು ಷಹರಿನಿಂದೀಚಿಗೆ ದಳವಾಯಿ ಕೆರೆಗೆ ಪ್ರವಾಹದ ನೀರನ್ನು ತರುವದಕ್ಕೆ ಉದ್ದೇಶಿಸಲ್ಪಟ್ಟು ಇದ್ದಂತೆ ಕರ್ನಲ್ ವಿಲ್ಕಸ್ ಸಾಹೇಬರವರು ನಂಬುತ್ತಾರೆ. ಮೈಸೂರಿಂದ ಈಚಿಗೆ ಹೊಸಸಾಗುವಳಿ ಯಾವದೂ ಉದ್ದೇಶಿಸಲ್ಪಡಲಿಲ್ಲವು. (ಅದೇಪ್ರಮಾಣವನ್ನು ಕುರಿತು 43ನೇ ಕಲಂ) ಆದರೆ ಮಿಕ್ಕ ನೀರಿನಪೈಕಿ ಅನುಭವದ ದೆಸೆಯಿಂದ ಯೆಷ್ಟು ನೀರು ಯುಕ್ತವೆಂದು ತೋರುತ್ತದೋ ಅಷ್ಟರಮಟ್ಟಿಗೆ ಒಂದು ಭಾಗವನ್ನು ಮೈಸೂರಿಗೂ ನಂಜನಗೂಡಿಗೂ ಮಧ್ಯೇ ಇರುವ ಕಾಲ್ವೆಯ ಭಾಗದಲ್ಲಿ ಉಪಯೋಗಿಸಿ ಕೊಳ್ಳಬಹುದೆಂದು ತಿಳಿಸಲ್ಪಟ್ಟಿತು. ಪರಂತು ಅದರ ಎರಡನೇ ಕಲಂನಿಂದ ತಿಳಿಯಬರುವದೇನಂದರೆ—ಕೆಲವು ಕಾಲದ ತರುವಾಯ ಪೂರ್ಣಯ್ಯನವರು ಸದರೀ ಕಾಮುಗಾರಿಯಲ್ಲಿ ಸಾಕಾದಷ್ಟು ನಂಬಿಕೆಯುಳ್ಳವರಾಗಿ ಕಾಲ್ವೆಯ ಕಡೆಗೂ ತೂಬು ಮುಂತಾದ ಸಾಧನಗಳನ್ನು ಕಟ್ಟಿಸಿದ್ದಲ್ಲದೆ ನೀರಾರಂಬದ ಸಾಗುವಳೀ ಜಮೀನಿಗೆ (ಅಂದರೆ ಮೈಸೂರಿಗೆ ಮೇಲ್ಗಡೆಯೇ ಹೊರ್ತು ಕೆಳಗಡೆ ಅಲ್ಲ) ನೀರು ಕೊಡುವಂತೆಯೂ ಹುಕುಂ ಮಾಡಿದರು.

7. ಮೂಲಭೂತವಾದ ಉಪಾಯವೆಂದು ನಾವು ಹೇಳುವದಕ್ಕೆ ಸಾಧಕವಾಗಿ ಹೊಂದತಕ್ಕ ಉದ್ದೇಶ್ಯಗಳನ್ನು ಕುರಿತು ನಿಯಾಮಕವಾದ ಅಂತಾ ತಾತ್ಪರ್ಯವು ಯಾವದಾಗಲಿ ಇತ್ತೆಂದು ತೋರಿಸುವದಕ್ಕೆ ತಕ್ಕ ಯಾವ ಅಂಶವಾಗಲಿ ನಮೂದಿಸಿ ಇರುವದಿಲ್ಲ. ಮತ್ತು ಪ್ರಕೃತ ವಿಷಯದಲ್ಲಿ ಆದಂತೆ ವಿಫಲವಾದ ಪ್ರಯತ್ನವಾಗದೇ ಇರಬೇಕಾದರೆ ಯಾವ ಉದ್ದೇಶ್ಯವಾಗಿ ಮರಮ್ಮತ್ತು ಕೆಲಸವನ್ನು ಯತ್ನಿಸಬೇಕಾಗಿರುತ್ತದೋ ಅಂತಾ ಗೊತ್ತಾದ ಮತ್ತು ಸ್ಪಷ್ಟವಾಗಿ ತಿಳಿಸಲ್ಪಟ್ಟ ಉದ್ದೇಶ್ಯವು ಸಹಾ ನಿಜವಾಗಿ ಯಾವದೂ ಇರುವದಿಲ್ಲ. ಆದರೇ ಇನ್ನೂ ಗಲಭೆಯಾಗುವಹಾಗೆ ಕರ್ನಲ್ ವಿಲ್ಕಸ್ ಸಾಹೇಬರವರು „ಹಿಂದೂ ಪಟ್ಟಣವಾದ ಮೈಸೂರು ಷಹ

508

ರಿಗೆ ಪುಣ್ಯನದಿಯಾದ ಕಾವೇರೀ ಪ್ರವಾಹವನ್ನು ತರುವ ಕೋರಿಕೆಯಿಂದ ಸದರೀ ನಾಲಾ ನಿರ್ಮಾಣವು ಊ
ರ್ಜಿತಪಡಿಸಲ್ಪಟ್ಟಿತು." ಎಂದು ದೃಢವಾಗಿ ಹೇಳಿದರು. ಮತ್ತು ಅಷ್ಟು ಭಾರೀ ಲಾಗುವಡುಳ್ಳ ಕಾಮಗಾರೀಯು
ನ್ನು ವಹಿಸಿದ್ದಕ್ಕೆ ಉಂಟಾದ ಕಾರಣಗಳ ಪೈಕಿ ಮತಸಂಬಂಧವಾದ ಉದ್ದೇಶ್ಯವು ಒಂದಾಗಿತ್ತೆಂದು ಅನೇಕ
ನೇಟೀವರು ಭಾವಿಸಿದ್ದಾಗಿ ಮೇಜರ್ ಹೇ ಸಾಹೇಬರು 3ನೇ ಕಲಂನಿಂದ ತಿಳಿಸಿ ಇರುತ್ತಾರೆ.

8. ಆದ್ದರಿಂದ ದೇಶದ ಪೂರ್ವವೃತ್ತಾಂತ ಸಂಬಂಧವಾದ ರಿಕಾರ್ಡಿನಲ್ಲಿ ದಾಖಲೆಯುಳ್ಳ ಮಟ್ಟಿಗೆ ನೋಡಿದರೆ
1ನೇದು, ದೊಡ್ಡಕೆರೆಗೆ ನೀರೆತಂದು ಜಮಾಯಿಸುವದು. 2ನೇದು, ನೀರು ಜಮಾಯಿಸುವದು ಆಗದೇ ಹೋದಾ
ಗ್ಯೂ ಷಹರಿನಲ್ಲಿ ನೀರನ್ನು ಹರಿಸುವದು. 3ನೇದು, ಷಹರಿನಲ್ಲಿ ನೀರು ಹರಿಸುವದಲ್ಲದೆ ಖರ್ಚು ಹೋಗಲಾಗಿ
ಉಳಿದ ನೀರನ್ನು ಮೈಸೂರಿಂದ ಆಚೆ ನೀರಾವರಿಗೆ ಉಪಯೋಗಿಸುವದು. ಪರಂತು ಷಹರಿನ ಮೇಲ್ಗಡೆಗೇನೂ
ಇಲ್ಲ. 4ನೇದು, ಅದೇ ಉದ್ದೇಶ್ಯವೇ ಮೈಸೂರಿಗೆ ಮೇಲ್ಕಡೆ ನೀರಾವರೀ ಮಾಡುವದರಿಂದ ವಿಸ್ತರಿಸಲ್ಪಡುವದು.
ಈ ಅಂಶಗಳಗೆಲ್ಲಾ ಮೇಲೆ ಕಂಡ ಮತಸಂಬಂಧವಾದ ತಾತ್ಪರ್ಯವು ವಸ್ತುಗತ್ಯಾ ಮೂಲವಲ್ಲದೇ ಹೋದಾಗ್ಯೂ
ಪೋಷಕವಾಗಿತ್ತು. ಆದರೆ ಹೀಗೆ ಭಿನ್ನ ಭಿನ್ನಗಳಾಗಿಯೂ ಹೆಚ್ಚು ಕಡಿಮೆಗಳಾಗಿಯೂ ಇದ್ದ ಉದ್ದೇಶ್ಯಗಳನ್ನು
ನೆರವೇರಿಸಿ ಕೊಳ್ಳುವದಕ್ಕೆ ಇದ್ದ ಸಾಧನಗಳು ಸಹ ಭಿನ್ನಭಿನ್ನಗಳಾಗಿಯೇ ಇದ್ದವು.

9. 11½ ಮೈಲಿಯಲ್ಲಿ 17½ ಅಡಿ ತಗ್ಗಾಗಿ ಇರುವ ತಿಪ್ಪೂರು ಕಾಲ್ವೆಯು ಮೊದಲು ಲಕ್ಷ್ಮಣತೀರ್ಥ
ದ ಹೊಳೇವರಿವಿಗೆ ಎಲ್ಲಿಯೂ ಎಷ್ಟರ ತಗ್ಗೂ ಇಲ್ಲದೆ 11¼ ಮೈಲಿಗಳ ದೂರ ಬಡಾಯಿಸಲ್ಪಟ್ಟಿತು. ಸದರೀ
ಹೊಳೆಯನ್ನು ಪೂರ್ಣಯ್ಯನವರು ಅದರ ಬಲದ ದಡಕ್ಕೆ ಕಾವೇರೀ ನೀರನ್ನು ತೆಗೆದುಕೊಂಡು ಹೋಗುವದಕ್ಕಾ
ಗಿ ಒಂದು ಕಾಲ್ವೆಯನ್ನು ತೆಗಿಯಿಸಿ ಅದರ ಮೂಲಕವಾಗಿ ವಿಸ್ತರಿಸಿದರು. ಆದರೆ ಹೊಸದಾಗಿ ಮಾಡುವ ಕಾ
ಲ್ವೆಗೂ ಅದರಿಂದ ಮೈಸೂರಿಗೂ ನೀರು ಒದಗಿಸುವದಕ್ಕೆ ಆ ಕಾಲ್ವೆಯಿಂದ ಬರುವ ನೀರು ಶುದ್ಧಾಂಗವಾಗಿ
ಸಾಲದಂತೆ ಪ್ರಥಮದಲ್ಲಿಯೇ ಕಾಣಬಂದದ್ದರಿಂದ ಹೊಸ ಅಣಕಟ್ಟೆಯು (ಅಥವಾ ಸಾಗರ, ಇಲ್ಲವೆ ಲಕ್ಷ್ಮಣತೀರ್ಥ
ಅಣಕಟ್ಟೆಯೆಂಬ ಯಾವ ಅಣಕಟ್ಟೆಯನ್ನು ಕಟ್ಟಿಸುವದು ಎಂಬ ಅತ್ಯಂತ ಸ್ವಾರಸ್ಯವಾದ ಈ ಅಂಶವು ಈ ಶತ
ಮಾನದ ಆದಿಭಾಗದಲ್ಲಿ ಮದರಾಸ್ ಗವರನ್ಮೆಂಟಿಗೂ ಮೈಸೂರು ಗವರನ್ಮೆಂಟಿಗೂ ಪರಸ್ಪರ ಚರ್ಚೆಗೆ ವಿಷಯ
ವಾಗಿತ್ತು) ಈಸಂಣ ನದಿಯಿಂದುಂಟಾಗುವ ಲೋಪಕ್ಕೆಲ್ಲಾ ಪೂರ್ತಿಯುಂಟುಮಾಡುವ ದೃಷ್ಟಿಯಿಂದ ಕಟ್ಟಿಸಲ್ಪ
ಟ್ಟಿತು. ನೀರು ಒದಗಿಸುವದಕ್ಕೆ ಆಧಾರವಾಗಿ ಲಕ್ಷ್ಮಣತೀರ್ಥವೆಂಬ ನದಿಯೊಂದೇ ಉಪಯೋಗಿಸಲ್ಪಡತಕ್ಕದ್ದೆಂ
ಬದಾಗಿ ಮೊದಲು ಕೆಲವರು ಮೇಸ್ತ್ರಿಗಳು ಮಾತನಾಡಿದಂತೆ ನಮಗೆ ತಿಳಿಯಬರುತ್ತದೆ. ಈ ಕೆಲಸವನ್ನು
ಯತ್ನಿಸಿದವರು ಸದರೀ ಏರ್ಪಾಡು ಸಾಲದೆಂದು ಆದಿಯಲ್ಲಿ ಅತೃಪ್ತಿಪಟ್ಟಿರಬೇಕೆಂದು ಕೋರುತ್ತದೆ. ಯಾತ
ಕ್ಕೆಂದರೆ (54ನೇ ಕಲಂನಿಂದ) ನಮಗೆ ತಿಳಿಯಬರುವದೇನಂದರೆ 1801—1803 ಈ ಇಸವಿಗಳ ಮಧ್ಯಕಾಲ
ದಲ್ಲಿ ರಾಮಸಮುದ್ರದ ಕಾಲ್ವೆಯು ಚಂದಗಾಲ್‌ವರಿವಿಗೆ ವಿಸ್ತರಿಸಲ್ಪಟ್ಟು ಅದಕ್ಕೂ ಲಕ್ಷ್ಮಣತೀರ್ಥದ ಕಿಬ್ಬಿಗೂ
ನಡುವೆ ಇರುವ ಬೆಟ್ಟಸಾಲನ್ನು ಭೇದಿಸುವದರಲ್ಲಿ ವೃದ್ಧಿಮಾಡಲ್ಪಟ್ಟಿತು. ಸದರೀ ಕಡೆಯ ಕಾಮಗಾರಿಯು
ಮಹತ್ಪ್ರಯತ್ನಸಾಧ್ಯವಾಗಿ ಇತರ ಕಾಮಗಾರಿಗಳಂತೆಯೇ ಪೂರೈಸದೆ ನಿಂತು ಹೋಯಿತು. ಮೇಜರ್ ಹೇ ಸಾ
ಹೇಬರು ತಿಳಿಸಿದ ಮೇರೆಗೆ ಸದರೀ ಹೊಸಕಾಲ್ವೆಗೆ ಅಡ್ಡವಾಗಿ ಅಥವಾ ಲಕ್ಷ್ಮಣತೀರ್ಥನದಿಯಲ್ಲಿ ಹೆಚ್ಚಾದ ನೀರು
ಹರಿದು ಹೋಗುವಂತೆ ರಾಮಸಮುದ್ರದ ಕಾಲ್ವೆಯನ್ನು ಇತರ ಕಾಲ್ವೆಗಳೊಂದಿಗೆ ಶೇರಿಸುವದೇ ಆದರ ಸ್ಪ
ಷ್ಟವಾದ ಉದ್ದೇಶ್ಯವಾಗಿ ಇರುತ್ತದೆ.

10. ಪೂರ್ಣಯ್ಯನವರ ಕಾಲ್ವೆಯೆಂದು ಪ್ರಸಿದ್ಧಪಟ್ಟ ಈ ಕಾಮಗಾರೀ ಕೆಲಸಗಳ ಕೆಲವು ಭಾಗವು ಮಾ
ತ್ರವೇ ಆ ನದಿಗಳ ಸಂಬಂಧವೂ ಅವಶ್ಯವಿಲ್ಲದೆ ಅದರ ಮೇಲಿನ ಭೂಮಿಗಳಲ್ಲಿ ಹರಿಯುವ ನೀರಿನಿಂದ ಮೈ
ಸೂರು ಷಹರಿಗೆ ಬೇಕಾದ ನೀರಿನ ಆರರಷ್ಟು ಅಧಿಕವಾಗಿ ಉಳ್ಳದ್ದಾಗಿರುತ್ತದೆ ಯೆಂತಲೂ ಆದ್ದರಿಂದಲೇ ಈ ಕಾ
ಗದ ಪತ್ರಗಳ ಮುಖಾಂತರವಾಗಿ ತಿಳಿಸಲ್ಪಟ್ಟಿರುವ ಮೂಢತೆಯೂ ಆತುರವಾದ ಆಲೋಚನೆಯೂ ಸಹ ವ್ಯಾಕು
ಲವನ್ನುಂಟುಮಾಡುವವಾಗಿರುವದಲ್ಲದೆ ಅದಕ್ಕಾಗಿ ಮಾಡಬೇಕಾದ ಅಮಿತದ್ರವ್ಯ ವ್ಯಯಕ್ಕೆ ಪ್ರತಿ ಫಲವಿಲ್ಲದೆ

ಹೋಗುವದನ್ನು ಸಹ ವಿವೇಕಿಯಾದವನು ಯೋಚಿಸುವಲ್ಲಿ ಬಹು ಭಯಂಕರ ವಾದವುಗಳಾಗಿಯೂ ಇವೆ, ಎಂದು ನಾನು ಇಲ್ಲಿ ಸೂಚಿಸಬೇಕಾಗಿದೆ. ಮೈಸೂರು ಷಹರಿಗೆ ಬೇಕಾದದ್ದಕ್ಕಿಂತಲೂ ಹೆಚ್ಚಾದ ನೀರು ಎಲ್ಲೆಲ್ಲಿಯೂ ಹರಿಯುವ ಪಕ್ಷದಲ್ಲಿ ಕಾವೇರೀಯಂಥ ಯಾವ ಪ್ರವಾಹದಿಂದಾಗಲಿ ಮಾಡತಕ್ಕ ಅನೇಕ ಜಲವಸತಿ ಪ್ರದೇಶಗಳು ಯೇನೂ ಪ್ರಯೋಜನವಲ್ಲವೆಂಬದಾಗಿ ಹ್ಯಾಗಾದರೂ ಇಲ್ಲಿ ತೋರಿಸುವದು ಸಾಕಾಗಿರುವದು. ತಿಪ್ಪೂರು ಕಾಲ್ವೆಯು ಮಟ್ಟದಲ್ಲಿ ಬಹು ತಗ್ಗಾಗಿದ್ದು ನದಿಯ ಎತ್ತರವಾದ ಪ್ರದೇಶದಿಂದ ತೆಗಿಯಲ್ಪಟ್ಟ ಕಾಲ್ವೆ ಮಾತ್ರವೇ ನಮಗೆ ಬೇಕಾದ ಜಲವಸತಿಗೆ ಉಪಯೋಗಿಸುವ ಪಕ್ಷದಲ್ಲಿ ಅದನ್ನು ಉಪಯೋಗಿಸುವದರಿಂದ ಯೇನೂ ಪ್ರಯೋಜನವಿಲ್ಲವೆಂಬದು ಸ್ಪಷ್ಟವಾಗಿಯೇ ಇತ್ತು. ಇದಲ್ಲದೆ ಪುನಶ್ಚ ತಿಪ್ಪೂರು ಕಾಲ್ವೆಯನ್ನು ವಿಸ್ತೀರ್ಣಪಡಿಸಿದಹಾಗೆ ರಾಮಸಮುದ್ರದ ಕಾಲ್ವೆಯನ್ನು ಅದೇಮಟ್ಟಕ್ಕೆ ಇನ್ನೂ ತಗ್ಗಿಗೆ ತರುವ ಕಾರ್ಯವು ಎತ್ತರವಾದ ಮಟ್ಟದಿಂದಾದ ಪ್ರಯೋಜನವನ್ನು ನಾಶಮಾಡುವದಕ್ಕೆ ಆಗುವದೆಂಬುವದು ಸ್ಪಷ್ಟವಾಗಿಯೇ ಇತ್ತು.

11. ನಕ್ಷೆಗಳೆಲ್ಲಾ ತಿಕಡಿ ಅಥವಾ ದೇಶಪದ್ಧತಿ ಮೇರೆಗೆ ಮಾಡುವ ಮಟ್ಟದ ಪ್ರಕಾರಕ್ಕೆ ಬಹು ಹುಷಾರಾಗಿ ಮಾಡಲ್ಪಟ್ಟಿರುವಂತೆ ನಮೂದಿಸಿ ಇಧೆ. ಆದರೆ ಈ ವಿಶಿಷ್ಟ ಕಾಮಗಾರಿಗೂ ಮೂಲಭೂತವಾಗಿರುವ ಈ ಅಂಶವನ್ನು ಪ್ರಥಮತಃ ಎತ್ತರವಾದ ಪ್ರದೇಶದಿಂದ ಪ್ರಾರಂಭಿಸದೇ ಇದ್ದರೆ ಯಾವ ಸಾಧ್ಯವಾದ ಪ್ರಯೋಜನ ವುಂಟಾದೀತು.?

12. ಸಾಧ್ಯವಾದ ಮಟ್ಟಿಗೂ ಇರುವ ಸಾಕ್ಷ್ಯದಿಂದ ಪ್ರಥಮತಃ ಸಂಕಲ್ಪಿಸಿದ ಉಪಾಯವನ್ನು ಸಂಕ್ಷೇಪವಾಗಿ ಆಲೋಚಿಸಿ ನೋಡುವಲ್ಲಿ ಮೈಸೂರು ಷಹರಿಗೆ ಪ್ರವಹಿಸುತ್ತಿರುವ ನೀರನ್ನು ತರಬೇಕೆಂಬುವದು ಅದರ ಉದ್ದೇಶ್ಯವಾಗಿ ಇತ್ತು ಎಂಬುವದೇ ಸಿದ್ಧಾಂತವೆಂದು ನಿಶ್ಚಯಿಸ ಬೇಕಾಗಿದೆ.

13. ಆ ಕಾಲ್ವೆಯು ಕೆಲಸಕ್ಕೆ ಉಪಯೋಗಿಸಿದಾಗ ಜೂನ್ ತಿಂಗಳಿಂದ ಅಕ್ಟೋಬರು ತಿಂಗಳವರಿವಿಗೆ 5 ತಿಂಗಳು ಎಡಬಿಡದೆ ಅದರಲ್ಲಿ ಸಂತತವಾಗಿ ನೀರು ಹರಿಯಿತು ಎಂದು 27ನೇ ಕಲಂನಲ್ಲಿ ಹೇಳಲ್ಪಟ್ಟಿತು,, ಅಂದರೆ ನದಿಯ ಪೂರ್ಣಪ್ರವಾಹ ಅಥವಾ ಅರ್ಧ ಪ್ರವಾಹ ಕಾಲದಲ್ಲಿ. ಅದಕ್ಕಿಂತಲೂ ಹೆಚ್ಚಾದ ಕಾಲದ ವರಿವಿಗೂ ಇತ್ತೆಂತಲಾಗಲಿ ಇರಬಹುದೆಂತಲಾಗಲಿ ಇರುವ ಹಾಗೆ ಮಾಡಬಹುದೆಂತಲಾಗಲಿ ನಿದರ್ಶನ ಮಾಡಿ ಕೊಡುವದಕ್ಕೆಯಲ್ಲಿಯಾಗಲಿ ಯಾವ ದೃಷ್ಟಾಂತವೂ ಇಲ್ಲ. ಹ್ಯಾಗಾದರೂ ಅದರ ಉದ್ದೇಶ್ಯವು ಪ್ರತಿವರ್ಷದಲ್ಲಿಯೂ ಮುಸಲಾವರ್ಷದ ಈ ಭಾಗದಲ್ಲಿ ಆರುತಿಂಗಳಾದರೂ ನೀರು ಹರಿಯುವಹಾಗೆ ಮಾಡುವದಾಗಿರಬಹುದೆಂದು ಒಂದುವೇಳೆ ಊಹಿಸಿದಾಗ್ಯೂ ಇದರಿಂದ ಮೈಸೂರು ಷಹರಿನ ನಿವಾಸಿಗಳಿಗೆ ವಾಸ್ತವ್ಯವಾಗಿ ಯೇನು ಪ್ರಯೋಜನವಾದ ಹಾಗಾಯಿತೆಂದು ಆಕ್ಷೇಪಿಸಬಹುದು.

14. ಬಹು ಅಧಿಕವಾದ ಲಾಗುವಡಿನಿಂದ ಆ ಕಾಲ್ವೆಯ ಕಡೇ ಮೈಲ್‌ನ ಉದ್ದಕ್ಕೂ ಇರುವ ಬಂಡೆಯನ್ನು ಹೊಡಿಸಿ ಮೇಲಿನ ಕಾಮಗಾರಿಯಲ್ಲಿ ಕಾಲ್ವೆಯನ್ನು ವಿಸ್ತರಿಸಲ್ಪಟ್ಟು ಭದ್ರಪಡಿಸಿ ಪೂರೈಸುವದಕ್ಕೆ ಅಂಗೀಕರಿಸಿ ಇಷ್ಟು ಮೇಹನತ್ತು ಮಾಡಿದ ಮೇಲೆಯೂ ಜನರಿಗೆ ಸಾಧಾರಣವಾಗಿ ಆವಶ್ಯಕವಿಲ್ಲದ ಕಾಲದಲ್ಲಿ ಮಾತ್ರ ಹರಿಯುವ ಪ್ರವಾಹವನ್ನು ಊರಿಗೆ ತಂದುಬಿಟ್ಟು ಅವರಿಗೆ ತತ್ಕಾಲದಲ್ಲಿ ದೊರೆಯುತ್ತಿರುವದಕ್ಕಿಂತಲೂ ಹೆಚ್ಚಾದ ಆಳದಲ್ಲಿ ನೀರು ದೊರೆಯುವದಾದರೆ ಪಟ್ಟಣದ ನಿವಾಸಿಗಳು ಇದರಿಂದ ಹ್ಯಾಗೆ ಸುಖಪಟ್ಟಾರು? ಕಾಲ್ವೆಯ ಸಮೀಪದಲ್ಲಿಯೂ ಅದರ ಮೇಲೆಯೂ ಆಸುಪಾಸುಗಳಲ್ಲಿಯೂ ಇರುವ ಗ್ರಾಮಗಳಿಂದ ಹೊರಟು ಕಾಲ್ವೆಗೆ ಬಂದು ಶೇರುವ ಗಲೀಜು ಕೊಳಕು ಮಿಶ್ರವಾದ ನೀರನ್ನು ಕುಡಿಯಬೇಕಾದ ದೌರ್ಭಾಗ್ಯವಲ್ಲದೆ ಅಂತಾ ನೀರನ್ನು ಕೂಡಾ ಅಷ್ಟು ಅಧಿಕವಾದ ಆಳದಿಂದ ಮೇಲಕ್ಕೆ ಯೆತ್ತಬೇಕಾದ ವಿಶೇಷ ಶ್ರಮವೂ ಸಹಕಾರಿಯಾಗುವ ಪಕ್ಷಕ್ಕೆ ಯಾವವಿಧದಲ್ಲಾಗಲಿ ಜನರಿಗೆ ಯೇನಾದರೂ ಪ್ರಯೋಜನವಾದೀತೋ?

15. ಯಾವ ರೀತಿಯಲ್ಲಾಗಲಿ ಕಡೆಗೆ ವರ್ಷಾಕಾಲವಲ್ಲದ ಆರೇಳು ತಿಂಗಳಿಗಾದರೂ ದೊರೆಯುವಹಾಗೆ ಇರುವಂಥ ಜಲವಸತಿಯನ್ನುಂಟುಮಾಡುವದಕ್ಕೆ ಬಹಳ ನೀರು ನಿಲ್ಲುವದಕ್ಕೆ ಸಾಕಾದಷ್ಟು ವಿಸ್ತೀರ್ಣವುಳ್ಳ ಒಂದು

ಕೆರೆಯನ್ನು ಕಟ್ಟಬೇಕು. ಮತ್ತು ಅಂಥ ಕೆರೆಗೆ ನೀರು ಬರಬೇಕಾದರೆ ಆ ಕೆರೆಯ ಮಟ್ಟವು ಕಾಲಿವೆಯ ತಳ ಅಥವಾ ಮಟ್ಟಕ್ಕಿಂತಲೂ ಅಧಮಪಕ್ಷ 15 ಅಥವಾ 20 ಅಡಿಗಳಷ್ಟು ತಗ್ಗಿನಲ್ಲಿ ಇರಬೇಕು. ಮೈಸೂರು ಷಹರಿನೊಳಗೆ ಎಲ್ಲೆಲ್ಲಿಯೂ ಅಗಿದರೆ ಬಂಡೆ ಅಡ್ಡಬೀಳುವ ಸ್ವಭಾವವಾಗಿರುವದನ್ನೂ ಯೋಗ್ಯವಾದ ಪ್ರದೇಶವು ದೊರೆಯುವದು ಅಸಾಧ್ಯವಾಗಿರುವದನ್ನೂ ಆಲೋಚಿಸಿ ನೋಡಿದರೆ ಮೇಲ್ಕಂಡ ಕಾಮಗಾರೀ ಪ್ರಯತ್ನವನ್ನು ಮಾಡುವದು ಬಹು ಶ್ರಮ ಸಾಧ್ಯವಾಗಿಯೂ ಅನಿವಾರ್ಯವಾದ ಅಧಿಕ ವ್ಯಯವುಳ್ಳದ್ದಾಗಿಯೂ ಇರುವದೆಂದು ತೋರುತ್ತದೆ. ಮೈಸೂರು ಷಹರಿನ ನಿವಾಸಿಗಳು ಪ್ರಕೃತದಲ್ಲಿ ನೀರಿಗೋಸ್ಕರವಾಗಿ ಅನುಭವಿಸಬೇಕಾಗಿರುವ ಶ್ರಮಗಳೊಳಗಾಗಿ ಈಗ ಪ್ರತಿನಿತ್ಯವೂ ಅವರಿಗೆ ಬೇಕಾದ ಸ್ನಾನ ಪಾನಾದಿಗಳಿಗೆ ಬಹು ಆಳದಿಂದ ಮೇಲಕ್ಕೆ ನೀರನ್ನು ಯೆತ್ತಬೇಕಾದ ಶ್ರಮವೇ ಮುಖ್ಯವಾದ ಒಂದಾಗಿರುತ್ತದೆ. ಪೂರ್ಣಯ್ಯನವರ ನಾಲೆಯಲ್ಲಿ ಈಗ 17 ಅಡಿ ಆಳದಲ್ಲಿ ನೀರು ನಿಂತು ಇದೆಯೆಂದು 52ನೇ ಕಲಂನಲ್ಲಿ ಹೇಳಲ್ಪಟ್ಟಿದೆ. ಆದರೆ ಆದರ ನಡುಭಾಗವು ಸುಮಾರು ಇನ್ನೂ 20 ಅಡಿಗಳ ಪ್ರಮಾಣಕ್ಕೆ ಆಳಪಡಿಸಬೇಕಾಗುತ್ತದೆ. ಇದು ಊರುವ ನೀರಾಗಿಯೂ ಕುಡಿಯುವದಕ್ಕೆ ಯೋಗ್ಯವಾದದ್ದಾಗಿಯೂ ಇದೆ. ಮತ್ತು ಸಾಕಾದಷ್ಟು ನೀರು ಸಿಕ್ಕುವದಿಲ್ಲವೆಂಬ ತೊಂದರೆ ಮಾತ್ರವಲ್ಲದೆ ಅದನ್ನು ಮೇಲಕ್ಕೆ ತರುವ ವಿಷಯದಲ್ಲಿ ಮಾಡಬೇಕಾದ ಶ್ರಮೆಯೂ ಆಕ್ಷೇಪಣೆಗೆ ವಿಷಯವಾಗಿಯೇ ಇದೆ. ಈ ಶ್ರಮೆಯನ್ನು ನಿವಾರಿಸುವದಕ್ಕೆ ನೀರನ್ನು ಎತ್ತುವಂಥ ಒಂದು ಜಲಯಂತ್ರವು ಸುಮಾರಿನಲ್ಲಿ ಕಟ್ಟಲ್ಪಡುತಲಿದೆ. ಆದರೆ ಕಾಲಿವೆಯು ನೀರನ್ನು ಎತ್ತುವ ವಿಷಯದಲ್ಲಿ ಅದಕ್ಕಿಂತ ಸುಮಾರು 30 ಅಡಿಗಳ ಪ್ರಮಾಣ ಜಾಸ್ತೀಯಾಗಿ ಮೇಲಕ್ಕೆ ಎತ್ತಬೇಕಾಗಿರುವದು. ಜನರಿಗೆ ಸರಕಾರದವರಿಂದ ಶಾಶ್ವತ ಪ್ರಯೋಜನ ನಿಜವಾಗಿ ಆಗುವ ವಿಷಯದಲ್ಲಿ ಪ್ರಥಮತಃ ಅತಿ ಕಠಿನವಾದ ಈ ನೀರು ಎತ್ತುವ ಶ್ರಮವು ಪರಿಹರಿಸಲ್ಪಡಬೇಕಾದದ್ದು ಮುಖ್ಯಾಂಶವೆಂದು ತೃಪ್ತಿಕರವಾಗಿ ತಿಳಿಯಲಾಪೇಕ್ಷೆಯುಳ್ಳವರು ರಾಜಪುತ್ರ ಘಾಟು ವಗೈರೇ ಸ್ಥಳಗಳನ್ನು ಹೋಗಿ ನೋಡಿದರೆ ತಿಳಿಯುವದು. ಈಗಲಾದರೂ ಪೂರ್ಣಯ್ಯನವರ ಆಲೋಚನೆಯಲ್ಲಿ ಇತ್ತೆಂದು ಭಾವಿಸಲ್ಪಟ್ಟು ಇರುವ ಉದ್ದೇಶ್ಯದ ಪ್ರಕಾರ ಈ ಕಾಲಿವೆಗಾಗಿ ಬಹು ದ್ರವ್ಯವನ್ನು ಖರ್ಚು ಮಾಡಿದಮೇಲೆ ಇದರಿಂದ ಆಗಬಹುದಾದ ಉತ್ತಮ ಪ್ರಯೋಜನ ವೆಂಬುವದು ಈಗಿನ ಶ್ರಮದಲ್ಲಿ ಅರ್ಧಕ್ಕಿಂತಲೂ ಹೆಚ್ಚಾದ ಶ್ರಮೆಯೊಡನೆ ಈಗ ಇರುವದಕ್ಕಿಂತಲೂ ಬಹಳ ಆಳದಲ್ಲಿ ನೀರನ್ನು ಜಮಾಯಿಸಿ ಇಟ್ಟುಕೊಳ್ಳುವದಕ್ಕೆ ಆಗುವ ಹಾಗೆ ಈ ಕಾಲಿವೆಯ ಕಾಮಗಾರಿಯನ್ನು ಪೂರೈಸಿ ದುರಸ್ತು ಮಾಡುವದೆಂತಲೇ ಹೇಳಬಹುದಾಗಿರುತ್ತದೆ.

16. ಯಾವ ಮನುಷ್ಯನಾಗಲಿ, ಈ ಕೆಲಸಗಳು ಪೂರೈಸಿದ ಮೇಲೆ ಇದು ಇರಬೇಕಾದ ಸ್ಥಿತಿಯ ಮೇರೆಗೆ ವುಂಟಾಗುವ ಇಂಥ ಶ್ರಮೆಯನ್ನು ಒಂದುಸಲ ಚನ್ನಾಗಿ ನೋಡಿದರೆ ಪುನಃ ಸರಕಾರದವರು ಷಹರಿನ ಜನರಿಗೆಲ್ಲಾ ಸುಲಭವಾಗಿ ದೊರೆಯುವಂತೆ ಅನುಕೂಲವಾದ ಪ್ರದೇಶದಲ್ಲಿ ನೀರನ್ನು ಮೇಲಕ್ಕೆ ತರುವ ವಿಷಯದಲ್ಲಿ ತಕ್ಕ ಯಂತ್ರ ಸಾಧನ ವಗೈರೇ ಕ್ರಮವನ್ನು ಯೇರ್ಪಡಿಸುವ ವಿಷಯದಲ್ಲಿ ಉದ್ಯುಕ್ತರಾಗಬೇಕಾದದ್ದಿಲ್ಲವೆಂದು ಕ್ಷಣ ಮಾತ್ರವಾದರೂ ಸಂದೇಹಿಸುವನೋ?

17. ಈ ಎತ್ತುವ ಕೆಲಸ ವಗೈರೆ ಯೇರ್ಪಾಡು ನಾನು ಪೂರ್ವದಲ್ಲಿ ವಿವರಿಸಿ ಇರುವ ಪ್ರಕಾರ ಬಹು ದ್ರವ್ಯ ಸಾಧ್ಯವಾದ ಆವಿರಿಯಂತ್ರ, ಯಾತದಯಂತ್ರ ಸಾಧನ ವಗೈರೆಗಳ ಮುಖಾಂತರವಾಗಿ ಮಾತ್ರವೇ ಮಾಡಲ್ಪಡಲಾಗುವದೇ ಶಿವಾಯಿ ಅನ್ಯಥಾ ಇಲ್ಲ. ಆದರೆ ಹೀಗೆ ಮಾಡುವದರಲ್ಲಿ ಆಗತಕ್ಕ ವಿಪರೀತವಾದ ಖರ್ಚು ವಿಷಯವನ್ನು ಮಾತ್ರವಲ್ಲದೆ ಐಬು ಇಲ್ಲದೆ ಚನ್ನಾಗಿ ತಯಾರುಮಾಡಿದ ಅಂಥಾ ಯಂತ್ರ ಸಾಧನಗಳಿಂದ ನಿವಾಸಿಗಳ ಜಲವಸತಿಯ ಅನನುಕೂಲವು ಆಗಬೇಕಾಗಿರುವಲ್ಲಿ ಅನನುಭವಶಾಲಿಗಳಿಗೆ ಈ ಯಂತ್ರಗಳು ಪ್ರಯೋಜನಕರವಾಗಲಾರದಾದ್ದರಿಂದ ಮುಂದೆ ಆಗಬೇಕಾದ ನೇಟಿವ್ ರಾಜ್ಯಭಾರದವರಿಗೆ ಈ ಭಾರವನ್ನು ಹೊರಿಸುವ ವಿಷಯದಲ್ಲಿಯೂ ಸಹ ಯೋಚಿಸಬೇಕಾಗಿರುತ್ತದೆ.

511

18. ಹಿಂದಕ್ಕೆ ನಾನು ಈ ವಿಷಯವಾಗಿ ಬರೆದಿರುವ ಮಿಮೋರಾಂಡಂಗಳಲ್ಲಿಲ್ಲಾ ಇರುವ ಮುಖ್ಯ ತಾತ್ಪರ್ಯವು ಮೈಸೂರು ಷಹರಿನಲ್ಲಿ ಜಲವಸತಿಯುಂಟು ಮಾಡುವದಕ್ಕೆ ಸಾಧಾರಣವಾದ ಗ್ರಾವಿಟೇಷನ್ ಸ್ಕಿಂ ಎಂಬ ಎತ್ತರವಾದ ಮಟ್ಟಗಳಿಂದ ಜಲಾ ಕರ್ಷಣೆಮಾಡಿ ಜಮಾಯಿಸುವ ಉಪಾಯಕ್ಕಿಂತಲು ಸುಲಭ ತರವಾದ ಉಪಾಯವು ಯಾವದೂ ಅಲ್ಲವೆಂಬ ಅಂಶವೇ ಹೊರ್ತು ಮತ್ತೊಂದು ಇಲ್ಲವೆಂದು ನಾನು ಪುನಃ ಉದಹರಿಸ ಬೇಕಾಗಿದೆ, ಆದರೆ ಈಗ ಆಲೋಚನೆ ಯಲ್ಲಿರುವ ಪೂರ್ಣಯ್ಯನವರ ಕಾಲಿವೆಯನ್ನು ಪೂರೈಸುವದರಲ್ಲಿ ಮೊದಲನೇದು, 170 ಅಡಿಗಳಿಗೆ ಕಮ್ಮಿಇಲ್ಲದಲಳದಲ್ಲಿ ಷಹರಿಗೆ ಬೇಕಾದಷ್ಟು ನೀರನ್ನು ಜಮಾಯಿಸುವದು, ಎರಡನೇದು, ಪುನಶ್ಚ ಆನೀರನ್ನು ಮೇಲಕ್ಕೆ ಎತ್ತುವ ಜಲಯಂತ್ರದ ಮುಖಾಂತರವಾಗಿ ಅಧಮಪಕ್ಷ 80 ಅಡಿಗಳಷ್ಟು ಮೇಲಕ್ಕೆ ಎತ್ತಬೇಕಾದದ್ದು. ಎಂಬ ಈ ಎರಡು ಕಾರ್ಯಗಳು ಅವಶ್ಯಕಗಳಾಗಿರುತ್ತವೆ. ಬಹು ದೀರ್ಘಾಲೋಚನೆಯಿಂದ ನೆರವೇರಿಸುವದಕ್ಕಾಗಿ ಏರ್ಪಡಿಸಿದ ಉಪಾಯವು ಇಂಥಾದ್ದೇನೋ ಎಂದು ಇದನ್ನು ಕುರಿತು ನಾನು ಆಕ್ಷೇಪಿಸುವೆನು.

ಮೈಸೂರು ದೊಡ್ಡಕೆರೇ ಕೋಡಿಗೆ ಮೇಲೆ ಚುಂಚನ ಕಟ್ಟೇ ಅಣಕಟ್ಟೆಯ ಎತರ್ತ ಅಡಿಗಳು.	140
[illegible]ಯ್ಯನವರ ಕಾಲಿವೆಯನ್ನು ದುರಸ್ತು [illegible]ೀರು ಜಮಾವಣೆ ಪಂಪಿಂಗ ವಗ್ಯೆರೆಗೆ ಬೇಕಾಡ ವಿಶಿಷ್ಟಆಳದ. ಪ್ರಮಾಣವು. ಅಡಿಗಳು	30
ಜುಮ್ಲಾ ಅಡಿಗಳು	170

19. ನೀರು ಜಮಾಯಿಸಿ ಇಡುವದಕ್ಕೆ ಯಾವ ಇತರ ಪ್ರದೇಶಗಳಿಗಿಂತಲೂ ಇದ್ದದ್ದರಲ್ಲಿ ದೊಡ್ಡಕೆರೇ ಮಾತ್ರವೇ ಉತ್ತಮವಾಗಿ ಕಾಣುವದರಿಂದ ಅದರಲ್ಲಿಯೇ ಪೂರ್ಣಯ್ಯನವರ ನಾಲೆಯಿಂದ ಬರುವ ನೀರನ್ನು ಜಮಾಯಿಸಿ ಜಲ ಸಮೃದ್ಧಿಯನ್ನುಂಟು ಮಾಡಬೇಕೆಂಬ ಸದು ಪಾಯವನ್ನು ಇದರ ಪ್ರಥಮ ಪ್ರವರ್ತಕರು ಆಲೋಚಿಸಿ ಇದ್ದರೆಂದು ಭಾವಿಸಿ ಅದಕ್ಕಾಗಿ ಅವರನ್ನು ಶ್ಲಾಘಿಸುವದಕ್ಕೆ ನಾನೇ ಕುತೂಹಲ ಪಟ್ಟುಇದ್ದೆನು. ಆದರೆ ಆವಿಷಯದಲ್ಲಿ ನಾನು ಭ್ರಾಂತನಾಗಿ ತಪ್ಪು ಅಭಿಪ್ರಾಯ ಪಟ್ಟಿದ್ದೇನೆಂದು 20ನೇ ಕಲಂ ನಮೂದಿಸಿ ಇರುವದ [illegible] ನೆರವೇರಿಸುವದಕ್ಕೆ ನಿಶ್ಚಿತವಾದ ಯಾವ ಉದ್ದೇಶ್ಯವೂ ಅವರಿಗೆ ಇರಲಿಲ್ಲವೆಂದು ನಾನು ನಿರ್ಣಯಿಸಬೇಕಾಯಿತು. ಮತ್ತು ಷಹರಿಗೆ ಬಹುದೂರದಲ್ಲಿರುವ ದಳವಾಯಿ ಕೆರೆಯಲ್ಲಿ ನೀರನ್ನು ಜಮಾಯಿಸಿ ಇಡುವದರಿಂದ ಯೇನೇನೂ ಪ್ರಯೋಜನ ವಾಗುತ್ತಿರಲಿಲ್ಲ.

20. ಪ್ರಕೃತದಲ್ಲಿ ಎಷ್ಟರಮಟ್ಟಿಗೆ ಆವಶ್ಯಕವೆಂದು ತೋರುತ್ತದೋ ಅಷ್ಟರಮಟ್ಟಿಗೆ 57ನೇ ಕಲಂನಲ್ಲಿರುವ ಶಬ್ದಗಳ ನಿರ್ಣೀತಾರ್ಥವನ್ನೂ ಅದರ ಪ್ರಯೋಜನಗಳನ್ನೂ ಚೆನ್ನಾಗಿವಿಚಾರಿಸಿ ಈಗ ನಾನು ಕಡೇ ಭಾಗವನ್ನು ವಿವರಿಸುತ್ತೇನೆ. ಇಲ್ಲಿ ಮೊದಲನೇ ಶಬ್ದವಾದ "ಆದರೆ" ಎಂಬದು ಹ್ಯಾಗಾದರೂ ಸಾಮಾನ್ಯತಃ ಈ ಭಾಗವನ್ನು ವಿಶೇಷವಾಗಿ ವಿಚಾರಿಸಬೇಕಾದ ಆವಶ್ಯಕವಿಲ್ಲವೆಂದು ಸೂಚಿಸುತ್ತದೆ. ಆವಿಶಿಷ್ಟ ಕಲಂನಲ್ಲಿರುವ ಮುಖ್ಯ ತಾತ್ಪರ್ಯವೇನಂದರೆ ಪೂರ್ವದವರು ಮಾಡಿ ಇದ್ದ ಪ್ರಯತ್ನವು ಯೆಂಥಾದ್ದಾಗಿ ಇದ್ದು ಇದ್ದಾಗ್ಯೂ ಸರಿಯೇ ಸ್ವಾಭಾವಿಕವಾದ ಐಬುಗಳ ಮುಲಕವಾಗಿ ಅನಿವಾರ್ಯವಾದ ಅಡ್ಡಿಗಳು ಸಂಭವಿಸದೆ ಇದ್ದರೆ ಸಫಲವಾಗುತ್ತಿತ್ತು." ತಿಪ್ಪೂರು ಅಣಕಟ್ಟಿನ ಕಮ್ಮಿಯಾದ ಎತ್ತರಕ್ಕೋಸ್ಕರವಾಗಿ ಷಹರಿನಲ್ಲಿಯಾಗಲಿ ಷಹರಿಗೆ ಸಮೀಪದಲ್ಲಿ ಯಾಗಲಿ ಬಹಳ ಹೆಚ್ಚಾದ ಯಾವ ನೀರನ್ನು ಜಮಾಯಿಸಿ ಇಡುವದು ಕಷ್ಟವಾಗಿರುವದು.

21. ಆದರೆ ಆಲೆಟ್ಟರು ಅಲ್ಲಿನ ಸ್ವಾಭಾವಿಕಗಳಾದ ಕೆಲವು ಐಬುಗಳನ್ನು ನಮೂದಿಸಿ ಅವುಗಳನ್ನು ಸರಿಪಡಿಸುವದಕ್ಕೆ ಮಾಡಬಹುದಾದ ಅಂಶಗಳನ್ನು ವ್ಯವಸ್ಥೆ ಮಾಡಲಾರಂಭಿಸುತ್ತದೆ. ಮೇಜರ್ ಹೇ ಸಾಹೇಬರು 56ನೇ (ಕಲಂನಲ್ಲಿ) ಅನುವಾದಿಸುವದೇನಂದರೆ "ಈ ಕಾಲಿವೆಯನ್ನು ಇತರ ಕಾಲಿವೆಗಳೊಂದಿಗೆ ಶೇರಿಸುವ ಪ್ರಯತ್ನವು ಸಂಪೂರ್ಣವಾಗಿ ನೆರವೇರಿಸಲ್ಪಟ್ಟಿರುವದೆಂಬ ಅಂಶವನ್ನು ಸಂದೇಹಿಸುವದಕ್ಕೆ ನನಗೇನೂ ನಿಮಿತ್ತ ತೋರಲಿಲ್ಲ, ಹೆಚ್ಚಾಗಿ ನೀರೇನಾದರೂ ಬೇಕಾಗಿ ಇದ್ದರೆ ಸಾಲಿಗ್ರಾಮ ಕೃಷ್ಣರಾಜಕಟ್ಟೆ ಅಣಕಟ್ಟೆಗಳಲ್ಲಿ ನೀರು ಸಿದ್ಧವಾಗಿ ಇತ್ತು. ಸದರೀ ಸ್ಥಳದಿಂದ ಕಾಲ್ವೆ ತಗತಕ್ಕದ್ದಕ್ಕೆ ನಿರೋಧಕವಾಗಿ ಚುಂಚನಕಟ್ಟೆಯಲ್ಲಿ ಕಲ್ಲಿನ ಗುಟ್ಟೆ

512

* ನಾನು ಈ ಕಲ್ಲಿನ ಗುಟ್ಟೆಯ ವಿಷಯದಲ್ಲಿ ಹಿಂದಿನ ನನ್ನ ಹೇಳಿಕೆಯಲ್ಲಿ ಭ್ರಾಂತಿಪಟ್ಟು ಇದ್ದೆನು ಮೇಜರ ಹೇಯುವರು ಇಲ್ಲಿನ ವಿಷಯದಲ್ಲಿ ಸರಿಯಾದ ಅಭಿಪ್ರಾಯವುಳ್ಳವರು.

ಒಂದು ಕಾಲಿವೆಯನ್ನು ಗುಂಡಾಗಿ ತಿರಗಿಸಿಕೊಂಡು ತಕ್ಕೊಂಡು ಹೋಗುವ ವಿಷಯದಲ್ಲಿ ಇಬ್ಬಂದಿ ಪಡಿಸತಕ ಅಂಶವೇನೂ ಇಲ್ಲಿಇಲ್ಲ. ಇದು ಬಂದು ಅನಾವಶ್ಯಕವಾದ ಸಂಗತಿ ಯಾದಾಗ್ಯೂ ಇಲ್ಲಿ ದಾಖಲಮಾಡಿ ಇರುವದು ಯುಕ್ತವಾಗಿರುತ್ತದೆ.

* ಇದೆ, ಯೆಂದೂಹಿಸುವದು ಶುದ್ಧ ತಪ್ಪಾಗಿ ರುತ್ತದೆ. ಮತ್ತು ಈ ಎರಡು ಅಣಕಟ್ಟೆಗಳ ಕಾಲ್ವೆಗಳನ್ನು ಬಡಾಯಿಸೋಣದರಿಂದ ಜರೂರಿದ್ದ ಪಕ್ಷಕ್ಕೆ ರಾಮಸಮುದ್ರದ ಕಾಲ್ವೆಯಲ್ಲಿ ವಿಸ್ತಾರವಾಗಿ ನೀರು ಜಮಾಯಿಸ ಬಹುದಾಗಿತ್ತು."

ಈ ಉದಾಹರಣೆಯು ಪೂರ್ಣಯ್ಯನವರ ನಾಲೆಯ ವಿಷಯದಲ್ಲಿ ಮುಖ್ಯವಾದ ಇಂಜನೀರಿಂಗ್ ಆಕ್ಷೇಪಣೆಯು ದೃಷ್ಟಿಗೋಚರವಾಗಲಿಲ್ಲವೆಂಬಂಶವನ್ನು ತೋರಸುತ್ತದೆ. ತಿಪ್ಪೂರು ಅಣಕಟ್ಟೆಯಲ್ಲಿ ನೀರಿಗೇನೂ ಕಡಿಮೆ ಇಲ್ಲ. ಆದರೆ ಕಾಲ್ವೆಯ ಕಡೆ ಉದ್ದಕ್ಕೂ ಇರುವ ನೀರು ವಾಟವು ಸಂತತವಾಗಿಯೂ ಸಂತುಷ್ಟಿಯಾಗಿಯೂ ಹರಿಯುವದಕ್ಕೆ ಬಹು ಕೊಂಚವಾಗಿರುತ್ತದೆ.

22. ನಕ್ಷೆ 58ನೇ ಕಲಂನಲ್ಲಿ ಅನುವಾದಿಸಲ್ಪಟ್ಟಿರುವದೇನಂದರೆ "ಸಾಗರ ಕಟ್ಟೆಯ ಮೇಲಭಾಗಕ್ಕೆ ಬಂದ ಪ್ರದೇಶದಲ್ಲಿ ಲಕ್ಷ್ಮಣ ತೀರ್ಥಕ್ಕೆ ಅಡ್ಡವಾಗಿ ಯೆಡತೊರೇ ಬಳಿಯ ಬಂಡೇ ಕಡಿದ ಮಾರ್ಗವಾಗಿಯೂ ಅಂಥಾ ಇನ್ನೊಂದು ಮಾರ್ಗವಾಗಿ ಚೀಫ್ ಇಂಜನಿಯರವರು ಉದ್ದೇಶಿಸಿ ಇರುವ ಕುಂಟೆಯಲ್ಲಿ ಜಮಾಯಿಸುವ ಬಗ್ಯೆ ಬೆನ್ನುಹರದನಹಳ್ಳಿ ಕಿಬ್ಬೆಯಲ್ಲಿಯೂ ನೀರು ತೆಗೆದುಕ್ಕೊಂಡು ಹೋಗುವದಕ್ಕೆ ಆಗುವದಿಲ್ಲವೋ ಹ್ಯಾಗೋ ಆ ಸಂಗತಿಯನ್ನು ಜಾಗರೂಕತೆಯಿಂದ ಅಜಮಾಯಿಷಿ ... ಮಾಡುವದರಿಂದಲೇ ನಿಶ್ಚಯಿಸಲ್ಪಡಬಹುದಾಗಿರುತ್ತದೆ." ಮತ್ತು ಆ ಮೇಲೆ ಅನುವಾದಿಸಲ್ಪಟ್ಟಿರುವದೇನ... ಸಂಯುಕ್ತವಾದ ಜಲವಸತಿಯು ಸಾಧನವಾಗಿಯೂ ನೀರಾವರಿ ಕಾಮಗಾರಿಯಾಗಿಯೂ ಇರುವ ಸದರೀ ... ನು ಪ್ರಯೋಜನವನ್ನು ಆ ಮೂಲವಾಗಿ ವಿಚಾರಿಸ ಬೇಕಾಗಿದೆ." ಇದರ ಅಭಿಪ್ರಾಯವು ಪೂರ್ಣಯ್ಯನವರ ಕಾಲ್ವೆಯು ಬಿಡಲ್ಪಡತಕ್ಕದ್ದೆಂತಲೂ ಅಷ್ಟೇ ಪ್ರಮಾಣವುಳ್ಳ ಅಂಥಾ ಮತ್ತೊಂದು ಹಾಗೆಯೇ ಅಷ್ಟು ಅಧಿಕ ವ್ಯಯದಲ್ಲಿ ಕಟ್ಟಲ್ಪಡುವದಕ್ಕೆ ಬೇಕಾದ ವಿಚಾರಣೆಗಳು ಗವರನ್ಮೆಂಟಿನವರಿಂದ ಮಾಡಲ್ಪಡತಕ್ಕದ್ದೆಂತಲೂ ಇರುವ ಹಾಗೆ ಕಾಣುತ್ತದೆ. ಬಹುಶಃ ಈ ಖರ್ಚಿನ $\frac{1}{10}$ರ ಭಾಗದಲ್ಲಿ ಸಮೃದ್ಧಿಯಾದ ಜಲವಸತಿಯನ್ನು ಉಂಟು ಮಾಡುವದರಲ್ಲಿ ಯೇನೂ ಶ್ರಮೆಯಿಲ್ಲವೆಂದು ಪುನಶ್ಚ ನಾನು ಹೇಳಬಲ್ಲೆನು.

23. ಮೇಜರ್ ಕ್ರಿಸ್ಟಿ ಸಾಹೇಬರು ನನ್ನ ಕೋರಿಕೆಯ ಮೇರೆಗೆ ಲಕ್ಷ್ಮಣ...ದ ಹಳ್ಳದಿಂದ ರಾಮಸಮುದ್ರದ ಕಾಲ್ವೆಯ ಅಖೈರು ಭಾಗವು ಪ್ರತ್ಯೇಕಿಸಲ್ಪಟ್ಟಿರುವ ಹಳ್ಳವನ್ನು ತಟಾಯಿಸುವದಕ್ಕಾಗಿ ಪೂರ್ಣಯ್ಯನವರು ತಮ್ಮ ಕಾಮಗಾರಿಯಲ್ಲಿ ಬಂಡೆಯ ಮುಖಾಂತರವಾಗಿಯೇ ಮಾಡಿ ಇರುವ ಬ/ದು ಆಳವಾದ ಸುರಂಗ ಮುಂತಾದ್ದನ್ನ ತೋರಿಸುವ ಬಂದು ನಕ್ಷೆಯನ್ನು ತಯಾರು ಮಾಡಿ ಇದ್ದರು. ಮತ್ತು /ದರ ಮಟ್ಟಗಳನ್ನೆಲ್ಲಾ ತೋರಿಸಿ ಪೂರೈಸುವದಕ್ಕೆ ಕಾಲವು ಸಾಲದೆ ಹೋಗಿ ಅದು ಅಲ್ಲಿಗೆ ನಿಂತು ಹೋದಾಗ್ಯೂ ವಿಚಾರಿಸಿ ಇರುವ ಅಂಶಗಳು ಈ ಕಾಮಗಾರಿಯ ಈ ಭಾಗದ ಅಪಾರವಾದ ಖರ್ಚನ್ನು ನಿದರ್ಶನ ಮಾಡಿ ಕೊಡುವದಕ್ಕೆ ಸಾಕಾದವುಗಳಾಗಿ ಇರುತ್ತವೆ. ಆ ನಕ್ಷೆಯು $1\frac{1}{4}$ ಮೈಲ್ ವರಿವಿಗೂ ತೋರಿಸುವಷ್ಟು ತಯಾರಾಗಿ ನಿಂತು ಹೋಗಿದೆ. ಅಲ್ಲಿ ಕಾಲ್ವೆಯ ತಳವು ರಾಮಸಮುದ್ರದ ಕಾಲ್ವೆಯ ಅಂತ್ಯಭಾಗಕ್ಕೆ ಮೇಲೆ 31—20 ಅಡಿಗಳ ಎತ್ತರ ಉಳ್ಳದ್ದಾಗಿದೆ. ಹ್ಯಾಗಾದರೂ ಆ ಹಳ್ಳದ ತಳವು ರಾಮಸಮುದ್ರದ ಕಾಲ್ವೆಯ ಅಂತ್ಯಭಾಗಕ್ಕೆ ಮೇಲೆ 65·57 ಅಡಿಗಳ ಎತ್ತರ ಜಾಸ್ತೀಯಾಗಿ ಇತ್ತೆಂದು ಇದರಿಂದ ನಮಗೆ ತಿಳಿಯಬರುತ್ತದೆ. ಹೆಚ್ಚಾಗಿ ಅಗೆಸಬೇಕಾದ 44·57 ಅಡಿಗಳನ್ನು ಬಿಟ್ಟು 21 ಅಡಿಗಳ ಆಳವುಳ್ಳ ಬಂದು ಅಗತೆ ಮಾಡಲ್ಪಟ್ಟಿರುತ್ತದೆ.

24. ಮಸಲಾ ಈ ಅಗಾಧ ಕಾಮಗಾರಿಯೂ ಪೂರೈಸಿ ನೀರು ಲಕ್ಷ್ಮಣತೀರ್ಥದ ಹಳ್ಳಕ್ಕೆ ತರಲ್ಪಟ್ಟಿತು.
ಆಗಲೂ ಕಪಿನಿಯಿಂದ ಈ ನದಿಯು ಪ್ರತ್ಯೇಕಿಸಲ್ಪಡುವ ಕಿಬ್ಬೀ ಮೇಲೆ ಒಂದು ತಗ್ಗು ಪ್ರದೇಶವನ್ನು ಕಂಡು
ಹಿಡಿದು ಇದರ ಮುಖಾಂತರವಾಗಿ ಚೆನ್ನ ಹರದನಹಳ್ಳಿಯ ಹಳ್ಳಕ್ಕೆ ನೀರನ್ನು ಹ[illegible]ಡಿಸಬೇಕಾಗುತ್ತದೆ. ಇದುವ
ರಿವಿಗೂ ವಿಚಾರಿಸಿ ನೋಡಿ ಇರುವದರೊಳಗೆ, ಮೈಸೂರು ಷಹರಿಗೆ 5 ಮೈಲ್‌ಗಳಲ್ಲಿರುವ ದೊಡ್ಡ ರಸ್ತೆಯ 14ನೇ
ನಂಬರು ರಸ್ತಾ ಸೇತುವೆಯನ್ನು ವಿನಾಯಿಸಿದರೆ ಇನ್ನೆಲ್ಲಿಯಾಗಲಿ ಇಲ್ವಾಲಿಗೂ ಬೆಳಿಕೆರೆಗೂ ಮಧ್ಯೇ ಇರುವ ಕಿ
ಬ್ಬಿಯ ಉದ್ದಕ್ಕೂ ನೋಡಿದಾಗ್ಯೂ ತಗ್ಗು ಪ್ರದೇಶವು ಇದ್ದ ಹಾಗೆ ಕಾಣಿಸುವದಿಲ್ಲ, ಮತ್ತು ಆಯಾ ಪ್ರದೇಶಗಳಲ್ಲಿ
ರುವ ಮಟ್ಟಗಳ ವಿವರವು ಈ ಕೆಳಗೆ ಬರೆದಿರುವ ಮೇರೆಗೆ ಇವೆ.

ರಾಮ ಸಮುದ್ರದ ಕಾಲಿವೆಯ ಕೊನೆ	2,51460 ಅಡಿಗಳು.
14ನೇ ನಂಬರು ರಸ್ತಾ ಸೇತುವೆಯ ನೆಲ	2,550 ಅಡಿಗಳು.
ಉದ್ದೇಶಿಸಿ ಇರುವ ಹೊಸಕೆರೆಯ ಕೋಡಿ	2,490 ಅಡಿಗಳು.

ಮೊದಲನೇ ಪ್ರದೇಶಕ್ಕೂ ಕಡೇಪ್ರದೇಶಕ್ಕೂ ಕಾಗಿ ಹಾರಿದಂತೆ ನೆಟ್ಟಗೆ ಅಳತೆ ಮಾಡಿದರೆ 20 ಮೈಲ್
ಗಳ ದೂರವಿದೆ, ಮತ್ತು ಮೇಜರ್ ಹೇ ಸಾಹೇಬರು ಸೂಚಿಸಿ ಇರುವ ಕಾಲಿವೆಗಾಗಿ ಈ ಉದ್ದವನ್ನೇ ದ್ವಿಗುಣಿ
ಸುವದಕ್ಕೆ ಮಾತ್ರ ಅಂಗೀಕರಿಸಿಕೊಂಡರೆ ನಾನು ಆಲೋಚಿಸಿ ಇರುವ ಕೆರೆಯಲ್ಲಿ ನೀರನ್ನು ಜಮಾಯಿಸಿ ಇಡು
ವಹಾಗೆ ಮಾಡಬೇಕಾದ್ದಕ್ಕೆ ಅದರ ವಾಟವು ಮೈಲ್ ಒಂದಕ್ಕೆ 6 ಇಂಚ್ ಗಿಂತಲೂ ಹೆಚ್ಚಾಗಿ ಯಿರಲಾರದು ಮ
ತ್ತು ಇದನ್ನು ಮಾಡುವದಕ್ಕೆ ತಳದಲ್ಲಿ ಅಧಮಪಕ್ಷ 40 ಅಡಿಗಳ ಪ್ರಮಾಣದ ಆಳಕ್ಕೆ ಇಳಿಸಬೇಕು. ಅಂಥಾ
ಕಾಲಿವೆಯ ಅತಿ ಉದ್ದವನ್ನೂ ಬಂಡೆ ಬೀಳುವ[illegible]ವುಳ್ಳ ಭೂಮಿಯನ್ನೂ ಆಲೋಚಿಸಿ ನೋಡಲಾಗಿ ಬಹುಬ
ಹು ತಗ್ಗಾದ ಪ್ರದೇಶಗಳಲ್ಲಿ ಮಟ್ಟಗಳು ಆವ[illegible]ಗಿ ಇಷ್ಟು ಆಳ ವುಳ್ಳದ್ದಾಗಿರುವದರಿಂದ ಈ ವಿಚಾರವನ್ನು
ಇನ್ನು ಹೆಚ್ಚಾಗಿ ಮಾಡಲವಶ್ಯವಿಲ್ಲವೆಂದು [illegible] ತೋರುತ್ತದೆ.

25. ನದಿಗೆ ಇನ್ನೂ ಮೇಲ್ಗಡೆಯಲ್ಲಿ ಅಣಕಟ್ಟೆಗಳಿಂದ ಕಾಲಿವೆಗಳನ್ನು ತೆಗದು ಅವುಗಳ ಮೂಲಕವಾ
ಗಿ ಪೂರ್ಣಯ್ಯನವರ ಕಾಲಿವೆಯನ್ನ ಹೆಚ್ಚಾಗಿ ನೀರು ಹರಿಯುವಂತೆ ಬಲಪಡಿಸುವದು ಸಾಧ್ಯವಾಗಿದೆಯೆಂದು
ಸಂದರ್ಭ[illegible] ತೋರುವ ಇತರ ಆಲೋಚನೆಯ ವಿಷಯದಲ್ಲಿ ಹಾಗೆ ಮಾಡಬೇಕಾದರೆ ಕಾಲಿವೆಗಳು ಅತಿ ವೃದ್ಧ
ವಾಗಿಯೂ ಸ್ವಲ್ಪ ಹೆಚ್ಚು ಕಡಿಮೆ ಯಲ್ಲಾ ಕಾಲಿವೆಗಳನ್ನೂ ಹೊಸ[illegible] ಮಾಡಿಸಬೇಕಾದ ಸಂಗತಿಯನ್ನ ಹಿಂದ
ಕ್ಕೆ ನಾನು ವಿವರಿಸಿ ಇದ್ದೇನೆ. ಆದ್ದರಿಂದಲೇ ಮುಂದಕ್ಕೆ ವೃಥಾ ಹೆಚ್ಚಾಗಿ ಈ ಆಲೋಚನೆಗಳನ್ನು ಮಾಡಸೇಂ
ಬಿಡಬೇಕೆಂಬದಕ್ಕೆ (ಬಳ್ಳೀ ಜಲವ ಸತಿಯು ಬೇರೆ ವಿಧವಾಗಿ ಸುಲಭ ಸಾಧ್ಯವಾದ್ದರಿಂದ) ಸಾಕಾದಷ್ಟು ಕಾರಣವಿ
ದೆಯೆಂತಲೂ ಹಿಂದಕ್ಕೆ ನಾನು ಸೂಚಿಸಿ ಇದ್ದೇನೆ.

26. ಈಚೆಗೆ ನಾನು ಮಾಡಿದ ವಿಚಾರಗಳಿಂದ ಹೊಸದಾಗಿ ತಿಳಿಯಬಂದ ಒಂದು ಅಂಶವನ್ನು ನಾನು ಈ
ಗ ಉದಹರಿಸಬಹುದಾಗಿದೆ. ಅದೇನಂದರೆ ಮೈಸೂರಿಗೂ ಲಕ್ಷ್ಮಣತೀರ್ಥಕ್ಕೂ ನಡುವೆ ಇರುವ ಪೂರ್ಣಯ್ಯ
ನವರ ಕಾಲಿವೆಗೆ ಆವಶ್ಯಕವಾಗಿ ಹರಿಯತಕ್ಕದ್ದಾಗಿ ಇದರ ಸುತ್ತು ಮುತ್ತೂ ಇರುವ ವಿಸ್ತಾರವಾದ ನೀರು ನಿಲ್ಲು
ವ ಪಾತ್ರೆಯು ವಿಚಾರವೇ ಆಗಿದೆ. ಲೆಫ್ಟಿನೆಂಟ್ ಪರಚಸ್ ಸಾಹೇಬರಿಂದ ಮಾಡಲ್ಪಟ್ಟ ಮದಿಂಪು ಅಳತೆಗಳ ಲೆ
ಖ್ಖಾಚಾರಗಳನ್ನು ನೋಡಿದರೆ ಹೀಗೆ ನೀರು ನಿಲ್ಲುವ ಪಾತ್ರೆಯು 52 ಚದರ್ ಮೈಲಿಗಳಗಿಂತಲೂ ಕಡಿಮೆಯಾಗಿ
ಇಲ್ಲವೆಂದು ತಿಳಿಯ ಬರುತ್ತದೆ.

27. ಯಾರಾದರೂ ಮಾಡಬಹುದಾದ ಈ ಲೆಖ್ಖಾಚಾರದ ಮೇರೆಗೆ ಈ ಕೆಳಗೆ ನಮೂದಿಸಿ ಇರುವ ಅಂಶ
ಗಳು ತಿಳಿಯಬರುತ್ತವೆ:

ಟ್ಟಿತು. ನೀರು ಹೋಗುವ ಮಾರ್ಗದಲ್ಲಿ ಸೇಕಡ 50 ರಷ್ಟು ಮಾತ್ರ ವ್ಯರ್ಥವಾದಾಗ್ಯೂ ಈ ಪರಿಮಾಣವು ಈಗಿನ ಎಲ್ಲ ಅನುಭವದ ದೆಸೆಯಿಂದಲೂ ವ್ಯಕ್ತವಾದ್ದಕ್ಕಿಂತ ಬಹಳ ಕಡಮೆಯಾಗಿರುತ್ತೆ, ನಲ್ಲಿಯ ಮಾರ್ಗವಾಗಿ ಪ್ರತಿನಿತ್ಯ ಬರುವದಕ್ಕೆ ಶಕ್ಯವಾಗಬೇಕಾದ ನೀರು 150,000 ಗ್ಯಾಲನ್‌ಗಳಾಗಿರುವದು; ನೀರುತೆಗೆದುಕೊಂಡು ಹೋಗುವ ರೀತಿಯನ್ನೂ, ನಲ್ಲೀವಗೈರೇಯನ್ನು ಸಾಫ ಮಾಡಿಸಲಿಕ್ಕೆ ಬೇಕಾದ ಅಂಶಗಳನ್ನೂ ನೋಡುವಲ್ಲಿ ನಲ್ಲೀ ಯೊಳಗೆ ಪ್ರತಿದಿನ 10 ಗಂಟೆಗಳ ಕಾಲದಲ್ಲಿ ಸದರೀ ಪರಿಮಾಣವುಳ್ಳ ಅಥವಾ ಘಂಟೆ ಒಂದಕ್ಕೆ 15,000 ಗ್ಯಾಲನ್‌ಗಳ ನೀರು ಬರುವದಕ್ಕೆ ಶಕ್ಯವಾಗತಕ್ಕದ್ದು.

ನಿಲುವು ನಲ್ಲಿಯ ಕೊನೇಭಾಗದಿಂದ $\frac{1}{5000}$ ವಾಟ ಸಹಿತವಾಗಿ 8 ಅಂಗುಲ ಒಳಗಿನ ಅಡ್ಡಳತೆಯುಳ್ಳ ನಲ್ಲಿಯು ಸದರೀ ಕೆಲಸಕ್ಕೆ ಉಪಯೋಗಿಸಲ್ಪಡ ತಕ್ಕದ್ದಾಗಿರುತ್ತೆ. 272 ಅಡಿಗಳ ನೀರು ವಿಶೇಷವಾಗಿ ಒತ್ತುವದರಿಂದ ನಲ್ಲಿಯು ಲೋಹದ ದಳವು ಮುಕ್ಕಾಲಂಗುಲಕ್ಕೆ ಕಡಮೆ ಯಿರಬಾರದು. ಹೀಗೆ ವಿಶೇಷವಾಗಿ ದಪ್ಪವಿರುವದರಿಂದ ಕಬ್ಬಿಣದ ಕೆಲವು ವಿರುದ್ಧ ಗುಣಗಳಿಗೆ ನಿರೋಧಕವಾಗಿಯೂ ಯಿರುತ್ತೆ. ಇದರ ಸಂಗತಿಯು ಉತ್ತರೋತ್ತರ ತಿಳಿಸಲ್ಪಡುತ್ತೆ. ಫ್ಲಿಂಜ್ಸ್ (ನಲ್ಲೀಗಳು ಒಂದಕ್ಕೊಂದು ಜೋಡಿಸುವಬಗ್ಗೆ ಯಿಡಲ್ಪಡುವ ಕಿವಿಗಳು (ವಗೈರೇ ಬಗ್ಗೆ ಬೇಕಾದ ಲೋಹಜಾತಾ ನಲ್ಲಿಯ ಕಬ್ಬಿಣ 656 ಟನ್ ವಜನ್ ಇರುವದು; ಇಂತಾ ಕಾಲ್ವೆಯನ್ನು ಮೊದಲು ಯಿಡುವ ಕಾಲದಲ್ಲಿ ವಿಶೇಷವಾಗಿ ಒಡದು ಹೋಗುವದಾಗಿ ಅದನ್ನು ಯೋಚಿಸಿದರೆ, ನಲ್ಲೀಗಳನ್ನು ಆಯಾಜಾಗಾಗಳಿಗೆ ಸಾಗಿಸುವದು, ನಿರೋಧಗಳನ್ನು ತಪ್ಪಿಸುವದು ವಗೈರೆಯ ಲಾಗವಡು, ನಿರ್ಣಯಿಸಲ್ಪಟ್ಟು ಮತ್ತು ಅಜಮಾಯಿಷೀ ಮಾಡಲ್ಪಟ್ಟಂತೆ ಟನ್ ಒಂದಕ್ಕೆ 300 ರೂಪಾಯಿಗಳಿಗೆ ಕಡಮೆ ಯಾಗಿ ಹಿಡಿಯಲಾರದು. ಆದರೆ 275 ರೂಪಾಯಿಗಳೇ ಹಿಡಿಯುವದೆಂದು ಯೋಚಿಸಿದ ಪಕ್ಷಕ್ಕೆ ಈ ಕಾಲ್ವೆಗೆ 656×275=1,80,400 ರೂಪಾಯಿಗಳು ಹಿಡಿಯುತ್ತೆ.

ನಲ್ಲಿಯ ಮಾರ್ಗದಕಡೆಗೂ ಜೆಂಡ್‌ಗಳು, ಮುಖ್ಯಗಳಾದ ಕ್ಯಾಸ್ಟಿಂಗ್‌ಗಳು, ಎಯರ್ ವಸ್ಕಾರ್‌ಕಾಕ್‌ಗಳೆಂಬ ಶೋಧಕ ಸಾಧನಗಳು ವಗೈರೇಗೆ. 30,000

...ಸಂ... ಕಬ್ಬಿಣದ ನಲ್ಲಿಗೆ. 2,10,400

...ರಲಿಕ್ಕೆ ಅತ್ಯಂತ ಉನ್ನತವಾದ ಪ್ರದೇಶದಲ್ಲಿ ಒಂದುವಾರಕ್ಕೆ ಆಗುವಷ್ಟು ...ಲು ಕಟ್ಟು ಕೊಳಕ್ಕೆ. 20,000

...ಕ ನೀರಿಗೇನಾದರೂ ಅಟಕಾವ್ ಸಂಭವಿಸೋಣ, ಮುಖ್ಯ ನಲ್ಲೀ ...ಯಂತ್ರಗಳು ಯಾ ಬಾಯಿಲರಗಳೆಂಬ ಯಂತ್ರಕಟಾಹ, ವಗೈರೇ ಒಡದು ...ನ್ನು ಸಾಧ್ಯವಾದಷ್ಟುಮಟ್ಟಿಗೆ ನಿರೋಧಿಸುವ ಬಗ್ಗೆ ಯಂತ್ರದ ಮೂಲಕ ...ಕ ಅಂತಾ ಏರ್ಪಾಡು ಯಾವಾಗ್ಯೂ ಅವಶ್ಯಕವಾದ ಅಂಶವಾಗಿರುತ್ತೆ,

...ಕೊಳಕ್ಕೆ ಒಂದು ಛಾವಣಿಯೂ ಯಿರಬೇಕು.

...ಹಂಚುವಿಕ್ಕೆ.

...ಂತಾ ಪಟ್ಟಣದ ಒಂದು ಮೂಲೆಗೆ ನೀರುತಂದದರಿಂದೇನೂ ಪ್ರಯೋಜನವಿಲ್ಲ, ಮು... ...ಆಯಾಸ್ಥಳಗಳಿಗೆ ನೀರು ಒದಗಿಸುವಬಗ್ಗೆ ನಲ್ಲೀಗಳಿಡುವದು ಆವಶ್ಯಕವಾಗಿರು... ...ಯಾಗಿ ಹಂಚುವಕ್ರಮವನ್ನು ಅವಲಂಬಿಸಿದ್ದರಿಂದ ಬಹಳ ಪ್ರಯೋಜನವುಂಟು. ...ಮಾವರೀತಿಯಾಗಿ ನಿರ್ವಹಿಸಲ್ಪಟ್ಟಾಗ್ಯೂ, ಇದಕ್ಕೆ ರೂಪಾಯಿಗಳಿಗೆ 80,000 ...ದು.

515

5. ವಿಜಯಾನದೀ ಕಾಲ್ವೇಕೆಳಗೆ ಜಮೀರ್ ತೆಗದುಕ್ಕೊಳ್ಳುವಬಗ್ಯೆ ಈಡುಕೊಡುವಣ, ಕಲಸವಾಡೀ ವಗ್ಯೆರೇ ಸ್ಥಳಗಳ ಕೆಳಭಾಗಕ್ಕೆ ಯಿರತಕ್ಕ ಜಮೀರ್ಗಳಿಗೆ ನೀರುಹರಿಯುವದನ್ನು ಅಟಕಾಯಿಸುವದು, ಯಿಾಬಗ್ಯೆ — 25,000

6. ಸೇಕಡಾ 5ರ ಪ್ರಕಾರ ಚಿಲ್ಲರೆ ಖರ್ಚುಗಳಿಗೆ, — 50,000

ಪ್ರಾಯಿಕವಾದ ಸದರೀ ಕಾಮಗಾರಿಯ ಕುಲ್ಲಾಗವಡು — 5,64,900

ಅಥವಾ ಮುಸಲಾ ತೋಕಾಗಿ 5½ ಲಕ್ಷ ಯಿರುವದು. ಇಲ್ಲಿ ಹಲಸೂರ್ ಕೆಲಸಗಳಿಗೆ ಯಿವುಗಳ ಸ್ವಲ್ಪವಾದ ಬಡಾವಣೆ ಸಹಿತ ಪೂರ್ವವೇ 2,84,000 ರೂಪಾಯಿಗಳು ಹಿಡಿದಿರುತವೆ. ಯಾಗಿ ಯಾವ ಕೆಲಸ ನೆರವೇರುವದಕ್ಕೆ ನಿರೀಕ್ಷಿಸಲ್ಪಟ್ಟಿರುತ್ತೋ ಅದಕ್ಕೆ ಈ ಮೊಬಲಗು ಪ್ರಾಯಶಃ ಜಾಸ್ತೀ ಯಿಲ್ಲವು.

ಈ ಕೆಲಸನಡಿಸಲ್ಪಡುವಲ್ಲಿ ಆಗುವ ಖರ್ಚನ್ನು ಕುರಿತು ಕೇವಲ ಊಹೆಯ ಮೇಲೆ ನಿರೂಪಿಸಲಿಕ್ಕೆ ಪ್ರವರ್ತಿಸುತ್ತೇನೆ, ಶಿಬ್ಬಂದಿ, ಇದ್ದಲು ವಗ್ಯೆರೇ ವಿಷಯವನ್ನು ಕುರಿತು ವಿಚಾರಿಸಿದರೆ ಯುರೋಪಿಯನ್ ಬ್ಯಾರಕ್ಸ್‌ಗಳಿಗೆ ಮಾತ್ರ ನೀರು ಒದಗಿಸತಕ್ಕದ್ದಾಗಿರುವ ಹಲಸೂರು (ವಾಟರ್‌ಸಪ್ಲೈ) ಕಾಮಗಾರೀಗಿಂತಕಡೆಗೆ ಕಡಮೆಯಾಗಿ ಬೇರೇ ಹಿಡಿಯಲಾರದು.

ಸದರೀ ಲಾಗವಡು ಯಿಾಕೆಳಗೆ ಕಂಡ ಮೇರೆ ವಿಂಗಡಿಸಲ್ಪಟ್ಟಂತೆ ಮೇಜರ್ ವೈಬಾರ್ಟ್ ಸಾಹೆಬರವರು ನನಗೆತಿಳಿಸುತ್ತಾರೆ, ಹ್ಯಾಗಂದರೆ.—

(a.)	ಶಿಬ್ಬಂದಿ ಖರ್ಚು.	507
(b.)	ಇದ್ದಲುವಗ್ಯೆರೇ ಯಿತರಕೆಲಸ ನಡಿಯುವ ಕರ್ಚುಗಳು.	455
	ಕುಲ್ ತಿಂಗಳೊಂದಕ್ಕೆ ರುಪಾಯಿ.	962
	ಅಥವಾ ವರುಷಕ್ಕೆ ರೂಪಾಯಿ.	12,000

ಕಬ್ಬಿಣದಲ್ಲಿ ಬರುವನಷ್ಟುವೇ ಯೆರಡನೇ ಖರ್ಚುಬಾಬಾಗಿರುತ್ತೆ, ಕೇವಲ ಮುಖ್ಯವಾ ಕುರಿತು ಇನ್ನೂ ಕೆಲವಂಶ ತಿಳಿಸುತ್ತೇನೆ. ಆದರೆ, ಮೊದಲನೇ ಯಾದಾಸ್ತಿ ರೋಬಸ್ತು ಕೆಲಸವೂ, 25 ವರುಷಗಳೊಳಗೆ ಪ್ರಾಯಶಃ ಹೊಸದಾಗಿ ಯಿಡಬೇ ಭಾವಿಸುವದು ಯಿಲ್ಲಿಸಾಕಾಗಿರುತ್ತೆ. ಜಲಯಂತ್ರದಕೆಲಸದ ಬಾಬತು 3,7 ಗಳು ಕಬ್ಬಿಣಕೆಲಸಕ್ಕೇ ಆಗುವದ್ದರಿಂದ ಸಾಲೇಸಾಲ್ ಬರತಕ್ಕ ನಷ್ಟದ 4ರ ಪ್ರಕಾರ,

ಕುಂಟೆಗಳು, ಕಟ್ಟಗಳು ವಗ್ಯೆರೇಯ ದುರಸ್ತುಬಗ್ಯೆ.

ಈ ಮೇರೆ ದರೋಬಸ್ತು ಬಾಬ್‌ಗಳಲ್ಲಿ ಕೆಲಸ ನಡಿಯುವದರಲಾಗವಡು ಸಾಲೀಯಾನಾ.

ಸದರೀ ಮೊಬಲಗನ್ನು ಸೇಕಡಾ 5ರ ಮೇಲ್ ಅಸಲಾಗಿ ಏರ್ಪಡಿಸಿದ ಪಕ್ಷಕ್ಕೆ ಆಗುವದು

ಮೇಲೆ ಕಂಡಂತೆ ಕಾಮಗಾರಿಗಳಿಗೆ ತಗಲುವ ಬಾಬತು ಮೊಬಲಗು ಸೇರಿ.

ಒಟ್ಟು ಜಂಪ್ಲಾ ಯಿಾಕೆಲಸಕ್ಕೆ ತಗಲುವ ರೂ॥

ಅಥವಾ 11½ ಲಕ್ಷರೂಪಾಯಿಗಳು ಹಿಡಿಯುತ್ತೆ.

ಆದ್ದರಿಂದ ಪೂರ್ವ ನಾನು ಮಾಡಿದ 9 ಲಕ್ಷ ರೂಪಾಯಿಗಳ ತೋಕ್ ಲೆಕ್ಕಾ ಜಾ ಮೆಯಾದ್ದಾಗಿರುತ್ತೆ; ಪರಂತು ಇತರ ಕಾರಣಗಳಿಂದ ಸಹ, ಪ್ರಕೃತ ಚರ್ಚಿಸಲ್ಪಟ್ಟ ನ್ನಾಗಲಿಮಾಡುವ ಅಂಶದಲ್ಲಿ ಪ್ರಬಲತಮಗಳಾದ ಆಕ್ಷೇಪಗಳಿರುತವೆಂದು ಯೋಚಿಸುತ್ತೇ ಯಿಲ್ಲಿ ಸಂಗ್ರಹವಾಗಿ ತಿಳಿಸುವೆನು.

516

1. ತಿಳಿಸಲ್ಪಟ್ಟ ಜಲಪರಿಮಾಣವು ಕೇವಲ ಸ್ವಲ್ಪವಾಗಿರುವದು.

ಇಂಡ್ಯೆಶಿವಾಯಿ ಪ್ರಪಂಚದ ಅನೇಕ ಯಿತರಭಾಗಗಳ ಪೈಕಿ ಒಬ್ಬೊಬ್ಬನಿಗೆ ಯೆಷ್ಟು ನೀರು ಕೊಡಲ್ಪಡು

ಬೋರ್ಡೊ,	$37\frac{1}{2}$	ಗ್ಯಾಲನ್‌ಗಳು
ಡೈಗರ್	44	"
ಮಾರ್ಸೇಲ್ಸ್	$103\frac{1}{2}$	"
ಮೆಲ್ಬೋರ್ನ್	90	"
ಗೀಲಾಂಗ್	150	"
ನ್ಯೂಯಾರ್ಕ್	125	"
ರೋಂ	243	"

ತ್ತೋ ಅದನ್ನು ಈ ಮಾರ್ಜನ್ನಲ್ಲಿ ನಮೂದಿಸುತ್ತೇನೆ, ಕಲ್ಕತ್ತಾ ಮುಂಬೈಯಿ ಆ ಸ್ಥಳಗಳಲ್ಲಾಗಲಿ ಮದರಾಸ್‌ನಲ್ಲಾಗಲಿ ಸದರೀ ಜಲಸತಿಯ ಕ್ರಮವು ಪೂರೈಸಿಯಿರುರವದಿಲ್ಲವು, ಆದರೆ ತಲಾ 20 ಗ್ಯಾಲನ್‌ಗಳ ನೀರು ಕೊಡುವ ಉದ್ದೇಶ್ಯವಿರುವದಾಗಿ ಭಾವಿಸಬಹುದಾಗಿರುತ್ತೆ. ಈ ಪೈಕಿ 5 ಗ್ಯಾಲನ್ ನೀರು ಗೃಹಕೃತ್ಯ ಕೆಲಸಕ್ಕೂ, ಮಿಕ್ಕದ್ದು ಅನೇಕವಿಧದಿಂದ ನಷ್ಟವಾಗಿಯೂ ಹೋಗುತ್ತದೆ, ಅಥವಾ ಅನ್ಯಥಾ ವಿನಿಯೋಗಿಸಲ್ಪಡುತ್ತೆ. ಈ ಸಂದರ್ಭದಿಂದ ನೀರು ನಷ್ಟವಾಗತಕ್ಕದ್ದನ್ನು ನಿರೋಧಿಸುವದಕ್ಕಾಗಲಿ ಬಂದೋಬಸ್ತು ಮಾಡುವದಕ್ಕಾಗಲಿ ಆಗುವದಿಲ್ಲವು. ಹೀಗಿರುವದರಿಂದ ನಾನುಯೇರ್ಪಡಿಸಿದ ಬೆಂಗಳೂರು ವ ಮೈಸೂರು ವಾಟರ್ ಸಪ್ಲೈ ಕ್ರಮದಲ್ಲಿ, ಈ ಮೇರೆ ಅಧಮ ಪಕ್ಷ ಅರವಾಸಿ ಹೋಗಿಬಿಟ್ಟಾಗ್ಯೂ ಕಮ್ಮಿಯಾದ ಮಳೆಯುಳ್ಳ ಸಂವತ್ಸರಗಳಲ್ಲಿ ತಲಾ ಹತ್ತು ಗ್ಯಾಲನ್ ನೀರು ಒದಗಿಸುವದು ಆವಶ್ಯಕವಾಗಿರುವದು.

ಮೊದಲು ಕರ್ನಲ್ ಹೇ ಸಾಹೆಬರು, ಲೆಕ್ಕ ಮಾಡಿಯಿದ್ದ ನೀರು ಅಂದರೆ ಪ್ರತಿಮನುಷ್ಯನಿಗೂ $1\frac{1}{4}$ ಗ್ಯಾಲನ್ ಪರಿಮಿತಿಯುಳ್ಳ ನೀರು ಕೇವಲ ಆವಶ್ಯಕವಾದಾಗ ಜನಗಳಿಗೆ ಒದಗಿಸತಕ್ಕದ್ದಾಗಿರುವಂತೆ ತಿಳಿಯತಕ್ಕದ್ದು. ಮತ್ತು ಈಗಿನ ಸಂದರ್ಭಗಳ ದೆಸೆಯಿಂದ ಉಂಟಾದ ನಿರ್ಬಂಧವು ಒಂದು ಸಲ ನಿವರ್ತಿ ಮಾಡಲ್ಪಟ್ಟರೆ ಸದರೀ ಪರಿಮಿತಿಯುಳ್ಳ ನೀರು ಯೆಷ್ಟು ಮಾತ್ರವೂ ಸಾಕಾದ್ದಾಗಿ ಯೆಣಿಸಕೂಡದು. ನಾನು ಕಡೇಸಲ ಮೈಸೂರಿಗೆ ಹೋಗಿಯಿದ್ದಾಗ, ಈಗಿನಂತಾ ಸಂಕಟಪ್ರಾಪ್ತವಾಗಿದ್ದಾಗ್ಯೂ, ಕೇವಲ ಪ್ರಯೋಜನಕರವಾದ ಉಳಿದ ನೀರು ಪೋಲೀಸ್‌ನವರಾಗಲಿ, ಅಧಿಕಾರಿಗಳಿಂದ ಕಲ್ಪಿಸಲ್ಪಟ್ಟ ಯಾವ ನಿರ್ಬಂಧಗಳಾಗಲಿ, ತಿಳಿಸಲ್ಪಟ್ಟ ಪ್ರಕಾರ, ಹಂಚಿಕೆ ಆಗತಕ್ಕ ಮುಖ್ಯ ಮುಖ್ಯಗಳಾದ ಸ್ಥಾನಕ್ಕೆ ನೀರು ಬಿಡಲ್ಪಟ್ಟಾಗ ಜನಗಳು ಬಳೆಸುವ ನೀರನ್ನು $1\frac{1}{4}$ ಗ್ಯಾಲನ್ನಿಗೆ ಹದ್ದು ಪಡಿಸಲ್ಪಿಕ್ಕಾದೀತೆ? ಯೆಂದು ನಾನು ಯುಕ್ತವಾಗಿ ಕೇಳಬಹುದಾಗಿದೆ. ಯಾವ ನಿರ್ಬಂಧಗಳು ಕಲ್ಪಿಸ
ಮುಖ್ಯವಾಗಿ (ಅಂತಾ ಜಲಾಶಯದ) ಆಸ್‌ಪಾಸ್‌ನಲ್ಲಿ ವಾಸಮಾಡತಕ್ಕ ಜನಗಳು
ಭಾಗವನ್ನು ಬಳೆಸಿ ಕೊಂಡು ಮಿಕ್ಕವರಿಗೆ ಯೇನೂ ನೀರು ಉಳಿಸಲಾರರು. ಜನಗ
ಗಳು ಹುಟ್ಟಿ ಪ್ರಾಯಶಃ ಕಲಹಕ್ಕೆ ಆರಂಭವಾಗುವಣವೇ ಫಲವಾಗುತ್ತೆ ಮತ್ತು ಈ
ಜನಗಳು ಪರಮಾನುಗ್ರಹರೂಪವೆಂದು ಭಾವಿಸುವದಕ್ಕೆ ಬದಲಾಗಿ ಕ್ಷಿಪ್ರದೊಳಗೇ
ಸುವರು.

ಪೈಕಿ ವ್ಯರ್ಥವಾಗತಕ್ಕ ಭಾಗವನ್ನು ನ್ಯಾಯವಾಗಿ ವಜಾ ಮಾಡಲಾಗಿ ಉಳಿದದ್ದು
. ಲೋಕದೊಳಗೆ ಸರ್ವತ್ರ ಯಿಂತಾ ಸಂದರ್ಭಗಳಲ್ಲೆಲ್ಲ ಕೆಲವು ಭಾಗ ನಷ್ಟವಾಗು

2. ನೀರಿನ ಗುಣ ಕೆಟ್ಟಿರುವಣ.

ು ಮೊದಲೇ ಸೂಚಿಸಿ ಯಿರುತ್ತೇನೆ, ಮೂಲಸ್ಥಾನದಿಂದ $12\frac{1}{4}$ ಮೈಲ್‌ಗಳಲ್ಲಿರುವ
ಾನದೀ ಕಾಲ್ವೆಯಿಂದ ಬಿಡಲ್ಪಟ್ಟ ನೀರು, ಪ್ರಾಯೇಣ ಊಹಿಸಲ್ಪಟ್ಟ ಮೇರೆ ಬೆರಿ
ರಲಾರದು. ಮೇಲ್ಭಾಗಕ್ಕೆ ಯಿರುವ ನೀರಾವರೀ ಕಾಲ್ವೆಗಳ ಹೆಚ್ಚುವರೀ ನೀರಿ
ರೂಪವನ್ನು ಹೊಂದಿದ ಗೊಬ್ಬರವೂ, ಕಾಲ್ವೆಯ ವೃದ್ಧಕ್ಕೂ ಮತ್ತು ಆದರ ವೇ
ಗಳ ಕಶ್ಮಲವೂ, ಮತ್ತು ಮಾರ್ಗದ ಉದ್ದಕ್ಕೂ ಯಿರುವ ಕಳೆ ಮುಂತಾದವುಗ
ಕ್ಮರೂಪವನ್ನು ಹೊಂದಿ ನೀರಲ್ಲಿ ಬೆರತು ಹೋಗುತದೆ. ನನಗೆ ತಿಳಿದಷ್ಟು ಮಟ್ಟಿಗೆ

ಯಿದಕ್ಕಿಂತಲೂ ಕಲ್ಮಷಕಾರಣವಾದದ್ದನ್ನು ಕಾಣುವದು ಕಷ್ಟ. ಧಾತುವಾದಜ್ಞರು ಚನ್ನಾಗಿ ನಿರ್ಣಯಿಸಿಯಿರುವ ಪ್ರಕಾರ ವಿಚಾರಿಸಿದರೆ, ನೀರು ಶೋಧಿಸುವದರ ದೆಸೆಯಿಂದ (mechanical suspension) ಕೃತಕವಾಗಿರುವ ಕಲ್ಮಷವನ್ನು ಬಹಳವುಟ್ಟಿಗೆ ನಿವೃತ್ತಿ ಮಾಡಬಹುದು, ಪರಂತು ಧಾತು ಸಂಬಂಧದಿಂದ ಸೇರುವ ಸ್ವಾಭಾವಿಕವಾದ ದೋಷಗಳನ್ನು ತೊಲಗಿಸುವದಕ್ಕೆ ಆಗುವದಿಲ್ಲವು, ತತ್ರಾಪಿ ಯಿಂತಾ ದೋಷವನ್ನು ಅಷ್ಟು ವಿಸ್ತಾರವಾದ ನೀರಲ್ಲಿನಿವರ್ತಿಮಾಡುವದು ಸಾಧ್ಯವಲ್ಲ, ಆದ್ದರಿಂದ, ಒಂದು ವೇಳೆ ಶೋಧಿಸಿದಾಗ್ಯೂ ಬಿಡಲ್ಪಟ್ಟ ನೀರು ಕಲ್ಮಷ ಯುಕ್ತವಾಗಿಯೇ ಯಿರಬೇಕಾಗುತ್ತೆ, ಆದರೆ ಜನಗಳು ತಿಳಿಯದೆ ಯಿದನ್ನು ಕಾವೇರೀ ನೀರೆಂತಲೇ ಹೇಳುವರು; ಪರಂತು ಸಾಧ್ಯವಾದ ಮಟ್ಟಿಗೆ ಅವರುಗಳಿಗೆ ನಿರ್ಮಲೋದಕವನ್ನು ಒದಗಿಸಬೇಕೆಂಬದೇ ಉದ್ದೇಶ್ಯವಾಗಿರುವದ್ದರಿಂದ, ಹಾಗೆ ಅವರುಗಳು ಕಾವೇರೀ ನೀರೆಂತ ಹೇಳುವದರ ದೆಸೆಯಿಂದಲೇ ಅವರ ಆರೋಗ್ಯಕ್ಕೂ ಸುಖಕ್ಕೂ ಮುಖ್ಯ ಕಾರಣವೆಂದು ನಾವು ಬಲ್ಲ ಅಂಶವನ್ನು ನಿರ್ಣಯಿಸಲಿಕ್ಕೆ ಸಾಧಕವಾಗಲಾರದು.

3. ಗತ್ಯಂತರವಿಲ್ಲದೆ ಯಾವಸ್ಥಳದಲ್ಲಿ ಆವಶ್ಯಕವಾಗಿರುತ್ತೋ ಅಲ್ಲಿವಿನಾ ಅನ್ಯತ್ರ, ಯಂತ್ರದಿಂದ ನೀರೆತ್ತುವದು, ಕಬ್ಬಿಣ ಸಾಧನದ ಉಪಯೋಗ ಸಹ ಕೇವಲ ಅಯುಕ್ತವಾಗಿರುತ್ತೆ.

ಯಂತ್ರದಿಂದ ನೀರು ಎತ್ತುವದಕ್ಕೆ ಬದಲಾಗಿ ವಾಟದ ಮೂಲಕ ನೀರು ಹರಿಸುವದು ಸಾಧ್ಯವಾಗಿರುವ ಕಡೆಗಳಲ್ಲಿ ಯಾವಾಗ್ಯೂ ಯುಕ್ತವಲ್ಲದ ಯಂತ್ರವನ್ನು ಉಪಯೋಗಿಸುವಣವು, ಈಬಳಿ ಬಹಳ ಎತ್ತರಕ್ಕೆ ನೀರು ಹತ್ತಬೇಕಾಗಿರುವದ್ದರಿಂದಲೂ, ವಿಶಿಷ್ಟಕ್ಕೂ ನಿರಂತರವಾಗಿ ನುಕ್ಸಾನ್ ಸಂಭವಿಸುವದಾದ್ದರಿಂದಲೂ, ದ್ವಿಗುಣವಾಗಿ ಅಯುಕ್ತವಾಗಿರುತ್ತೆ. 272ಅಡಿಗಳ ಎತ್ತರವುಳ್ಳ ನಿಲುವು ನಲ್ಲೀ ಯೆಂಬದು ಇಂಡ್ಯ ದೇಶಗಳಲ್ಲಿಲ್ಲವೇಯಿಲ್ಲ. ಮತ್ತು ಅಂತಾದ್ದೊಂದು ಕಟ್ಟಿಸಿ, ಅದಕ್ಕೆ ತುಪಾನ್ ಅಥವಾ ಬಿರುಗಾಳಿಯ ದೆಸೆಯಿಂದ ಬಾಧಕವುಂಟಾಗದಂತೆ ಮಾಡುವದಕ್ಕೆ ನನಗೆ ಯೆಷ್ಟು ಮಾತ್ರವೂ ಇಷ್ಟವಿಲ್ಲವು. ಒಂದು ಸಲ ಅಡಿ ಅವಕಾಶದಲ್ಲಿ ಇರತಕ್ಕ 50 ಪೌಂಗಳ ಬಿರುಸಾದ ಘಾಳಿಯಲ್ಲಿ ನಲ್ಲೀ ಕೆಳಭಾಗದಿಂದ ನೀರು ಏರುವದಕ್ಕೆ ಒಂದು ಅಡಿಗೆ ಷುಮಾರ್ ಇಪ್ಪತ್ತು ಲಕ್ಷ ಪೌಂಗಳ ವೇಗ ವುಂಟಾಗಬೇಕಾಗುತ್ತೆ. ಈ ಪ್ರಯಾಸವನ್ನು ನಿವೃತ್ತಿ ಮಾಡಲಿಕ್ಕೆ, ನಲ್ಲೀ ಹೋಗತಕ್ಕ ಮಾರ್ಗದಲ್ಲಿ ಯಾವನಲ್ಲಿಯೂ 80 ಅಥವಾ 90 ಅಡಿಗೆ ಹೆಚ್ಚಿಲ್ಲದಂತೆ ಅಲ್ಲಿಯಲ್ಲಿ ಮೂರು ಯಾ ನಾಲ್ಕು ನಲ್ಲೀಗಳನ್ನು ಇಡುವದೊಂದೇ ಉಪಾಯವಾಗಿರುತ್ತೆ. ಆದರೆ ಇವರಿಂ[illegible] ಸ್ಥಾನಗಳು ಕಲ್ಪಿಸಲ್ಪಟ್ಟ ವಿಶೇಷ ಅರ್ಥವ್ಯಯವು ಹಿಡಿಯುವದಾಗಿ ಈ ಸಂದರ್ಭದ[illegible] ಅದನ್ನು ನಾನು ತಿಳಿಸಲಾರೆನು.

ಇದಲ್ಲದೆ ಕಬ್ಬಿಣವೇ ಯುಕ್ತವಾದ್ದಲ್ಲವು. ಹವಾ ಬದಲಾವಣೇ ಇಂದಲೂ, ಯುವದು ಇದರಿಂದಲೂ, ಮತ್ತು ನಿರಂತರವಾಗಿ "scaling" ಪರೆ ಎದ್ದು ಹೋಗುತ್ತ[illegible] ಕಬ್ಬಿಣದ ನಲ್ಲೀಯನ್ನೂ ಭೂಮಿಯ ಮೇಲೆ ಕಾಣುವಂತೆ ಇಡಬಾರದು. ಆದ್ದ[illegible] ತೆಗದು ಅದರಲ್ಲಿ ನಲ್ಲಿಯನ್ನು ಇಟ್ಟು, ಮೇಗ್ಗಡೆ ತಕ್ಕಷ್ಟು ಮುಂದಕ್ಕೆ ಮಂಣು ಮುಚ[illegible] ಕೆಲವು ಅನರ್ಥಗಳು ಬಾಧಕಗಳಾಗಿವೆ. ಲೋಹವನ್ನು ಸವಿಯಿಸಿ ತಿಳುವ ಪಡಿಸು[illegible] ಹರಿಯುತ್ತಾ ಉಂಟು ಮಾಡುವ ಚಲನದ ದೆಸೆಯಿಂದಲಾಗಲಿ ಭೂಮಿಯ ಕ್ಷಾರ ವ[illegible] ಲಾಗಲಿ, ಮುಖ್ಯವಾಗಿ ಈ ಶೀಮೆಯೊಳಗೆ ಸದರೀ ಮೇರೆ ಇಡಲ್ಪಟ್ಟ ಕಬ್ಬಿಣವು ಕೆಲವ[illegible] ಕೆಟ್ಟು ಹೋಗುವಂತಾ ಸ್ವಭಾವವುಳ್ಳದ್ದಾಗಿರುವಂತೆ ಕಾಣ ಬರುತ್ತೆ. ಮುಂಬೈ[illegible] ಕಬ್ಬಿಣದ ಪೈಕಿ ಬಹಳ ಮಟ್ಟಿಗೆ ಆಗಲೇ (graphite) ನಿಸ್ಸಾರವಾದ ಇದ್ದಲಿನ [illegible] ಚೂರೀಯಿಂದ ಸುಲಭವಾಗಿ ಕತ್ತರಿಸುವದಕ್ಕೆ ಆಗುತ್ತೆಂದು ಮೇಜರ್ ಟಲ್ಲಕ್‌ಯವರ[illegible] ಡಿರುತ್ತಾರೆ. ಮೈಸೂರು ಶೀಮೆಯಲ್ಲಿ ಕಬ್ಬಿಣ ಇದೇಸ್ಥಿತಿಯಲ್ಲಿರುವಂತೆ ನಾನೂ ತಿಳಿ[illegible] ಸಪ್ನಿ ಕಮ್ಮಿಷನರ್‌ಗಳು ಈ ಸಂಗತಿಯನ್ನು ಸ್ಪಷ್ಟವಾಗಿ ಒಪ್ಪಿಕೊಂಡು ಭೂಮಿ[illegible]

518

ಕಬ್ಬಿಣನಲ್ಲಿಯು ಬಾಳಿಕೆ ಬರುವ ಅಂಶ ಸಂದೇಹಾಸ್ಪದ ವಲ್ಲದೆ ಇರುವದಿಲ್ಲವೆಂಬ ಅಭಿಪ್ರಾಯವನ್ನು ತಿಳಿಸುತ್ತಾರೆ.

ಇವುಗಳಿಂದಲೂ, ನನ್ನಲ್ಲಿಗೆ ಬಂದಿರುವ ಇತರ ಸಂಗತಿಗಳಿಂದಲೂ, ನಮ್ಮ ಬೆಂಗಳೂರು ವಾಟರ್ ಸಪ್ಲೈ ಕಾಮಗಾರೀಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕಬ್ಬಿಣ ಅನುಪಯುಕ್ತವಾದ್ದೆಂದು ಹೇಳಲಿಕ್ಕೆ ನಾನು ಬಹಳದಿನಗಳ ಕೆಳಗೇನೇ ನಿಶ್ಚಯಿಸಿದೆನು, ಮತ್ತು ಅಂತಾ ಸ್ಥಿತಿಯಲ್ಲಿ ನಮ್ಮ ಕಾಮಗಾರೀಯೊಳಗೆ ಕಬ್ಬಿಣ ಉಪಯೋಗಿಸ ತಕ್ಕದ್ದನ್ನು ಸಾಧ್ಯವಾದ ಮಟ್ಟಿಗೆ ತಪ್ಪಿಸತಕ್ಕದ್ದೆಂದು ನಾನು ನಿಜವಾಗಿ ಯೋಚಿಸುತ್ತೇನೆ.

ಸಾಧಾರಣವಾಗಿ ಯಂತ್ರದಿಂದ ನೀರು ತೆಗೆಯತಕ್ಕ ಸಂಗತಿಯನ್ನು ಕುರಿತಾದರೋ, ಸಂಪೂರ್ಣ ನಂಬಿಕೆಯೂ ವಿವೇಕವೂ ವುಳ್ಳ ಜನಗಳನ್ನು ಸಂಪಾದಿಸಿಕೊಳ್ಳುವ ಅಂಶದಲ್ಲಿಯೂ, ಯಂತ್ರಗಳಿಗೆ ಜರೂರೀಯಾತ್ ರಿಪೇರೀಯನ್ನು ಮಾಡಿಸುವ ಅಂಶದಲ್ಲೂ, ಕೇವಲ ಯುಕ್ತವಾಗಿ ಕೆಲಸ ನಡಿಸತಕ್ಕ ಇಲಾಖಾದಾರರು ಈ ಶೀಮೆಯಲ್ಲಿ, ಅನುಭವಿಸುವ ಪ್ರಯಾಸವನ್ನು ನಾನು ಸೂಚಿಸ ಬಹುದಾಗಿದೆ, ಮತ್ತು, ಹಾಗೆ ದೈವಾತ್ ಸಿದ್ಧಿಸತಕ್ಕ ವಾಟರ್ ಸಪ್ಲೈ ಉಪಾಯವನ್ನು ನೆರವೇರಿಸಿ, ಉತ್ತರೋತ್ತರ ಆಗುವ ನೇಟಿವ್ ಆಧಿಪತ್ಯಕ್ಕೆ ಒಪ್ಪಿಸುವದು, ನಮಗೆ ನ್ಯಾಯವೇ ಯೆಂದು ಯುಕ್ತವಾಗಿ ಜಿಜ್ಞಾಸೆ ಮಾಡಬಹುದಾಗಿರುತ್ತೆಂದು ಯೋಚಿಸುತ್ತೇನೆ, ಯಾತಕ್ಕೆಂದರೆ, ಈ ವಿಷಯದಲ್ಲಿ ನಮಗೆ ಉಂಟಾಗುವ ಪ್ರಯಾಸಕ್ಕಿಂತ ಅವರಿಗೆ ಉಂಟಾಗುವ ಪ್ರಯಾಸವು ಬಹಳ ಹೆಚ್ಚಾಗಿಯಿರಬೇಕಾಗುತ್ತೆ.

ವಿಶಿಷ್ಟದೊಳಗೂ ಒಂದೆರಡು ವರುಷಗಳು ಚನ್ನಾಗಿ ಕೆಲಸ ನಡೆಯ ಬಹುದು, ಆದರೆ ಅನಂತರ ಅಪರಿಹಾರ್ಯವಾದ ಭಂಗ ವೇನಾದರೂ ಉಂಟಾದ ಪಕ್ಷಕ್ಕೆ ಈಗಿನ ಭಾವಿಗಳು ಮುಂತಾದವು ಅಷ್ಟುಕಾಲದೊಳಗಾಗಿ ನಾತ ಹಿಡಿದು ಜನಗಳ ಉಪಯೋಗಕ್ಕೆ ಬೇರೆ ಯಾವ ಜಲಾಧಾರವೂ ಇಲ್ಲದೆ ಹೋಗುವದು.

ಈ ಕೆಲಸಕ್ಕೆ ಬೇರೆ ಆಕ್ಷೇಪ ವೇನೂ ಇಲ್ಲದಿದ್ದಾಗ್ಯೂ ಈವೊಂದು ಕಾರಣದಿಂದಲೇ ಈ ಕಾರ್ಯವನ್ನು ಗವರ್ನಮೆಂಟನವರು ನೆರವೇರಿಸತಕ್ಕದ್ದಲ್ಲವೆಂದು ನಾನು ಹೇಳಬಲ್ಲೆನು.

4 ವಿಜಯಾ ನದೀ...ದ ನೀರು ತರುವ ಈ ಪ್ರಯತ್ನಕ್ಕೆ ಇನ್ನೂ ಅನೇಕ ಆಕ್ಷೇಪಗಳಿವೆ, ಮಿಕ್ಕ ...ಂದ ನೀರು ಸಾಲದೆ ಇದ್ದ ಯಾವಕಾಲದಲ್ಲಾಗಲಿ ಸದರೀ ಕಾಲ್ವೆ ಕೆಳಗೆ ಸಾಗು ...ಧಿಕಾರಿಗಳಿಗೂ ಪ್ರಾಯೇಣ ಉಂಟಾದ ತಾತ್ಪರ್ಯ ಭೇದ ಒಂದಾಗಿದೆ. ಪ್ರತಿ ...ದ ತನ್ನ ಬಾಧ್ಯತೆಯನ್ನೇ ಕುರಿತು ಮುಷ್ಕರ ಹಿಡಿಯಲು ಇದರ ಫಲವೇನಾ ...ವದಿಲ್ಲವು; ಆದರೆ ಒಂದು ಪ್ರಯತ್ನದಲ್ಲಿ ಪರಸ್ಪರ ವಿರುದ್ಧಗಳಾದ ಪಟ್ಟಣದ ...ೀ ಜಲಾಧಾರಗಳೆಂಬ ಅಂತಾ ಯೆರಡು ಉದ್ದೇಶ್ಯಗಳು ಸೇರಿದರೆ ಅದರಿಂದ ಉಂ ...ರ್ಯಗಳಾಗುತ್ತವೆ. ಅವುಗಳು ಸಾಧ್ಯವಾದ ಪಕ್ಷಕ್ಕೆ ಪರಿಹರಿಸಲ್ಪಡಬೇಕೆಂದು ...ಷಯದಲ್ಲಿ ನಾನು ಬೇಕಾದಷ್ಟು ತಿಳಿಸಿ ಇರುತ್ತೇನೆಯಾಗಿ, ಲೆಪ್ಟಿನೆಂಟ್ ಪರ್‌ಕಸ್ ...ರುವ ಪ್ರಯತ್ನದೊಡನೆ ಮೊಕ್ಕಾಬಿಲೆ ಮಾಡುವಲ್ಲಿ ಪ್ರಕೃತ ತಿಳಿಸಲ್ಪಟ್ಟ ...ಕಾರವುಳ್ಳ ನಕ್ಷೆಯಲ್ಲಿ ಕೇವಲ ವಿವರವಾಗಿ ತೋರಿಸುವದರ ದ್ವಾರಾ ವಿರುದ್ಧ

519



A . . ., ಕನಿಷ್ಠ ಮಳೆಯುಳ್ಳ ಸಂವತ್ಸರಗಳಲ್ಲಿ ದಿನ ೧ಕ್ಕೆ ಒಬ್ಬ ಮನುಷ್ಯನಿಗೆ 10 ಗ್ಯಾಲನ್ ಪ್ರಕಾರ
ಆಗುವ ನೀರು ನಿಲ್ಲುವದಕ್ಕೆ ಶಕ್ಯವಾದ ನೀರು ಜಮಾಯಿಸ
ಟೆ ವಗ್ಯೈರೇ ಸಾಧ್ಯವಾದ ಇನ್ನೂ ಯೇನಾದರೂ ಕ್ಯಾಚ್‌ಮೆ
ರ್ಗ) ಇದ್ದರೆ ಅದು, ಸಾಮಾನ್ಯವಾದ ಮಾಟದ ದೆಸೆಯಿಂದ
ಈ ವಿಶಿಷ್ಟ ಉಪಾಯವೂ ಪ್ರಾಯಶಃ ಸ್ವತಸ್ಸಿದ್ಧವಾಗಿರತಕ
ಕಳುಹಿಸಲ್ಪಟ್ಟ ಸ್ಥೂಲವಾದ ಅಂದಾಜ್ ಪ್ರಕಾರ 4 ಲಕ್ಷ.

B . . . ಸದರೀ ಪ್ರತಿ ಬಂದು ಉಪಾಯದಿಂದ ದೊಡ್ಡ ಕೆರೇ ಕೋಡಿ
ಷುಮಾರ್ 60 ಅಡಿಗಳ ಪ್ರಮಾಣದಲ್ಲಿರುವ ಸ್ಥಾನದಲ್ಲಿ ಮೈಸ

C . . . 272 ಅಡಿಗಳ ಯೆತ್ತರವುಳ್ಳ ಕಲಸವಾಡೀ ಮತ್ತು ನಿಬ
ಒದಗಿಸಲ್ಪಡುತ್ತೆ. ಲಾಗವಡು $11\frac{1}{4}$ ಲಕ್ಷ

ಈ ನಕ್‌ಷೆಯನ್ನು ನೋಡಿದರೆ ಷಹರಿನ ಮೇಲ್ಭಾಗಕ್ಕೆ A ಗುರುತಿನ ಸ್ಥ
ಲಿ ಜಮಾಯಿಸಲಿಕ್ಕೆ ಸಾಧನವನ್ನು ಪಡೆದಿರುವಲ್ಲಿ ಇದೆಲ್ಲ C ಗುರುತಿನ ಸ್ಥಾನಕ
ವಾದ ಮತ್ತು ಸೂಕ್ಷ್ಮವಾದ ಉಪಾಯದ ದೆಸೆಯಿಂದ ಮರಳಿ ಹಿಂದಕ್ಕೆ ಯಂ
ಹ್ಯಾಗೆ ಅವಕಾಶ ಕೊಡಬೇಕೋ ನನಗೆ ಗೊತ್ತಾಗಲಿಲ್ಲವೆಂದು ಹೇಳುತ್ತೇನೆ, ಪರ
ಗಳಾದ ಅಂಶಗಳನ್ನೆಲ್ಲ ನಿವೃತ್ತಿ ಮಾಡಲಾಗಿ ಈ ವಿಷಯದ ಕರಾರ್‌ವಾಕಾ ಸ್ಥಿತಿ

R. H.